ಶನಿವಾರ, ಜೂನ್ 10, 2023 | ₹ 7.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗೊಂದಲಕ್ಕೆ ಅವಕಾಶ ಇಲ್ಲದೆ ಎಸ್‌ಇಪಿ ಜಾರಿ: ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯಡಿ (ಎನ್‌ಇಪಿ) ಬಹಳಷ್ಟು ವಿದ್ಯಾರ್ಥಿಗಳು ಕೋರ್ಸ್ ಆಯ್ಕೆ ಮಾಡಿಕೊಂಡಿದ್ದಾರೆ. ನಾವು ತಕ್ಷಣ ಬದಲಾಯಿಸಿದರೆ ಆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಯಾವುದೇ ಗೊಂದಲ ಇಲ್ಲದಂತೆ ಎರಡು ವರ್ಷಗಳ ಒಳಗೆ ಎಸ್‌ಇಪಿ ಜಾರಿ ಮಾಡಬೇಕಾದ ಸವಾಲು ನಮ್ಮ ಮುಂದೆ ಇದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು.

ಮಹಾರಾಣಿ ಕ್ಲಸ್ಟರ್ ವಿಶ್ವ ವಿದ್ಯಾಲಯ, ಬೆಂಗಳೂರು ರೋಟರಿ ಕ್ಲಬ್ ವತಿಯಿಂದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಉದ್ಯೋಗ ಮತ್ತು ನೇಮಕಾತಿ ಅಭಿಯಾನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ರಾಜ್ಯ ಶಿಕ್ಷಣ ನೀತಿಯನ್ನು (ಎಸ್‌ಇಪಿ) ಜಾರಿಗೆ ತರುತ್ತೇವೆ ಎಂದು ನಾವು ಪ್ರಣಾಳಿಕೆಯಲ್ಲಿಯೇ ಘೋಷಣೆ ಮಾಡಿದ್ದೆವು. ಎಸ್‌ಇಪಿಯ ಪರ ಮತ್ತು ವಿರುದ್ಧ ಅಭಿಪ್ರಾಯ ಹೊಂದಿರುವ ಶಿಕ್ಷಣ ತಜ್ಞರು, ಕುಲಪತಿಗಳು, ಶಿಕ್ಷಕರು, ನಿವೃತ್ತ ಬೋಧಕರು ಇದ್ದಾರೆ. ಪರ ಇರುವವರನ್ನೂ, ವಿರುದ್ಧ ಇರುವವರನ್ನೂ ಕರೆದು ಅವರ ಅಭಿಪ್ರಾಯವನ್ನೂ ಸಂಗ್ರಹಿಸಲಾಗುವುದು. ಅಧ್ಯಯನ ನಡೆಸಿದ ಬಳಿಕ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಕುಲಪತಿ ಎಲ್. ಗೋಮತಿ ದೇವಿ ಮಾತನಾಡಿ, 'ಕೌಶಲ ಅಭಿವೃದ್ಧಿ ಕೇಂದ್ರ ಆರಂಭಿಸಲು ಉದ್ದೇಶಿಸಲಾಗಿದ್ದು, ಸಚಿವರು ಸಹಕಾರ ನೀಡಬೇಕು' ಎಂದು ಮನವಿ ಮಾಡಿದರು.

ರೋಟರಿ ಕ್ಲಬ್ ಅಧ್ಯಕ್ಷ ಸಂಜಯ್ ಉದಾನಿ, ಕುಲಸಚಿವ ಎಚ್. ರಾಮಕೃಷ್ಣಯ್ಯ, ಮೌಲ್ಯಮಾಪನ ಕುಲಸಚಿವರಾದ ವಿ. ಅನುರಾಧ, ಕೌಶಲಾಭಿವೃದ್ಧಿ ಸಂಸ್ಥೆಯ ಡಿ.ಎಲ್. ಕೃಷ್ಣಮೂರ್ತಿ ಇದ್ದರು.

ನಗರದ ಅರಮನೆ ರಸ್ತೆಯಲ್ಲಿರುವ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ ಆಯೋಜಿಸಿದ್ದ ಉದ್ಯೋಗ ಮತ್ತು ನೇಮಕಾತಿ ಅಭಿಯಾನದಲ್ಲಿ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು –ಪ್ರಜಾವಾಣಿ ಚಿತ್ರ

ಲಿಖಿತ ಅಭಿಪ್ರಾಯ ನೀಡಲು ಸೂಚನೆ

ಎನ್‌ಇಪಿ ಸೇರಿದಂತೆ ಉನ್ನತ ಶಿಕ್ಷಣದ ಹಲವು ವಿಷಯಗಳ ಕುರಿತು ಚರ್ಚಿಸಲು ಕರೆಯಲಾಗಿದ್ದ ಸಭೆಯಲ್ಲಿ ಬಹುತೇಕ ಕುಲಪತಿಗಳು ತಮ್ಮ ಅಭಿಪ್ರಾಯ ಮುಕ್ತವಾಗಿ ವ್ಯಕ್ತಪಡಿಸಲು ಹಿಂದೇಟು ಹಾಕಿದ್ದಾರೆ. ಹಾಗಾಗಿ, ಲಿಖಿತವಾಗಿ ಅಭಿಪ್ರಾಯ ಸಲ್ಲಿಸುವಂತೆ ಸಚಿವರು ಸೂಚಿಸಿದ್ದಾರೆ.

'ಎನ್‌ಇಪಿ ಕುರಿತು ಲಿಖಿತ ಹೇಳಿಕೆ ಸಲ್ಲಿಸಲು ಕಾಲದ ಮಿತಿ ಹಾಕಿಲ್ಲ. ಸಾಧ್ಯವಾದಷ್ಟು ಶೀಘ್ರ ಸಲ್ಲಿಸಲು ಸೂಚಿಸಲಾಗಿದೆ. ಕುಲಪತಿಗಳು, ತಜ್ಞರ ಅಭಿಪ್ರಾಯ ಸಂಗ್ರಹಿಸಿದ ನಂತರ ಇನ್ನಷ್ಟು ಚರ್ಚೆ ನಡೆಸಲಾಗುವುದು. ದ್ವೇಷದ ಮನೋಭಾವದಿಂದ ಶೈಕ್ಷಣಿಕ ನಿರ್ಧಾರ ಮಾಡಲಾಗದು. ಇಂತಹ ವಿಷಯಗಳಲ್ಲಿ ವಿದ್ಯಾರ್ಥಿಗಳ ಭವಿಷ್ಯವೇ ಮುಖ್ಯ' ಎಂದು ಸುಧಾಕರ್ ಪ್ರತಿಕ್ರಿಯಿಸಿದರು.

ಪ್ರಥಮದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪ್ರಕ್ರಿಯೆ ಶೀಘ್ರ ಪೂರ್ಣಗೊಳಿಸಲಾಗುವುದು. ಎಲ್ಲ ವಿಶ್ವವಿದ್ಯಾಲಯಗಳ ನೇಮಕಾತಿ ಪ್ರಕ್ರಿಯೆ ಪಾರದರ್ಶಕಗೊಳಿಸಲಾಗುವುದು ಎಂದು ಮಾಹಿತಿ ನೀಡಿದರು.

ಅಂಕಪಟ್ಟಿ: ಡಿಜಿಟಲ್ ಜತೆಗೆ ಭೌತಿಕ ಪ್ರತಿಗೂ ಅವಕಾಶ

ಹಿಂದಿನ ಸರ್ಕಾರದ ಅವಧಿಯಲ್ಲಿ ರೂಪಿಸಿದ್ದ ಡಿಜಿಟಲ್ ಅಂಕಪಟ್ಟಿ ಕಡ್ಡಾಯದ ನಿಯಮ ಬದಲಾಯಿಸಿ, ವಿದ್ಯಾರ್ಥಿಗಳು ಇಚ್ಛಿಸಿದರೆ ಹಿಂದಿನಂತೆ ಭೌತಿಕ ಪ್ರತಿಗಳನ್ನು (ಹಾರ್ಡ್‌ಕಾಪಿ) ನೀಡಲು ಉನ್ನತ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಅಂಕಪಟ್ಟಿಗಳ ಭೌತಿಕ ಪ್ರತಿ ಪಡೆಯಲು ಹೆಚ್ಚಿನ ವಿದ್ಯಾರ್ಥಿಗಳು ಬೇಡಿಕೆ ಸಲ್ಲಿಸುತ್ತಿದ್ದಾರೆ. ಅವರಿಗೆ ಮನವರಿಕೆ ಮಾಡಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ, ಇಲಾಖೆ ಸುತ್ತೋಲೆ ಹೊರಡಿಸುತ್ತಿದೆ. ಸುತ್ತೋಲೆ ನಂತರವೂ ಎಲ್ಲರಿಗೂ ಡಿಜಿಟಲ್ ಅಂಕಪಟ್ಟಿ ದೊರೆಯಲಿದೆ. ಅರ್ಜಿ ಸಲ್ಲಿಸಿದವರಿಗೆ ಮಾತ್ರ ಭೌತಿಕ ಪ್ರತಿ ನೀಡಲಾಗುವುದು. ಅಂಕಪಟ್ಟಿಗಳ ಗೌಪ್ಯತೆ, ನಕಲು ತಡೆಗೂ ಗಮನ ಹರಿಸಲಾಗುವುದು ಎಂದು ಡಾ.ಎಂ.ಸಿ.ಸುಧಾಕರ್ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.



ಶಿವಾನಂದ ವೃತ್ತ ಜಂಕ್ಷನ್ ಅಭಿವೃದ್ಧಿಯ ಮಾದರಿ ನಕ್ಷೆ

ನಗರದಲ್ಲಿ ಪ್ರಥಮ ಯೋಜನೆ; ಸೌಲಭ್ಯಗಳ ಹೈಟೆಕ್ ತಾಣ

ಶಿವಾನಂದ ಮೇಲ್ಸೇತುವೆ ಕೆಳಗೆ 'ಪಬ್ಲಿಕ್ ಪ್ಲಾಜಾ'

• ಆರ್. ಮಂಜುನಾಥ್

ಬೆಂಗಳೂರು: ನಗರದ ಶಿವಾನಂದ ಸ್ಟೀಲ್ ಮೇಲ್ಸೇತುವೆ ಕೆಳಭಾಗದಲ್ಲಿ 'ಪಬ್ಲಿಕ್ ಪ್ಲಾಜಾ' ನಿರ್ಮಾಣವಾಗಲಿದೆ. ನಾಗರಿಕರಿಗೆ ಹೈಟೆಕ್ ಸೌಲಭ್ಯಗಳನ್ನು ರಸ್ತೆ ಮಧ್ಯೆ ಒದಗಿಸುವ ಆಕರ್ಷಕ ತಾಣವೂ ಇದಾಗಲಿದೆ.

ನಗರದಲ್ಲಿ ಜಂಕ್ಷನ್‌ಗಳ ಸೌಂದರ್ಯೀಕರಣದ ಕಾಮಗಾರಿಗಳು ನಡೆಯುತ್ತಿರುವ ಸಂದರ್ಭದಲ್ಲೇ ಬಿಬಿಎಂಪಿ ಮೇಲ್ಸೇತುವೆ ಕೆಳಗೆ ನಾಗರಿಕರಿಗೆ ಹಲವು ಸೌಲಭ್ಯಗಳನ್ನು ಕಲ್ಪಿಸಲು ಮುಂದಾಗಿದೆ.

ಮೇಲ್ಸೇತುವೆಗಳ ಕೆಳಭಾಗದ ಸ್ಥಳಗಳಲ್ಲಿ ಅದರಲ್ಲೂ ಆರಂಭ ಹಾಗೂ ಅಂತ್ಯದ ಪ್ರದೇಶಗಳಲ್ಲಿ ಹೆಚ್ಚಿನ ಸ್ಥಳಾವಕಾಶವಿದ್ದು, ಅದನ್ನು ನಾಗರಿಕರ ಬಳಕೆಗೆ ಅನುವು ಮಾಡಿಕೊಡುವ ನಿಟ್ಟಿನಲ್ಲಿ ಯೋಜನೆ ಆರಂಭಿಸಲಾಗಿದೆ. ಪ್ರಥಮವಾಗಿ ಶಿವಾನಂದ ವೃತ್ತದ ಬಳಿಯ ಮೇಲ್ಸೇತುವೆ ಕೆಳಭಾಗದ ಸೌಂದರ್ಯೀಕರಣ ಕಾಮಗಾರಿ ಆರಂಭವಾಗಿದ್ದು, ಮುಂದಿನ ದಿನಗಳಲ್ಲಿ ನಗರದಲ್ಲಿರುವ ಬಹುತೇಕ ಮೇಲ್ಸೇತುವೆಗಳ ಕೆಳಭಾಗದಲ್ಲಿ ಸೌಲಭ್ಯಗಳು ಲಭ್ಯವಾಗುವಂತೆ ಯೋಜನೆ ರೂಪಿಸಲಾಗಿದೆ. ಆರಂಭ ಮತ್ತು ಅಂತ್ಯದಲ್ಲಿ ಪ್ರವೇಶ ಮುಕ್ತವಾಗಿದ್ದು, ಉಳಿದ ಪ್ರದೇಶದಲ್ಲಿ ಸುರಕ್ಷತೆಗಾಗಿ ಗ್ರಿಲ್ ಅಳವಡಿಸಲಾಗುತ್ತದೆ.

ಪ್ರಜಾವಾಣಿ ವಿಶೇಷ

ಶಿವಾನಂದ ವೃತ್ತ ಮೇಲ್ಸೇತುವೆ ಕೆಳಭಾಗದಲ್ಲಿ ಗ್ರಿಲ್ ನಡುವೆ ಅಳವಡಿಸಲಾಗುವ ಆಸನ ವ್ಯವಸ್ಥೆಯ ಮಾದರಿ

ಪ್ರಮುಖ ಸಾರ್ವಜನಿಕ ಪ್ರದೇಶ ಮತ್ತು ಐತಿಹಾಸಿಕ ರಸ್ತೆ, ಟೆಂಡರ್ ಶ್ಯೂರ್ ರಸ್ತೆ, ವೈಟ್ ಟಾಪಿಂಗ್ ರಸ್ತೆಗಳ ಅಭಿವೃದ್ಧಿ ಹಾಗೂ ಸೌಂದರ್ಯೀಕರಣದ ಜೊತೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ರಾಜ್ಯ ಸರ್ಕಾರದ ಅಮೃತ ನಗರೋತ್ಥಾನ ಯೋಜನೆಯಡಿ ಬಿಬಿಎಂಪಿಯ ಯೋಜನಾ ವಿಭಾಗದ ವತಿಯಿಂದ ಮೇಲ್ಸೇತುವೆ ಸೇರಿದಂತೆ ನಾಲ್ಕು ಜಂಕ್ಷನ್‌ಗಳಲ್ಲಿ ₹10.45 ಕೋಟಿ ವೆಚ್ಚದಲ್ಲಿ ಕಾಮಗಾರಿ ನಡೆಸಲಾಗುತ್ತಿದೆ.

'ಮೇಲ್ಸೇತುವೆ ಕೆಳಭಾಗವನ್ನು ನಾಗರಿಕ ಸೌಲಭ್ಯಗಳೊಂದಿಗೆ ಉತ್ತಮ ತಾಣವನ್ನಾಗಿಸುವ ಉದ್ದೇಶದಿಂದ ಶಿವಾನಂದ ವೃತ್ತದ ಮೇಲ್ಸೇತುವೆ-ಜಂಕ್ಷನ್‌ನಲ್ಲಿ ಅಭಿವೃದ್ಧಿ ಹಾಗೂ ಸೌಂದರ್ಯೀಕರಣ ಕಾಮಗಾರಿಯನ್ನು ಆರಂಭಿಸಲಾಗಿದೆ. ಪಾದಚಾರಿಗಳ ನೆಚ್ಚಿನ ತಾಣವಾಗುವ ನಿರೀಕ್ಷೆ ಇದ್ದು, ಕೆಲವೇ ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ' ಎಂದು ಬಿಬಿಎಂಪಿ ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ವಿನಾಯಕ ಸೂಗೂರು ತಿಳಿಸಿದರು.

ಟ್ರಿಲೈಟ್ (ರೇಸ್‌ಕೋರ್ಸ್) ಜಂಕ್ಷನ್, ಆನಂದರಾವ್ ವೃತ್ತ, ಬಿಎಚ್‌ಇಎಲ್ ವೃತ್ತ, ಮೈಸೂರು ರಸ್ತೆ.. ಇಲ್ಲಿಯ ಜಂಕ್ಷನ್‌ಗಳನ್ನೂ ವಿಭಿನ್ನ ರೀತಿಯಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿ ಸದ್ಯದಲ್ಲಿಯೇ ಆರಂಭವಾಗಲಿದೆ ಎಂದರು.

ಮೈಸೂರು ರಸ್ತೆಯಲ್ಲಿರುವ ಬಿಎಚ್‌ಇಎಲ್ ವೃತ್ತದ ಮಾದರಿ

ಬಿಎಚ್‌ಇಎಲ್ ವೃತ್ತದಲ್ಲಿ ಕೆಂಗಲ್ ಹನುಮಂತಯ್ಯ ಪ್ರತಿಮೆ

ಮೈಸೂರು ರಸ್ತೆಯ ಬಿಎಚ್‌ಇಎಲ್ ವೃತ್ತದಲ್ಲಿ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ ಸ್ಥಾಪಿಸುವ ಯೋಜನೆ ಹೊಂದಲಾಗಿದೆ. ವಿಧಾನಸೌಧದ ನಿರ್ಮಾತೃ, ಬೆಂಗಳೂರು ಲೋಕಸಭೆ ಕ್ಷೇತ್ರವನ್ನು ಮೂರು ಬಾರಿ ಪ್ರತಿನಿಧಿಸಿದ್ದ ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆಯನ್ನು ಈ ಪ್ರದೇಶದಲ್ಲಿ ಸ್ಥಾಪಿಸಿ, ಮಾಹಿತಿ ಫಲಕವನ್ನೂ ಅಳವಡಿಸಲು ಉದ್ದೇಶಿಸಲಾಗಿದೆ. ವಿಜಯನಗರ ವಿಧಾನಸಭೆ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಅವರು ಸರ್ಕಾರಕ್ಕೆ ಪತ್ರ ಬರೆದು, ಪ್ರತಿಮೆ ಸ್ಥಾಪಿಸಲು ಅನುಮತಿ ಕೋರಿದ್ದಾರೆ. ಇದಲ್ಲದೆ, ಹಲವು ಸೌಲಭ್ಯಗಳ ಜೊತೆಗೆ ಚನ್ನಪಟ್ಟಣ ಗೊಂಬೆಗಳ ಪ್ರತಿಕೃತಿಗಳನ್ನೂ ಈ ಜಂಕ್ಷನ್‌ನಲ್ಲಿ ಸ್ಥಾಪಿಸಲಾಗುತ್ತದೆ. 'ಕೆಲವೇ ದಿನಗಳಲ್ಲಿ ಕಾಮಗಾರಿ ಆರಂಭಿಸಲಾಗುವುದು' ಎಂದು ಕೃಷ್ಣಪ್ಪ ತಿಳಿಸಿದರು.

'ಡೆಕ್ಕನ್ ಹೆರಾಲ್ಡ್ ಮಾಸ್ಟರ್‌ಮೈಂಡ್' ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡೆಕ್ಕನ್ ಹೆರಾಲ್ಡ್ ಮಾಸ್ಟರ್‌ಮೈಂಡ್ ಡೈಲಿ' ಆವೃತ್ತಿಯನ್ನು ವಿಶ್ವ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಚಾಂಪಿಯನ್ ಪಂಕಜ್ ಅಡ್ವಾಣಿ, ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ ಶುಕ್ರವಾರ ಬಿಡುಗಡೆ ಮಾಡಿದರು.

ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ದಾವಣಗೆರೆ, ಹೊಸಪೇಟೆ ಮತ್ತು ಕಲಬುರಗಿಯ ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಜೂನ್ 12ರಿಂದ ಅಧಿಕೃತವಾಗಿ ವಿತರಣೆ ಪ್ರಾರಂಭವಾಗಲಿದೆ.

ಸೋಮವಾರದಿಂದ ಶುಕ್ರವಾರದವರೆಗೆ ವಾರದಲ್ಲಿ ಐದು ದಿನಗಳು 'ಡೆಕ್ಕನ್ ಹೆರಾಲ್ಡ್ ಮಾಸ್ಟರ್‌ಮೈಂಡ್ ಡೈಲಿ' ಪ್ರಕಟವಾಗಲಿದೆ. ಪ್ರಚಲಿತ ವಿದ್ಯಮಾನಗಳಾದ ಆರ್ಥಿಕತೆ, ಸಂಸ್ಕೃತಿ, ವಿಜ್ಞಾನ, ತಂತ್ರಜ್ಞಾನ, ಕ್ರೀಡೆ, ನಾಗರಿಕ ವ್ಯವಹಾರಗಳು ಮತ್ತು ಪರಿಸರದಂತಹ ವಿವಿಧ ಕ್ಷೇತ್ರಗಳಿಗೆ ಪ್ರಾಮುಖ್ಯ ನೀಡಲಾಗಿದೆ. ಆಕರ್ಷಕ ಗ್ರಾಫಿಕ್ಸ್ ಮೂಲಕ ವಿನ್ಯಾಸಗಳಿರುತ್ತವೆ. ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ಫಝಲ್ಸ್, ಎಂಸಿಕ್ಯೂಗಳಿರಲಿವೆ.

'ಡೆಕ್ಕನ್ ಹೆರಾಲ್ಡ್ ಮಾಸ್ಟರ್‌ಮೈಂಡ್ ಡೈಲಿ' ಆವೃತ್ತಿಯನ್ನು ಶುಕ್ರವಾರ ಬಿಡುಗಡೆ ಮಾಡಲಾಯಿತು. ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಆಲಿವರ್ ಲೆಸ್ಲಿ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಟಿಪಿಎಂಎಲ್ ನಿರ್ದೇಶಕ ಚೈತನ್ಯ ನೆಟ್ಟಕಲ್ಲಪ್ಪ, ಸ್ನೂಕರ್ ಚಾಂಪಿಯನ್ ಪಂಕಜ್ ಅಡ್ವಾಣಿ, ಟಿಪಿಎಂಎಲ್ ಸಿಇಒ ಸೀತಾರಾಮನ್ ಶಂಕರ್ ಇದ್ದರು.

ರಾಷ್ಟ್ರೀಯ ಅಥವಾ ಅಂತರ ರಾಷ್ಟ್ರೀಯ ಮಟ್ಟದ ಸಾಧಕರ ಬಗ್ಗೆ, ವಿದ್ಯಮಾನಗಳ ಬಗ್ಗೆ ಮಾಹಿತಿ, ಸ್ಟ್ಯಾಂಡ್ ಅಲೋನ್ ಚಾರ್ಟ್‌ಗಳು, ಸಾಂದರ್ಭಿಕ ಚಿತ್ರಗಳನ್ನು ಮಾಸ್ಟರ್‌ಮೈಂಡ್ ಒಳಗೊಂಡಿರಲಿದೆ.

ಬಹುಮಾನ ವಿತರಣೆ: ಡಿಎಚ್/ಪಿವಿ ಮಾಸ್ಟರ್ ಮೈಂಡ್ ಚಂದಾದಾರಿಕೆಯ ಲಕ್ಕಿ ಡ್ರಾ ವಿಜೇತರಿಗೆ ಶುಕ್ರವಾರ ಬಹುಮಾನ ವಿತರಿಸಲಾಯಿತು.

ಚಿನ್ಮಯಿ ರಾಜ್ ಎಂ.ಆರ್. ಅವರು ಬಂಪರ್ ಬಹುಮಾನ ಎಲೆಕ್ಟ್ರಿಕಲ್ ಬೈಕ್ ಪಡೆದರು. ಮೊಬೈಲ್ ಫೋನ್, ಟ್ಯಾಬ್ಲೆಟ್‌ಗಳು, ಸ್ಮಾರ್ಟ್ ವಾಚ್‌ಗಳನ್ನು ಹಲವರು ಪಡೆದರು.

ಟಿಪಿಎಂಎಲ್ ನಿರ್ದೇಶಕ ಚೈತನ್ಯ ನೆಟ್ಟಕಲ್ಲಪ್ಪ, ಸಿಇಒ ಸೀತಾರಾಮನ್ ಶಂಕರ್ ಇದ್ದರು.

ಯುಪಿಎಸ್‌ಸಿ 2022 ಸಾಧಕರಿಗೆ ಸನ್ಮಾನ ಸಮಾರಂಭ

ಅಸಮಾನತೆ, ಜಾತಿ ವ್ಯವಸ್ಥೆ ಅಳಿಸಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ತಾರತಮ್ಯದಿಂದಾಗಿ ಹಲವರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ನಾಗರಿಕ ಸೇವೆಗೆ ಸೇರ್ಪಡೆಯಾಗುತ್ತಿರುವ ಅಭ್ಯರ್ಥಿಗಳು, ಸಮಾಜದಲ್ಲಿರುವ ಅಸಮಾನತೆ ಹಾಗೂ ಜಾತಿ ವ್ಯವಸ್ಥೆಯನ್ನು ಅಳಿಸಿ ಗುಣಮಟ್ಟದ ಶಿಕ್ಷಣದ ಜೊತೆ ಎಲ್ಲರಿಗೂ ಬದುಕಿನ ಅವಕಾಶಗಳನ್ನು ದೊರಕಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಡಾ. ರಾಜ್‌ಕುಮಾರ್ ಅಕಾಡೆಮಿ ವತಿಯಿಂದ ನಗರದ ಜ್ಞಾನಜ್ಯೋತಿ ಸಭಾಭವನದಲ್ಲಿ ಶುಕ್ರವಾರ ಆಯೋಜಿಸಿದ್ದ 'ಯುಪಿಎಸ್‌ಸಿ-2022 ಸಾಧಕರಿಗೆ ಸನ್ಮಾನ' ಸಮಾರಂಭದಲ್ಲಿ ಸಾಧಕರನ್ನು ಅಭಿನಂದಿಸಿ ಅವರು ಮಾತನಾಡಿದರು.

'ನಾನು ಮುಖ್ಯಮಂತ್ರಿ ಆಗುವುದಕ್ಕೆ ಈ ಸಮಾಜದ ಕೊಡುಗೆ ಅಪಾರವಿದೆ. ಯುಪಿಎಸ್‌ಸಿ ಪರೀಕ್ಷೆ ಪಾಸಾಗಿರುವ ಅಭ್ಯರ್ಥಿಗಳು, ದೇಶ ಮತ್ತು ಸಮಾಜದ ಪ್ರಗತಿಗೆ ಶ್ರಮಿಸಬೇಕು' ಎಂದರು.

ಡಾ. ರಾಜ್‌ಕುಮಾರ್ ಅಕಾಡೆಮಿ ವತಿಯಿಂದ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಯುಪಿಎಸ್‌ಸಿ ಪರೀಕ್ಷೆ ಉತ್ತೀರ್ಣರಾದ ರಾಜ್ಯದ ಅಭ್ಯರ್ಥಿಗಳಿಗೆ ಸ್ಮರಣಿಕೆ ನೀಡಿ ಅಭಿನಂದಿಸಿದರು – ಪ್ರಜಾವಾಣಿ ಚಿತ್ರ

'ಸರಳ ವ್ಯಕ್ತಿತ್ವ ಹಾಗೂ ಸಂಸ್ಕಾರದ ರಾಯಭಾರಿ ಡಾ. ರಾಜ್‌ಕುಮಾರ್. ಅವರ ಬದುಕಿನಿಂದ ನಾವೆಲ್ಲರೂ ಕಲಿಯಬೇಕಾಗಿರುವುದು ಹಾಗೂ ರೂಢಿಸಿಕೊಳ್ಳುವುದು ಬಹಳ ಇದೆ' ಎಂದರು.

ಮಾಜಿ ರಕ್ಷಣಾ ಕಾರ್ಯದರ್ಶಿ ಡಾ. ಶ್ರೀನಿವಾಸನ್, ಭಾರತೀಯ ಸೇನೆಯ ಮಾಜಿ ಉಪ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ರಮೇಶ್ ಹಲಗಲಿ, ಮಾಜಿ ಪ್ರಧಾನ ಮುಖ್ಯ ಆಯುಕ್ತ ಕೆ. ಸತ್ಯನಾರಾಯಣ, ಕೃಷಿ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಕೆ. ನಾರಾಯಣಗೌಡ ಅವರನ್ನು ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ನಟ ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್ ಸಮಾರಂಭದಲ್ಲಿದ್ದರು.

ಶನಿವಾರ, ಜೂನ್ 10, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮೀನು ಪ್ರಸಾದ
ಹೈದರಾಬಾದ್‌ನಲ್ಲಿ ಶುಕ್ರವಾರ ಮಹಿಳೆಯೊಬ್ಬರು ಆಸ್ತಮಾ ಶಮನಕ್ಕಾಗಿ ಬಥಿನಿ ಕುಟುಂಬದವರು ನೀಡುವ ಸಾಂಪ್ರದಾಯಿಕ ಮೀನು ಪ್ರಸಾದ ಸೇವಿಸಿದರು

₹3999 ಕ್ಕೆ 3999

₹3999 ಗೆ ಶಾಪಿಂಗ್ ಮಾಡಿ ಮತ್ತು ₹3999 ಮೌಲ್ಯದ ಉಡುಪನ್ನು ಉಚಿತವಾಗಿ ಪಡೆಯಿರಿ, ಜೊತೆಗೆ ₹2000* ಮೌಲ್ಯದ ಕೂಪನ್‌ಗಳು ಲಭ್ಯ

TRENDS MAN | TRENDS WOMAN | TRENDS junior | TRENDS FOOTWEAR

11 ಜೂನ್ 2023 ರ ವರೆಗೆ ಕೊಡುಗೆ ಮಾನ್ಯವಾಗಿದೆ

*ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. ಕೊಡುಗೆ ದಾಸ್ತಾನು ಮುಗಿಯುವ ವರೆಗೆ ಮಾತ್ರ. ಈ ಕೊಡುಗೆ ಇಲ್ಲದೆಯೂ ಉಡುಪುಗಳು ಲಭ್ಯವಿದೆ. 2 ಅಥವಾ ಅದಕ್ಕಿಂತ ಹೆಚ್ಚು ಬಿಲ್‌ಗಳನ್ನು ಪ್ರತ್ಯೇಕಿಸುವುದು ಅಥವಾ ಒಂದುಗೂಡಿಸುವುದಕ್ಕೆ ಅವಕಾಶವಿಲ್ಲ. ಟ್ರೆಂಡ್ಸ್ ಸ್ಟೋರ್‌ನಲ್ಲಿ ಒಂದೇ ಬಿಲ್ ಮೇಲೆ ಕನಿಷ್ಠ ₹3999/- ರ ಶಾಪಿಂಗ್ ಮಾಡಿದಾಗ ಮಾತ್ರವೇ ಕೊಡುಗೆ ಲಭ್ಯವಿರುತ್ತದೆ. ಈ ಕೆಳಗಿನ ಪ್ರಯೋಜನಗಳನ್ನು ಪಡೆಯುವುದಕ್ಕಾಗಿ ಟ್ರೆಂಡ್ಸ್ ಸ್ಟೋರ್‌ನ ಕಸ್ಟಮರ್ ಸರ್ವೀಸ್ ಡೆಸ್ಕ್‌ನಲ್ಲಿ ದಯವಿಟ್ಟು ನಿಮ್ಮ ಬಿಲ್ ಸಲ್ಲಿಸಿ: ₹2000 ಟ್ರೆಂಡ್ಸ್ ಕೂಪನ್ಸ್ (ತಲಾ ₹500 ಮೌಲ್ಯದ 4 ಕೂಪನ್‌ಗಳು). ಸವಿವರವಾದ ನಿಯಮ ಮತ್ತು ಷರತ್ತುಗಳು, ಟ್ರೆಂಡ್ಸ್‌ಗಾಗಿ ಹೊರಡಿಸಿರುವ ಕೂಪನ್ ಮೇಲಿನ ಆಫರ್ ವಾಲಿಡಿಟಿ ಇತ್ಯಾದಿಗಳನ್ನು ನೋಡಿರಿ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸ್ಟೋರ್ ಸಿಬ್ಬಂದಿಗಳನ್ನು ಸಂಪರ್ಕಿಸಿ.

‘ಮಕ್ಕಳ ತೆರಿಗೆ ತಾಯಿಗೆ ಅನ್ವಯಿಸಲ್ಲ’

ಪ್ರಜಾವಾಣಿ ವಾರ್ತೆ

ಲಕ್ಷ್ಮಿ ಹೆಬ್ಬಾಳಕರ

ಬೆಂಗಳೂರು: ಮಕ್ಕಳು ತೆರಿಗೆ ಕಟ್ಟಿದರೂ ತಾಯಂದಿರು ಗೃಹ ಲಕ್ಷ್ಮಿ ಯೋಜನೆಯಡಿ ನೆರವು ಪಡೆಯಲು ಅರ್ಹರಾಗಿರುತ್ತಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ತಿಳಿಸಿದರು.

‘ಮಕ್ಕಳು ತೆರಿಗೆ ಪಾವತಿಸುವವರಾಗಿದ್ದರೆ ತಾಯಂದಿರಿಗೆ ಗೃಹ ಲಕ್ಷ್ಮಿ ಯೋಜನೆಯಡಿ ಸೌಲಭ್ಯ ದೊರಕದು’ ಎಂದು ಅವರು ಗುರುವಾರ ಹೇಳಿಕೆ ನೀಡಿದ್ದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಮಕ್ಕಳ ತೆರಿಗೆ ಪಾವತಿ ತಾಯಂದಿರ ಅರ್ಹತೆಗೆ ಅನ್ವಯ ಆಗುವುದಿಲ್ಲ. ಗಂಡ ತೆರಿಗೆದಾರನಾಗಿದ್ದರೆ ಹೆಂಡತಿಗೆ ಸೌಲಭ್ಯ ಸಿಗುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ಬಿಪಿಎಲ್ ಪಡಿತರ ಚೀಟಿಗಳಲ್ಲಿ ಯಜಮಾನಿಯ ಹೆಸರು ಸ್ಪಷ್ಟವಾಗಿ ನಮೂದಾಗಿದೆ. ಅಂತಹ ಪ್ರಕರಣಗಳಲ್ಲಿ ಫಲಾನುಭವಿಗಳನ್ನು ಗುರುತಿಸುವುದು ಕಷ್ಟವಾಗುವುದಿಲ್ಲ. ವೃದ್ಧಾಶ್ರಮದಲ್ಲಿರುವ ಮಹಿಳೆಯರ ಬಳಿ ಪಡಿತರ ಚೀಟಿ ಇದ್ದರೆ ಅವರೂ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ ಎಂದು ಹೇಳಿದರು.

ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಗೃಹ ಲಕ್ಷ್ಮಿ ಯೋಜನೆಯ ಅರ್ಜಿ ನಮೂನೆಯನ್ನು ಇಲಾಖೆಯೇ ಸಿದ್ಧಪಡಿಸಿರುವುದು. ಕೆಲವು ಬದಲಾವಣೆಗಳೊಂದಿಗೆ ಅದೇ ಮಾದರಿಯ ಅರ್ಜಿಯನ್ನು ಒದಗಿಸಲಾಗುವುದು. ಜಾತಿಯ ಬದಲಿಗೆ ವರ್ಗ ಎಂಬ ಪದ ಸೇರಿಸಲಾಗುವುದು ಎಂದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಘಟಿಕೋತ್ಸವ

49 ಸಾವಿರ ವಿದ್ಯಾರ್ಥಿಗಳಿಗೆ ಪದವಿ

ಪ್ರಜಾವಾಣಿ ವಾರ್ತೆ

ಕೆ.ಕಸ್ತೂರಿ ರಂಗನ್

ಡಾ.ಪಿ.ಸತೀಶ್ ಚಂದ್ರ

ಡಾ.ಎಂ.ಕೆ. ಸುದರ್ಶನ್

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಮಾಜಿ ಅಧ್ಯಕ್ಷ ಕೆ.ಕಸ್ತೂರಿ ರಂಗನ್, ನಿಮ್ಹಾನ್ಸ್ ಮಾಜಿ ನಿರ್ದೇಶಕ ಡಾ.ಪಿ.ಸತೀಶ್ ಚಂದ್ರ ಹಾಗೂ ವೈದ್ಯ ಡಾ.ಎಂ.ಕೆ. ಸುದರ್ಶನ್ ಅವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ‘ಗೌರವ ಡಾಕ್ಟರೇಟ್’ ಪದವಿಗೆ ಆಯ್ಕೆಯಾಗಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಕೆ. ರಮೇಶ್, ‘ಈ ವರ್ಷ 49,560 ವಿದ್ಯಾರ್ಥಿಗಳು ಪದವಿ ಪಡೆಯಲು ಅರ್ಹರಾಗಿದ್ದಾರೆ. ಈ ಪೈಕಿ 51 ಪಿಎಚ್‌.ಡಿ, 150 ಸೂಪರ್ ಸ್ಪೆಷಾಲಿಟಿ, 7,351 ಸ್ನಾತಕೋತ್ತರ ಪದವಿ, 22 ಸ್ನಾತಕೋತ್ತರ ಡಿಪ್ಲೊಮಾ ಪದವಿ, 277 ಫೆಲೋಶಿಪ್ ಕೋರ್ಸ್, 9 ಸರ್ಟಿಫಿಕೇಟ್ ಕೋರ್ಸ್ ಹಾಗೂ 41,700 ಪದವಿ ವಿದ್ಯಾರ್ಥಿಗಳು ಸೇರಿದ್ದಾರೆ. ಎಲ್ಲಾ ನಿಕಾಯಗಳ ಒಟ್ಟು ವಿದ್ಯಾರ್ಥಿಗಳ ಒಟ್ಟಾರೆ ಫಲಿತಾಂಶ ಶೇ 84.26 ರಷ್ಟಿದೆ. ಕಳೆದ ವರ್ಷ ಶೇ 82.25 ರಷ್ಟಿತ್ತು. ಫಲಿತಾಂಶದಲ್ಲಿ ಏರಿಕೆ ಕಂಡಿದೆ’ ಎಂದರು.

‘ರಾಜ್ಯದಲ್ಲಿ ಒಟ್ಟು 97 ವಿದ್ಯಾರ್ಥಿಗಳು 108 ಚಿನ್ನದ ಪದಕಗಳನ್ನು ಪಡೆಯಲಿದ್ದಾರೆ. ಪಿಇಎಸ್ ಕಾಲೇಜಿನ ಫಾರ್ಮಸಿ ವಿದ್ಯಾರ್ಥಿನಿ ಕೆ.ದೀಪ್ತಿ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ಕೋರ್ಸ್‌ನಲ್ಲಿ ರಜನಿ ಪಂತ್ ಅವರು ತಲಾ 3 ಚಿನ್ನದ ಪದಕ ಪಡೆಯಲು ಅರ್ಹರಾಗಿದ್ದಾರೆ. ಶಿವಮೊಗ್ಗದ ವೈದ್ಯಕೀಯ ಕಾಲೇಜಿನ ಎಂಬಿಬಿಎಸ್ ವಿದ್ಯಾರ್ಥಿನಿ ರಿಷಿಕಾ ಎಸ್. ಪಟೇಲ್, ದಿ ಆಕ್ಸ್‌ಫರ್ಡ್ ಡೆಂಟಲ್ ಕಾಲೇಜಿನ ದಂತ ವೈದ್ಯಕೀಯ ವಿದ್ಯಾರ್ಥಿ ಅಮೋಘ ಸಾರಥಿ, ಮೂಡಬಿದ್ರೆ ಆಳ್ವಾಸ್ ಆಯುರ್ವೇದಿಕ್ ವೈದ್ಯಕೀಯ ಕಾಲೇಜಿನ ಬಿಎಎಂಎಸ್ ವಿದ್ಯಾರ್ಥಿನಿ ಟಿ.ಸಾಯಿ ಚಿನ್ಮಯಿ ಅವರು ತಲಾ 2 ಚಿನ್ನದ ಪದಕ ಮತ್ತು 1 ನಗದು ಬಹುಮಾನವನ್ನು ಪಡೆಯಲಿದ್ದಾರೆ. ಚಿನ್ನದ ಪದಕವು 5 ಗ್ರಾಂ ತೂಕ ಹೊಂದಿರಲಿದೆ’ ಎಂದು ಹೇಳಿದರು.

ಘಟಿಕೋತ್ಸವ ಇಂದು

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 25ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವು ಶನಿವಾರ ಬೆಳಿಗ್ಗೆ 11 ಗಂಟೆಗೆ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಜೆ.ಎನ್.ಟಾಟಾ ಸಭಾಂಗಣದಲ್ಲಿ ನಡೆಯಲಿದೆ. ಮುಖ್ಯ ಅತಿಥಿಯಾಗಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ. ಬಿ.ವರಾಲೆ ಭಾಗವಹಿಸಲಿದ್ದಾರೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದಾರೆ. ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಪಾಲ್ಗೊಳ್ಳಲಿದ್ದಾರೆ.

2 ವೈದ್ಯಕೀಯ ಕಾಲೇಜು

‘ಚನ್ನಪಟ್ಟಣದಲ್ಲಿ ರಾಜರಾಜೇಶ್ವರಿ ಶಿಕ್ಷಣ ಸಮೂಹದ ಚಾಮುಂಡೇಶ್ವರಿ ವೈದ್ಯಕೀಯ ಕಾಲೇಜು ಮತ್ತು ಚಿತ್ರದುರ್ಗದ ಸರ್ಕಾರಿ ವೈದ್ಯಕೀಯ ಕಾಲೇಜುಗಳು 2023-24ನೇ ಸಾಲಿನಿಂದ ಪ್ರವೇಶ ಪ್ರಕ್ರಿಯೆ ಆರಂಭಿಸಲಿವೆ. ತಲಾ 150 ಸೀಟುಗಳ ಪ್ರವೇಶಕ್ಕೆ ಅನುಮತಿ ಸಿಕ್ಕಿದೆ’ ಎಂದು ಡಾ.ಎಂ.ಕೆ.ರಮೇಶ್ ತಿಳಿಸಿದರು.

‘ವೈದ್ಯಕೀಯ ಪ್ರವೇಶ ಶುಲ್ಕದ ವಿಚಾರ ಇನ್ನೂ ಚರ್ಚೆಯಲ್ಲಿದೆ. ಪ್ರವೇಶ ಮೇಲ್ವಿಚಾರಣಾ ಸಮಿತಿ ನಿಗದಿ ಮಾಡುವ ಶುಲ್ಕಕ್ಕೆ ಸರ್ಕಾರ ಅನುಮೋದನೆ ನೀಡಿದ ಬಳಿಕ ಶುಲ್ಕ ಅಂತಿಮವಾಗಲಿದೆ. ಡೀಮ್ಡ್ ವಿಶ್ವವಿದ್ಯಾಲಯಗಳ ಶುಲ್ಕ ನಮ್ಮ ವ್ಯಾಪ್ತಿಗೆ ಬರುವುದಿಲ್ಲ’ ಎಂದರು.

ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಡಾ.ಎನ್.ರಾಮಕೃಷ್ಣ ರೆಡ್ಡಿ, ‘ಈ ಬಾರಿ ಫಲಿತಾಂಶ ಹೆಚ್ಚಳಕ್ಕೆ ನೂತನ ಮೌಲ್ಯಮಾಪನ ಪದ್ಧತಿಯೇ ಮುಖ್ಯ ಕಾರಣ. ಈ ಮೊದಲು ಎರಡು ಬಾರಿ ಮೌಲ್ಯಮಾಪನ ಮಾಡಿ, ಎರಡು ಫಲಿತಾಂಶದ ಸರಾಸರಿಯನ್ನು ಪರಿಗಣಿಸಲಾಗುತ್ತಿತ್ತು. 2022ರ ಸೆಪ್ಟೆಂಬರ್ ಬಳಿಕ ಮೌಲ್ಯಮಾಪನದಲ್ಲಿ ಅಧಿಕ ಅಂಕವನ್ನು ಪರಿಗಣಿಸ ಲಾಗುತ್ತಿದೆ. ಇದರಿಂದ ಫಲಿತಾಂಶ ಹೆಚ್ಚಳವಾಗುತ್ತಿದೆ’ ಎಂದು ತಿಳಿಸಿದರು.

‘ಮನುವಾದಿಗಳನ್ನು ನೆಲಕಚ್ಚಿಸಬೇಕಿದೆ’

‘ಭೀಮ ಸಂಕಲ್ಪ’ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

‘ಭೀಮ ಸಂಕಲ್ಪ ಸಮಾವೇಶ‘ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಡೊಳ್ಳು ಬಾರಿಸಿ ಉದ್ಘಾಟಿಸಿದರು. ಸಚಿವರಾದ ಕೆ.ಎಚ್‌. ಮುನಿಯಪ್ಪ, ಎಚ್‌.ಸಿ. ಮಹದೇವಪ್ಪ, ಸ್ಫೂರ್ತಿಧಾಮ ಅಧ್ಯಕ್ಷ ಎಸ್‌. ಮರಿಸ್ವಾಮಿ, ದಸಂಸ ಮುಖಂಡರಾದ ಮಾವಳ್ಳಿ ಶಂಕರ್ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಮನುವಾದಿಗಳನ್ನು ಮಣಿಸಲು ಅಂಬೇಡ್ಕರ್ ತತ್ವವನ್ನು ಪ್ರತಿಪಾದಿಸುವ ಸಂಘಟನೆಗಳು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಿವೆ. ಇದೇ ನಿಲುವನ್ನು ಮುಂದಿನ ಲೋಕಸಭಾ ಚುನಾವಣೆ ಸೇರಿದಂತೆ ಎಲ್ಲ ಹೊತ್ತಿನಲ್ಲೂ ಮುಂದುವರಿಸಲಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿಯು ಸಂವಿಧಾನ ಮತ್ತು ಪ್ರಜಾ ಪ್ರಭುತ್ವ ಉಳಿವಿಗಾಗಿ ಶುಕ್ರವಾರ ಹಮ್ಮಿಕೊಂಡಿದ್ದ ‘ಭೀಮ ಸಂಕಲ್ಪ ಸಮಾವೇಶ’ ಉದ್ಘಾಟಿಸಿ ಮಾತನಾಡಿದರು.

‘ಮನು ಸ್ಮೃತಿಯ ಆರಾಧಕರಾದ ಬಿಜೆಪಿ, ಆರ್‌ಎಸ್‌ಎಸ್, ಹಿಂದೂ ಮಹಾಸಭಾದವರು ಸಂವಿಧಾನ ವಿರೋಧಿಗಳು. ಮನುವಾದಿಗಳನ್ನು ನೆಲಕಚ್ಚಿಸಬೇಕು’ ಎಂದರು.

‘ಮತಗಳಿಕೆಗಾಗಿ ಬಿಜೆಪಿಯು ಅಂಬೇಡ್ಕರ್ ಹೆಸರು ಬಳಸಿಕೊಂಡು ನಾಟಕ ಮಾಡುತ್ತಿದೆ. ಅಂದು ಕೇಂದ್ರ ಸಚಿವರಾಗಿದ್ದ ಅನಂತ್ ಕುಮಾರ್ ಹೆಗಡೆ ಅವರ ಸಂವಿಧಾನ ಬದಲಾವಣೆ ಹೇಳಿಕೆಯನ್ನು ಪ್ರಧಾನಿ ಮೋದಿ ಸೇರಿದಂತೆ ಯಾರೊಬ್ಬರೂ ಖಂಡಿಸಲಿಲ್ಲ. ಕಾಂಗ್ರೆಸ್ ತೊರೆದು, ಅಧಿಕಾರಕ್ಕಾಗಿ ಬಿಜೆಪಿಗೆ ಹೋದ ಶೋಷಿತ ಸಮುದಾಯಗಳ ಪ್ರತಿನಿಧಿಗಳು ಮನುಸ್ಮೃತಿಯ ಆರಾಧಕರಾಗಿದ್ದಾರೆ. ಸಂವಿಧಾನ ವಿರೋಧಿಗಳಾಗುತ್ತಿದ್ದಾರೆ. ಅಂಥವರನ್ನು ಪ್ರಜಾಪ್ರಭುತ್ವದ ಅಸ್ತ್ರಗಳ ಮೂಲಕ ತಡೆಯದಿದ್ದರೆ ಸ್ವಾತಂತ್ರ್ಯ ಸೌಧದ ಆಶಯಗಳಾದ ಜಾತ್ಯತೀತ ಮೌಲ್ಯಗಳು, ಸಮಾನತೆಯ ಪರಿಕಲ್ಪನೆಯನ್ನೇ ಧ್ವಂಸ ಮಾಡುತ್ತಾರೆ’ ಎಂದರು.

> **ಭೂಸುಧಾರಣಾ ಕಾಯ್ದೆಯ ಜತೆಯಲ್ಲೇ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆ (ಪಿಟಿಸಿಎಲ್)ಗೆ ತಿದ್ದುಪಡಿ ತರಲಾಗುವುದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

‘ಅಂಬೇಡ್ಕರ್ ಅವರು ರೂಪಿಸಿದ ಸಂವಿಧಾನ ಎಷ್ಟೇ ಶ್ರೇಷ್ಠವಾಗಿದ್ದರೂ, ಕೇಂದ್ರ, ರಾಜ್ಯಗಳಲ್ಲಿ ಸಂವಿಧಾನ ವಿರೋಧಿ ಸರ್ಕಾರಗಳು ಅಸ್ತಿತ್ವಕ್ಕೆ ಬಂದಾಗ ಅಪಾಯಕ್ಕೆ ಸಿಲುಕುತ್ತದೆ. ಅಂತಹ ಪಕ್ಷಗಳನ್ನು ಅಧಿಕಾರಕ್ಕೆ ತರುವ ಮೊದಲು ಯೋಚಿಸಬೇಕು. ಕಾಂಗ್ರೆಸ್ ದಲಿತ, ಶೋಷಿತ ಸಮುದಾಯಗಳ ಹಿತಾಸಕ್ತಿಗೆ ಬದ್ಧವಾಗಿರುತ್ತದೆ’ ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್‌.ಸಿ.ಮಹದೇವಪ್ಪ, ಕೆ.ಎಚ್‌. ಮುನಿಯಪ್ಪ, ದಲಿತ ಸಂಘಟನೆಗಳ ಮುಖಂಡರಾದ ಎಸ್‌.ಮರಿಸ್ವಾಮಿ, ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡು, ಇಂದೂಧರ ಹೊನ್ನಾಪುರ, ಜಿಗಣಿ ಶಂಕರ್, ವಿ.ನಾಗರಾಜ್, ಎನ್. ವೆಂಕಟೇಶ್, ನಾಗರಾಜ್, ಅಣ್ಣಯ್ಯ, ಸೋಮಶೇಖರ್, ಎಸ್‌.ಆರ್‌.ಕೊಲ್ಲೂರ ಮತ್ತಿತರರು ಉಪಸ್ಥಿತರಿದ್ದರು.

ಶಿವಕುಮಾರ್‌ಗೆ ಬೆಂಗಳೂರು ಉಸ್ತುವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು, ಸಂಪುಟ ವಿಸ್ತರಣೆಯಾದ ಹಲವು ದಿನಗಳ ಬಳಿಕ ಜಿಲ್ಲಾ ಉಸ್ತುವಾರಿ ಸಚಿವರ ನೇಮಕ ಮಾಡಿದ್ದು, ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಡಿ.ಕೆ. ಶಿವಕುಮಾರ್ ಅವರಿಗೆ ಬೆಂಗಳೂರು ಉಸ್ತುವಾರಿ ನೀಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉಸ್ತುವಾರಿಯಾದರೆ, ಚಿಕ್ಕಮಗಳೂರು ಜಿಲ್ಲೆಯ ಉಸ್ತುವಾರಿಯನ್ನು ಇಂಧನ ಸಚಿವ ಜಾರ್ಜ್ ಅವರಿಗೆ ವಹಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದೇ ಜಿಲ್ಲೆಯ ಉಸ್ತುವಾರಿ ಇರಿಸಿಕೊಂಡಿಲ್ಲ. ಕೃಷಿ ಸಚಿವ ಕೃಷ್ಣ ಬೈರೇಗೌಡ ಮತ್ತು ಪೌರಾಡಳಿತ ಹಾಗೂ ಹಜ್ ಸಚಿವ ರಹೀಂ ಖಾನ್ ಅವರಿಗೆ ಯಾವುದೇ ಜಿಲ್ಲೆಯ ಉಸ್ತುವಾರಿ ನೀಡಿಲ್ಲ.

ಉಸ್ತುವಾರಿ ಸಚಿವರ ವಿವರ

ಸಚಿವರು	ಜಿಲ್ಲೆ	ಸಚಿವರು	ಜಿಲ್ಲೆ
ಡಿ.ಕೆ.ಶಿವಕುಮಾರ್	ಬೆಂಗಳೂರು ನಗರ	ಎನ್‌.ಚಲುವರಾಯಸ್ವಾಮಿ	ಮಂಡ್ಯ
ಜಿ.ಪರಮೇಶ್ವರ	ತುಮಕೂರು	ಎಸ್‌.ಎಸ್‌.ಮಲ್ಲಿಕಾರ್ಜುನ	ದಾವಣಗೆರೆ
ಎಚ್‌.ಕೆ.ಪಾಟೀಲ	ಗದಗ	ಸಂತೋಷ್ ಎಸ್‌.ಲಾಡ್	ಧಾರವಾಡ
ಕೆ.ಎಚ್‌.ಮುನಿಯಪ್ಪ	ಬೆಂಗಳೂರು ಗ್ರಾಮಾಂತರ	ಡಾ.ಶರಣ ಪ್ರಕಾಶ ಪಾಟೀಲ	ರಾಯಚೂರು
ರಾಮಲಿಂಗಾರೆಡ್ಡಿ	ರಾಮನಗರ	ಆರ್‌.ಬಿ.ತಿಮ್ಮಾಪೂರ	ಬಾಗಲಕೋಟೆ
ಕೆ.ಜೆ.ಜಾರ್ಜ್	ಚಿಕ್ಕಮಗಳೂರು	ಕೆ.ವೆಂಕಟೇಶ್	ಚಾಮರಾಜನಗರ
ಎಂ.ಬಿ.ಪಾಟೀಲ	ವಿಜಯಪುರ	ಶಿವರಾಜ ತಂಗಡಗಿ	ಕೊಪ್ಪಳ
ದಿನೇಶ್ ಗುಂಡೂರಾವ್	ದಕ್ಷಿಣ ಕನ್ನಡ	ಡಿ.ಸುಧಾಕರ್	ಚಿತ್ರದುರ್ಗ
ಎಚ್‌.ಸಿ.ಮಹಾದೇವಪ್ಪ	ಮೈಸೂರು	ಬಿ.ನಾಗೇಂದ್ರ	ಬಳ್ಳಾರಿ
ಸತೀಶ ಜಾರಕಿಹೊಳಿ	ಬೆಳಗಾವಿ	ಕೆ.ಎನ್‌.ರಾಜಣ್ಣ	ಹಾಸನ
ಪ್ರಿಯಾಂಕ್ ಖರ್ಗೆ	ಕಲಬುರಗಿ	ಬಿ.ಎಸ್‌.ಸುರೇಶ್	ಕೋಲಾರ
ಶಿವಾನಂದ ಪಾಟೀಲ	ಹಾವೇರಿ	ಲಕ್ಷ್ಮಿ ಹೆಬ್ಬಾಳಕರ	ಉಡುಪಿ
ಬಿ.ಜೆಡ್‌.ಜಮೀರ್ ಅಹಮದ್ ಖಾನ್	ವಿಜಯನಗರ	ಮಂಕಾಳ ವೈದ್ಯ	ಉತ್ತರ ಕನ್ನಡ
ಶರಣಬಸಪ್ಪ ದರ್ಶನಾಪುರ	ಯಾದಗಿರಿ	ಮಧು ಬಂಗಾರಪ್ಪ	ಶಿವಮೊಗ್ಗ
ಈಶ್ವರ ಬಿ.ಖಂಡ್ರೆ	ಬೀದರ್	ಡಾ.ಎಂ.ಸಿ.ಸುಧಾಕರ್	ಚಿಕ್ಕಬಳ್ಳಾಪುರ
		ಎನ್‌.ಎಸ್‌.ಭೋಸರಾಜು	ಕೊಡಗು

ಕಬ್ಬು ಬೆಳೆಗಾರರಿಗೆ ಸ್ಪಂದಿಸದ ಸಕ್ಕರೆ ಕಾರ್ಖಾನೆಗಳು

ಪಾವತಿಯಾಗದ ₹ 1,545 ಕೋಟಿ ಬಿಲ್

• ಸಂತೋಷ ಈ. ಚಿನಗುಡಿ

ಬೆಳಗಾವಿ ಹೊರವಲಯದಲ್ಲಿ ಬೆಳೆದ ಕಬ್ಬು (ಸಂಗ್ರಹ ಚಿತ್ರ)

ಪ್ರಜಾವಾಣಿ ವಿಶೇಷ

ಬೆಳಗಾವಿ: ರಾಜ್ಯದ ಹಲವು ಸಕ್ಕರೆ ಕಾರ್ಖಾನೆಗಳು ಕಬ್ಬು ಪೂರೈಸಿದ ರೈತರಿಗೆ ನೀಡಬೇಕಾದ ₹ 595 ಕೋಟಿ ಬಿಲ್ ಇನ್ನೂ ಬಾಕಿ ಉಳಿಸಿಕೊಂಡಿವೆ. ಎಫ್‌ಆರ್‌ಪಿ ಮೇಲಿನ ಹೆಚ್ಚುವರಿ ಹಣ ಸೇರಿ ಒಟ್ಟು ₹ 1,545 ಕೋಟಿ ರೈತರ ಕೈ ಸೇರಬೇಕಿದೆ.

ರಾಜ್ಯದಲ್ಲಿ 74 ಸಕ್ಕರೆ ಕಾರ್ಖಾನೆಗಳು ಚಾಲ್ತಿಯಲ್ಲಿವೆ. ಇದರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅತಿ ಹೆಚ್ಚು 27 ಕಾರ್ಖಾನೆಗಳಿವೆ. ಬಾಗಲಕೋಟೆ, ವಿಜಯಪುರ, ಕಲಬುರಗಿ, ಮಂಡ್ಯ ಜಿಲ್ಲೆಗಳ ಕಾರ್ಖಾನೆಗಳೂ ಬಿಲ್ ಬಾಕಿ ಉಳಿಸಿಕೊಂಡಿವೆ.

ಕಳೆದ ಹಂಗಾಮಿನಲ್ಲಿ 6.80 ಕೋಟಿ ಮೆಟ್ರಿಕ್ ಟನ್ ಕಬ್ಬು ನುರಿಸಲಾಗಿದ್ದು, 59.8 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದಿಸಲಾಗಿದೆ. ‘ರಿಕವರಿ’ ಕೂಡ 9.91ರಷ್ಟು ಇದೆ. ಮೊದಲ ಕಂತಿನಲ್ಲಿ ₹19.37 ಸಾವಿರ ಕೋಟಿ ಬಿಲ್ ನೀಡಲಾಗಿದೆ. ಆದರೆ, ಎರಡನೇ ಕಂತಿನ ಹಣ ಕೊಡಲು ತಯಾರಿಲ್ಲ.

‘ಕಬ್ಬು ಪೂರೈಸಿದ 15 ದಿನಗಳ ಒಳಗೆ ಪೂರ್ಣ ಬಿಲ್ ಪಾವತಿಸಬೇಕು ಎಂಬುದು ನಿಯಮ. ಇಲ್ಲದಿದ್ದರೆ ಪ್ರತಿ ಟನ್ ಕಬ್ಬಿಗೆ ಶೇ 18ರಷ್ಟು ಬಡ್ಡಿ ಸೇರಿಸಿ ಬಿಲ್ ನೀಡಬೇಕು. ಆದರೆ, ಇದು ಮಾತ್ರ ಕಾರ್ಯಗತ ಆಗುತ್ತಿಲ್ಲ’ ಎಂದು ರೈತರು ಹೇಳುತ್ತಾರೆ.

₹ 950 ಕೋಟಿ ಹೆಚ್ಚುವರಿ ದರ: ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಕಳೆದ ಡಿಸೆಂಬರ್‌ನಲ್ಲಿ ಎಫ್‌ಆರ್‌ಪಿ ದರದ ಮೇಲೆ ಪ್ರತಿ ಟನ್ ಕಬ್ಬಿಗೆ ₹ 150 ಘೋಷಿಸಿದ್ದರು. ಇದರಿಂದ ರೈತರಿಗೆ ಅಂದಾಜು ₹ 950 ಕೋಟಿಗೂ ಅಧಿಕ ಹಣ ಬರುವುದು ಬಾಕಿ ಇದೆ. ಎರಡನೇ ಕಂತಿನ ಹಣ ಮತ್ತು ಎಫ್‌ಆರ್‌ಪಿ ಮೇಲಿನ ಹಣ ಸೇರಿದರೆ ₹ 1,545 ಕೋಟಿ ದಾಟುತ್ತದೆ.

‘ನಿರಂತರ ಹೋರಾಟದ ಫಲವಾಗಿ ಹಿಂದಿನ ಸರ್ಕಾರವು ಹೆಚ್ಚುವರಿ ಹಣ ಘೋಷಿಸಿತ್ತು. ಆದರೆ, ಆ ಆದೇಶವನ್ನು ಪ್ರಶ್ನಿಸಿ ಕೆಲ ಕಾರ್ಖಾನೆಗಳು ಹೈಕೋರ್ಟ್ ಮೆಟ್ಟಿಲೇರಿವೆ. ಇದರಿಂದ ಬಿಲ್ ಬರುತ್ತದೆ ಎಂಬ ನಂಬಿಕೆಯೇ ಹೋಗಿದೆ’ ಎಂದು ಕಬ್ಬು ಬೆಳೆಗಾರರು ಹೇಳುತ್ತಾರೆ.

> **ಪ್ರತಿ ಟನ್ ಕಬ್ಬಿಗೆ ₹ 150 ಪ್ರೋತ್ಸಾಹ ಧನ ನೀಡುವ ಕುರಿತು ಹೈಕೋರ್ಟ್‌ನಲ್ಲಿ ಹಾಕಿದ ತಕರಾರು ಅರ್ಜಿ ಹಿಂಪಡೆಯಬೇಕು**
> **ಕುರಬೂರು ಶಾಂತಕುಮಾರ,** ಅಧ್ಯಕ್ಷ, ರಾಜ್ಯ ಕಬ್ಬು ಬೆಳೆಗಾರರ ಸಂಘ

> **ರಾಜ್ಯದ ಶೇ 90ರಷ್ಟು ಕಾರ್ಖಾನೆಗಳು ರಾಜಕಾರಣಿಗಳ ಮಾಲೀಕತ್ವದಲ್ಲಿವೆ. ಸಹಕಾರಿ ಕಾರ್ಖಾನೆಗಳ ಮೇಲೂ ಅವರ ಹಿಡಿತವಿದೆ**
> **ಸಿದಗೌಡ ಮೋದಗಿ,** ಅಧ್ಯಕ್ಷ, ಕೃಷಿಕ ಸಮಾಜದ ಜಿಲ್ಲಾ ಘಟಕ, ಬೆಳಗಾವಿ

> **ರೈತರ ಬಿಲ್ ಬಾಕಿ ಉಳಿದರೆ 15 ದಿನಕ್ಕೊಮ್ಮೆ ಕಾರ್ಖಾನೆಗಳಿಗೆ ನೋಟಿಸ್ ನೀಡುತ್ತೇವೆ. ಬಿಲ್ ಸಂದಾಯ ಮಾಡದವರಿಗೆ ಮತ್ತೆ ನೋಟಿಸ್ ಕೊಡಲಾಗುವುದು**
> **ಡಾ. ಆರ್‌.ಬಿ. ಖಾಂಡಗಾವೆ** ನಿರ್ದೇಶಕ, ಎಸ್‌.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
'ಉರಿಯ ಉಯ್ಯಾಲೆ'ಯಲ್ಲಿ ಜೀಕುತ್ತಾ..

ಚರ್ಚೆ
ಗೋಹತ್ಯೆ ನಿಷೇಧ ಕಾಯ್ದೆ ರದ್ದುಪಡಿಸಬೇಕೇ?

ಉದ್ಯೋಗಿಗಳ ಓದಿನ ಕನಸಿಗೆ ಅಡ್ಡಿ 7

ಸಿಡಿಲು ಬಡಿದು ಇಬ್ಬರ ಸಾವು 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,625 ▼	18,563 ▼	₹61,850 (ಬೆಂಗಳೂರು) ▲	₹75,600 (ಬೆಂಗಳೂರು) ▲	82.47 ▲

₹10,000 ಕೋಟಿ ಸಂಗ್ರಹ ಸಾಧ್ಯತೆ • ಎಲ್ಲ ಆಸ್ತಿ ತೆರಿಗೆ ಪಟ್ಟಿಗೆ ತರಲು ಸಿದ್ಧತೆ

ಪಂಚಾಯಿತಿಗೆ ತೆರಿಗೆ ಬರ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯದ 5,983 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಅಂದಾಜು 2.25 ಕೋಟಿ ಆಸ್ತಿಗಳ ಪೈಕಿ ಅರ್ಧದಷ್ಟು ಸ್ವತ್ತುಗಳು ತೆರಿಗೆ ಪಾವತಿ ವ್ಯಾಪ್ತಿಗೆ ಬಂದೇ ಇಲ್ಲ. ಎಲ್ಲ ಆಸ್ತಿಗಳಿಂದಲೂ ವೈಜ್ಞಾನಿಕವಾಗಿ ತೆರಿಗೆ ಸಂಗ್ರಹವಾದರೆ ಗ್ರಾಮ ಪಂಚಾಯಿತಿಗಳಿಗೆ ₹10,000 ಕೋಟಿಗೂ ಹೆಚ್ಚು ವರಮಾನ ಸ್ವಂತ ಮೂಲದಿಂದಲೇ ಹರಿದುಬರಲಿದೆ!

ಗ್ರಾಮ ಪಂಚಾಯಿತಿಗಳಲ್ಲಿ ವೈಜ್ಞಾನಿಕವಾಗಿ ಆಸ್ತಿ ತೆರಿಗೆ ಸಂಗ್ರಹಿಸಲು ಪಂಚತಂತ್ರ 2.0 ತಂತ್ರಾಂಶವನ್ನು ಅನುಷ್ಠಾನಕ್ಕೆ ತರಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ನಡೆಸಿದ ಅಧ್ಯಯನ ಹಾಗೂ ಪ್ರಾಯೋಗಿಕ ಅನುಷ್ಠಾನದ ವೇಳೆ ಈ ಅಂದಾಜು ಸಿಕ್ಕಿದೆ. ರಾಜ್ಯದಾದ್ಯಂತ ಗ್ರಾಮ ಪಂಚಾಯಿತಿಗಳಲ್ಲಿ ವೈಜ್ಞಾನಿಕ ಮತ್ತು ಏಕರೂಪ ಆಸ್ತಿ ತೆರಿಗೆ ಸಂಗ್ರಹಕ್ಕೆ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಲು ಪಂಚಾಯತ್ ರಾಜ್ ಆಯುಕ್ತಾಲಯ ಸಿದ್ಧತೆ ನಡೆಸುತ್ತಿದೆ.

7ನೇ ಪುಟ ನೋಡಿ

ತುಮಕೂರು ಜಿಲ್ಲೆಯಲ್ಲಿ ಗ್ರಾ.ಪಂ. ತೆರಿಗೆ ಸಂಗ್ರಹದಲ್ಲಿನ ಬದಲಾವಣೆ

330 ಒಟ್ಟು ಗ್ರಾಮ ಪಂಚಾಯಿತಿಗಳು





ಗ್ರಾಮ ಪಂ.ಗಳ ಆಸ್ತಿ ತೆರಿಗೆ ಸಂಗ್ರಹ ಹೆಚ್ಚಳದ ವಿವರ



* 2022–23ನೇ ಆರ್ಥಿಕ ವರ್ಷದ ಆಸ್ತಿ ತೆರಿಗೆ ಸಂಗ್ರಹ ಇನ್ನೂ ಪ್ರಗತಿಯಲ್ಲಿದೆ.

5,983 ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯಿತಿಗಳು

1.25 ಕೋಟಿ ಆಸ್ತಿ ತೆರಿಗೆ ಪಟ್ಟಿಯಲ್ಲಿರುವ ಸ್ವತ್ತುಗಳು

1 ಕೋಟಿ ಆಸ್ತಿ ತೆರಿಗೆ ಪಟ್ಟಿಯಲ್ಲಿ ಇಲ್ಲದ ಸ್ವತ್ತುಗಳು

ದುರ್ಬಲರ 'ಸಾಮಾಜಿಕ ಭದ್ರತೆ'ಯೂ ಅಭದ್ರ

ಫಲಾನುಭವಿಗಳ ಖಾತೆಗೆ ಜಮೆಯಾಗದ ಪಿಂಚಣಿ ಹಣ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸಾಮಾಜಿಕ ಭದ್ರತಾ ಯೋಜನೆಗಳ ಪಿಂಚಣಿ ಹಣ ಪ್ರತಿ ತಿಂಗಳು ಜಮೆಯಾಗದೇ ಫಲಾನುಭವಿಗಳು ತೊಂದರೆ ಅನುಭವಿಸುತ್ತಿರುವ ಪ್ರಕರಣಗಳು ರಾಜ್ಯದ ಹಲವೆಡೆ ವರದಿಯಾಗಿವೆ.

ಪತಿ ಕಳೆದುಕೊಂಡ ಮಹಿಳೆಯರಿಗೆ 'ವಿಧವಾ ವೇತನ', 60 ವರ್ಷ ದಾಟಿದವರಿಗೆ 'ಸಂಧ್ಯಾ ಸುರಕ್ಷಾ', 40 ವರ್ಷ ದಾಟಿದರೂ ಕಂಕಣ ಭಾಗ್ಯ ಕೂಡಿಬಾರದ ಮಹಿಳೆಯರಿಗೆ ಹಾಗೂ ವಿಚ್ಛೇದಿತ ಮಹಿಳೆಯರಿಗೆ 'ಮನಸ್ವಿನಿ', ದೈಹಿಕ ನ್ಯೂನತೆ ಇರುವವರಿಗೆ 'ಅಂಗವಿಕಲರ ಕಲ್ಯಾಣ', ಲಿಂಗತ್ವ ಅಲ್ಪಸಂಖ್ಯಾತರಿಗೆ 'ಮೈತ್ರಿ', ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತನ ಪತ್ನಿಗೆ ನೀಡುವ 'ರೈತ ಕಲ್ಯಾಣ' ಸೇರಿದಂತೆ ಸಾಮಾಜಿಕ ಭದ್ರತಾ ಯೋಜನೆಗಳ ಅಡಿ ಪ್ರತಿ ತಿಂಗಳು ಆಯಾ ಯೋಜನೆಗಳಿಗೆ ನಿಗದಿ ಮಾಡಿರುವ ಪಿಂಚಣಿ ಮೊತ್ತವನ್ನು ಫಲಾನುಭವಿಗಳಿಗೆ ಜಮೆ ಮಾಡಲಾಗುತ್ತದೆ.

7ನೇ ಪುಟ ನೋಡಿ

ಯೋಜನೆ	ಫಲಾನುಭವಿಗಳು
ಸಂಧ್ಯಾ ಸುರಕ್ಷಾ/ ವೃದ್ಧಾಪ್ಯ	48,81,532
ವಿಧವಾ ವೇತನ	17,78,512
ಅಂಗವಿಕಲ ಕಲ್ಯಾಣ	9,49,700
ಮೈತ್ರಿ	2086
ಮನಸ್ವಿ	1,39,487
ರೈತ ಕಲ್ಯಾಣ	5,498
ಇತರೆ	6804
ಒಟ್ಟು	77,63,619

ವಿಧವಾ ವೇತನ ನಾಲ್ಕು ತಿಂಗಳಿನಿಂದ ಬಂದಿಲ್ಲ. ಕಚೇರಿಗಳಿಗೆ ಅಲೆದು ಸಾಕಾಗಿದೆ. ಸರಿಯಾದ ಮಾಹಿತಿ ನೀಡುವುದೂ ಇಲ್ಲ

ರೂಪಕಲಾ
ಬ್ಯಾಟರಾಯನಪುರ, ಬೆಂಗಳೂರು

ಸಾಮಾಜಿಕ ಭದ್ರತಾ ಪಿಂಚಣಿ ವೆಚ್ಚ



ಹೊರಗುತ್ತಿಗೆ ಸಿಬ್ಬಂದಿ ತಪ್ಪು ಎಸಗಿದರೆ ಅವರಿಗೆ ಶಿಕ್ಷೆ ವಿಧಿಸುವ ನಿಯಮ ರೂಪಿಸಬೇಕು. ಇಲ್ಲ ಕಾಯಂ ನೌಕರರಿಗೆ ಹೊಣೆಗಾರಿಕೆ ನೀಡಬೇಕು

ಚಂದ್ರಶೇಖರ ಪುಟ್ಟಪ್ಪ, ಕಾರ್ಯಾಧ್ಯಕ್ಷ, ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ

ಮಣಿಪುರ ಹಿಂಸಾಚಾರ: ಎಸ್‌ಐಟಿ ರಚನೆ

ನವದೆಹಲಿ (ಪಿಟಿಐ): ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಉಲ್ಲೇಖಿಸಿರುವ ಆರು ಪ್ರಕರಣಗಳ ತನಿಖೆಗೆ ಡಿಐಜಿ ದರ್ಜೆಯ ಅಧಿಕಾರಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ಸಿಬಿಐ ರಚಿಸಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. 11

ಚಿನಕುರಳಿ

ಪ್ರಕಾಶ್ ಶೆಟ್ಟಿ

'ಹಿಂದಿನ ಭೂ ಮಂಜೂರಾತಿ ಪರಿಶೀಲನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು ಆರು ತಿಂಗಳಿನಿಂದ ಈಚೆಗೆ ಮಾಡಿರುವ ಭೂ ಮಂಜೂರಾತಿ ಪ್ರಕರಣಗಳ ಕುರಿತು ಪರಿಶೀಲನೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಯಾವ ಸಂಘ, ಸಂಸ್ಥೆಗಳಿಗೆ ಸರ್ಕಾರಿ ಜಮೀನುಗಳನ್ನು ಮಂಜೂರು ಮಾಡಲಾಗಿದೆ ಎಂಬುದನ್ನು ಪರಿಶೀಲಿಸಲಾಗುವುದು. ಅನರ್ಹರಿಗೆ ಜಮೀನು ಮಂಜೂರು ಮಾಡಿದ್ದರೆ ಕ್ರಮ ಕೈಗೊಳ್ಳಲಾಗುವುದು' ಎಂದರು.

ಕೃಷ್ಣ ಬೈರೇಗೌಡ

ಯಾವುದೇ ಧರ್ಮಕ್ಕೆ ಸೇರಿರಲಿ, ಯಾವುದೇ ಸಂಘ, ಸಂಸ್ಥೆಯಾಗಿದ್ದರೂ ಅರ್ಹತೆ ಒಂದೇ ಮಾನದಂಡ. ನಿಯಮ ಉಲ್ಲಂಘನೆ, ಅರ್ಹತೆ ಇಲ್ಲದೆ ಜಮೀನು ಮಂಜೂರು ಮಾಡಿದ್ದರೆ ಸಂಪುಟ ಸಭೆಯ ಮುಂದೆ ಪ್ರಕರಣ ಮಂಡಿಸಿ ಕ್ರಮ ಜರುಗಿಸಲಾಗುವುದು ಎಂದರು.

ಹಿಂದಿನ ಸರ್ಕಾರ ಕೈಗೊಂಡ ಎಲ್ಲ ತೀರ್ಮಾನಗಳನ್ನೂ ಪರಿಶೀಲಿಸಲು ಆಗುವುದಿಲ್ಲ. ಅದಕ್ಕೆ ಮುಂದಾದರೆ ಬೇರೆ ಯಾವ ಕೆಲಸ ಮಾಡುವುದಕ್ಕೂ ಆಗುವುದಿಲ್ಲ. ಚುನಾವಣೆಯ ಸಮೀಪದಲ್ಲಿ ತರಾತುರಿಯಲ್ಲಿ ಕೈಗೊಂಡ ತೀರ್ಮಾನಗಳನ್ನಷ್ಟೇ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

'ಆರ್‌ಎಸ್‌ಎಸ್ ಸಂಸ್ಥೆಗಳಿಗೆ ಜಮೀನು': ಇದೇ ವಿಷಯ ಕುರಿತು ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ಬಿಜೆಪಿ ಸರ್ಕಾರದ ಅವಧಿಯಲ್ಲಿ ನೂರಾರು ಎಕರೆ ಸರ್ಕಾರಿ ಜಮೀನುಗಳನ್ನು ಕಾನೂನು ಉಲ್ಲಂಘಿಸಿ ಆರ್‌ಎಸ್‌ಎಸ್‌ನ ಅಂಗ ಸಂಸ್ಥೆಗಳಿಗೆ ನೀಡಲಾಗಿದೆ. ಈ ಕುರಿತು ಪರಿಶೀಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಮುಖ್ಯಮಂತ್ರಿಯವರು ಈ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾರೆ' ಎಂದರು.

ಪುರುಷ ನೌಕರರಿಗೂ ಶಿಶುಪಾಲನೆ ರಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಗುವಿನ ಪಾಲನೆಯ ಹೊಣೆಹೊತ್ತ ಒಂಟಿ ಪೋಷಕ ಪುರುಷ ನೌಕರರಿಗೂ 6 ತಿಂಗಳ ಶಿಶುಪಾಲನಾ ರಜೆ ಪಡೆಯುವ ಅವಕಾಶವನ್ನು ರಾಜ್ಯ ಸರ್ಕಾರ ಕಲ್ಪಿಸಿದೆ.

18 ವರ್ಷಗಳ ಒಳಗಿರುವ ಮಕ್ಕಳ ಪಾಲನೆಯ ಹೊಣೆ ಹೊತ್ತಿರುವ ವಿಚ್ಛೇದಿತ, ವಿದುರ, ಅವಿವಾಹಿತ ನೌಕರರು 180 ದಿನಗಳಿಗೆ ಮೀರದಂತೆ ರಜೆ ಸೌಲಭ್ಯ ಪಡೆಯಬಹುದು. ರಜೆ ಮಂಜೂರು ಮಾಡುವ ಪ್ರಾಧಿಕಾರವು ಜೂನ್ 2021ರ ಸರ್ಕಾರಿ ಆದೇಶದಲ್ಲಿನ ಇತರೆ ನಿಯಮಗಳನ್ನು ಪಾಲಿಸಬೇಕು. ಒಂದು ವೇಳೆ ಮರು ಮದುವೆಯಾದರೆ ರಜೆ ಸೌಲಭ್ಯ ರದ್ದಾಗುತ್ತದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರು, ಪುರುಷ ನೌಕರರಿಗೂ ಈ ಸೌಲಭ್ಯ ಕಲ್ಪಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ಒಳ ಪುಟಗಳು
ದೋಷಾರೋಪ: ಟ್ರಂಪ್‌ಗೆ ಸಂಕಷ್ಟ 10
ಪವಾರ್ ವಿರುದ್ಧ ಟ್ವೀಟ್: ಎನ್‌ಸಿಪಿ ಕಾರ್ಯಕರ್ತರ ಪ್ರತಿಭಟನೆ 11
'ತೀವ್ರವಾಗಿ ಹೆಚ್ಚುತ್ತಿದೆ ತಾಪಮಾನ' 10

ರಿಚ್ಮಂಡ್ ರಸ್ತೆ: #5, ರಿಚ್ಮಂಡ್ ಪಲಾಜೋ, ರಿಚ್ಮಂಡ್ ರೋಡ್, ಬೆಂಗಳೂರು - 560025. ಫೋನ್: **080-2227 8846.** **ಹೆಚ್.ಎಸ್.ಆರ್ ಲೇಔಟ್:** #247, ವಿಜಯ್ ಟವರ್ಸ್, 17ನೇ ಅಡ್ಡರಸ್ತೆ, 6ನೇ ಸೆಕ್ಟರ್, ಹೆಚ್.ಎಸ್.ಆರ್ ಲೇಔಟ್, ಬೆಂಗಳೂರು - 560102. ಫೋನ್: **080-4696 3800**

ಎಎಸ್‌ಐ, ಕಾನ್‌ಸ್ಟೆಬಲ್ ಅಮಾನತು

ತುಮಕೂರು: ಲಂಚ ಪಡೆಯುತ್ತಿದ್ದ ಕಳ್ಳಂಬೆಳ್ಳ ಪೊಲೀಸ್ ಠಾಣೆ ಎಎಸ್‌ಐ ಚಿದಾನಂದ ಸ್ವಾಮಿ, ಕಾನ್‌ಸ್ಟೆಬಲ್ ಚಿಕ್ಕಹನುಮಯ್ಯ ಅವರನ್ನು ಎಸ್‌ಪಿ ಅಮಾನತುಗೊಳಿಸಿದ್ದಾರೆ.

NAVODAYA VIDYALAYA SAMITI (HYDERABAD REGION)

ENGAGEMENT OF CONTRACT TEACHERS & FCSA

Online applications are invited for Engagement of Contract Teachers & FCSA on contract basis, against purely temporary & tentative vacancies, at the Jawahar Navodaya Vidyalayas of the States of Andhra Pradesh, Telangana, Karnataka, Kerala, Union Territories of Puducherry & Lakshadweep. The last date for submission of application through online is 20-06-2023.
For further details visit Navodaya Vidyalaya Samiti, Regional Office, Hyderabad website https://navodaya.gov.in/nvs/ro/Hyderabad/en/home/

Sd/- DEPUTY COMMISSIONER

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಿನಿ ವಿಧಾನಸೌಧ, ಎಂ.ಜಿ. ರಸ್ತೆ, ಕನಕಪುರ–562117

cdpokanakapura@gmail.com, ದೂರವಾಣಿ ಸಂಖ್ಯೆ: 080–27522282

ಸಂಖ್ಯೆ:ಶಿಅಯೋರಾ/ಟೇ.ಚೇರ್/ಟೆಂಡರ್/2023–24, ದಿನಾಂಕ: 08.06.2023

ಟೆಂಡರ್ ಪ್ರಕಟಣೆ

2023–24ನೇ ಸಾಲಿನಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ 16 ಹೊಸ ಅಂಗನವಾಡಿ ಕೇಂದ್ರಗಳಿಗೆ ಗ್ಯಾಸ್ ಟೇಬಲ್, ಟೇಬಲ್, ಚೇರ್, ಅಲ್ಮೇರಾ, ಜಮಾಖಾನ, ಹೊದಿಕೆ ಖರೀದಿ ಮಾಡಲು ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಕೊನೆ ದಿನಾಂಕ: 30.06.2023ರೊಳಗೆ ಮುಚ್ಚಿದ ದ್ವಿ–ಲಕೋಟೆಯಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಕನಕಪುರ ಇವರಿಗೆ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಿನಿ ವಿಧಾನಸೌಧ, ಎಂ.ಜಿ. ರಸ್ತೆ, ಕನಕಪುರ, ಇವರನ್ನು ಸಂಪರ್ಕಿಸಬಹುದಾಗಿದೆ. ದೂ.ಸಂ: 080–27522282

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಕನಕಪುರ

ಫಾರಂ ನಂ. ಯುಆರ್‌ಸಿ–2

ಕಾಯ್ದೆಯ ಅಧ್ಯಾಯ 22ರ ಭಾಗ 1 ಅಡಿಯಲ್ಲಿ ನೋಂದಣಿ ಕುರಿತಂತೆ ನೋಟಿಸ್ ಜಾಹೀರಾತು ನೀಡುವುದು [ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 374(ಬಿ) ಮತ್ತು ಕಂಪನಿಗಳ (ನೋಂದಣಿಗೆ ಅಧಿಕೃತ) ನಿಯಮಗಳು, 2014ರ ನಿಯಮ 4(1)ರ ಪ್ರಕಾರ]

1. ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಈ ಪ್ರಕಟಣೆಯು ಪ್ರಕಟಗೊಂಡ ದಿನದ ನಂತರದ ಹದಿನೈದು ದಿನಗಳ ಬಳಿಕ ಆದರೆ ಇಂದಿನಿಂದ ಮೂವತ್ತು ದಿನಗಳ ಅವಧಿ ಪೂರ್ಣಗೊಳ್ಳುವದರೊಳಗೆ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 366ರ ಸಬ್–ಸೆಕ್ಷನ್ (2)ರ ಪ್ರಕಾರ ರಜಿಸ್ಟ್ರಾರ್ ಬೆಂಗಳೂರು ರವರಿಗೆ ಒಂದು ಅರ್ಜಿ ಸಲ್ಲಿಸಲು ಉದ್ದೇಶಿಸಲಾಗಿದ್ದು ಕಂಪನಿಗಳ ಕಾಯ್ದೆ, 2013ರ ಅಧ್ಯಾಯ 21ರ ಭಾಗ 1 ಅಡಿಯಲ್ಲಿ ನೋಂದಾಯಿತ **ತಪೋವನಂ ಆರ್ಗಾನಿಕ್ ಫಾರ್ಮಿಂಗ್ ಸಿಸ್ಟಮ್ಸ್ ಎಲ್‌ಎಲ್‌ಪಿ** ಎಂಬ ಒಂದು ಎಲ್‌ಎಲ್‌ಪಿ ಕಂಪನಿಯನ್ನು ಷೇರುಗಳ ಮೂಲಕ ಕಂಪನಿ ಲಿಮಿಟೆಡ್ ಎಂಬುದಾಗಿ ನೋಂದಾಯಿಸಲು ಕೋರಲಾಗುತ್ತಿದೆ.
2. ಕಂಪನಿಯ ಪ್ರಮುಖ ಉದ್ದೇಶಗಳು ಹೀಗಿರುತ್ತವೆ:
   - ಕೃಷಿಕರ ಜಮೀನುಗಳ ಬೇಡಿಕೆಗೆ ಅನುಗುಣವಾದ ಸಲಹಾ ಸೇವೆಗಳನ್ನು ನೀಡುವ/ಒದಗಿಸುವ ಮೂಲಕ ಕೃಷಿ ಸಮುದಾಯದ ಸುಸ್ಥಿರ ಅಭಿವೃದ್ಧಿಗಾಗಿ ಸಾವಯವ ಮಾರ್ಗ ಕಲ್ಪಿಸುವುದು.
   - ವರ್ಷಪೂರ್ತಿ ಕೃಷಿಕ ಕುಟುಂಬ ಸದಸ್ಯರಿಗೆ ಮತ್ತು ಗ್ರಾಮೀಣ ಯುವಜನತೆಗೆ ನಿಯಮಿತ ಮಾಸಿಕ ಆದಾಯ ಹಾಗೂ ಉದ್ಯೋಗ ಖಚಿತಪಡಿಸುವುದು.
   - ತಂತ್ರಜ್ಞಾನ ಮತ್ತು ಪೂರಕ ತಂತ್ರಜ್ಞಾನಗಳನ್ನು ಹಾಗೂ ಸಾಂದರ್ಭಿಕ ವ್ಯವಹಾರಾತ್ಮಕ ಚಟುವಟಿಕೆಗಳನ್ನು ಬಳಸಿಕೊಂಡು ಕೃಷಿಕರನ್ನು ಕೃಷಿ ಉದ್ಯಮಿಗಳನ್ನಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಒಂದು ವೇದಿಕೆ ರೂಪಿಸುವುದು.
3. ಉದ್ದೇಶಿತ ಕಂಪನಿಯ ಡ್ರಾಫ್ಟ್ ಮೆಮೊರಾಂಡಮ್ ಹಾಗೂ ಆರ್ಟಿಕಲ್ಸ್ ಆಫ್ ಅಸೋಸಿಯೇಶನ್‌ನ ಪ್ರತಿಯನ್ನು ನಂ. **1394, 2ನೇ ಮಹಡಿ, ಲಕ್ಷ್ಮೀ ರೆಸಿಡೆನ್ಸಿ, 21ನೇ ಮುಖ್ಯರಸ್ತೆ, ಹೆಚ್‌ಎಸ್‌ಆರ್ ಬಡಾವಣೆ, ಸೆಕ್ಟರ್ 1, ಬೆಂಗಳೂರು, ಕರ್ನಾಟಕ, 560102** ವಿಳಾಸದಲ್ಲಿರುವ ಕಂಪನಿಯ ಕಚೇರಿಯಲ್ಲಿ ಪರಿಶೀಲಿಸಬಹುದು.
4. ಸದರಿ ಉದ್ದೇಶಿತ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಹೊಂದಿರುವ ಯಾವುದೇ ವ್ಯಕ್ತಿಯು, ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗೆ ತನ್ನ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ರಜಿಸ್ಟ್ರಾರ್, ಸೆಂಟ್ರಲ್ ರಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8, ಸೆಕ್ಟರ್ 5, ಐಎಂಟಿ ಮಾನೇಸರ್, ಗುರಗಾಂವ್ (ಹರ್ಯಾಣ) ಜಿಲ್ಲೆ, ಪಿನ್ ಕ್ರಮಾಂಕ–122050 ವಿಳಾಸಕ್ಕೆ ತಲುಪಿಸುವುದು, ಜೊತೆಗೆ ಒಂದು ಪ್ರತಿಯನ್ನು ಕಂಪನಿಯ ನೋಂದಾಯಿತ ಕಚೇರಿಗೆ ಕೂಡ ರವಾನಿಸುವುದು.

ತಪೋವನಂ ಆರ್ಗಾನಿಕ್ ಫಾರ್ಮಿಂಗ್ ಸಿಸ್ಟಮ್ಸ್ ಎಲ್‌ಎಲ್‌ಪಿ ಪರವಾಗಿ
ಸಹಿ/– ದುಡೆಕುಲ ಹಸನ್ ಚೈತನ್ಯ
ನಿಯೋಜಿತ ಪಾಲುದಾರರು

ದಿನಾಂಕ: 10/06/2023
ಸ್ಥಳ: ಬೆಂಗಳೂರು

ಪಾಲಿಟೆಕ್ನಿಕ್: ಸಿಗದ ಪದೋನ್ನತಿ

ಒಂದೂವರೆ ದಶಕದಿಂದಲೂ ಬಡ್ತಿಗಾಗಿ ಕಾಯುತ್ತಿರುವ ಉಪನ್ಯಾಸಕರು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ಪದೋನ್ನತಿ ಕನಸು 15 ವರ್ಷದಿಂದ ಸಾಕಾರಗೊಳ್ಳಲೇ ಇಲ್ಲ.

2008, 2010 ಮತ್ತು 2012ನೇ ಸಾಲಿನಲ್ಲಿ ನೇಮಕಾತಿಯಾ ಗಿದ್ದ ಉಪನ್ಯಾಸಕರಿಗೆ ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಶನ್‌ನ (ಎಐಸಿಟಿಇ) 6ನೇ ಮತ್ತು 7ನೇ ಶ್ರೇಣಿಗಳ ಅನ್ವಯ ಸಿಎಎಸ್ (ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ) ವೃತ್ತಿ ಪದೋನ್ನತಿ ನೀಡಬೇಕಿತ್ತು. ಆದರೆ, 2015ರಿಂದ ಇಲ್ಲಿವರೆಗೆ ಪದೋನ್ನತಿ ನೀಡುವ ಪ್ರಕ್ರಿಯೆಯೇ ನಡೆದಿಲ್ಲ. 2015ರ ನವೆಂಬರ್ 7ಕ್ಕಿಂತ ಮೊದಲೇ 54 ಉಪನ್ಯಾಸಕರಿಗೆ ಬಡ್ತಿ ನೀಡಬೇಕಿತ್ತು. ಈ ಬಗ್ಗೆ ಪ್ರಸ್ತಾವನೆಯು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಸಲ್ಲಿಸಿದ್ದರೂ ಇನ್ನೂ ಆರ್ಥಿಕ ವೆಚ್ಚದ ಮಾಹಿತಿಯನ್ನು ಸರ್ಕಾರಕ್ಕೆ ನೀಡದೇ ಇರುವುದರಿಂದ ಇಲಾಖೆಯಿಂದ ಬಡ್ತಿ ಪ್ರಕ್ರಿಯೆ ನಡೆದಿಲ್ಲ.

2019ರ ಮಾರ್ಚ್‌ಗೆ ಎಜಿಪಿ (ಅಕಾಡೆಮಿಕ್ ಗ್ರೇಡ್ ಪೇ) ಪಡೆಯಲು ಅರ್ಹತೆ ಹೊಂದಿರುವ 500 ಉಪನ್ಯಾಸಕರ ಪ್ರಸ್ತಾವನೆಗಳು ಇಲಾಖೆಯಿಂದ ಸರ್ಕಾರದ ಅನುಮೋದನೆಗೆ ಇನ್ನೂ ಕಳಿಸಿಲ್ಲ. 2019ರ ಮಾರ್ಚ್ ನಂತರ ಎಜಿಪಿ ಅರ್ಹತೆ ಪಡೆದಿರುವ ಸುಮಾರು 1000 ಉಪನ್ಯಾಸಕರ ಪ್ರಸ್ತಾವನೆಯನ್ನೇ ಆಹ್ವಾನಿಸದೇ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎಂದು ಪಾಲಿಟೆಕ್ನಿಕ್ ಉಪನ್ಯಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ನಾನು ಎಂ.ಟೆಕ್, ಪಿಎಚ್.ಡಿ ಮುಗಿಸಿ 15 ವರ್ಷಗಳಿಂದ ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದೇನೆ. ಪದೋನ್ನತಿಗಾಗಿ ಇಲಾಖೆಯ ಆಯುಕ್ತರಿಗೆ, ನಿರ್ದೇಶಕರಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಆರ್ಥಿಕ ವೆಚ್ಚ ಸಹಿತ ವಿವಿಧ ಮಾಹಿತಿಯನ್ನು ಸರ್ಕಾರದ ನಿರ್ದೇಶಕರ ಕಚೇರಿಯಿಂದ ಆಯುಕ್ತರ ಕಚೇರಿಗೆ ಪತ್ರ ಹೋಗಿವೆ. ಆದರೆ, ಆಯುಕ್ತರ ಕಚೇರಿಯಿಂದ ಯಾವುದೇ ಮಾಹಿತಿ ನೀಡಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದ ನಮಗೆ ಅನ್ಯಾಯವಾಗಿದೆ’ ಎಂದು ಉಪನ್ಯಾಸಕ ಸುರೇಶ್ ’ಪ್ರಜಾವಾಣಿ‘ ಜತೆಗೆ ಅಳಲು ತೋಡಿಕೊಂಡರು.

ಪ್ರಜಾವಾಣಿ ವಿಶೇಷ


ಬೆಂಗಳೂರಿನ ಕೆ.ಆರ್. ವೃತ್ತದಲ್ಲಿರುವ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ (ಸಾಂದರ್ಭಿಕ ಚಿತ್ರ)

‘ಗೊಂದಲದ ಗೂಡು’

ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್, ಎಂಜಿನಿಯರಿಂಗ್ ಉಪನ್ಯಾಸಕರೂ ಸೇರಿದಂತೆ ಅನೇಕರು ಪದೋನ್ನತಿ ಪಡೆದಿದ್ದರು. ಇದು ನಿಯಮ ಪ್ರಕಾರ ನಡೆದಿಲ್ಲ. ಕೆಲವರು ನಿಯಮ ಉಲ್ಲಂಘನೆ ಮಾಡಿ ಪದೋನ್ನತಿ ಪಡೆದಿದ್ದಾರೆ ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್‌ಗೆ ಕೆಲವರು ಸಲ್ಲಿಸಿದ್ದರು.
ಅಲ್ಲದೇ ಈ ಎಲ್ಲ ಪದೋನ್ನತಿಗಳ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ಎಂದು ಆರ್ಥಿಕ ಇಲಾಖೆ ವಾಪಸ್ ಮಾಡಿತ್ತು.
ಈಗ ಪರಿಶೀಲನೆ ನಡೆಯುತ್ತಿದೆ. 54 ಉಪನ್ಯಾಸಕರ ಪ್ರಸ್ತಾವನೆ ಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಚಿಸದ ತಾಂತ್ರಿಕ ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

ಮಧುಮೇಹಿಗಳ ಸಂಖ್ಯೆ ಅಂದಾಜು 10.1 ಕೋಟಿ

ನವದೆಹಲಿ (ಪಿಟಿಐ): ಭಾರತದಲ್ಲಿ ಮಧುಮೇಹಿಗಳ ಸಂಖ್ಯೆ ಶೇ 11.4 ರಷ್ಟಿದೆ. ಶೇ 35.5ರಷ್ಟು ಮಂದಿ ಅಧಿಕದೊತ್ತಡ ಮತ್ತು ಶೇ 15.3ರಷ್ಟು ಜನರು ಮಧುಮೇಹದ ಆರಂಭಿಕ ಹಂತದಲ್ಲಿದ್ದಾರೆ.

2021ರಲ್ಲಿ ನಡೆದಿರುವ ಈ ಸಮೀಕ್ಷೆ ಪ್ರಕಾರ, ಭಾರತದಲ್ಲಿರುವ ಮಧುಮೇಹಿಗಳ ಸಂಖ್ಯೆ ಅಂದಾಜು 10.1 ಕೋಟಿ. ಮಧುಮೇಹ ಸಮಸ್ಯೆಯ ಆರಂಭಿಕ ಹಂತದಲ್ಲಿ 13.6 ಕೋಟಿ ಮಂದಿ ಇದ್ದರೆ, 31.5 ಕೋಟಿ ಜನ ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದಾರೆ.

ಲ್ಯಾನ್ಸೆಟ್ ಡಯಾಬಿಟಿಸ್ ಮತ್ತು ಎಂಡೊಕ್ರಿನಾಲಜಿ ನಿಯತಕಾಲಿಕದಲ್ಲಿ ಪ್ರಕಟವಾಗಿರುವ ದೇಶವ್ಯಾಪಿಯ ಸಮೀಕ್ಷೆಯ ವರದಿಯಲ್ಲಿ ಈ ಅಂಶ ಉಲ್ಲೇಖವಾಗಿದೆ.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಸಹಯೋಗದಲ್ಲಿ ಮದ್ರಾಸ್ ಡಯಾಬಿಟಿಸ್ ಸಂಶೋಧನಾ ಪ್ರತಿಷ್ಠಾನವು (ಎಂಡಿಆರ್‌ಎಫ್) ಈ ಸಮೀಕ್ಷೆಯನ್ನು ನಡೆಸಿತ್ತು. ಕೇಂದ್ರ ಆರೋಗ್ಯ ಸಚಿವಾಲಯವು ಹಣಕಾಸು ನೆರವು ಒದಗಿಸಿತ್ತು.

ಸಮೀಕ್ಷೆಯ ವರದಿ ಪ್ರಕಾರ, ಭಾರತದಲ್ಲಿ ಸಾಮಾನ್ಯ ಬೊಜ್ಜು ಮತ್ತು ಕಿಬ್ಬೊಟ್ಟೆಯಲ್ಲಿನ ಬೊಜ್ಜು ಹೊಂದಿರುವವರ ಸಂಖ್ಯೆ ಕ್ರಮವಾಗಿ 25.4 ಕೋಟಿ ಮತ್ತು 31.5 ಕೋಟಿ ಆಗಿದೆ.

2017ರಲ್ಲಿ ಭಾರತದಲ್ಲಿ ಡಯಾಬಿಟಿಸ್ ರೋಗಿಗಳ ಪ್ರಮಾಣ ಶೇ 7.5ರಷ್ಟಿದೆ. ಅಂದರೆ, ಅಂದಿನಿಂದ ಇಲ್ಲಿಯವರೆಗೂ ಮಧುಮೇಹಿಗಳ ಪ್ರಮಾಣ ಶೇ 50ರಷ್ಟು ಏರಿಕೆಯಾಗಿದೆ.

ರಾಜ್ಯವಾರು ಪರಿಗಣಿಸಿದರೆ ಗೋವಾದಲ್ಲಿ ಮಧುಮೇಹಿಗಳ ಪ್ರಮಾಣ ಅಧಿಕ ಅಂದರೆ ಶೇ 26.4ರಷ್ಟಿದ್ದರೆ, ಉತ್ತರ ಪ್ರದೇಶದಲ್ಲಿ ಕಡಿಮೆ ಅಂದರೆ ಶೇ 4.8ರಷ್ಟಿದೆ. ಮಧುಮೇಹ ಆರಂಭಿಕ ಹಂತದಲ್ಲಿರುವವರ ಪ್ರಮಾಣ ಪಂಜಾಬ್‌ನಲ್ಲಿ ಅಧಿಕವಾಗಿದ್ದರೆ (ಶೇ 51.8) ಮೇಘಾಲಯದಲ್ಲಿ ಕಡಿಮೆ (ಶೇ 24.3) ಇದೆ ಎಂದು ಸಂಶೋಧಕರು ತಿಳಿಸಿದ್ದಾರೆ.

‘ಮಧುಮೇಹ, ಅಧಿಕರಕ್ತದೊತ್ತಡದಿಂದ ಬಳಲುತ್ತಿರುವವರ ಸಂಖ್ಯೆ ಏರಿಕೆಗೆ ಜೀವನಶೈಲಿಯ ಬದಲಾವಣೆ, ಆಹಾರ ಪಥ್ಯ, ದೈಹಿಕ ಚಟುವಟಿಕೆ, ಒತ್ತಡ ಕಾರಣವಾಗಿದೆ‘ ಎಂದು ಎಂಡಿಆರ್‌ಎಫ್ ಅಧ್ಯಕ್ಷೆ ಡಾ.ಆರ್. ಎಂ.ಅಂಜನಾ ತಿಳಿಸಿದ್ದಾರೆ.

ಮಧುಮೇಹ, ರಕ್ತದೊತ್ತಡದಿಂದ ಬಳಲುವವರ ಪ್ರಮಾಣ ಏರಿಕೆಯು ಪ್ರಗತಿಯ ಮೇಲೂ ಪರಿಣಾಮ ಬೀರಲಿದೆ. ಏರುಗತಿ ತಡೆಗೆ ರಾಜ್ಯ ಮಟ್ಟದಲ್ಲಿ ನಿರ್ದಿಷ್ಟ ಯೋಜನೆಗಳು ಅಗತ್ಯ ಎಂದು ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿಕೆ

ಸುವರ್ಣ ಸಂಭ್ರಮಕ್ಕೆ ವಿಶೇಷ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೈಸೂರು ರಾಜ್ಯ ‘ಕರ್ನಾಟಕ’ವೆಂದು ನಾಮಕರಣಗೊಂಡ ಸುವರ್ಣ ಸಂಭ್ರಮಕ್ಕೆ ನಾಡು, ನುಡಿ ಹಾಗೂ ಸಂಸ್ಕೃತಿಯ ಮಹತ್ವ ಸಾರುವ ವಿಶೇಷ ಕಾರ್ಯಕ್ರಮಗಳನ್ನು ನಡೆಸಬೇಕು’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಸೂಚಿಸಿದರು.

ಶಿವರಾಜ್ ತಂಗಡಗಿ

ಶುಕ್ರವಾರ ಇಲ್ಲಿ ಇಲಾಖೆಯ ಆಯವ್ಯಯ ಸಭೆ ನಡೆಸಿದ ಅವರು, ‘ಮೈಸೂರು ರಾಜ್ಯವು 1973ರಲ್ಲಿ ‘ಕರ್ನಾಟಕ’ ಎಂದು ಮರುನಾಮಕರಣವಾಯಿತು. ಈಗ 50 ವರ್ಷ ಪೂರೈಸಲಾಗುತ್ತಿದೆ. ಆದ್ದರಿಂದ ವರ್ಷವಿಡಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಈ ಬಾರಿ ಬಜೆಟ್‌ನಲ್ಲಿ ಇಲಾಖೆಯ ಕಾರ್ಯಕ್ರಮಗಳಿಗೆ ಹೆಚ್ಚಿನ ಅನುದಾನವನ್ನು ಕೋರಲಾಗುವುದು. ಸಂಸ್ಕೃತಿ ಇಲಾಖೆಯ ಕಾರ್ಯಕ್ರಮಗಳನ್ನು ಹೆಚ್ಚು ಆಕರ್ಷಣೀಯವಾಗಿ ಆಯೋಜಿಸಲು ಉದ್ದೇಶಿಸಲಾಗಿದೆ’ ಎಂದು ಹೇಳಿದರು.

ಮುಖ್ಯಾಂಶಗಳು
- ನಿಗದಿತ ದಿನಗಳಂದೇ ಉತ್ಸವ ಆಯೋಜನೆ
- ರವೀಂದ್ರ ಕಲಾಕ್ಷೇತ್ರದ ನವೀಕರಣ

ರವೀಂದ್ರ ಕಲಾ ಕ್ಷೇತ್ರವನ್ನು ನವೀಕರಿಸಿ, ಅಲ್ಲಿನ ಆಸನ, ಧ್ವನಿ ಮತ್ತು ಬೆಳಕು ವ್ಯವಸ್ಥೆಯನ್ನು ಸುಧಾರಣೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದ ಅವರು, ‘ಕರ್ನಾಟಕದ ಪರಂಪರೆಯನ್ನು ಬಿಂಬಿಸುವಂತಹ ಚಾಲುಕ್ಯ ಉತ್ಸವ, ಆನೆಗೊಂದಿ ಉತ್ಸವ, ಲಕ್ಕುಂಡಿ ಉತ್ಸವ, ಹಂಪಿ ಉತ್ಸವ, ನವರಸಪುರ ಉತ್ಸವ, ಕದಂಬ ಉತ್ಸವ, ಇಟಗಿ ಉತ್ಸವ ಹಾಗೂ ಕನಕಗಿರಿ ಸೇರಿ ವಿವಿಧ ಉತ್ಸವಗಳನ್ನು ನಿಗದಿತ ದಿನಾಂಕಗಳಂದು, ಪ್ರವಾಸಿಗರ ಅನುಕೂಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಆಯೋಜಿಸಬೇಕು. ಅದಕ್ಕೊಂದು ವೇಳಾಪಟ್ಟಿಯನ್ನೂ ಸಿದ್ಧಪಡಿಸಬೇಕು’ ಎಂದು ತಿಳಿಸಿದರು.

ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಭಾಗಗಳಲ್ಲಿ ಜಾನಪದ ಲೋಕ ಸ್ಥಾಪನೆಗೆ ಸೂಕ್ತ ಯೋಜನೆ ರೂಪಿಸುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು. ಐತಿಹಾಸಿಕ ಸ್ಮಾರಕಗಳ ಮುಂದೆ ಪ್ರತಿ ತಿಂಗಳು ರಜಾ ದಿನಗಳಂದು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲು, ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ಕಾರ್ಯಕ್ರಮ ರೂಪಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಇಲಾಖೆ ಕಾರ್ಯದರ್ಶಿ ಎನ್. ಮಂಜುಳಾ, ನಿರ್ದೇಶಕ ವಿಶ್ವನಾಥ ಪಿ.ಹಿರೇಮಠ ಇದ್ದರು.

‘ಮೊಬೈಲ್‌ರಾಜ’...

ಮೆಜೆಸ್ಟಿಕ್‌ನಲ್ಲಿರುವ ಗುಬ್ಬಿ ವೀರಣ್ಣ ರಂಗಮಂದಿರದ ಎದುರು ಬಾಲಕನೊಬ್ಬ ಕಾಲಿನ ಮೇಲೆ ಕಾಲು ಹಾಕಿಕೊಂಡು ಮೊಬೈಲ್ ನೋಡುತ್ತ ಮಲಗಿದ್ದ ದೃಶ್ಯವನ್ನು ಭದ್ರತಾ ಸಿಬ್ಬಂದಿಯಾದ ಆತನ ಅಜ್ಜ ಶೇಷಪ್ಪ ನೋಡಿ ನಗೆ ಬೀರಿದರು ಪ್ರಜಾವಾಣಿ ಚಿತ್ರ/ ಸಂತೋಷ ಜಿಗಳಿಕೊಪ್ಪ

ಹೊಸಕೆರೆಹಳ್ಳಿ ಕೆರೆಗೆ ಡಿಸಿಎಂ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೊಸಕೆರೆಹಳ್ಳಿ ಕೆರೆಗೆ ಶುಕ್ರವಾರ ಭೇಟಿ ನೀಡಿ, ಅನಗತ್ಯವಾಗಿ ನಡೆಯುತ್ತಿರುವ ಕಾಮಗಾರಿಗಳ ಮಾಹಿತಿಯನ್ನು ಸ್ಥಳೀಯರಿಂದ ಪಡೆದುಕೊಂಡರು.

ಹೊಸಕೆರೆಹಳ್ಳಿ ಕೆರೆ ಮಧ್ಯದಲ್ಲಿ ರಸ್ತೆ ನಿರ್ಮಿಸಲು ಕಾರಣರಾದ ಎಂಜಿನಿಯರ್‌ಗಳಾದ ಮೇಘಾ ಹಾಗೂ ಶಿಲ್ಪಾ ಅವರನ್ನು ಡಿಸಿಎಂ ಸೂಚನೆ ಮೇರೆಗೆ ಅಮಾನತುಗೊಳಿಸಲಾಗಿದೆ.

ಕೆರೆ ಸಮೀಪ ಶುಕ್ರವಾರ ದಿಢೀರ್ ಭೇಟಿ ನೀಡಿದ ಡಿ.ಕೆ.ಶಿವಕುಮಾರ್ ಅಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸಿದರು. ಸ್ಥಳೀಯರು ಅಲ್ಲಿಗೆ ಬಂದು ಮಾಹಿತಿಯನ್ನು ನೀಡಿದರು.

‘ಕೆರೆಯಲ್ಲಿ ಬೃಹತ್ ಪ್ರಮಾಣದಲ್ಲಿ ಮಣ್ಣು ಸುರಿದು ರಸ್ತೆ ನಿರ್ಮಿಸುವ ಜೊತೆಗೆ ಅಂಚಿನಲ್ಲೂ ಅನಗತ್ಯವಾಗಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ರಸ್ತೆ ವಿಸ್ತರಿಸಲಾಗಿದೆ. ಕೆರೆಯಲ್ಲಿ ರಾಜಕಾಲುವೆ ಸ್ವಚ್ಛತೆ ಕಾಮಗಾರಿ ನಡೆಯುತ್ತಿದೆ ಎಂದು ಎಂಜಿನಿಯರ್ ಶಿಲ್ಪಾ ಮಾಹಿತಿ ನೀಡಿದ್ದರು. ಆದರೆ, ಚುನಾವಣೆ ನಂತರ ಇಲ್ಲಿ ಯಾವುದೇ ಕೆಲಸ ನಡೆಯುತ್ತಿಲ್ಲ. ಕೆರೆ ಅಭಿವೃದ್ಧಿ ಕಾರ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕು. ಸ್ವಚ್ಛ ನೀರು ನಿಲ್ಲಲು ಅವಕಾಶ ಕಲ್ಪಿಸಬೇಕು’ ಎಂದು ರಚನಾ ಸೇರಿದಂತೆ ಸ್ಥಳೀಯ ನಿವಾಸಿಗಳು ಮನವಿ ಮಾಡಿಕೊಂಡರು.

‘ಎಲ್ಲವನ್ನೂ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ. ಹೊಸಕೆರೆಹಳ್ಳಿ ಕೆರೆ ಅಭಿವೃದ್ಧಿ ಮಾಡಲಾಗುತ್ತದೆ’ ಎಂದು ಶಿವಕುಮಾರ್ ಭರವಸೆ ನೀಡಿದರು.

‘ಕುಂಟ ಕೋಣ ಮೂಕ ಜಾಣ’ 101ನೇ ಪ್ರಯೋಗ

ಬೆಂಗಳೂರು: ಜೇವರ್ಗಿಯ ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘವು ‘ಕುಂಟ ಕೋಣ ಮೂಕ ಜಾಣ’ ನಾಟಕದ 101ನೇ ಪ್ರಯೋಗದ ಸಂಭ್ರಮ ಸಮಾರಂಭವನ್ನು ಇದೇ 12ರಂದು ಮಧ್ಯಾಹ್ನ 2.30ಕ್ಕೆ ಗಾಂಧಿನಗರದ ಗುಬ್ಬಿ ವೀರಣ್ಣ ರಂಗ ಮಂದಿರದಲ್ಲಿ ಹಮ್ಮಿಕೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

MISSING

G. RAM MURTHY REDDY
71 yrs, dark, can speak only Telugu, Mentally challenged and wearing Light green T Shirt, Blue Shots and on bare foot. If found Please
Contact: Naga Reddy
9916196986, 9347735937

ತೇಜಸ್ವಿ ಕಟ್ಟೀಮನಿಗೆ ‘ಕಸಾಪ ದತ್ತಿ ಪ್ರಶಸ್ತಿ’

ಬೆಂಗಳೂರು: ಕಸಾಪ ನೀಡುವ 2023ನೇ ಸಾಲಿನ ‘ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ’ಗೆ ವಿದ್ವಾಂಸ ಪ್ರೊ. ತೇಜಸ್ವಿ ಕಟ್ಟೀಮನಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 51 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ತೇಜಸ್ವಿ ಕಟ್ಟೀಮನಿ ಅವರು ಕೊಪ್ಪಳ ಜಿಲ್ಲೆಯ ಅಳವಂಡಿ ಗ್ರಾಮದವರು. ಕೇಂದ್ರಿಯ ಬುಡಕಟ್ಟು ವಿಶ್ವ-ವಿದ್ಯಾಲಯದ ಕುಲಪತಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಅವರು, ಕನ್ನಡ ಸಾರಸ್ವತ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರು ಕನ್ನಡದ ಹಲವು ಕೃತಿಗಳನ್ನು ಹಿಂದಿ ಹಾಗೂ ಇಂಗ್ಲಿಷ್ ಭಾಷೆಗೆ ಭಾಷಾಂತರ ಮಾಡಿದ್ದಾರೆ. ಅನ್ಯ ಭಾಷೆಗಳ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ ಎಂದು ಮಹೇಶ ಜೋಶಿ ತಿಳಿಸಿದ್ದಾರೆ.

ಪ್ರೊ. ತೇಜಸ್ವಿ ಕಟ್ಟೀಮನಿ

WT.5589.2023KAN

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

My clients have entered into Sale Agreement to purchase Schedule Property from **(1) Sri. M. CHANDRASHEKHAR,** S/o. Muthiah Pillai **(2) Sri. SWARUP CHANDRASHEKHAR** S/o. M. Chandra Shekhar, **(3) Smt. GEETHARANJANI CHANDRA SHEKHAR** W/o. M. Chandra Shekhar, all are residing at No. 459, "Shraavan', 11th Main Road, Rajamahal Vilas Extension, Bangalore – 560 080 and **(4) Sri. M. VIJAYSHEKHAR** S/o. Muthiah Pillai, residing at No. 54, 2nd Cross, P & T Colony, R.T. Nagar, Near Police Station, Bangalore – 560 032. This Notice is hereby given for the information of General Public that any persons or Banks or Financial Institutions having any right, title, interest or claim against the Schedule Property, may contact with documentary proof in support of his/her/their claim. If no claim is so lodged with us within the said period of 15 days from this date of publication, it shall be presumed by my clients that no one has any claim against the Schedule Property.

SCHEDULE PROPERTY :
All that piece and parcel of residential converted undeveloped immovable property bearing Survey No.8, presently assigned as New Survey No. 8/1 (Eight Sub Podi Number One) situated at Chikkasanne Village, Kasaba Hobli, Devanahalli Taluk, Bangalore Rural District, measuring 1 (One) Acre 11 (Eleven) Guntas. **Bounded on** East By:Survey No.42, West By:National High way No.7, North By: Sanne Amanikere Village Boundary and Government Naala, South By – Remaining portion of Survey No.8, presently assigned as New Survey No.8/1.

Sd/- P. Narasimhaiah, B. A. LL.B.
Advocate, No.1, 18th Cross, Malleswaram, Bangalore-55,
Ph:080 23343461/23343467
Mob: 94482 73366
Mail: p.narasimhaiah@yahoo.co.in
www.pnarasimhaiah-advocate.com
Date:25.05.2023, Place: Bangalore

PUBLIC NOTICE

My client has negotiated to purchase the Property, which is more fully described in the Schedule below from its **Owner Dr. A.Rajendran Alappan,** son of Mr. A. K. Alappan, residing at No.10, Lakeridge CT, Columbus, GA, USA 31904.
Any person/s having any right, title, interest, lien, charge or claim whatsoever in, upon or to the Schedule Property or to any portion thereof, by way of any easement or under agreements, arrangements, lease, trust, inheritance, gift, partition, bequest, possession, mortgage, exchange or under any deed/instrument easement or however otherwise, may submit his/her/its/their objection/s claim/s, in writing to me at the under mentioned address, through Registered Post, along with the supporting documentary evidence, within FIFTEEN days of the issuance of this notice, failing which, my client will proceed on the basis that there are no claims over the Schedule Property.

:SCHEDULE:
All that Residential Property presently bearing Municipal No.19, constructed on Site bearing No.1495, allotted by the Bangalore City Improvement Trust Board, situated at 40th Cross Road, 4th 'T' Block, Jayanagar, Ward No.58, New Pattabhiramanagar Ward No.168, Bengaluru, PID No.58-46-19, measuring East to West:36 Feet 6 Inches or 19.95 Meters and North to South: 57 Feet or 17.10 Meters, in all measuring 2080.50 Square Feet, consisting of Ground and First Floors and bounded as follows:-
ON THE EAST: Property bearing No.1496;
WEST: Property bearing No.1494;
NORTH: Property bearing No.1516;
SOUTH: Road; Bengaluru.

(K.S.MADANA GOPAL)
Advocate,
No.1, Ground Floor,
ROYAL PARK, No.34, Park Road,
BENGALURU - 560 051.
Bengaluru. Dated:10/06/2023.

JOB OPPORTUNITIES

General

JOB OPPORTUNITY for Retired Men, House wife & Graduates in Reputed Company. Age 40 to 75, Bangalorians only, Earn upto 40,000/- Contact-9741401834

Multiple Vacancy

OPPORTUNITY OF Career & Income for Retired Officials, Bankers, Teachers, CAs, Professionals, Homemakers. Call: 8095301555

WEEKEND CORNER
ಕ್ಲಾಸಿಫೈಡ್ಸ್

ಪ್ರಥಮ ಬಾರಿಗೆ ರಾಜರಾಜೇಶ್ವರಿ ನಗರದಲ್ಲಿ
ಮದುವೆ ಸಮಾರಂಭಗಳ ಪ್ರಯುಕ್ತ!
ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ
ಪ್ರದರ್ಶನ ಮತ್ತು ಮಾರಾಟ
ಅಭಿವೃದ್ಧಿ
LAST 5 DAYS
ಸಿಲ್ಕ್ ಇಂಡಿಯ® 2023
ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು
ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ಆಂಧ್ರ ಪ್ರದೇಶ : ಧರ್ಮಾವರಂ, ಉಪ್ಪಡಾ, ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೂಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ, ಮಹಾರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಸೀರೆ ಮತ್ತು ಡ್ರೆಸ್, ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೊತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು, ಅಸ್ಸಾಂ : ಮುಗಾ ಮತ್ತು ಎರ್ರಿ ರೇಷ್ಮೆ ಸೀರೆಗಳು, ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು
Exclusive Wedding Collections
7 ರಿಂದ 13 ಜೂನ್ 2023 ರವರೆಗೆ | ಸಮಯ : ಬೆಳಗ್ಗೆ 10.30 ರಿಂದ ಸಂಜೆ 8.30 ರವರೆಗೆ
ಶ್ರೀ ವಾಸವಿ ಮಹಲ್
ಐಡಿಯಲ್ ಹೋಮ್ಸ್ ಟೌನ್‌ಶಿಪ್, ಜಯಣ್ಣ ಸರ್ಕಲ್ ಹತ್ತಿರ, ಶ್ರೀರಾಜರಾಜೇಶ್ವರೀ ನಗರ, ಬೆಂಗಳೂರು
Organised by : abhivruddhi
Entry Free | All Credit & Debit Cards Accepted | Contact : +91 86607 14252
(Registered with O/o D C (H) Ministry of Textiles, Govt. of India)

Part-Time Jobs

REQUIRED COMPUTER Teacher for Kenmore School, walkin for interview at 31, Kanakapura Road, basavanagudi, Bangalore, kenmoreschool@gmail.com. 9901501185.

Teachers/ Professors

WANTED PE TEACHER Male/ Female at Divanarapalya, Mathikere, Bangalore-54. Contact: 9379191544.

BUSINESS

Business to Business

Business

ZERO INVESTMENT No Joining fees business opportunity Part/ Full Time. Age 30+ Contact: 9845658466.

Finance

FINANCE REQUIRED for construction of a Mega E V Automobile Display Showrooms and a Food court contact 9731433641/ 9741019028

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

GET OWN BUSINESS 10 LAKHS INVESTMENT MONTHLY INCOME 1L FOR GREEN HERBAL AYURVEDIC: 8892501007/ 9606701007

Yoga Teachers Training Course (ONLINE)
ADMISSION OPEN
Deepayan yoga Sansthan
You can do it
Good Chance to Earn ₹15000 to ₹30000 Per Month.
Two certificates- Yoga Certification Board (YCB) of India Yoga Alliance, USA
1. Weekdays Batch: Duration: 3 Months Classes: Mon to Fri • Time: 12pm to 2pm
2. Weekend Batch: Duration: 3 Months Classes: Sat & Sun • Time: 8am to 11am
• Will Cover Both Theory & Practical.
For Registration: +91 99209 62991
Deepayan Yoga Sansthan
Web : www.deepayan.yoga

CARAVAN FOR SALE
"KARNATAKA REGISTERED CARAVANS FOR SALE. Can accommodate 4 passengers. Caravan has a small shower and toilet, kitchenette, a/c, geyser, fans and external power connection from Bescom or Generator. Its a Heavy Vehicle and built on Ashok Leyland chassis by a German team and 3 years old. In good condition. Sparingly used"
For more details call :
96060 85341 / 88673 54347

SOCIAL SERVICES

Old Age Home

SUKHSHANTHI LUXURY Retirement Home. Furnished Accommodation with 3 meals, 24x7 Nurse, Ambulance, Library. Rent Rs. 19,348/- pm. Off Sarjapur, Bangalore. Call: 8884710009/ 9341289357.

PERSONAL

Change of Name

I, UDITSHANKAR DIXIT, Residing at T05,Block B2,Mahaveer Varna Apartment SH35 Ardendale, Kannamangala, Bengaluru-560067 have changed my name to UDITSHANKAR PRANAYSHANKAR DIXIT vide affidavit dated 08-06-2023 sworn before notary: J.Anand Kumar,Bangalore

I, DINESH. G, Residing at Bengaluru-562125, have changed my name as G.DINESH KUMAR, vide affidavit dated 9/6/2023 before Notary P.C.Ramaiah, Bengaluru

EXCELLENT BUSINESS OPPORTUNITY
For Retired, Housewives, CA's, Doctors, MLM, Real Estate Consultant, Lecturers/ Professor's, Banking Financial & Services, Health & general agents Chit Fund/ Mutual Fund Agents, VRS, NRI'S Self Employed, Business Owners, Professionals etc.
India's Most trusted, Leading 153 Year old MNC Company offers service oriented DISTRIBUTION with Zero investment
Address: No. 220/A, 2nd Floor, BMW Building, Whitefield Road, Opp Prestige Shantiniketan, Bangalore-560 048
Mobile:+918143650396 / 8152022200

CHANGE OF NAME
I, **SATVIK** S/o Surendra Veerabhadraiah Hadagali Hiremath R/at. #702, 15th Cross, 1st B Main, HSR 6th Sector, Blr-560102, have changed my name to **SATHVIK S.H.** vide affidavit dated 16/05/2023 before notary D.K. Rameshappa, Bengaluru

I, PRABHATHA Residing at #181, 4th Main, NGEF Layout, Sadanandanagar, Indiranagar, Bangalore-38, have changed my name to BABU NAYAK vide affidavit dated 0906/2023 before notary A.R. Muneer Ahmed, Bangalore. Henceforth I shall be known as BABU NAYAK only.

I, OMPRAKASH, residing at Bengaluru-43 have changed my name as D. OMPRAKASH, vide affidavit dated 9/6/2023 before Notary P.C.Ramaiah, Bengaluru

Lost

I, ADITYA. R, declare that my original Pass Certificate of Indian Certificate of Secondary Education of 2017 is lost. I studied in RNS Vidyaniketan, Bangalore. Index- No: 1172122/ 048, UID-No: 6500570, Address: 29, 7th Cross, PrashanthNagar, Vijayanagar, Bengaluru-560079

DH DECCAN HERALD ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
conditions apply*
@ 803/-* Per Sqcm Single Column
@ 825/-* Per Sqcm Multi Column
For more information Contact:
9845114560 : 9731810277
9901641752 : 9886213331
080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಕಲುಷಿತ ನೀರು ಕುಡಿದು ಮಕ್ಕಳು ಅಸ್ವಸ್ಥ ಪ್ರಕರಣ: ಶಾಸಕರ ನೇತೃತ್ವದಲ್ಲಿ ಸಭೆ

ಶುದ್ಧ ನೀರು ಪೂರೈಕೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲುಷಿತ ನೀರು ಕುಡಿದು 132 ಮಕ್ಕಳು ಅಸ್ವಸ್ಥಗೊಂಡಿರುವ ಪರಪ್ಪನ ಅಗ್ರಹಾರದ ಮಹಾವೀರ್ ರಾಂಚೆಸ್ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ಬೆಂಗಳೂರು ದಕ್ಷಿಣ ಶಾಸಕ ಎಂ. ಕೃಷ್ಣಪ್ಪ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಶುಕ್ರವಾರ ಭೇಟಿ ನೀಡಿ, ನೀರಿನ ಟ್ಯಾಂಕ್‌ಗಳನ್ನು ಪರಿಶೀಲಿಸಿದರು.

ಸಾಯಿಶ್ರೀ ಬಡಾವಣೆಯ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿರುವ ನೀರಿನ ಟ್ಯಾಂಕ್‌ಗಳನ್ನು ಮೂರು ವರ್ಷಗಳಿಂದ ಸ್ವಚ್ಛಗೊಳಿಸಿರಲಿಲ್ಲ. ಹೀಗಾಗಿ, ನೀರು ಕಲುಷಿತಗೊಂಡಿತ್ತು. ಅದೇ ನೀರು ಕುಡಿದಿದ್ದ 132 ಮಕ್ಕಳು ಜ್ವರ, ವಾಂತಿ-ಭೇದಿಯಿಂದ ಬಳಲಿದ್ದರು.

ಅಸ್ವಸ್ಥಗೊಂಡಿದ್ದ ಮಕ್ಕಳಿಗೆ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಕೆಲ ಮಕ್ಕಳನ್ನು ಮಣಿಪಾಲ್, ಸೇಂಟ್ ಜಾನ್ಸ್, ಮದರ್ ಹುಡ್ ಹಾಗೂ ಮೆಡ್ ವೆಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಎಲ್ಲ ಮಕ್ಕಳ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದು, ಮನೆಗೆ ವಾಪಸು ಬಂದಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಬಿಲ್ಡರ್–ನಿವಾಸಿಗಳು, ಅಧಿಕಾರಿಗಳ ಸಭೆ: ಸ್ಥಳಕ್ಕೆ ಭೇಟಿ ನೀಡಿದ್ದ ಎಂ. ಕೃಷ್ಣಪ್ಪ, ಟ್ಯಾಂಕ್‌ಗಳನ್ನು ಪರಿಶೀಲಿಸಿದರು. ನಿಗದಿತ ಸಮಯಕ್ಕೆ ಟ್ಯಾಂಕ್ ಸ್ವಚ್ಛಗೊಳಿಸದ ಹಾಗೂ ನಿರ್ವಹಣೆ ಮಾಡದ ಬಿಲ್ಡರ್ ಪ್ರತಿನಿಧಿಗಳನ್ನು ತರಾಟೆಗೆ ತೆಗೆದುಕೊಂಡರು. ನಿವಾಸಿಗಳ ಸಮಸ್ಯೆಗಳನ್ನು ಆಲಿಸಿ, ಅವುಗಳ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ನಗರದ ಪರಪ್ಪನ ಅಗ್ರಹಾರ ಬಳಿಯ ಮಹಾವೀರ ರಾಚೇಸ್ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ಶುಕ್ರವಾರ ಭೇಟಿ ನೀಡಿದ ಶಾಸಕ ಎಂ. ಕೃಷ್ಣಪ್ಪ ನಿವಾಸಿಗಳ ಜೊತೆ ಸಭೆ ನಡೆಸಿದರು

'ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಸ್ಥಳಕ್ಕೆ ಬಂದು ನೀರಿನ ಮಾದರಿ ಸಂಗ್ರಹಿಸಿದ್ದಾರೆ. 15 ದಿನದೊಳಗೆ ವರದಿ ನೀಡುವುದಾಗಿ ಹೇಳಿದ್ದಾರೆ. ಸದ್ಯ ಎಲ್ಲ ಮನೆಗಳಿಗೆ, ಶುದ್ಧ ಕುಡಿಯುವ ನೀರು ಪೂರೈಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಕಾವೇರಿ ನೀರು ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು' ಎಂದು ಶಾಸಕ ಎಂ. ಕೃಷ್ಣಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಬಿಎಂಪಿ ವೈದ್ಯರ ತಂಡ ಸ್ಥಳದಲ್ಲಿದ್ದು, ಮಕ್ಕಳ ಆರೋಗ್ಯ ತಪಾಸಣೆ ಮಾಡುತ್ತಿದ್ದಾರೆ. ಬೋರ್‌ವೆಲ್ ಟ್ಯಾಂಕ್‌ನಲ್ಲಿದ್ದ ಕಲುಷಿತ ನೀರು ತೆರವು ಮಾಡಲಾಗಿದೆ. ಟ್ಯಾಂಕ್‌ಗಳಿಗೆ ಬಣ್ಣ ಬಳಿದು, ಫಿಲ್ಟರ್ ಉಪಕರಣ ಅಳವಡಿಸಲಾಗುತ್ತಿದೆ. ಕೆಲಸ ಮುಗಿದ ನಂತರ, ನೀರು ಕುಡಿಯಲು ಯೋಗ್ಯ ಎಂಬುದನ್ನು ತಿಳಿದುಕೊಂಡು ನಿವಾಸಿಗಳಿಗೆ ಪೂರೈಸುವಂತೆ ಬಿಲ್ಡರ್‌ಗೆ ಸೂಚಿಸಲಾಗಿದೆ' ಎಂದರು.

'ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 500ಕ್ಕೂ ಹೆಚ್ಚು ಕುಟುಂಬಗಳಿವೆ. ನಿವಾಸಿಗಳ ಸಂಘ ಹಾಗೂ ಬಿಲ್ಡರ್‌ಗಳ ನಡುವೆ ಸಮನ್ವಯತೆ ಕೊರತೆ ಎದ್ದು ಕಾಣುತ್ತಿದೆ. ಹೀಗಾಗಿ, ಇಬ್ಬರನ್ನು ಒಟ್ಟಿಗೆ ಸೇರಿಸಿ ಸಭೆ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಇಂಥ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಲು ತಿಳಿಸಿದ್ದೇನೆ' ಎಂದು ಹೇಳಿದರು.

ಸೌಲಭ್ಯ ಕೊರತೆ: 'ಶುದ್ಧ ಕುಡಿಯುವ ನೀರು, ವಿದ್ಯುತ್, ಉದ್ಯಾನ ಸೇರಿದಂತೆ ಹಲವು ಸೌಲಭ್ಯ ನೀಡುವುದಾಗಿ ಬಿಲ್ಡರ್ ಭರವಸೆ ನೀಡಿದ್ದರು. ಆದರೆ, ಸೌಲಭ್ಯಗಳ ಕೊರತೆ ಹೆಚ್ಚಾಗಿದೆ. ಈ ಸಂಬಂಧ ದೂರು ನೀಡಿದರೂ ಬಿಲ್ಡರ್‌ಗಳು ಕ್ರಮ ಕೈಗೊಂಡಿಲ್ಲ. ಅವರ ನಿರ್ಲಕ್ಷ್ಯದಿಂದ ಮಕ್ಕಳು ಅಸ್ವಸ್ಥಗೊಂಡಿದ್ದಾರೆ' ಎಂದು ನಿವಾಸಿಗಳು ದೂರಿದರು.

'ಒಪ್ಪಂದದ ಪ್ರಕಾರ ಸೌಲಭ್ಯ ಒದಗಿಸುವುದು ಬಿಲ್ಡರ್‌ಗಳ ಕರ್ತವ್ಯ. ನಿವಾಸಿಗಳ ಸಮಸ್ಯೆ ಇತ್ಯರ್ಥ್ಯಕ್ಕೆ ಕ್ರಮ ಕೈಗೊಳ್ಳಬೇಕು' ಎಂದು ಬಿಲ್ಡರ್ ಪ್ರತಿನಿಧಿಗಳಿಗೆ ಎಂ. ಕೃಷ್ಣಪ್ಪ ತಾಕೀತು ಮಾಡಿದರು.

ಎಫ್‌ಐಆರ್: ಆರೋಪಿಗಳಿಗೆ ನೋಟಿಸ್

ಮಕ್ಕಳು ಅಸ್ವಸ್ಥಗೊಂಡಿರುವ ಬಗ್ಗೆ ಸಿಂಗಸಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ವಿ.ಜಿ. ನವೀನ್, ಪರಪ್ಪನ ಅಗ್ರಹಾರ ಠಾಣೆಗೆ ದೂರು ನೀಡಿದ್ದಾರೆ. ಮಹಾವೀರ್ ರಾಚೇಸ್ ಅಪಾರ್ಟ್‌ಮೆಂಟ್ ಸಮುಚ್ಚಯದ ಬಿಲ್ಡರ್ ಹಾಗೂ ನಿರ್ವಹಣೆಗಾರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಕಲುಷಿತ ನೀರು ಕುಡಿದು ಮಕ್ಕಳು ಅಸ್ವಸ್ಥಗೊಂಡಿರುವುದಾಗಿ ವೈದ್ಯರು ದೂರಿದ್ದಾರೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ತಲೆತಪ್ಪಿಸಿಕೊಂಡ ಆರ್ಥಿಕ ಅಪರಾಧಿ'

ದೇವಾಸ್ ಕಂಪನಿ ಸಿಇಒ • ಸಿಬಿಐ ಕೋರ್ಟ್ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಹಣ ವರ್ಗಾವಣೆ ಪ್ರಕರಣದ ಪ್ರಮುಖ ಆರೋಪಿಯಾಗಿ ಭಾರತದಿಂದ ಪಲಾಯನಗೈದು ಸದ್ಯ ಅಮೆರಿಕದಲ್ಲಿ ನೆಲೆಸಿರುವ; ಮೆಸರ್ಸ್ ದೇವಾಸ್ ಮಲ್ಟಿಮೀಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ರಾಮಚಂದ್ರನ್ ವಿಶ್ವನಾಥನ್ ಅವರನ್ನು, 'ತಲೆತಪ್ಪಿಸಿಕೊಂಡಿರುವ ಆರ್ಥಿಕ ಅಪರಾಧಿ' ಎಂದು ಸಿಬಿಐ ವಿಶೇಷ ನ್ಯಾಯಾಲಯ ಘೋಷಣೆ ಮಾಡಿದೆ.

ಈ ಸಂಬಂಧ ಜಾರಿ ನಿರ್ದೇಶನಾಲಯದ ಬೆಂಗಳೂರು ಕಚೇರಿಯ ವಿಭಾಗೀಯ ಅಧಿಕಾರಿ 2022ರ ಮೇ 4ರಂದು ಸಲ್ಲಿಸಿದ್ದ ಮನವಿಯನ್ನು ಸುದೀರ್ಘ ವಿಚಾರಣೆ ನಡೆಸಿದ ಬೆಂಗಳೂರಿನ ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎಲ್. ಅಶೋಕ್, ಗುರುವಾರ ನೀಡಿರುವ ಮಹತ್ವದ ತೀರ್ಪಿನಲ್ಲಿ ಪುರಸ್ಕರಿಸಿದ್ದಾರೆ. ರಾಮಚಂದ್ರನ್ ವಿಶ್ವನಾಥನ್‌ಗೆ ಸೇರಿದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಆದೇಶಿಸಿದ್ದಾರೆ.

ಬೆಂಗಳೂರಿನ ವಸಂತ ನಗರದ ಕಾವೇರಿಯಪ್ಪ ಲೇ ಔಟ್‌ನಲ್ಲಿ (ಜೈನ್ ಆಸ್ಪತ್ರೆ ಎದುರು) ತನ್ನ ಕಚೇರಿ ಹೊಂದಿರುವ ಖಾಸಗಿ ಮಲ್ಟಿಮೀಡಿಯಾ ಕಂಪನಿ ದೇವಾಸ್, ಇಸ್ರೋದ ಆರ್ಥಿಕ ವಿಭಾಗವಾದ ಆ್ಯಂಟ್ರಿಕ್ಸ್‌ನಿಂದ (ಅಂತರಿಕ್ಷ್) ಅಕ್ರಮವಾಗಿ ₹ 578 ಕೋಟಿ ಮೊತ್ತವನ್ನು ಲಾಭ ಮಾಡಿಕೊಂಡಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ದೇವಾಸ್ ಕಂಪನಿ ವಿರುದ್ಧ ಅಕ್ರಮ ಹಣ ವರ್ಗಾವಣೆ ಪ್ರಕರಣ ದಾಖಲಿಸಿತ್ತು.

ದೇಶಭ್ರಷ್ಟ ಆರ್ಥಿಕ ಅಪರಾಧಗಳ ಕಾಯ್ದೆ–2018ರ ಕಲಂ 10ರ ಅಡಿ ವಿಶ್ವನಾಥನ್‌ಗೆ ಸಿಬಿಐ ವಿಶೇಷ ನ್ಯಾಯಾಲಯ ವಿದೇಶದಲ್ಲಿ ನೆಲೆಸಿರುವ ವಿಶ್ವನಾಥನ್‌ಗೆ ವಿದೇಶಾಂಗ ಸಚಿವಾಲಯದ ಮೂಲಕ ನೋಟಿಸ್ ಜಾರಿಗೊಳಿಸಿತ್ತು. ಆದರೆ, ಅವರು ವಿಚಾರಣೆಗೆ ಹಾಜರಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ವಿಶ್ವನಾಥನ್ ಅವರನ್ನು ದೇಶಭ್ರಷ್ಟ ಆರ್ಥಿಕ ಅಪರಾಧಿಎಂದು ಘೋಷಿಸುವಂತೆಜಾರಿ ನಿರ್ದೇಶನಾಲಯ (ಇ.ಡಿ) ಕೋರಿತ್ತು.

ಜಾರಿ ನಿರ್ದೇಶನಾಲಯದ ಪರವಾಗಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು. ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಲಾಗಿದೆ.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ನೇತೃತ್ವದ ನಿಯೋಗದ ವತಿಯಿಂದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು. ಸಂಘದ ಹಿರಿಯ ಉಪಾಧ್ಯಕ್ಷರಾದ ಎಂ.ವಿ.ರುದ್ರಪ್ಪ, ಎಸ್. ಬಸವರಾಜು, ರಾಜ್ಯ ಕಾರ್ಯದರ್ಶಿ ಡಾ. ನೆಲ್ಕುದ್ರಿ ಸದಾನಂದಪ್ಪ, ಉಪಾಧ್ಯಕ್ಷರಾದ ಮೋಹನ್ ಕುಮಾರ್, ಶ್ರೀ ಹರ್ಷ, ಎನ್. ಮಾಲತೇಶ್, ಆಂತರಿಕ ಲೆಕ್ಕ ಪರಿಶೋಧಕ ಹರಿರಾಮಕೃಷ್ಣ, ಪದಾಧಿಕಾರಿಗಳಾದ ಚಿಕ್ಕದೇವೇಗೌಡ, ಚೇತನ್‌ಕುಮಾರ್ ಇದ್ದರು.

ಬಿಬಿಎಂಪಿ ಮಾಜಿ ಸದಸ್ಯೆ ವಿರುದ್ಧ ಆರೋಪಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಮಾಜಿ ಸದಸ್ಯೆ ಸಿ.ಜಿ. ಗೌರಮ್ಮ ಮತ್ತು ಇತರರ ವಿರುದ್ಧ ಹಣದ ಅಕ್ರಮ ಚಲಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ಗೌರಮ್ಮ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಆರೋಪಪಟ್ಟಿ ಆಧಾರದಲ್ಲಿ ಇ.ಡಿ ತನಿಖೆ ಆರಂಭಿಸಿತ್ತು. ಪಿಎಂಎಲ್‌ಎ ಅಡಿಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿ, ₹ 3.35 ಕೋಟಿ ಮೊತ್ತದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು.

'ಗೌರಮ್ಮ ಮತ್ತು ಅವರ ಕುಟುಂಬದ ಸದಸ್ಯರು ₹ 3.47 ಕೋಟಿ ಮೌಲ್ಯದ ಆಸ್ತಿಯನ್ನು ಅಕ್ರಮವಾಗಿ ಹೊಂದಿರುವುದು ಪತ್ತೆಯಾಗಿದೆ. ಆರೋಪಿಗಳು ಬ್ಯಾಂಕ್ ಖಾತೆಗಳಿಗೆ ಬೃಹತ್ ಮೊತ್ತದ ನಗದನ್ನು ಸಂದಾಯ ಮಾಡಿರುವುದು ಕಂಡುಬಂದಿದೆ. ದೊಡ್ಡ ಮೊತ್ತದ ಸಾಲಗಳನ್ನೂ ಪಡೆದಿದ್ದಾರೆ. ಸ್ಥಿರಾಸ್ತಿಗಳ ಖರೀದಿಗೆ ಬಳಸಿದ ಹಣದ ಮೂಲವನ್ನು ತಿಳಿಸುವಲ್ಲಿ ಆರೋಪಿಗಳು ವಿಫಲರಾಗಿದ್ದಾರೆ' ಎಂದು ಇ.ಡಿ ತಿಳಿಸಿದೆ.

'ಭೂ ಸುಧಾರಣಾ ಕಾಯ್ದೆ –2013 ತಿದ್ದುಪಡಿ ವಾಪಸಿಗೆ ಆಗ್ರಹ'

ಬೆಂಗಳೂರು: 'ಭೂಸ್ವಾಧೀನ ನ್ಯಾಯೋಚಿತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಕಾಯ್ದೆ–2013' ಮತ್ತು 'ಕರ್ನಾಟಕ ಭೂ ಸುಧಾರಣಾ ಕಾಯ್ದೆ'ಗೆ ಹಿಂದಿನ ಸರ್ಕಾರಗಳು ಸುಗ್ರೀವಾಜ್ಞೆಯ ಮೂಲಕ ತಂದ ತಿದ್ದುಪಡಿಗಳನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿ 'ನಮ್ಮೂರ ಭೂಮಿ ನಮಗಿರಲಿ; ಅನ್ಯರಿಗಲ್ಲ' ಆಂದೋಲನದ ಸದಸ್ಯರು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಜಂಟಿ ಕಮಿಷನರ್ ಕಚೇರಿ ಕಟ್ಟಡದಲ್ಲಿ ಕಳ್ಳತನಕ್ಕೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ವಿಭಾಗದ ಜಂಟಿ ಕಮಿಷನರ್ ಕಚೇರಿ ಇರುವ ಸಂಚಾರ ನಿರ್ವಹಣಾ ಕೇಂದ್ರದ (ಟಿಎಂಸಿ) ಆವರಣದಲ್ಲಿದ್ದ ಬ್ಯಾಟರಿ ಕಳ್ಳತನಕ್ಕೆ ಯತ್ನಿಸಲಾಗಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜೂನ್ 4ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ ಕೇಂದ್ರದ ಅಧಿಕಾರಿ ಜೋಸೆಫ್ ರಾಜ್ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

'ಇನ್‌ಫೆಂಟ್ರಿ ರಸ್ತೆಗೆ ಹೊಂದಿಕೊಂಡು ಟಿಎಂಸಿ ಕಟ್ಟಡವಿದೆ. ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ಹಾಗೂ ಸಂಚಾರ ವಿಭಾಗದ ಹಲವು ಅಧಿಕಾರಿಗಳ ಕಚೇರಿಗಳು ಕಟ್ಟಡದಲ್ಲಿವೆ. ರಾತ್ರಿ 8.30ರ ಸುಮಾರಿಗೆ ಕೇಂದ್ರದೊಳಗೆ ನುಗ್ಗಿದ್ದ ಅಪರಿಚಿತ, ಜನರೇಟರ್‌ಗೆ ಅಳವಡಿಸಿದ್ದ ಬ್ಯಾಟರಿ ಬಿಚ್ಚಿಕೊಂಡಿದ್ದ. ನಂತರ, ಸ್ಥಳದಿಂದ ಪರಾರಿಯಾಗುತ್ತಿದ್ದ.'

'ಆರೋಪಿಯನ್ನು ನೋಡಿದ್ದ ಕೇಂದ್ರದ ಭದ್ರತಾ ಸಿಬ್ಬಂದಿ, ಆತನನ್ನು ಹಿಡಿದುಕೊಳ್ಳಲು ಬೆನ್ನಟ್ಟಿದ್ದರು. ಆರೋಪಿ, ರಸ್ತೆಯಲ್ಲಿಯೇ ಬ್ಯಾಟರಿ ಬಿಸಾಕಿ ಓಡಿ ಹೋಗಿದ್ದಾನೆ. ಆತ ಯಾರು ಎಂಬುದು ಗೊತ್ತಾಗಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ

ಮರಕ್ಕೆ ಬೈಕ್ ಡಿಕ್ಕಿ: ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಗುರುವಾರ ತಡರಾತ್ರಿ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ಶ್ರೀಧರ್ (24) ಮೃತಪಟ್ಟಿದ್ದಾರೆ.

'ಬಿಟಿಎಂ ಲೇಔಟ್ ನಿವಾಸಿ ಶ್ರೀಧರ್, ಬ್ಯಾಂಕೊಂದರ ಸಾಲ ವಸೂಲಾತಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಹೊಸಕೆರೆಹಳ್ಳಿಯ ಸಂಬಂಧಿಕರ ಮನೆಗೆ ಹೋಗಿದ್ದ ಅವರು, ವಾಪಸು ತಮ್ಮ ಮನೆಯತ್ತ ಹೊರವರ್ತುಲ ರಸ್ತೆ ಮೂಲಕ ತೆರಳುತ್ತಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಹೊರವರ್ತುಲ ರಸ್ತೆಯ ಸಾರಕ್ಕಿ ಸಮೀಪದ ರೊನಾಲ್ಡ್ ಜಂಕ್ಷನ್ ಬಳಿ ನಿಯಂತ್ರಣ ತಪ್ಪಿದ್ದ ಬೈಕ್, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿತ್ತು.

ನಂತರ, ರಸ್ತೆ ಪಕ್ಕದ ಮರಕ್ಕೆ ಡಿಕ್ಕಿಯಾಗಿತ್ತು. ಇದರಿಂದ ಬೈಕ್ ಉರುಳಿಬಿದ್ದಿತ್ತು. ತೀವ್ರ ಗಾಯಗೊಂಡಿದ್ದ ಶ್ರೀಧರ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು.

ಮಾರ್ಗಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು. ಅಪಘಾತ ಸಂಬಂಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಕರಾವಳಿಯಲ್ಲಿ ಇಂದು ಮಳೆ

ಬೆಂಗಳೂರು: ಕರಾವಳಿಯ ಎಲ್ಲಾ ಜಿಲ್ಲೆಗಳಲ್ಲಿ ಒಂದೆರಡು ಕಡೆ ಶನಿವಾರ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಒಳನಾಡಿನ ಕೆಲವೆಡೆ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

'ಬಿಪೊರ್‌ಜಾಯ್' ಚಂಡಮಾರುತದ ಕಾರಣ ರಾಜ್ಯದಾದ್ಯಂತ ಮಳೆಯ ಪ್ರಮಾಣ ಹೆಚ್ಚಲಿದ್ದು, ಗಾಳಿಯ ವೇಗವು 40–50 ಕಿ.ಮೀ. ತಲುಪುವ ಸಾಧ್ಯತೆಯಿದೆ. ಕರಾವಳಿಯಲ್ಲಿ ಬಿರುಗಾಳಿಯು ಗಂಟೆಗೆ 40–45 ಕಿ.ಮೀ. ಯಿಂದ 55 ಕಿ.ಮೀ. ವೇಗದಲ್ಲಿ ಬೀಸಲಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡದಲ್ಲಿ ಮುಂದಿನ ಮೂರು ದಿನ ಗುಡುಗು ಸಹಿತ ಭಾರಿ ಮಳೆಯಾಗಲಿದೆ. ಬೆಂಗಳೂರಿನಲ್ಲಿ ಮಳೆಯಾಗುತ್ತದೆ ಎಂದಿದೆ.

ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು ಹಾಗೂ ತುಮಕೂರು ಜಿಲ್ಲೆಗೆ ಇದೇ ಭಾನುವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಗುಡುಗು, ಸಿಡಿಲು ಸಹಿತ ಜೋರು ಮಳೆ ● ಬೆಳೆಗಳಿಗೆ ಅಪಾರ ಹಾನಿ

ಸಿಡಿಲು ಬಡಿದು ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಶುಕ್ರವಾರ ಜೋರು ಮಳೆ ಸುರಿಯಿತು. ಸಿಡಿಲು ಬಡಿದು ಇಬ್ಬರು ಮೃತಪಟ್ಟಿದ್ದಾರೆ.

ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನ ಅಣಬೂರು ಗೊಲ್ಲರಹಟ್ಟಿ ಗ್ರಾಮದ ಹೊರ ವಲಯದಲ್ಲಿ ಸಿಡಿಲು ಬಡಿದು ಕಾಟಲಿಂಗಪ್ಪ(45) ಹಾಗೂ ರಾಜಪ್ಪ (40) ಎಂಬುವರು ಮೃತಪಟ್ಟಿದ್ದಾರೆ. ಹೊಲದಲ್ಲಿ ಬಿತ್ತನೆಗೆ ತೆರಳಿದ್ದ ಇವರು, ಮಳೆಯ ಕಾರಣ ಮರದ ಕೆಳಗೆ ಆಶ್ರಯ ಪಡೆದಿದ್ದರು.

ಬಾಗಲಕೋಟೆ ಜಿಲ್ಲೆಯ ತೇರದಾಳ, ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಅಗ್ರಹಾರ ಗ್ರಾಮದಲ್ಲಿ ಭಾರಿ ಗಾಳಿಯೊಂದಿಗೆ ಮಳೆಯಾಯಿತು. ಮರಗಳು ನೆಲಕ್ಕುರುಳಿದ್ದು, ಬಾಳೆ ಹಾಗೂ ಅಡಿಕೆ ಬೆಳೆಗೆ ಹಾನಿಯಾಗಿದೆ.

ಕಾರವಾರ ಸೇರಿ ಜಿಲ್ಲೆಯ ಭಟ್ಕಳ, ಅಂಕೋಲಾ,ಯಲ್ಲಾಪುರ, ಹೊನ್ನಾವರ, ಕುಮಟಾ ಮತ್ತು ಜೊಯಿಡಾದಲ್ಲಿ ಮಳೆಯಾಯಿತು.

ಮಂಗಳೂರಿನಲ್ಲಿ ಅರ್ಧಗಂಟೆಗೂ ಹೆಚ್ಚು ಕಾಲ ಮಳೆಯಾಗಿದ್ದು, ಬೆಳ್ತಂಗಡಿ, ಬಂಟ್ವಾಳ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಉಡುಪಿ ನಗರ, ಕುಂದಾಪುರ ತಾಲ್ಲೂಕು, ಕಾರ್ಕಳದಲ್ಲಿ ಕೆಲಕಾಲ ಮಳೆಯಾಯಿತು.

ಬಿಪೊರ್‌ಜಾಯ್ ಚಂಡಮಾರುತದ ಕಾರಣ ಅರಬ್ಬಿ ಸಮುದ್ರದಲ್ಲಿ ದೊಡ್ಡ ಅಲೆಗಳು ಏಳುತ್ತಿದ್ದು, ಮೀನುಗಾರರು ಕಡಲಿಗೆ ಇಳಿಯದಂತೆ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಕೊಪ್ಪಳ ನಗರವೂ ಸೇರಿದಂತೆ ಜಿಲ್ಲೆಯ ಹಲವು ಕಡೆ ಮಳೆ ಸುರಿದಿದೆ. ಮುನಿರಾಬಾದ್, ಅಳವಂಡಿ ಮತ್ತು ಕುಕನೂರಿನಲ್ಲಿ ಜೋರಾಗಿ ಮಳೆ ಬಂದಿದ್ದು, ಜೋರು ಗಾಳಿಗೆ ಅಳವಂಡಿಯಲ್ಲಿ ಸ್ವಾಮಿ ವಿವೇಕಾನಂದ ಪ್ರೌಢಶಾಲೆಯ ಚಾವಣಿ ಹಾರಿ ಹೋಗಿವೆ.

ಬೀದರ್, ಯಾದಗಿರಿ, ಕಲಬುರಗಿ ಜಿಲ್ಲೆಯಲ್ಲಿ ಮಳೆ ಸುರಿಯಿತು.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ತಳಕು ಹೋಬಳಿ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ಸುರಿದ ಆಲಿಕಲ್ಲು ಮಳೆ ಹಾಗೂ ಬಿರುಗಾಳಿಗೆ ಅಡಿಕೆ, ಬಾಳೆ, ಟೊಮೆಟೊ, ದಾಳಿಂಬೆ, ಕಲ್ಲಂಗಡಿ ಸೇರಿದಂತೆ ಅಪಾರ ಬೆಳೆಗಳಿಗೆ ಹಾನಿಯಾಗಿದೆ.

ಕಾಲುವೆಹಳ್ಳಿ ಗ್ರಾಮದಲ್ಲಿ ನಿಂಬೆ, ಶ್ರೀಗಂಧ, ಹುಣಸೆ ಸೇರಿದಂತೆ 8 ಎಕರೆ ಬೆಳೆ ನಷ್ಟವಾಗಿದೆ. ಯಾದಲಗಟ್ಟೆ ಗ್ರಾಮದಲ್ಲಿ ಬಾಳೆ, ಅಡಿಕೆ ಸೇರಿದಂತೆ 6 ಎಕರೆ ಬೆಳೆ ಹಾನಿಯಾಗಿದೆ. ಗ್ರಾಮದ ಹಳ್ಳ ತುಂಬಿ ಹರಿದ ಸಂದರ್ಭ ಎರಡು ಕುರಿಗಳು ಕೊಚ್ಚಿ ಹೋಗಿವೆ. ದೊಡ್ಡ ಉಳ್ಳಾರ್ತಿಯಲ್ಲಿ 6 ಎಕರೆ, ಗುಡಿಹಳ್ಳಿಯಲ್ಲಿ 8 ಎಕರೆ, ಬೋಗನಹಳ್ಳಿಯಲ್ಲಿ 23 ಎಕರೆ, ಬೂದಿಹಳ್ಳಿಯಲ್ಲಿ 2 ಎಕರೆ ಅಡಿಕೆಗೆ ಹಾನಿಯಾಗಿದ್ದು, 7 ಗುಡಿಸಲುಗಳಿಗೆ ನೆಲಕ್ಕುರುಳಿವೆ.

ಮಂಗಳೂರಿನನಲ್ಲಿ ಶುಕ್ರವಾರ ಸುರಿದ ಮಳೆಯಲ್ಲಿ ತಾಯಿಯೊಬ್ಬರು ಮಗುವನ್ನು ಶಾಲೆ ಕರೆದೊಯ್ಯುತ್ತಿರುವುದು

– ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

'ರಾಜಿ ರಾಜಕಾರಣದಿಂದ ಸೋಲು'

ಪ್ರಜಾವಾಣಿ ವಾರ್ತೆ

ಸಿ.ಟಿ.ರವಿ

ನವದೆಹಲಿ: 'ಕೆಲವರ ರಾಜಿ ಹಾಗೂ ಹೊಂದಾಣಿಕೆ ರಾಜಕಾರಣದಿಂದಾಗಿ ಸಹ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರ ಕಳೆದುಕೊಂಡಿತು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಕೆಲವರ ಕಡೆಯಿಂದ ತಪ್ಪಾಗಿದೆ. ಕೆಲವರ ರಾಜಿ ರಾಜಕಾರಣದಿಂದ ಪಕ್ಷಕ್ಕೆ ತೊಂದರೆ ಆಯಿತು. ತಪ್ಪು ಮಾಡಿದವರ ಜತೆಗೆ ರಾಜಿ ಮಾಡಿಕೊಳ್ಳದೆ ಬೀದಿಗೆ ನಿಲ್ಲಿಸಿ ರಾಜಕಾರಣ ಮಾಡಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ' ಎಂದು ವ್ಯಾಖ್ಯಾನಿಸಿದರು.

'ತಪ್ಪು ಮಾಡಿದವರನ್ನು ನಾವು ಬೀದಿಗೆ ನಿಲ್ಲಿಸಬೇಕಿತ್ತು, ಆಗ ಪಕ್ಷಕ್ಕೆ ಈ ಸ್ಥಿತಿ ಬರುತ್ತಿರಲಿಲ್ಲ. ಪಕ್ಷ ಅಧಿಕಾರ ಕಳೆದುಕೊಳ್ಳುತ್ತಿರಲಿಲ್ಲ. ನಾವು ತಪ್ಪಿತಸ್ಥರ ಸಾಲಿನಲ್ಲಿ ನಿಲ್ಲುತ್ತಿರಲಿಲ್ಲ' ಎಂದು ಅವರು ಹೇಳಿದರು.

'2013-18ರ ಅವಧಿಯಲ್ಲಿ ನಡೆದ ಅಕ್ರಮಗಳ ಹಗರಣದ ಬಗ್ಗೆ ತನಿಖೆ ನಡೆಸಿ ಎಂದು ಹಲವು ಸಲ ನಾವು ಒತ್ತಾಯ ಮಾಡಿದ್ದೆವು. ಈ ಬಗ್ಗೆ ತನಿಖೆ ನಡೆಸಬೇಕಿತ್ತು, ಆದರೆ, ಆ ಕೆಲಸ ಆಗಲಿಲ್ಲ. ಕಾಂಗ್ರೆಸ್ ಸರ್ಕಾರದ ಅವಧಿಯ ಸೌರಶಕ್ತಿ ಹಗರಣದ ಬಗ್ಗೆಯೂ ತನಿಖೆ ನಡೆಸಬೇಕೆಂದು ಕೇಳಿಕೊಂಡಿದ್ದೆವು. ನಾವು ಹೇಳಿದ್ದನ್ನು ಕೇಳಲಿಲ್ಲ. ಇವುಗಳ ತನಿಖೆ ನಡೆದ ಸದನವನ್ನು ಮುಂದೂಡಲಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಸಿದ್ದರಾಮಯ್ಯ ಸರ್ಕಾರದ ಅವಧಿಯ ಅರ್ಕಾವತಿ ಹಗರಣದಿಂದ ಬೊಕ್ಕಸಕ್ಕೆ ₹8 ಸಾವಿರ ಕೋಟಿ ನಷ್ಟ ಉಂಟಾಗಿದೆ. ತಪ್ಪಿತಸ್ಥರನ್ನು ಜೈಲಿಗೆ ಅಟ್ಟುತ್ತೇವೆ' ಎಂದು ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಲವು ಸಲ ಹೇಳಿದ್ದರು. 'ಸಿದ್ದರಾಮಯ್ಯ ವಿರುದ್ಧ 57 ಪ್ರಕರಣಗಳು ದಾಖಲಾಗಿದ್ದು, ಅವುಗಳನ್ನು ಲೋಕಾಯುಕ್ತಕ್ಕೆ ಒಪ್ಪಿಸುತ್ತೇವೆ' ಎಂದೂ ಹೇಳಿದ್ದರು.

ಸಿ.ಟಿ.ರವಿ ಪರಮಾಪ್ತರಾಗಿದ್ದ ಎಚ್.ಡಿ.ತಮ್ಮಯ್ಯ ಅವರು ವಿಧಾನಸಭಾ ಚುನಾವಣೆಗೆ ಆರು ತಿಂಗಳು ಇದ್ದಾಗ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು. ಅವರನ್ನು ಕಾಂಗ್ರೆಸ್ ಕಣಕ್ಕೆ ಇಳಿಸಿತ್ತು. ತಮ್ಮಯ್ಯ ವಿರುದ್ಧ ರವಿ ಸೋತಿದ್ದರು. ತಮ್ಮ ಸೋಲಿಗೆ ಪಕ್ಷದಲ್ಲಿರುವ ಕೆಲವರ ಷಡ್ಯಂತ್ರವೂ ಕಾರಣ ಎಂದು ರವಿ ಅವರು ಆಪ್ತರಲ್ಲಿ ಹೇಳಿಕೊಂಡಿದ್ದರು.

ತಾಯಿಯಿಂದ ಹೆಣ್ಣು ಮಗು ಹತ್ಯೆ

ಪ್ರಜಾವಾಣಿ ವಾರ್ತೆ

ಮಧುಗಿರಿ: ಪಟ್ಟಣದಲ್ಲಿ ಶುಕ್ರವಾರ ಒಂದು ವರ್ಷದ ಹೆಣ್ಣು ಮಗುವನ್ನು ತಾಯಿಯೇ ಬ್ಲೇಡ್‌ನಿಂದ ಕೊಯ್ದು ಹತ್ಯೆ ಮಾಡಿದ್ದಾರೆ.

ಪಟ್ಟಣದ ಡೂಂ ಲೈಟ್ ವೃತ್ತದ ಸಮೀಪ ಇರುವ ತಿಪ್ಪಾಪುರ ಛತ್ರದ ಹಿಂಭಾಗದ ಮನೆಯಲ್ಲಿ ಆಟವಾಡುತ್ತಿದ್ದ ಮಗು ಕ್ರಿತೀಶ್ ಕೈಯನ್ನು ತಾಯಿ ಶ್ವೇತಾ ಏಕಾಏಕಿ ಕೊಯ್ದಿದಿದ್ದಾರೆ. ತೀವ್ರ ರಕ್ತಸ್ರಾವವಾಗಿ ಮಗು ಸ್ಥಳದಲ್ಲೇ ಮೃತಪಟ್ಟಿದೆ. ನಂತರ ಆಕೆಯು ಕತ್ತು ಕೊಯ್ದುಕೊಂಡಿದ್ದು, ತಕ್ಷಣ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಶ್ವೇತಾ ಮಾನಸಿಕ ಅಸ್ವಸ್ಥೆಯಾಗಿದ್ದು, ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ತಿಳಿದು ಬಂದಿದೆ. ಮಧುಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೆಂಥೋಪ್ಲಸ್ ಡಬ್ಬಿ ನುಂಗಿ ಮಗು ಸಾವು

ಪ್ರಜಾವಾಣಿ ವಾರ್ತೆ

ಪ್ರಿಯದರ್ಶಿನಿ

ಕಂಪ್ಲಿ (ಬಳ್ಳಾರಿ ಜಿಲ್ಲೆ): ತಲೆನೋವಿಗೆ ಬಳಸುವ ಮೆಂಥೋಪ್ಲಸ್ (₹ 2 ಮೌಲ್ಯದ) ಚಿಕ್ಕ ಡಬ್ಬಿ ನುಂಗಿ ಪ್ರಿಯದರ್ಶಿನಿ ಎಂಬ 9 ತಿಂಗಳ ಮಗು ಉಸಿರುಗಟ್ಟಿ ಮೃತಪಟ್ಟ ಘಟನೆ ಪಟ್ಟಣದ 5ನೇ ವಾರ್ಡ್ ಇಂದಿರಾನಗರದಲ್ಲಿ ಶುಕ್ರವಾರ ನಡೆದಿದೆ.

ಪಟ್ಟಣದ ನಿವಾಸಿಗಳಾದ ಮುತ್ಯಾಲ ರಾಘವೇಂದ್ರ ಮತ್ತು ತುಳಸಿ ದಂಪತಿ ಏಕೈಕ ಪುತ್ರಿ ಪ್ರಿಯದರ್ಶಿನಿ ಮನೆಯಲ್ಲಿ ಆಡುವಾಗ ಮೆಂಥೋಪ್ಲಸ್ ಡಬ್ಬಿ ನುಂಗಿದ್ದಾಳೆ. ಆಕೆ ಅಳುತ್ತಾ ಬಂದಾಗ, ತುಳಸಿ ಅವರು ಗಂಟಲಲ್ಲಿ ಸಿಲುಕಿದ್ದ ಡಬ್ಬಿ ತೆಗೆಯಲು ಪ್ರಯತ್ನಿಸಿದ್ದಾರೆ. ಉಸಿರಾಟದ ಸಮಸ್ಯೆ ಕಾಣಿಸಿದ್ದರಿಂದ ತಕ್ಷಣವೇ ವೈದ್ಯರ ಬಳಿ ಮಗುವನ್ನು ಕರೆದೊಯ್ಯಲಾಗಿದೆ. ಆದರೆ, ಪ್ರಯೋಜನವಾಗಲಿಲ್ಲ. ಈ ದಂಪತಿಗೆ ವಿವಾಹವಾಗಿ 10ವರ್ಷಗಳ ಬಳಿಕ ಮಗು ಜನಿಸಿತ್ತು.

'ಆಸ್ಪತ್ರೆಗೆ ಬರುವ ಮಾರ್ಗಮಧ್ಯೆಯೇ ಮಗು ಮೃತಪಟ್ಟಿತ್ತು. ಆದರೂ ಪಾಲಕರು ಕೋರಿದಾಗ, ಗಂಟಲಲ್ಲಿದ್ದ ಡಬ್ಬಿ ಹೊರ ತೆಗೆಯಲಾಯಿತು' ಎಂದು ಮಕ್ಕಳ ವೈದ್ಯೆ ಡಾ.ಕಲ್ಪನಾ ತಿಳಿಸಿದರು.

ಚಾಮರಾಜನಗರ ದುರಂತದ ಮರು ತನಿಖೆ: ದಿನೇಶ್

ಬೆಂಗಳೂರು: 'ಆಮ್ಲಜನಕ ಕೊರತೆಯಿಂದ ಚಾಮರಾಜನಗರದಲ್ಲಿ ನಡೆದ ದಾರುಣ ಸಾವಿನ ಪ್ರಕರಣದ ಬಗ್ಗೆ ಮರು ತನಿಖೆ ಮಾಡಿಸಲಾಗುತ್ತದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೋವಿಡ್ ತೀವ್ರವಾಗಿ ಬಾಧಿಸಿದ್ದ 2021ರಲ್ಲಿ ಆಸ್ಪತ್ರೆಗೆ ಆಮ್ಲಜನಕ ಪೂರೈಕೆಯಾಗದೇ ಇದ್ದುದರಿಂದ ದಾಖಲಾಗಿದ್ದವರಲ್ಲಿ 36 ಮಂದಿ ಮೃತಪಟ್ಟಿದ್ದರು. ಹಿಂದಿನ ಸರ್ಕಾರ ಆದೇಶಿಸಿದ್ದ ತನಿಖೆ ಇನ್ನೂ ಪೂರ್ಣಗೊಂಡಿಲ್ಲ. ಹಾಗಾಗಿ, ನಮ್ಮ ಸರ್ಕಾರ ಮರು ತನಿಖೆಗೆ ನಿರ್ಧಾರ ಮಾಡಿದೆ' ಎಂದು ತಿಳಿಸಿದರು.

'ಹಿಂದಿನ ಸರ್ಕಾರದ ಅವಧಿಯಲ್ಲಿ ಸಾಕಷ್ಟು ಅಕ್ರಮಗಳಾಗಿದ್ದವು. ಆದ್ದರಿಂದ ಈಗಾಗಲೇ ಕೆಲ ಟೆಂಡರ್‌ಗಳನ್ನು ರದ್ದುಪಡಿಸಿದ್ದೇವೆ. ಜಿವಿಕೆ ಸಂಸ್ಥೆಗೆ ನೀಡಿದ್ದ '108' ಆಂಬುಲೆನ್ಸ್ ಗುತ್ತಿಗೆಯನ್ನೂ ರದ್ದುಪಡಿಸಿದ್ದೇವೆ' ಎಂದರು.

'ರಾಜ್ಯದ ಡಯಾಲಿಸಿಸ್ ಕೇಂದ್ರಗಳಲ್ಲಿ ಸೂಕ್ತ ವ್ಯವಸ್ಥೆಯಿಲ್ಲ. ಆದ್ದರಿಂದ ಡಯಾಲಿಸಿಸ್‌ಗೆ ಸಂಬಂಧಿಸಿದ ಟೆಂಡರ್ ಸಹ ರದ್ದುಪಡಿಸಲಾಗಿದೆ. ಅಧಿಕಾರಿಗಳು ಹಾಗೂ ವೈದ್ಯರ ಕಾರ್ಯನಿರ್ವಹಣೆಯನ್ನು ಆದ್ಯತೆ ಮೇರೆಗೆ ಸರಿಪಡಿಸಬೇಕಿದೆ' ಎಂದು ಅವರು ಹೇಳಿದರು.

₹ 2 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಬಲೆಗೆ ಎಇಇ

ಪ್ರಜಾವಾಣಿ ವಾರ್ತೆ

ಅಶೋಕ್

ಮೈಸೂರು/ಮಡಿಕೇರಿ: ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ 49 ಕೆ.ವಿ ಸಾಮರ್ಥ್ಯದ ವಿದ್ಯುತ್ ಸಂಪರ್ಕ ನೀಡಲು ₹ 2 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಸೆಸ್ಕ್‌ನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅಶೋಕ್ ಅವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ರಾತ್ರಿ ಮೈಸೂರಿನ ಹಿನಕಲ್ ಮೇಲ್ಸೇತುವೆ ಮತ್ತು ಬೋಗಾದಿ ಸಿಗ್ನಲ್ ಮಧ್ಯದ ರಿಂಗ್‌ರಸ್ತೆಯ ಡಾ.ರಾಜಾರಾಮಣ್ಣ ವೃತ್ತದ ಬಳಿ ಬಂಧಿಸಿದ್ದಾರೆ.

'ಪ್ರತಾಪ್ ಎಂಬುವವರು ಕುಶಾಲನಗರದಲ್ಲಿ ಎಲೆಕ್ಟ್ರಾನಿಕ್ ವಾಹನಗಳ ಚಾರ್ಜಿಂಗ್ ಕೇಂದ್ರ ತೆರೆಯಲು ಅರ್ಜಿ ಸಲ್ಲಿಸಿದ್ದರು. 49 ಕೆ.ವಿ ಸಾಮರ್ಥ್ಯದ ವಿದ್ಯುತ್ ಸಂಪರ್ಕ ನೀಡಲು ಅಶೋಕ್ ₹ 5 ಲಕ್ಷ ಲಂಚ ಕೇಳಿದ್ದರು. ಅದರ ಮೊದಲ ಕಂತಿನ ಹಣವಾಗಿ ₹ 2 ಲಕ್ಷ ಪಡೆಯುತ್ತಿದ್ದ ವೇಳೆ ಗುರುವಾರ ರಾತ್ರಿ 10.30ರಲ್ಲಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಲೋಕಾಯುಕ್ತ ಮೈಸೂರು ವಿಭಾಗದ ಎಸ್.ಪಿ.ಸುರೇಶ್ ಬಾಬು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಮಹಾನಗರ ಪಾಲಿಕೆ, ವಿಜಯಪುರ

ಸಂಖ್ಯೆ:ಮನಪಾವಿ/ಲೋವಿ/ಕಾಅ/ಡಿಎಮ್/ಟಿಎನ್‌ಡಿ/ಇಪ್ರೋ/2023–24/679

ದಿನಾಂಕ:08.06.2023

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ ಮಹಾನಗರ ಪಾಲಿಕೆಯ ಅನುದಾನದಲ್ಲಿ 03 ಕಾಮಗಾರಿಗಳು ಕೆ.ಪಿ.ಡಬ್ಲ್ಯೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. DMA/2023-24/OW/WORK_INDENT81, DMA/2023-24/OW/WORK_INDENT79 & DMA/2023-24/OW/WORK_INDENT76 ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (http://www.eproc.karnataka.gov.in) ನಲ್ಲಿ ಪ್ರಕಟಿಸಲಾಗಿದೆ.

ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 17–06–2023

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/27/ಕೆಎಸ್ಎಂಸಿಎ/2023–24

ಕ–ರೈಡ್

ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ

(ಕರ್ನಾಟಕ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)

ಬೆಂಗಳೂರು ಉಪನಗರ ರೈಲ್ವೆ ಯೋಜನೆ

ಕ–ರೈಡ್ K RIDE

CIN: U60100KA2000SGC028171

ನೋಂದಾಯಿತ ಕಚೇರಿ: 1ನೇ ಮಹಡಿ, ಸಂಪರ್ಕ ಸೌಧ, ಓರಿಯನ್ ಮಾಲ್ ಎದುರು, ರಾಜಾಜಿನಗರ, ಬೆಂಗಳೂರು–10

ಇ–ಟೆಂಡರ್ ಸೂಚನ ಸಂ. ಕೆರೈಡ್/2023–24/ಒಡಬ್ಲ್ಯೂ/ಕಾಮಗಾರಿ_ಇಂಡೆಂಟ್4 ದಿನಾಂಕ 06.06.2023

ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ಉಪನಗರ ರೈಲ್ವೆ ಯೋಜನೆಯ (ಬಿಎಸ್‌ಆರ್‌ಪಿ)ಯ ನಿರ್ವಹಣ ಡಿಪೋಗಳಿಗಾಗಿ ಡೀಟೈಲ್ಡ್ ಡಿಸೈನ್ ಕನ್ಸಲ್ಟೆನ್ಸಿ (ಡಿಡಿಸಿ) ಸೇವೆಗಳ ಕಾಮಗಾರಿಗಳಿಗಾಗಿ ಅನುಭವಿ ಏಜೆನ್ಸಿಗಳಿಂದ ಇ–ಟೆಂಟರ್ ಆಹ್ವಾನಿಸಲಾಗಿದೆ.

ಬಿಡ್ ಸಲಿಕೆಗೆ ಕೊನೆಯ ದಿನಾಂಕ 11.07.2023

ವಿವರಗಳಿಗಾಗಿ ಭೇಟಿ ನೀಡಿ: https://kppp.karnataka.gov.in ಅಥವಾ www.kride.in

ಸಹಿ/– ಪ್ರಧಾನ ವ್ಯವಸ್ಥಾಪಕರು (ಭೂಮಿ, ಯೋಜನಾ ಸಂಚಾಲನೆ, ಕಾರಿಡಾರ್–4)

DIPR/CP/VCPL/239/2022-23

ಮೈಸೂರು ಸಕ್ಕರೆ ಕಾರ್ಖಾನೆ ನಿಯಮಿತ,

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಷುಗರ್ ಟೌನ್, ಮಂಡ್ಯ–571402 ಕರ್ನಾಟಕ

ಉಲ್ಲೇಖ :ಎಂ.ಎಂ/ 20/2023–24 ದಿ. 09.06.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಆಸಕ್ತಿಯುಳ್ಳ ಮೊದಲ ದರ್ಜೆ ಕಾಮಗಾರಿ ಗುತ್ತಿಗೆದಾರರಿಂದ ಟೆಂಡರ್ ಮೂಲಕ ಈ ಕೆಳಗಿನ ಕೆಲಸ ಮಾಡಲು ಮೊಹರು ಮಾಡಿದ ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ.ಸಂ : **01**. ಸಾಮಾಗ್ರಿ ವಿವರ : **Molasses Storage tanks bottom sludge removing and inside cleaning of tanks**. ಪರಿಮಾಣ (ಅಂದಾಜು) : **04 Nos**. ಠೇವಣಿ ರೂ.ಗಳಲ್ಲಿ : **10,000.00**. ಟೆಂಡರ್ ಫೀ ರೂಗಳಲ್ಲಿ + ತೆರಿಗೆ : **1000.00**.

ಟೆಂಡರ್ ಫಾರಂಗಳನ್ನು ಸಾಮಾಗ್ರಿ ನಿರ್ವಾಹಕರವರ ಕಛೇರಿ, ಮಂಡ್ಯದಲ್ಲಿ ದಿ:10.06.2023 ರಿಂದ ನೀಡಲಾಗುವುದು. ಭರ್ತಿ ಮಾಡಿದ ಮೊಹರು ಟೆಂಡರ್‌ಗಳನ್ನು **ದಿ: 21.06.2023 ಸಂಜೆ 4.00 ಗಂಟೆಯ** ಒಳಗೆ ತಲುಪಿಸತಕ್ಕದ್ದು. ಟೆಂಡರ್‌ಗಳನ್ನು **ದಿ: 22.06.2023 ರಂದು ಬೆಳಗ್ಗೆ 11.00 ಗಂಟೆಯ** ನಂತರ ಪ್ರಧಾನ ವ್ಯವಸ್ಥಾಪಕರ ಕಛೇರಿ ಮಂಡ್ಯದಲ್ಲಿ ತೆರೆಯಲಾಗುವುದು. ಟೆಂಡರ್ ಫಾರಂನ್ನು ಕ್ಯಾಶ್/ಡಿ.ಡಿ. ಅಥವಾ RTGS ಮುಖಾಂತರ ಹಣವನ್ನು ಪಾವತಿ ಮಾಡಿ ಟೆಂಡರ್ ಫಾರಂನ್ನು ಪಡೆಯತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಅವಧಿಯಲ್ಲಿ ಮುಖ್ಯ ರಾಸಾಯನಿಕ ತಜ್ಞರು 9483771816 /ಸಾಮಾಗ್ರಿ ನಿರ್ವಾಹಕರನ್ನು 9886470666 ಸಂಪರ್ಕಿಸಬಹುದು. ದಿನಾಂಕ : 09.06.2023

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/52/2023–24 ಸಹಿ/–ಪ್ರಧಾನ ವ್ಯವಸ್ಥಾಪಕರು

ಜಿಲ್ಲಾ ಪಂಚಾಯತ್, ಬಳ್ಳಾರಿ.

ಸಂ:ಜಿಪಂಬ/ಆಡಳಿತ–1/85/2022–23 ದಿನಾಂಕ: 06.06.2023

ಟೆಂಡರ್ ಪ್ರಕಟಣೆ

ಸಂಗ್ರಹಣೆ ಮಾಡಬೇಕಾದ ವಿವರ: ಬಳ್ಳಾರಿ ಜಿಲ್ಲಾ ಮತ್ತು ತಾಲೂಕ ಪಂಚಾಯತಿ ಹಾಗೂ ಜಿ.ಪಂ. ಅಧೀನದ ಇತರೆ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಹೊರಸಂಪನ್ಮೂಲದಿಂದ ಪಡೆಯಲು ಸಂಸ್ಥೆಯನ್ನು ಆಯ್ಕೆ ಮಾಡುವ ಕುರಿತು. ಟೆಂಡರ್ ಸಂಖ್ಯೆ: ಜಿಪಂಬ/ಆಡಳಿತ–1/85/2022–23. ಟೆಂಡರ್‌ಗೆ ಇಟ್ಟ ಮೊತ್ತ ರೂ. 129.62 ಲಕ್ಷ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20.06.2023 ಸಂಜೆ: 04.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಇ–ಸಂಗ್ರಹಣಾ ವೇದಿಕೆಯ ಅಧಿಕೃತ ಜಾಲತಾಣದ ವಿವರ: https://eproc.karnataka.gov.in

ಸಹಿ/– ಉಪ ಕಾರ್ಯದರ್ಶಿ ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಜಿಲ್ಲಾ ಪಂಚಾಯಿತಿ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/52/ಕೆಎಸ್‌ಎಂಸಿಎ/2023–24

Government of Karnataka

HASSAN INSTITUTE OF MEDICAL SCIENCES, HASSAN

(An Autonomous Institute under the Dept of Medical Education, Government of Karnataka)

SRI CHAMARAJENDRA HOSPITAL CAMPUS, HASSAN Website: www.hims-hassan.org

Phone/Fax No.08172-231699, 231599, Email:directorhims@yahoo.com

ಇ–ಟೆಂಡರ್ ಪ್ರಕಟಣೆ

ಕ್ರ.ಸಂ.	ಟೆಂಡರ್ ಅಧಿಸೂಚನೆ ಸಂಖ್ಯೆ	ವಿವರ	ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ದಿನಾಂಕ	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ
01	ಹಿಮ್ಸ್/ಎಸ್‌ಸಿಹೆಚ್/ಡ್ರಗ್ಸ್/ರಿ–ಎಟಿಡಿಆರ್/11/2023–24	ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಡಯಾಲಿಸಿಸ್ ಔಷಧ ಸಾಮಗ್ರಿ ಗಳನ್ನು ಮರು ಇ–ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ	13.06.2023 ರಿಂದ 28.06.2023 ರವರೆಗೆ.	30.32	30325.00

ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಂ ಮುಖಾಂತರ kppp.karnataka.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ. ಸಹಿ/– ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/61/ಕೆಎಸ್‌ಎಂಸಿಎ/061/2023–24

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

ಚರಾಸ್ತಿಯ ವಸ್ತುಗಳ ಇ–ಹರಾಜಿಗೆ ಆಹ್ವಾನ / ಸೂಚನೆ

Pursuant to attachment of movable properties by the Government under the provisions of the Karnataka Protection of Interest of Depositors in Financial Establishments Act, 2004(KPIDFE Act) and pursuant to the absolute attachment order by the Hon'ble Special Court the Special Officer & Competent Authority(under KPIDFE-IMA and other Scam), is issuing notice for e-auction of the movables attached through e-auction on **'as is where is and whatever there is basis'**.

"SPLOCA" hereby invites bids from the intending bidders along with a bid deposit as mentioned in the table below as Earnest Money for MOVABLE ITEMS- Textile to be paid through DD in favor of **"Special Officer and Competent Authority (EMD)"** or through RTGS/ NEFT to the **Account number 41506340119, IFSC Code: SBIN0040277 STATE BANK OF INDIA, VIDHANA SOUDHA Branch.**

Short description of the Movable items

ಕ್ರ. ಸಂ.	ಜವಳಿ ವಸ್ತುಗಳ ವಿವರಗಳು	ಮೀಸಲು ಬೆಲೆ (ರೂ.)	ಇ.ಎಂ.ಡಿ (ರೂ.)	ಬಿಡ್ ಹೆಚ್ಚಳ ಮೊತ್ತ (ರೂ.)
1.	Ladies Clothing & Accessories	98,20,675.00	81,70,000.00	1,00,000.00
2.	Children's Clothing	12,42,640.00		12,500.00
3.	Gents & Common Clothing	27,49,635.00		30,000.00
4.	Thaan	22,86,112.00		25,000.00
5.	Miscellaneous & Mixed	2,38,360.00		2,500.00

ಪರಿಶೀಲನೆಯ ದಿನಾಂಕ ಮತ್ತು ಸಮಯ : 20ನೇ ಜೂನ್ 2023, ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ.

ಪ್ರಿ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : 20ನೇ ಜೂನ್ 2023, ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ.

ಇ–ಹರಾಜಿನ ದಿನಾಂಕ ಮತ್ತು ಸಮಯ : 22ನೇ ಜೂನ್ 2023 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ.

ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ : 19ನೇ ಜೂನ್ 2023, ಸಂಜೆ 5.00 ಗಂಟೆಯವರೆಗೆ.

For Registration & Online Auction, you can login to: **https://www.bankeauctions.com.** The interested bidders who require auction related information can contact Joint Secretary, Office of the Special Officer & Competent Authority, 3rd Floor, Podium Block, Visveswariah Towers, Dr.Ambedkar Veedi, Bengaluru-560 001, e-mail ID: **splocaeauction@gmail.com** or Contact Mob. No 9902006121.

ಸ್ಥಳ: ಬೆಂಗಳೂರು

ದಿನಾಂಕ: 10.06.2023

ಸಹಿ/– ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

DIPR/CP/230/Zenkar/2023-24

KARNATAKA NEERAVARI NIGAM LIMITED

(A GOVERNMENT OF KARNATAKA ENTERPRISE)

Office of the Executive Engineer KNNL, Kalasa Project Division, Khanapur –591302, Office: 08336-222163 e-mail:eekpdkhanapur@gmail.com

No: KNNL/KPD/KNP/PB/Quotation Notification /BGM/TFS/2023-24/174 Date: 08.06.2023

ದರ ಪಟ್ಟಿ ಆಹ್ವಾನ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನಾ ವಿಭಾಗ ಖಾನಾಪೂರ ರವರು, "Consultancy services for detailed survey, investigation preparation of designs, drawings, estimates, package estimates, DTP and necessary Land Acquisition proposals for lift scheme for providing drinking water facility (bulk supply) for villages and filling of existing MI/ZP tanks in Uchagaon hobli, Belagavi taluk & district by lifting water from Markandeya River near Ambewadi village." ಕಾಮಗಾರಿಗೆ ಸಂಬಂಧಿಸಿದಂತೆ ಅಂದಾಜು ಮೊತ್ತದ ಪ್ರಸ್ತಾವನೆ ತಯಾರಿಸುವ ಸಲುವಾಗಿ ಪ್ರಸ್ತುತ ಮಾರುಕಟ್ಟೆ ದರ ಪಡೆಯಲು, ಆಸಕ್ತಿಯುಳ್ಳ ಮತ್ತು ಅರ್ಹ/ನೋಂದಾಯಿತ ಏಜೆನ್ಸಿಗಳಿಂದ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸಂಬಂಧಿಸಿದ ಸನಗುಗಳಿಗೆ (Non SR Items) ದರ ವಿಚಾರಣೆ ಅಧಿಸೂಚನೆ ಅಹ್ವಾನಿಸಿದ್ದು, ಸದರಿ ಮೊಹರು ಬಂದ್ ಮಾಡಿದ ಸ್ಪರ್ಧಾತ್ಮಕ ದರಪಟ್ಟಿ (ಕೊಟೇಷನ್) ಗಳನ್ನು ನಿಗಧಿತ ನಮೂನೆಯಲ್ಲಿ ತಯಾರಿಸಿ ದಿನಾಂಕ: 17.06.2023 ಸಂಜೆ 5.00 ಘಂಟೆಯೊಳಗಾಗಿ ಈ ಕಛೇರಿಗೆ ಅಂಚೆ/ಖುದ್ದಾಗಿ ಸಲ್ಲಿಸಲು ಕೋರಲಾಗಿದೆ. ಕೊಟೇಷನ್ ಸಲ್ಲಿಸಲು ಅವಶ್ಯವಿರುವ ಮಾಹಿತಿ ಹಾಗೂ ಐಟಂಗಳ ವಿವರಗಳನ್ನೊಳಗೊಂಡ ಪಟ್ಟಿಯ ನಮೂನೆಯನ್ನು ಮೇಲೆ ಕಾಣಿಸಿದ ಕಛೇರಿಯಿಂದ/ಇ–ಮೇಲ್ ಮುಖಾಂತರ ಕಛೇರಿ ಸಮಯದಲ್ಲಿ ಪಡೆಯಬಹುದಾಗಿದೆ.

ಸನಗುಗಳ (ಐಟಂ) ವಿವರಗಳು ಈ ಕೆಳಗಿನಂತಿದೆ.

No.	Description	Unit	Rate (Rs.Ps.)
	Part-A: Data Collection, Detailed Survey and Investigations		
1	Collection of all necessary data such as preliminary report, details of MI tanks proposed for filling in Belagavi taluka, relevant toposheets of the area, current schedule of rates, nearest GTS bench mark etc., complete as directed by Engineer-in-Charge	Job	
2	Preparation of C-planning of the scheme containing assessment of quantity of water required for filling of all Minor Irrigation tanks, establishment of water available under Markandeya River for filling the same, fixing duration of pumpig based on the inflow data, identification of techno economical location of lifting points, location of intake channel, pump house, Rising Main, Pressure Distribution System, delivery points and Gravity distribution System based on toposheet study & reconnaissance survey and submission of proposals with for approval etc complete as directed by Engineer-in-Charge.	Job	
3	Detailed Reconnaissance Survey of the existing barrage, assessment of storage required, preparation of designs, drawings and estimate for improvement of existing barrage across Markandeya River near Ambewadi village and submitting the same for approval as directed by Engineer -in-Charge.	Job	
4	Collection of all necessary data and existing condition of the MI tanks, and identify the various improvements to be made for the MI tanks, preparation of preliminary report, estimates and drawings etc complete as directed by Engineer-in-Charge.	Nos	
5	Establishment of Control Points at lifting points, Delivery Chamber near Malaprabha river by carrying levels from the nearest GTS BM or the BM established by the department, taking levels of the river/nala along the proposed alignment of the lift points at close intervals so as to bringout an accurate profile of the river/nala & also detailed survey of delivery chamber, sub stations etc complete as directed by Engineer-in-Charge.	Job	
6	Detailed planning based on toposheets and fixing alignment of Rising Main, Pressure Distribution System, Gravity Distribution System, fixing control points and TBMs along the alignment, taking centre line levels at every 20m interval and at crossings such as roads, nalas, vallies etc., and taking Levels at every 20m interval and at crossings, taking FRL and Top level of the MI tanks, preparation of L-sections for fixing outlet levels at MI tanks etc complete as directed by Engineer-in-Charge.	Km	
7	Borrow area material soil sample collection by using JCB/mechanical excavator and trial pit excavation at 500 m c/c maximum upto maximum 1.00 m depth, collection of borrow material samples and samples transportation and conducting relevant tests on evaluating suitability of borrow material 15 casing soil samples and 8 hearting soil samples etc., complete as directed by Engineer-in-Charge	Nos	
	Part-B: Preparation of Alignment Proposal, Designs, Drawings and Estimates		
8	Preparation of design, estimate and drawings for MS rising main, Pressure Distribution System, Gravity Distribution System, comprising excavation of trench, supply, jointing, laying and testing of MS pipe, surge analysis, surge equipment and surge protection works construction of structures, thrust blocks, valves, service road etc., complete as directed by Engineer-in-Charge.	Km	
9	Preparation of design, estimate and drawings for Intake Canal and Jack well cum pump house and its appurtenant works including roads around Jack well and Electrical Sub-Station, O & M Staff and Watchman Quarters etc., complete as directed by Engineer-in-Charge.	Job	
10	Preparation of designs, estimates and Drawings for Electrical Substation and terminal bay, power line and other electrical substation works etc and Pumping machinery, pump house electrical works etc complete as directed by Engineer-in-Charge.	Job	
11	Preparation of design, estimate and drawings of Delivery chamber etc., complete as directed by Engineer-in-Charge.	No	
	Part-C: Preparation of Design, Drawings and Estimates for Impounding Reservoir		
12	Preparation of capacity tables, preparation of conceptual design report and layout, hydraulic and structural design, estimate and drawings for Impounding Reservoir consisting of preliminary designs of earthen embankment and identification of reaches etc., as per latest BIS codes, drainage arrangements in the earthen bund, details of cut off trench, under seepage control measures as per latest BIS codes, bill of quantities and technical specifications, The above said job workshall include transpo rtation of all men and material, boarding, lodging, etc., complete, including all taxes and duties, etc., complete as directed by Engineer-in-Charge.	Job	
13	Preparation of Land Acquisition proposal including collection of 7/12 and 8/A documents marking alignment on village maps, area calculation, preparation of proposal, printing, binding, etc. complete and submission more ever liasoning and coordination with revenue authorities with compliance if any until finalisation of award including Joint measurement of the alignment. (For new alignment) complete as directed by Engineer-in-Charge.	Ha	
	Part-D: Preparation of Reports		
14	Preparation of Package Estimate for implementation of the scheme comprising, Lift Head Works, Rising Main, Pressure Distribution System, Gravity Distribution System, Jackwell cum pump House, Electro Mechanical works, Delivery Chamber, impounding reservoir, improvements to existing tanks and other appurtenant works for providing drinking water facility (bulk supply) for villages and filling of existing MI/ZP tanks in Uchagaon hobli, Belagavi taluk & district by lifting water from Markandeya River near Ambewadi village on lumpsum Turn-key basis including O & M of the sche me for 5 years from the date of commissioning including submitting 8 No's of copies and 2 soft copies etc., complete as directed by Engineer-in-Charge.	Job	
15	Preparation of Bid Document for implementation of the scheme comprising, Lift Head Works, Rising Main, Pressure Distribution System, Gravity Distribution System, Jackwell cum pump House, Electro Mechanical works, Delivery Chamber, impounding reservoir, improvements to existing tanks and other appurtenant works for providing drinking water facility (bulk supply) for villages and filling of existing MI/ZP tanks in Uchagaon hobli, Belagavi taluk & district by lifting water from Markandeya River near Ambewadi village on lumpsum Turn-key basis including O & M of the scheme for 5 years from the date of commissioning including submitting 8 No's of copies and 2 soft copies etc., complete as directed by Engineer-in-Charge.	Job	

ಸದರಿ ಕೊಟೇಶನ್ ದರಗಳು ಜಿಎಸ್.ಟಿ. ಯೊಂದಿಗೆ ದರವನ್ನು ಪರಿಗಣಿಸಿ ಸಲ್ಲಿಸಬೇಕು.

Sd/-Executive Engineer KNNL, Kalasa Project Division,Khanapur.

DIPR/BGM/RO-NO-68/MCA/2023-24

ಪಾದಯಾತ್ರೆ ನಡೆಸಿ ಕೊರೊನಾ ನಿಯಮ ಉಲ್ಲಂಘಿಸಿದ್ದ ಆರೋಪ

ಡಿಕೆಶಿ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಅಣೆಕಟ್ಟು ನಿರ್ಮಾಣ ಯೋಜನೆ ಜಾರಿಗೆ ಆಗ್ರಹಿಸಿ ನಡೆದ ಪಾದಯಾತ್ರೆ ವೇಳೆ ಕೊರೊನಾ ನಿಯಮ ಉಲ್ಲಂಘಿಸಿದ ಮತ್ತು ಸಾಂಕ್ರಾಮಿಕ ರೋಗಗಳ ಹರಡುವಿಕೆ ಆರೋಪದಡಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಡಿ.ಕೆ.ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಪುರಸ್ಕರಿಸಿದೆ.

ತಡೆ: ಕೋವಿಡ್ ನಿಯಮಗಳನ್ನು ಉಲ್ಲಂಘಿಸಿದ ಆರೋಪದಡಿ ನೈಸರ್ಗಿಕ ವಿಪತ್ತು ನಿರ್ವಹಣಾ ಕಾಯ್ದೆ ಅಡಿಯಲ್ಲಿ ಕನಕಪುರ ಟೌನ್ ಠಾಣಾ ಪೊಲೀಸರು ಮತ್ತು ಬೆಂಗಳೂರಿನ ಹಲಸೂರು ಠಾಣಾ ಪೊಲೀಸರು ದಾಖಲಿಸಿದ್ದ ಎರಡು ಪ್ರತ್ಯೇಕ ಪ್ರಕರಣಗಳ ಮುಂದಿನ ಕಾನೂನು ಪ್ರಕ್ರಿಯೆಗೆ ನ್ಯಾಯಪೀಠ ಇದೇ ವೇಳೆ ತಡೆ ನೀಡಿದ್ದು ವಿಚಾರಣೆ ಮುಂದೂಡಿದೆ. 'ಪ್ರಜಾಧ್ವನಿ' ಯಾತ್ರೆ ನಡೆಸುವ ವೇಳೆ ಮಂಡ್ಯದಲ್ಲಿ ₹ 500 ನೋಟನ್ನು ಕಾರ್ಯಕರ್ತರತ್ತ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಡ್ಯ ಗ್ರಾಮಾಂತರ ಠಾಣಾ ಪೊಲೀಸರು ದಾಖಲಿಸಿದ್ದ ಪ್ರಕರಣ ರದ್ದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಶಿವಕುಮಾರ್ ಹಿಂಪಡೆದಿದ್ದಾರೆ. ಸಂಬಂಧಿಸಿದಂತೆ ವಿಚಾರಣಾ ಪ್ರಕರಣಕ್ಕೆ ಪೊಲೀಸರು ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಅರ್ಜಿಯನ್ನು ಡಿ.ಕೆ.ಶಿವ ಕುಮಾರ್ ಹಿಂಪಡೆದುಕೊಂಡಿದ್ದಾರೆ.

'5 ವರ್ಷ ಕಳೆದರೂ ಯೋಜನೆ ಮುಂದುವರಿಕೆ'

ಬೆಂಗಳೂರು: 'ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ (ಕೆಟಿಸಿಪಿ) ಅನುಸಾರ ರಸ್ತೆ, ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳು ಸೇರಿದಂತೆ ಭವಿಷ್ಯದ ಅವಶ್ಯಕತೆಗಳನ್ನು ಪೂರೈಸುವಂತಹ ಸಾರ್ವಜನಿಕ ಉದ್ದೇಶಗಳಿಗಾಗಿ ಜಮೀನನ್ನು ಮೀಸಲಿಟ್ಟದ್ದಲ್ಲಿ ಐದು ವರ್ಷ ಕಳೆದರೂ ಅಂತಹ ಯೋಜನೆಯನ್ನು ಮುಂದುವರೆಸಲು ಅವಕಾಶ ನೀಡಬಹುದಾಗಿದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಕೆಟಿಸಿಪಿ ಕಾಯ್ದೆ–1961ರ ಕಲಂ 12ರ ಪ್ರಕಾರ ಅಂತಿಮ ಅಧಿಸೂಚನೆ ಹೊರಡಿಸಿದ ಬಳಿಕ ಜಮೀನು ಯೋಜನಾ ಪ್ರಾಧಿಕಾರದ ವಶದಲ್ಲಿರುತ್ತದೆ. ಇದರ ಹಕ್ಕನ್ನು ಮಾಲೀಕರು ಪುನಃ ಪಡೆಯುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಹೀಗಾಗಿ, ಜಮೀನನ್ನು ಭೂಮಾಲೀಕರಿಗೆ ಹಿಂದಿರುಗಿಸುವಂತೆ ಸೂಚನೆ ನೀಡಿದರೆ ಅದು ಕಾನೂನಿಗೆ ವಿರುದ್ಧವಾದ ನಡೆಯಾಗಲಿದೆ' ಎಂದು ನ್ಯಾಯಪೀಠ ಹೇಳಿದೆ.

ತಮ್ಮ ಜಮೀನುಗಳನ್ನು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆ ಪ್ರಾಧಿಕಾರದಿಂದ ರಸ್ತೆಗಾಗಿ ಮೀಸಲಿಟ್ಟದ್ದನ್ನು ಪ್ರಶ್ನಿಸಿ ಬೆಂಗಳೂರ ನಗರ ಜಿಲ್ಲೆ ಯಲಹಂಕ ತಾಲ್ಲೂಕಿನ ತರಬನಗಳ್ಳಿಯ ಜಮೀನು ಮಾಲೀಕರಾದ ಕೆ.ಗೋಪಾಲಗೌಡ ಮತ್ತು ಆರ್. ರವಿಚಂದ್ರನ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'2004ರ ಮಾಸ್ಟರ್ ಪ್ಲ್ಯಾನ್ ಪ್ರಕಾರ ಕೆಲ ಡೆವಲಪರ್‌ಗಳ ಸೂಚನೆಯ ಅನುಸಾರ ರಸ್ತೆಯನ್ನು ಗುರುತಿಸಲಾಗಿದೆ. ಇದರಿಂದಾಗಿ ನಮ್ಮ ಕಕ್ಷಿದಾರರ ಜಮೀನುಗಳಿಗೆ ತೊಂದರೆಯಾಗುತ್ತಿದೆ. 2004ರಲ್ಲಿ ಜಮೀನು ಮೀಸಲಿಟ್ಟದ್ದರೂ 19 ವರ್ಷವಾದರೂ ಯಾವುದೇ ರೀತಿಯಲ್ಲಿ ಅಭಿವೃದ್ಧಿಯಾಗಿಲ್ಲ. ಹೀಗಾಗಿ ಮಾಸ್ಟರ್ ಪ್ಲ್ಯಾನ್ ರೂಪಿಸಿದ 5 ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯ ಪ್ರಾರಂಭವಾಗದೇ ಇದ್ದಲ್ಲಿ ಯೋಜನೆ ರದ್ದಾಗಲಿದೆ' ಎಂದು ಅರ್ಜಿದಾರರ ಪರ ವಕೀಲರ ವಾದವನ್ನು ತಿರಸ್ಕರಿಸಿರುವ ನ್ಯಾಯಪೀಠ, 'ವಿಮಾನ ನಿಲ್ದಾಣ ಯೋಜನಾ ಪ್ರಾಧಿಕಾರದ ಕ್ರಮವನ್ನು ಈಗಾಗಲೇ ಕಾನೂನು ಪ್ರಕಾರ ಒಪ್ಪಿಕೊಳ್ಳಲಾಗಿದೆ. ಆದ್ದರಿಂದ, ಅರ್ಜಿದಾರರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲ' ಎಂದು ತಿಳಿಸಿದೆ.

ಶಾಸಕ ಹರೀಶ್ ಪೂಂಜಾ ವಿರುದ್ಧ ತನಿಖೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ 24 ಮಂದಿ ಹಿಂದೂ ಕಾರ್ಯಕರ್ತರನ್ನು ಹತ್ಯೆ ಮಾಡಿದ್ದಾರೆ' ಎಂಬ ವಿವಾದಾತ್ಮಕ ಹೇಳಿಕೆ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ ವಿರುದ್ಧದ ತನಿಖೆಗೆ ಹೈಕೋರ್ಟ್ ತಡೆ ನೀಡಿದೆ.

'ನನ್ನ ವಿರುದ್ಧ ಬೆಳ್ತಂಗಡಿ ಠಾಣಾ ಪೊಲೀಸರು ದಾಖಲಿಸಿರುವ ಎಫ್ಐಆರ್ ಮತ್ತು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಹರೀಶ್ ಪೂಂಜಾ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

203 ಮರ ತೆರವಿಗೆ ಅಸ್ತು

ಮೆಟ್ರೊ ಕಾಮಗಾರಿಗೆ ಹೈಕೋರ್ಟ್ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮೆಟ್ರೊ ಮಾರ್ಗದ ದೂರವಾಣಿ ನಗರ ಗೇಟ್-ಕೆಂಪಾಪುರ ಮಾರ್ಗದ ನಿರ್ಮಾಣ ಕಾಮಗಾರಿಗಾಗಿ 203 ಮರಗಳ ತೆರವು ಹಾಗೂ 45 ಮರಗಳ ಸ್ಥಳಾಂತರಕ್ಕೆ ಹೈಕೋರ್ಟ್ ಅನುಮತಿ ನೀಡಿದೆ.

ಮರ ಕಡಿಯುವುದನ್ನು ಆಕ್ಷೇಪಿಸಿ ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್ ಹಾಗೂ ಪರಿಸರವಾದಿ ದತ್ತಾತ್ರೇಯ ಟಿ. ದೇವರೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ, ಮರಗಳ ತೆರವು ಹಾಗೂ ಸ್ಥಳಾಂತರಕ್ಕೆ ಸಂಬಂಧಿಸಿದಂತೆ 2023ರ ಜನವರಿ 18 ರಂದು ವೃಕ್ಷ ಅಧಿಕಾರಿ ನೀಡಿರುವ ಅನುಮತಿಯ ಅನುಸಾರ ಮುಂದುವರಿಯಲು ಬೆಂಗಳೂರು ಮೆಟ್ರೊ ರೈಲು ಅಭಿವೃದ್ಧಿ ನಿಗಮಕ್ಕೆ (ಬಿಎಂಆರ್‌ಸಿಎಲ್) ಅವಕಾಶ ಕಲ್ಪಿಸಿದೆ.

ದೂರವಾಣಿ ನಗರ ಗೇಟ್-ಕೆಂಪಾಪುರ ಮಾರ್ಗದಲ್ಲಿ 203 ಮರಗಳನ್ನು ಕಡಿಯಲು, 45 ಮರಗಳನ್ನು ಸ್ಥಳಾಂತರಿಸಲು ಹಾಗೂ 14 ಮರಗಳನ್ನು ಉಳಿಸಿಕೊಳ್ಳಲು ತಾಂತ್ರಿಕ ಸಲಹಾ ಸಮಿತಿ ನೀಡಿರುವ ಅನುಮೋದನೆಯ ಆಧಾರದಲ್ಲಿ ವೃಕ್ಷ ಅಧಿಕಾರಿ ಬಿಎಂಆರ್‌ಸಿಎಲ್‌ಗೆ ಅನುಮತಿ ನೀಡಿದ್ದರು. ಇದನ್ನು ಕಾರ್ಯರೂಪಕ್ಕೆ ತರಲು ಬಿಎಂಆರ್‌ಸಿಎಲ್ ಹೈಕೋರ್ಟ್ ಅನುಮತಿ ಕೇಳಿತ್ತು.

ಅರ್ಜಿದಾರರ ಆಕ್ಷೇಪ: 'ಮೆಟ್ರೊ ಕಾಮಗಾರಿ ಕಾರಣಕ್ಕೆ ಕಡಿಯುವ ಮರಗಳಿಗೆ ಪರ್ಯಾಯವಾಗಿ ಯೋಜನಾ ಪ್ರದೇಶಕ್ಕೆ ಸಾಧ್ಯವಾದಷ್ಟೂ ಹತ್ತಿರದಲ್ಲಿ ಬಿಎಂಆರ್‌ಸಿಎಲ್ ಸಸಿಗಳನ್ನು ನೆಡಬೇಕಿದೆ. ಇದರ ಭಾಗವಾಗಿ ಮಿಯಾವಾಕಿ ವಿಧಾನವನ್ನು (ಸಣ್ಣ ಕಾಡುಗಳ ನಿರ್ಮಾಣ) ಬಿಎಂಆರ್‌ಸಿಎಲ್ ಅನುಸರಿಸುತ್ತಿದೆ. ಆದರೆ, ಜಿಕೆವಿಕೆಯಂತಹ ಯಾವುದೇ ಸಂಸ್ಥೆಗಳು ಮಿಯಾವಾಕಿ ವಿಧಾನವನ್ನು ಅನುಮೋದಿಸಿಲ್ಲ' ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಬಿಎಂಆರ್‌ಸಿಎಲ್, 'ನಗರ ಪ್ರದೇಶದ ವ್ಯಾಪ್ತಿಯಲ್ಲಿ ಸ್ಥಳಾವಕಾಶದ ಕೊರತೆ ಇದೆ. ಮಿಯಾವಾಕಿ ಒಂದೇ ಲಭ್ಯವಿರುವ ಪರ್ಯಾಯ ವಿಧಾನವಾಗಿದೆ. ಯೋಜನೆಗಾಗಿ ತೆರವುಗೊಳಿಸುವ ಮರಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲೇಬೇಕಿರುವ ಕಾರಣ ಬೇರೆ ಆಯ್ಕೆಯೂ ಇಲ್ಲವಾಗಿದೆ. ಅಭಿವೃದ್ಧಿ ಹಾಗೂ ಪರಿಸರ ಸಂರಕ್ಷಣೆ ನಡುವೆ ಸಮತೋಲನ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ನಾವು ರೀತಿಯ ಪ್ರಯತ್ನ ಮಾಡುತ್ತಿದ್ದೇವೆ. ಮೆಟ್ರೊ ರೈಲು ಯೋಜನೆ ಶೀಘ್ರ ಪೂರ್ಣಗೊಳಿಸಬೇಕಿದೆ. ಈಗಾಗಲೇ ಹಲವು ಕಾರಣಗಳಿಂದ ಕಾಮಗಾರಿ ವಿಳಂಬವಾಗಿತ್ತು. ಪುನಃ ವಿಳಂಬವಾದರೆ ಸಾರ್ವಜನಿಕರಿಗೆ ಬಹಳಷ್ಟು ಸಮಸ್ಯೆಯಾಗಲಿದೆ' ಎಂದು ವಿವರಿಸಿತ್ತು.

'ಮೆಟ್ರೊ ಯೋಜನೆ ಅತ್ಯಂತ ದಕ್ಷ ಮತ್ತು ಪರಿಸರಸ್ನೇಹಿ ಸಾರಿಗೆ ವ್ಯವಸ್ಥೆಯಾಗಿದ್ದು, ಇದರಿಂದ, ಹೆಚ್ಚಿನ ಸಂಖ್ಯೆಯ ಜನರ ಪ್ರಯಾಣದ ಸಮಯ ಉಳಿತಾಯವಾಗಲಿದೆ. ಸಂಚಾರ ದಟ್ಟಣೆಯೂ ಕಡಿಮೆಯಾಗಲಿದೆ. ಆದ್ದರಿಂದ, ವೃಕ್ಷ ಅಧಿಕಾರಿಯ ಅನುಮತಿಯಂತೆ ಮರಗಳನ್ನು ತೆರವುಗೊಳಿಸಿ, ಯೋಜನೆ ಮುಂದುವರಿಸಲು ಅನುವು ಮಾಡಿಕೊಡಬೇಕು' ಎಂದು ಕೋರಿತ್ತು.

ಗರಿಗೆದರಿದ ಕೃಷಿ ದಾಬಸ್ ಪೇಟೆಯ ಸೋಂಪುರ ಹೋಬಳಿಯಲ್ಲಿ ಹದವಾದ ಮಳೆಯಾಗಿದ್ದು, ರೈತರು ಬಿತ್ತನೆಗೆ ಪೂರ್ವಭಾವಿಯಾಗಿ ಉಳುಮೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ

ಟರ್ಮಿನಲ್–1 ಶೀಘ್ರ ನವೀಕರಣ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-1 ಅನ್ನು ನವೀಕರಣ ಮಾಡಿ ಟರ್ಮಿನಲ್‌ನ ಒಟ್ಟಾರೆ ಸಾಮರ್ಥ್ಯ ಹೆಚ್ಚಿಸಲು ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರ ಯೋಜನೆ ರೂಪಿಸಿದೆ. ಈ ಮೂಲಕ ವಿಶ್ವದರ್ಜೆಯ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಲು ಸಜ್ಜಾಗಿದೆ.

ಪ್ರಯಾಣಿಕರ ಸುರಕ್ಷತಾ ದೃಷ್ಟಿಯೊಂದಿಗೆ ಗುಣಮಟ್ಟದ ಸೇವೆ ಒದಗಿಸಿ ಟರ್ಮಿನಲ್‌ಗೆ ಹೊಸ ರೂಪ ನೀಡಲು ಪ್ರಾಧಿಕಾರ ಮುಂದಾಗಿದೆ.

ಟರ್ಮಿನಲ್-1ರಲ್ಲಿ ಉಂಟಾಗುತ್ತಿರುವ ಪ್ರಯಾಣಿಕರ ದಟ್ಟಣೆ ಸಮರ್ಥವಾಗಿ ನಿಭಾಯಿಸಲು ನವೀಕರಣ ಅತ್ಯವಶ್ಯ ಎನ್ನುತ್ತಾರೆ ವಿಮಾನ ನಿಲ್ದಾಣದ ಅಧಿಕಾರಿಗಳು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್1ರ ದೃಶ್ಯ

22 ಕೋಟಿ ಪ್ರಯಾಣಿಕರನ್ನು ನಿಭಾಯಿಸುವ ಸಾಮರ್ಥ್ಯ ಟರ್ಮಿನಲ್-1 ಹೊಂದಿದೆ. ಆದರೆ, ವಾರ್ಷಿಕ 33 ಕೋಟಿ ಪ್ರಯಾಣಿಕರು ಈ ಟರ್ಮಿನಲ್ ಬಳಕೆ ಮಾಡುತ್ತಿದ್ದು, ಜನದಟ್ಟಣೆ ಹೆಚ್ಚಾಗುತ್ತಿದೆ. ಇದಕ್ಕೆ ಪರಿಹಾರವಾಗಿ ಟರ್ಮಿನಲ್ ನವೀಕರಣ ಗೊಳ್ಳುತ್ತಿದೆ.

ಪ್ರತಿ ಗಂಟೆಗೆ ಕನಿಷ್ಠ 27 ದೇಶಿ ವಿಮಾನಗಳು ರನ್ ವೇಯಿಂದ ನಿರ್ಗಮನವಾಗುತ್ತಿದ್ದು, 3,900 ಜನರು ಬೆಂಗಳೂರಿನಿಂದ ವಿವಿಧೆಡೆಗೆ ವಿಮಾನಯಾನ ಮಾಡುತ್ತಿದ್ದಾರೆ. ಆ ಸಾಮರ್ಥ್ಯ ಹೆಚ್ಚಿಸಿ ಪ್ರತಿ ಗಂಟೆಗೆ 4,500 ಪ್ರಯಾಣಿಕರನ್ನು ಒತ್ತು ಸಾಗುವಂತೆ ನವೀಕರಣ ಮಾಡಲಾಗುತ್ತಿದೆ. ವಾರ್ಷಿಕವಾಗಿ 35 ಕೋಟಿ ಪ್ರಯಾಣಿಕರು ನವೀಕೃತ ಟರ್ಮಿನಲ್ ಬಳಕೆ ಮಾಡುವಂತೆ ಬದಲಾವಣೆ ಮಾಡಲಾಗುತ್ತಿದೆ ಎಂದು ಪ್ರಾಧಿಕಾರದ ವಕ್ತಾರರು ಮಾಹಿತಿ ನೀಡಿದ್ದಾರೆ.

ಸೆಪ್ಟೆಂಬರ್ 1ರಿಂದ ಎಲ್ಲ ಅಂತರರಾಷ್ಟ್ರೀಯ ವಿಮಾನಗಳು ಟರ್ಮಿನಲ್ 2ರಿಂದ ಹಾರಾಟ ಮಾಡಲಿವೆ. ಟರ್ಮಿನಲ್-1 ಅನ್ನು ದೇಶಿ ವಿಮಾನ ಸೇವೆಗೆ ಮಾತ್ರ ಸೀಮಿತ ಮಾಡಲಾಗಿದೆ.

ಕಲುಷಿತ ನೀರು ಸೇವನೆ: ವರದಿ ಕೇಳಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಬಿಜಕಲ್ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ಅಸ್ವಸ್ಥಗೊಂಡು ಬಾಲಕಿಯೊಬ್ಬಳು ಮೃತಪಟ್ಟ ಪ್ರಕರಣದ ಕುರಿತು ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ರಾಜ್ಯದ ವಿವಿಧೆಡೆ ಕುಡಿಯುವ ನೀರಿನ ಅಭಾವ ಉಂಟಾಗಿರುವ ಕುರಿತು ಮುಖ್ಯಮಂತ್ರಿಯವರು ಶುಕ್ರವಾರ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿದರು. ಕೆಲವಡೆ ಕಲುಷಿತ ನೀರು ಸೇವಿಸಿ ಜನರು ಅಸ್ವಸ್ಥಗೊಳ್ಳುತ್ತಿರುವ ವಿಷಯ ಸಭೆಯಲ್ಲಿ ಪ್ರಸ್ತಾಪವಾಗಿದೆ. ಬಿಜಕಲ್‌ನಲ್ಲಿ ಬಾಲಕಿ ಮೃತಪಟ್ಟಿರುವ ಪ್ರಕರಣದ ಬಗ್ಗೆಯೂ ಚರ್ಚೆಯಾಗಿದ್ದು, ಈ ಬಗ್ಗೆ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು ಎಂದು ಮುಖ್ಯಮಂತ್ರಿಯವರ ಕಚೇರಿ ಪ್ರಕಟಣೆ ತಿಳಿಸಿದೆ.

'ಕುಡಿಯುವ ನೀರಿನ ವಿಚಾರದಲ್ಲಿ ಸಮಸ್ಯೆ ಉಲ್ಬಣಿಸದಂತೆ ಎಚ್ಚರಿಕೆ ವಹಿಸಬೇಕು. ಕಳೆದ ವಾರ ನೀಡಿದ್ದ ಸೂಚನೆಯಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ನೀರಿನ ಸಮಸ್ಯೆ ಪರಿಹಾರಕ್ಕೆ ಎಲ್ಲ ಜಿಲ್ಲೆಗಳಲ್ಲೂ ಸಿದ್ಧತೆ ಆರಂಭಿಸಬೇಕು' ಎಂದು ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಕುರಿತು ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳ ಜತೆ ಮುಖ್ಯಮಂತ್ರಿಯವರು ಶನಿವಾರ ಸಭೆ ನಡೆಸಲಿದ್ದಾರೆ.

'ಜಿಲ್ಲಾಮಟ್ಟದಲ್ಲಿ ಜನತಾ ದರ್ಶನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಗಳ ಸೌಲಭ್ಯಗಳನ್ನು ಜನರಿಗೆ ತಲುಪಿಸಲು ಜಿಲ್ಲಾಮಟ್ಟದಲ್ಲಿ ಜನತಾ ದರ್ಶನ ಆರಂಭಿಸಲಾಗುವುದು ಎಂದು ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಹೇಳಿದರು.

ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಪ್ರಗತಿ ಪರಿಶೀಲನೆ ನಡೆಸಿ ಗುರುವಾರ ಮಾತನಾಡಿದ ಅವರು, 'ಮೊದಲ ಜನತಾ ದರ್ಶನ ಆಗಸ್ಟ್ 1ರಂದು ನಡೆಯಲಿದೆ. ಪ್ರತಿ ತಿಂಗಳು ಒಂದೊಂದು ಜಿಲ್ಲೆಯಲ್ಲಿ ಎರಡು ದಿನ ಜನತಾ ದರ್ಶನ ನಡೆಸಲಿದ್ದೇನೆ. ಜಿಲ್ಲೆ ವ್ಯಾಪ್ತಿಯ ಎರಡೂ ಇಲಾಖೆಗಳ ಎಲ್ಲ ತಾಲ್ಲೂಕು ಮಟ್ಟದ ಅಧಿಕಾರಿಗಳು ಇರಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಆಗಸ್ಟ್ ಒಳಗೆ ಎರಡೂ ಇಲಾಖೆಗಳಲ್ಲಿ ಸಮಸ್ಯೆ ಇದ್ದರೆ ಪರಿಹರಿಸಿಕೊಳ್ಳಲು ಅಧಿಕಾರಿಗಳಿಗೆ ಗಡುವು ನೀಡಿದ್ದೇನೆ. ಜನತಾ ದರ್ಶನ ಸಂದರ್ಭದಲ್ಲಿ ಏನಾದರೂ ಸಮಸ್ಯೆ ಕಂಡು ಬಂದರೆ ಅಥವಾ ಅಧಿಕಾರಿಗಳ ಮಟ್ಟದಲ್ಲಿ ತಪ್ಪು ನಡೆದಿದ್ದರೆ ಸ್ಥಳದಲ್ಲೇ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದರು.

ಬೆಂಗಳೂರಿನ 25 ಸೇರಿದಂತೆ ರಾಜ್ಯದಲ್ಲಿ ಹೊಸದಾಗಿ ಘೋಷಿಸಿರುವ 154 ಕೊಳೆಗೇರಿಗಳ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯ ಒಂದು ತಿಂಗಳಲ್ಲಿ ಪ್ರಾರಂಭಿಸಬೇಕು ಎಂದು ಸೂಚಿಸಿದರು.

₹500 ಕೋಟಿ ಅನುದಾನಕ್ಕೆ ಬೇಡಿಕೆ: ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಅನುದಾನ ಕಡಿಮೆ ಇದ್ದು ನಿರೀಕ್ಷಿತ ಪ್ರಮಾಣದಲ್ಲಿ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಚಾಲ್ತಿ ಯೋಜನೆಗಳಿಗೂ ಅನುದಾನ ಕೊರತೆ ಇದೆ. ಸಿಬ್ಬಂದಿಗೆ ವೇತನ, ಭತ್ಯೆಗೂ ಕಷ್ಟ ಆಗಿದೆ ಎಂದು ಸಭೆಯಲ್ಲಿ ಪ್ರಸ್ತಾಪವಾಯಿತು. 'ಬಜೆಟ್ ಗೆ ಮುನ್ನ ಯಾವ ಯೋಜನೆಗಳಿಗೆ ಅನುದಾನದ ಅಗತ್ಯವಿದೆ ಎಂಬ ಬಗ್ಗೆ ಪ್ರಸ್ತಾವ ಸಲ್ಲಿಸಿ. ₹500 ಕೋಟಿ ಅನುದಾನಕ್ಕೆ ಬೇಡಿಕೆ ಇಡೋಣ' ಎಂದು ಸಚಿವರು ತಿಳಿಸಿದರು. ಕೊಳೆಗೇರಿ ಅಭಿವೃದ್ಧಿ ಮಂಡಳಿ ಆಯುಕ್ತ ಬಿ. ವೆಂಕಟೇಶ್ ಇದ್ದರು.

ಹಜ್ ಯಾತ್ರಿಗಳ ಬೀಳ್ಕೊಟ್ಟ ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಹಾಗೂ ಅಲ್ಪ ಸಂಖ್ಯಾತರ ಸಚಿವ ಜಮೀರ್ ಅಹಮದ್ ಹಜ್ ಯಾತ್ರೆ ಕೈಗೊಂಡ ಯಾತ್ರಿಗಳಿಗೆ ಶುಕ್ರವಾರ ಶುಭ ಕೋರಿ ಬೀಳ್ಕೊಟ್ಟರು.

ಜಮೀರ್ ಅಹಮದ್ ಅವರು ಯಾತ್ರಿಗಳಿಗೆ ಹಜ್ ಭವನದಿಂದ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಉಚಿತ ಬಸ್ ಹಾಗೂ ನಿತ್ಯ 35 ಸಾವಿರ ಜನರಿಗೆ ಮೂರು ಹೊತ್ತು ಊಟದ ವ್ಯವಸ್ಥೆ ಮಾಡಿಸಿದ್ದರು.

ಕಳೆದ ವರ್ಷ ಹಜ್ ಯಾತ್ರೆ ಸಂದರ್ಭದಲ್ಲಿ ಊಟದ ವ್ಯವಸ್ಥೆಯಲ್ಲಿ ಸಮಸ್ಯೆಯಾಗಿದ್ದರಿಂದ ಸಚಿವರೇ ಈ ಬಾರಿ ಖುದ್ದು ಆಸಕ್ತಿ ವಹಿಸಿ ಊಟ ಹಾಗೂ ಸಾರಿಗೆ ವ್ಯವಸ್ಥೆ ಮಾಡಿಸಿದ್ದಾರೆ. ಜೂನ್ 6 ರಿಂದ 22 ರವರೆಗೆ ಒಟ್ಟು 6 ಲಕ್ಷ ಜನರಿಗೆ ಊಟದ ವ್ಯವಸ್ಥೆ ಮಾಡಿಸಲಾಗಿದೆ. ಇದಕ್ಕೆ ಯಾತ್ರಿಗಳಿಂದ ಪ್ರಶಂಸೆ ವ್ಯಕ್ತವಾಯಿತು.

ವಸತಿ ಹಾಗೂ ಅಲ್ಪಸಂಖ್ಯಾತರ ಸಚಿವ ಜಮೀರ್ ಅಹಮದ್ ಅವರು ಹಜ್ ಯಾತ್ರೆ ಕೈಗೊಂಡ ಯಾತ್ರಿಗಳನ್ನು ಶುಕ್ರವಾರ ಬೀಳ್ಕೊಟ್ಟರು.

16ರಿಂದ ವೈಶ್ವಿಕ ಹಿಂದೂ ರಾಷ್ಟ್ರ ಮಹೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂ ರಾಷ್ಟ್ರ ಸ್ಥಾಪನೆಯ ಕಾರ್ಯಕ್ಕೆ ಗತಿ ನೀಡಲು ಜೂನ್ 16ರಿಂದ 22ರವರೆಗೆ ಗೋವಾದ ಫೋಂಡಾ ರಾಮನಾಥ ದೇವಸ್ಥಾನದಲ್ಲಿ ವೈಶ್ವಿಕ ಹಿಂದೂ ರಾಷ್ಟ್ರ ಮಹೋತ್ಸವ ನಡೆಯಲಿದೆ ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ವಕ್ತಾರ ಮೋಹನ್ ಗೌಡ ತಿಳಿಸಿದರು.

11ನೇ ಅಖಿಲ ಭಾರತೀಯ ಹಿಂದೂ ರಾಷ್ಟ್ರ ಅಧಿವೇಶನ ಅಂದರೆ ವೈಶ್ವಿಕ ಹಿಂದೂ ರಾಷ್ಟ್ರ ಮಹೋತ್ಸವದಲ್ಲಿ ಹಿಂದೂ ರಾಷ್ಟ್ರದ ಬಗ್ಗೆ ಚರ್ಚೆ ನಡೆಯಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಹಿಂದೂ ವಿಧಿಜ್ಞ ಪರಿಷತ್ ರಾಷ್ಟ್ರೀಯ ಉಪಾಧ್ಯಕ್ಷ ಅಮೃತೇಶ್ ಎನ್.ಪಿ., ಹಿಂದೂ ಜೈ ಭೀಮ್ ಸಂಘಟನೆಯ ಅಧ್ಯಕ್ಷ ಚಂದ್ರಶೇಖರ್, ಅಯ್ಯಪ್ಪ ಸೇವಾ ಸಮಾಜಮ್ ಕರ್ನಾಟಕ ಅಧ್ಯಕ್ಷ ಎನ್. ಜಯರಾಮ, ರಾಮಾನುಜ ಪೀಠಂ ಉಪಾಧ್ಯಕ್ಷ ಜಯರಾಮ ಎಸ್. ಇದ್ದರು.

'ಕಸಾಪ ಎದುರು ಪ್ರತಿಭಟನೆಗಿಲ್ಲ ಅವಕಾಶ'

ಬೆಂಗಳೂರು: ಸಮಾನ ಮನಸ್ಕರ ವೇದಿಕೆ ವತಿಯಿಂದ ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಕಚೇರಿ ಎದುರು ಇದೇ 12ರಂದು ಹಮ್ಮಿಕೊಳ್ಳಲು ಉದ್ದೇಶಿಸಿದ್ದ ಪ್ರತಿಭಟನೆಗೆ ವಿ.ವಿ. ಪುರ ಠಾಣೆ ಪೊಲೀಸರು ಅವಕಾಶ ನಿರಾಕರಿಸಿದ್ದಾರೆ.

ಪ್ರತಿಭಟನೆಗೆ ಅನುಮತಿ ಕೋರಿ ವೇದಿಕೆಯ ಸಂಚಾಲಕ ಶಂಕರ್ ಹೂಗಾರ ಸಲ್ಲಿಸಿದ್ದ ಮನವಿ ಪತ್ರಕ್ಕೆ ಹಿಂಬರಹ ನೀಡಿರುವ ಪೊಲೀಸರು, 'ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರ ಪ್ರತಿಭಟನೆ ನಡೆಸಲು ಅವಕಾಶವಿದೆ. ಉಳಿದಂತೆ, ನಗರದ ಯಾವ ಭಾಗದಲ್ಲೂ ಪ್ರತಿಭಟನೆಗೆಅವಕಾಶವಿಲ್ಲ. ಹೀಗಾಗಿ, ನಿಮ್ಮ ಪ್ರತಿಭಟನೆಗೆ ಅವಕಾಶ ನೀಡಲಾಗದು' ಎಂದಿದ್ದಾರೆ.

'ಜೂನ್ 12ರಂದು ಬೆಳಿಗ್ಗೆ 11ಕ್ಕೆ ಪ್ರತಿಭಟನೆ ಹಮ್ಮಿಕೊಳ್ಳುವ ಬಗ್ಗೆ ತಿಳಿಸಿದ್ದೀರಾ. ಮಾಜಿ ಸಚಿವರಾದ ಬಿ.ಟಿ. ಲಲಿತಾ ನಾಯಕ್ ಪ್ರತಿಭಟನಾ ಸಭೆ ಉದ್ಘಾಟಿಸಲಿದ್ದು, 80ರಿಂದ 100 ಜನ ಸೇರುವ ನಿರೀಕ್ಷೆ ಇರುವುದಾಗಿ ಹೇಳಿದ್ದಿರಾ' ಎಂದು ಹಿಂಬರಹದಲ್ಲಿ ಪೊಲೀಸರು ಉಲ್ಲೇಖಿಸಿದ್ದಾರೆ.

'ಸ್ವಾತಂತ್ರ್ಯ ಉದ್ಯಾನ ಹೊರತು ಪಡಿಸಿ ನಗರದ ಯಾವುದೇ ಸ್ಥಳದಲ್ಲಿ ಪ್ರತಿಭಟನೆ/ಧರಣಿ/ಮೆರವಣಿಗೆ ನಡೆಸಲು ಅವಕಾಶ ನೀಡದಂತೆ ಹೈಕೋರ್ಟ್ ನಿರ್ದೇಶನವಿದೆ. ಈ ರೀತಿ ಎಲ್ಲ ಕಡೆ ಪ್ರತಿಭಟನೆಗೆ ಅವಕಾಶ ನೀಡಿದರೆ, ಸಾರ್ವಜನಿಕರಿಗೆ ತೊಂದರೆಯಾಗಲಿದೆ.

ಇದೇ ಪ್ರತಿಭಟನೆಯನ್ನು ನೀವು ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ' ಎಂದು ಹಿಂಬರಹದಲ್ಲಿ ಪೊಲೀಸರು ತಿಳಿಸಿದ್ದಾರೆ.

ಟೋಲ್ ಸಿಬ್ಬಂದಿ ಕೊಲೆ ಪ್ರಕರಣ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ



ಪವನ್ ಕುಮಾರ್

ರಾಮನಗರ: ಬೆಂಗಳೂರು-ಮೈಸೂರು ದಶಪಥ ಎಕ್ಸ್‌ಪ್ರೆಸ್ ವೇ ಶೇಷಗಿರಿಹಳ್ಳಿ ಟೋಲ್‌ನಲ್ಲಿ ಈಚೆಗೆ ನಡೆದಿದ್ದ ಟೋಲ್ ಸಿಬ್ಬಂದಿ ಪವನ್ ನಾಯಕ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಡದಿ ಠಾಣೆ ಪೊಲೀಸರು ಶುಕ್ರವಾರ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಬೆಂಗಳೂರಿನ ಸುಂಕದಕಟ್ಟೆ ಅಭಿಷೇಕ್ (29) ಮತ್ತು ಸಂತೋಷ್ (23) ಬಂಧಿತರು. ಆಹಾರ ಪೂರೈಕೆ ಮಾಡುವ ಕಂಪನಿಯಲ್ಲಿ ಇಬ್ಬರೂ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದರು.

ಆರೋಪಿಗಳು ಜೂನ್ 5ರಂದು ಸ್ನೇಹಿತರೊಂದಿಗೆ ಕಾರಿನಲ್ಲಿ ರಾತ್ರಿ ಟೋಲ್‌ನಲ್ಲಿ ಪವನ್ ಜತೆ ಜಗಳವಾಡಿ, ಪರಸ್ಪರ ಹೊಡೆದಾಡಿಕೊಂಡಿದ್ದರು.

ಪಂಚಾಯಿತಿ ವ್ಯಾಪ್ತಿ ಆಸ್ತಿ ತೆರಿಗೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿಗಳು ಸ್ಥಳೀಯವಾಗಿ ಆಸ್ತಿ ತೆರಿಗೆ ವಿಧಿಸುವ ನಿಟ್ಟಿನಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ–1993ರ ಕಲಂ 44ಕ್ಕೆ ತರಲಾಗಿರುವ ತಿದ್ದುಪಡಿಯ ಸಾಂವಿಧಾನಿಕ ಮಾನ್ಯತೆಯನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಮಾರತ್ತಹಳ್ಳಿಯ ಪ್ರಿಯಾ ಸುಂದರೇಶನ್ ಸೇರಿದಂತೆ ಒಟ್ಟು ಆರು ಜನರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ; ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಆನೇಕಲ್ ತಾಲ್ಲೂಕು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸೇರಿದಂತೆ ಒಟ್ಟು ಆರು ಜನ ಪ್ರತಿವಾದಿಗಳು ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿದೆ. ನ್ಯಾಯಪೀಠ, 'ಆನೇಕಲ್ ತಾಲ್ಲೂಕು ಮುತ್ತನಲ್ಲೂರು ಗ್ರಾಮ ಪಂಚಾಯಿತಿ ಕಾರ್ಯದರ್ಶಿ, 2015-16ರ ಮೌಲ್ಯಮಾಪನದ ಅನುಸಾರ ಹೊಸ ತೆರಿಗೆಗೆ ಮುಂದಾದರೆ ಅದು ರಿಟ್ ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದು ಆದೇಶಿಸಿ ವಿಚಾರಣೆಯನ್ನು ಎರಡು ವಾರಗಳ ಕಾಲ ಮುಂದೂಡಿದೆ.

ನಗರದಲ್ಲಿ ಇಂದು

ಸಮಾಜಮುಖಿ ವಾರ್ಷಿಕ ಕಥಾಸಂಕಲನ–2023 ಬಿಡುಗಡೆ: 'ಮುಝಫರ್ ಮತ್ತಿತರ ಇಪ್ಪತ್ತು ಕಥೆಗಳು, ಲೋಕಾರ್ಪಣೆ: ವೈ.ಎನ್. ಮಧು, 'ಸಮಾಜಮುಖಿ ಕಥಾ ಪುರಸ್ಕಾರ' ಪ್ರದಾನ: ಚೈತ್ರಿಕಾ ನಾಯ್ಕ್ ಹರ್ಗಿ, ಆಯೋಜನೆ: ಸಮಾಜಮುಖಿ, ಸ್ಥಳ: ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ನಾಗರಿಕ ಸೇವೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸನ್ಮಾನ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಮುಖ್ಯ ಅತಿಥಿಗಳು: ಎನ್. ಚಲುವರಾಯಸ್ವಾಮಿ, ಚಂದ್ರಶೇಖರ ಕಂಬಾರ, ಕೆ. ಗೋವಿಂದರಾಜು, ವೈ.ಕೆ. ಪುಟ್ಟಸ್ವಾಮಿಗೌಡ, ಚನ್ನೇಗೌಡ, ಆಯೋಜನೆ: ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಸ್ಥಳ: ಬಿಜಿಎಸ್ ಸಿಇಟಿ ಸಭಾಂಗಣ, ಮಹಾಲಕ್ಷ್ಮಿಲೇಔಟ್, ಬೆಳಿಗ್ಗೆ 10

ವಿದ್ಯಾಚೇತನ ದಿನಾಚರಣೆ: ಸಾನ್ನಿಧ್ಯ: ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ, ಮುಖ್ಯ ಅತಿಥಿಗಳು: ಡಿ.ವಿ. ಸದಾನಂದಗೌಡ, ಎಸ್. ಟಿ. ಸೋಮಶೇಖರ್, ಆಯೋಜನೆ: ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ, ಸ್ವಾನಂದಾಶ್ರಮ, ಸ್ಥಳ: ಸ್ವಾನಂದಾಶ್ರಮ ಬಾಲಗಣಪತಿ ಪ್ರತಿಷ್ಠಾನ, ಕನಕಪುರ ರಸ್ತೆ, ಬೆಳಿಗ್ಗೆ 11

ಬೃಹತ್ ರಕ್ತದಾನ ಶಿಬಿರ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಆಯೋಜನೆ: ಕರ್ನಾಟಕ ರಕ್ಷಣಾ ವೇದಿಕೆ, ಸ್ಥಳ: ಗಾಯತ್ರಿ ವಿಹಾರ, ಅರಮನೆ ಮೈದಾನ, ಬೆಳಿಗ್ಗೆ 11

9ನೇ ಘಟಿಕೋತ್ಸವ: ಮುಖ್ಯ ಅತಿಥಿ: ಡಾ.ಎಂ.ಸಿ. ಸುಧಾಕರ್, ಘಟಿಕೋತ್ಸವ ಭಾಷಣ: ಜಿ. ಕುಮಾರ ನಾಯಕ್, ಅಧ್ಯಕ್ಷತೆ: ಎಚ್.ಎನ್. ಸುಬ್ರಹ್ಮಣ್ಯ, ಆಯೋಜನೆ: ದಿ ನ್ಯಾಷನಲ್ ಕಾಲೇಜ್, ಸ್ಥಳ: ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11.30

'ಸ್ಮರಣಂ 1' ನೃತ್ಯ ಪ್ರದರ್ಶನ: ಮುಖ್ಯಅತಿಥಿ: ಎಂ.ಸೂರ್ಯಪ್ರಸಾದ್, ಆಯೋಜನೆ: ಸಾಯಿ ಆರ್ಟ್ಸ್ ಇಂಟರ್‌ನ್ಯಾಷನಲ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಬೆಳಿಗ್ಗೆ 10

ವಿಶ್ವ ಪರಿಸರ ದಿನ ಆಚರಣೆ ಪ್ರಯುಕ್ತ ಮರಗಳ ಪ್ರವಾಸ: ಮುಖ್ಯ ಅತಿಥಿ: ಬಿ.ಎಸ್. ಚಂದ್ರಶೇಖರ್, ಆಯೋಜನೆ ಹಾಗೂ ಸ್ಥಳ: ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ಅರಮನೆ ರಸ್ತೆ, ಸಂಜೆ 4.30

ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ಪ್ರದಾನ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ದ್ವಾರನಕುಂಟೆ ಪಾತಣ್ಣ, ಮುಖ್ಯ ಅತಿಥಿ: ಸಿ. ಸೋಮಶೇಖರ್, ಉಪಸ್ಥಿತಿ: ಬಿ.ಎ. ನಂಜುಂಡಸ್ವಾಮಿ, ತೀರ್ಪುಗಾರರು: ರಘುನಾಥ ಚ.ಹ., ಕಂನಾಡಿಗಾ ನಾರಾಯಣ, ಆಯೋಜನೆ: ಸ್ವಾಭಿಮಾನಿ ಕರ್ನಾಟಕ ವೇದಿಕೆ, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ, ಸಂಜೆ 5

ಬರಗೂರು ರಾಮಚಂದ್ರಪ್ಪ

'ಸಾಹಿತ್ಯ ಸಂಜೆ' ವಿಶೇಷ ಉಪನ್ಯಾಸ: 'ಸಾಹಿತ್ಯದ ವಿವಿಧ ಪ್ರಕಾರಗಳು ಮತ್ತು ಭಾಷಾ ಬಳಕೆಯ ಅನಂತ ಸಾಧ್ಯತೆಗಳು', ಉಪನ್ಯಾಸಕರು: ಬಸವರಾಜ ಕಲ್ಗುಡಿ, ಆಯೋಜನೆ: ಸುಚಿತ್ರ, ಸ್ಥಳ: ಭಾನು ನೆನಪಿನ ನಾಣಿ ಅಂಗಳ, ಸುಚಿತ್ರ ಪೂರ್ವಂಕರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 2ನೇ ಹಂತ, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಇಂಚರಾ ನಾರಾಯಣ್, ಉಪಸ್ಥಿತಿ: ನರ್ತನಾ ಪ್ರೇಮಚಂದ್ರ, ಶಿವರುದ್ರ ಶಿವಾಚಾರ್ಯ ಸ್ವಾಮೀಜಿ, ಸೋಮಶೇಖರ ಎ., ಆಯೋಜನೆ: ಶಿವಪ್ರಿಯ, ಸ್ಥಳ: ಶ್ರೀ ಕೃಷ್ಣದೇವರಾಯ ಕಲಾಮಂದಿರ, ಮಲ್ಲೇಶ್ವರ, ಸಂಜೆ 5.30

'ಸುವರ್ಣ ರಂಗಪಥ' ಕಲಾಗಂಗೋತ್ರಿ ನಾಟಕೋತ್ಸವ: ಉದ್ಘಾಟನೆ: ಎಚ್. ಜಿ. ದತ್ತಾತ್ರೇಯ (ದತ್ತಣ್ಣ), ಸಾಧಕರಿಗೆ ರಂಗಗೌರವ: 'ಮುಖ್ಯಮಂತ್ರಿ' ಚಂದ್ರು, ಬಿ.ವಿ. ರಾಜಾರಾಂ, ಅಭಿನಂದನಾ ಭಾಷಣ: ಕೆ.ವೈ. ನಾರಾಯಣಸ್ವಾಮಿ, ಅಧ್ಯಕ್ಷತೆ: ವಿಜಯಾ, ಆಯೋಜನೆ: ಭಾಗವತರು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 6

ಮಂಜಮ್ಮ ಜೋಗತಿ ಅವರ ಆತ್ಮಕಥನ 'ಫ್ರಮ್ ಮಂಜುನಾಥ್ ಟು ಮಂಜಮ್ಮ' ಬಿಡುಗಡೆ: ಸಂವಾದ: ಮಂಜಮ್ಮ ಜೋಗತಿ, ಹರ್ಷ ಭಟ್, ವಸುದೇಂದ್ರ, ಆಯೋಜನೆ: ಹಾರ್ಪರ್ ಪ್ರಕಾಶನ, ಸ್ಥಳ: ದಿ ಬುಕ್‌ವರ್ಮ್, ಚರ್ಚ್ ಸ್ಟ್ರೀಟ್, ಅಶೋಕ ನಗರ, ಸಂಜೆ 6.15

ಮಂಜಮ್ಮ ಜೋಗತಿ

'ಹಿಂಗ್ ಮಾಡಿದ್ರೆ ಹೆಂಗೆ' ನಾಟಕ ಪ್ರದರ್ಶನ: ನಿರ್ದೇಶನ: ಬಾಶ್ ರಾಘವೇಂದ್ರ, ರಚನೆ: ನಾಗವೇಣಿ ರಂಗನ್, ಸಂಗೀತ: ಮೇಘನಾ ಹಳಿಯಾಳ, ಆಯೋಜನೆ: ಅಂತರಂಗ ಬಹಿರಂಗ ತಂಡ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

ಶತಾವಧಾನಿ ಆರ್. ಗಣೇಶ್ ಪ್ರತಿಪಾದನೆ ● ವೀಣಾ ಬನ್ನಂಜೆ ಅವರ ಕೃತಿಗಳ ಬಿಡುಗಡೆ

'ವಚನಕಾರರನ್ನು ಚಳವಳಿಗಾರರ ಮಟ್ಟಕ್ಕೆ ಇಳಿಸಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಚನಕಾರರನ್ನು ಅವರು ಮಾಡಿದ ಸಮಾಜ ಸುಧಾರಣೆಯನ್ನು ಗಮನದಲ್ಲಿಟ್ಟುಕೊಂಡು ಚಳವಳಿಗಾರರ ಮಟ್ಟಕ್ಕೆ ಇಳಿಸಿದ್ದೇವೆ. ವಚನಕಾರರು ಅಧ್ಯಾತ್ಮರು. ಅವರ ಆತ್ಮಯಾತ್ರೆಯ ಉಪ ಉತ್ಪನ್ನವಷ್ಟೇ ಸಮಾಜ ಸುಧಾರಣೆ' ಎಂದು ಶತಾವಧಾನಿ ಆರ್. ಗಣೇಶ್ ಪ್ರತಿಪಾದಿಸಿದರು.

ವೀಣಾ ಬನ್ನಂಜೆ ಅವರ 'ಅಲ್ಲಮೋಪನಿಷತ್ತು', 'ಅರ್ಥಯಾತ್ರೆ', 'ಪರಮಾರ್ಥ ಯಾತ್ರೆ' ಕೃತಿಗಳನ್ನು ಶುಕ್ರವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸಮಾಜ ಕಾಲಕಾಲಕ್ಕೆ ಮಾರ್ಪಾಡು ಆಗುತ್ತಾ ಹೋಗುತ್ತಿರುತ್ತದೆ. ಅಧ್ಯಾತ್ಮ ಶಾಶ್ವತವಾದುದು. ಈಗಿನ ಕೆಲವು ಸ್ವಾಮೀಜಿಗಳು ಬಿಸಿಯೂಟ ನೀಡಲು, ಕೆರೆ ನಿರ್ಮಿಸಲು, ಇತರ ಸಮಾಜ ಸೇವೆ ಮಾಡಲು ಸೀಮಿತವಾಗಿದ್ದಾರೆ. ಮುಖ್ಯವಾದ ಅಧ್ಯಾತ್ಮದ ದಾರಿಯನ್ನೇ ಕಳೆದುಕೊಂಡು ಬಿಟ್ಟಿದ್ದಾರೆ. ಅವರು ಸ್ವಾಮೀಜಿಯಂತೆ ಕಾಣುವ ಬದಲು ಯಾವುದೋ ಕಂಪನಿಯ ಸಿಇಒ ತರಹ ಆಗಿಬಿಟ್ಟಿದ್ದಾರೆ ಎಂದು ಟೀಕಿಸಿದರು.

ಶೈವ-ವೈಷ್ಣವ, ಬ್ರಾಹ್ಮಣ-ಅಬ್ರಾಹ್ಮಣ, ದಲಿತ-ಶೂದ್ರ, ವೈದಿಕ-ಜಾನಪದ ಎಂದೆಲ್ಲ ವಿಭಾಗ ಮಾಡುವವರು ಮೂಲ ಓದಿರುವುದಿಲ್ಲ. ವೇದಕ್ಕಿಂತ ದೊಡ್ಡ ಜಾನಪದ ಇದೆಯೇ? ಈ ರೀತಿ ವಿಭಾಗ ಮಾಡಿ ನೋಡುವುದು ಸರಿಯಲ್ಲ ಎಂದು ತಿಳಿಸಿದರು.

ಲೇಖಕ ತೀರ್ಥರಾಮ ವಳಲಂಬೆ ಮಾತನಾಡಿ, 'ಅಧ್ಯಾತ್ಮ ಕೆಲವರಿಗಷ್ಟೇ ಸೀಮಿತ ಎಂದು ತಿಳಿದುಕೊಂಡಿದ್ದೇವೆ. ಅದು ಎಲ್ಲರಿಗೂ ಸಂಬಂಧಪಟ್ಟಿದ್ದು. ಅಧ್ಯಾತ್ಮದಲ್ಲಿ ವೈವಿಧ್ಯ ಇದೆ. ಪ್ರತ್ಯೇಕತೆ ಇಲ್ಲ' ಎಂದರು.

ಕೃತಿಕಾರ್ತಿ ವೀಣಾ ಬನ್ನಂಜೆ, ಹಾಸ್ಯ ಕಲಾವಿದ ಪ್ರಾಣೇಶ್ ಗಂಗಾವತಿ, ಹುಬ್ಬಳ್ಳಿ ಸಾಹಿತ್ಯ ಪ್ರಕಾಶನದ ಎಂ.ಎ. ಸುಬ್ರಹ್ಮಣ್ಯ ಇದ್ದರು.



ವೀಣಾ ಬನ್ನಂಜೆ ಅವರ 'ಅಲ್ಲಮೋಪನಿಷತ್ತು', 'ಅರ್ಥಯಾತ್ರೆ', 'ಪರಮಾರ್ಥ ಯಾತ್ರೆ' ಪುಸ್ತಕಗಳನ್ನು ಬಿಡುಗಡೆ ಮಾಡಿದ ಶತಾವಧಾನಿ ಆರ್. ಗಣೇಶ್ ಅವರು ಕೃತಿಗಳನ್ನು ಕೃತಿಗಾರ್ತಿಗೆ ಹಸ್ತಾಂತರಿಸಿದರು. ಬರಹಗಾರ ತೀರ್ಥರಾಮ ವಳಲಂಬೆ, ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್ ಇದ್ದರು —ಪ್ರಜಾವಾಣಿ ಚಿತ್ರ

ನಿಮ್ಮ ಅಡುಗೆ ಮನೆಯನ್ನು ಅಪ್‌ಗ್ರೇಡ್ ಮಾಡಿ.
ನಿಮ್ಮ ಮನೆಯನ್ನು ಅಪ್‌ಗ್ರೇಡ್ ಮಾಡಿ.

ಸ್ವಚ್ಛ ಶ್ರೇಣಿಯ ಈ ಪ್ರೆಷರ್ ಕುಕ್ಕರ್ ಸೋರಿಕೆ ನಿಯಂತ್ರಣ ಹೊಂದಿದೆ

ಸ್ವಚ್ಛ ಪ್ರೆಷರ್ ಕುಕ್ಕರ್
24%-42% ರಿಯಾಯಿತಿ*

ಭಾರತದ ಪ್ರಪ್ರಥಮ 6 ಪದರದ ನಾನ್ ಸ್ಟಿಕ್ ಕೋಟಿಂಗ್ ಇರುವ ಹಾರ್ಡ್ ಅನೋಡೈಸ್ಡ್ ಕುಕ್‌ವೇರ್

ಡ್ಯೂರಾಸ್ಟೋನ್ ಕುಕ್‌ವೇರ್
32%-62% ರಿಯಾಯಿತಿ*

24% / 66% ರಿಂದ ರಿಯಾಯಿತಿ*

ಏಪ್ರಿಲ್ 15 ರಿಂದ ಜೂನ್ 30 2023 ವರೆಗೆ

ಪ್ರೆಸ್ಟೀಜ್ ಏನನ್ನಾದರೂ ಯಾವುದಕ್ಕಾದರೂ ಎಕ್ಸ್‌ಚೇಂಜ್ ಆಫರ್*

ಸುಲಭ ಸ್ವಚ್ಛತೆಗಾಗಿ ಕ್ರಾಂತಿಕಾರಿ ವಿನ್ಯಾಸ

ಸ್ವಚ್ಛ ಗ್ಯಾಸ್ ಸ್ಟವ್
33%-43% ರಿಯಾಯಿತಿ*

ಕೈ ಬೀಸುವಷ್ಟರಲ್ಲಿ ನಿಮ್ಮ ಅಡುಗೆ ಮನೆ ಹೊಗೆ ರಹಿತ

ಆಸ್ಕರ್ ಚಿಮಣಿ
50% ರಿಯಾಯಿತಿ*

ಶಕ್ತಿಶಾಲಿ ಮಿಕ್ಸರ್ ಗ್ರೈಂಡರ್ ನಾದುವುದು, ಕತ್ತರಿಸುವುದು, ಅರೆಯುವುದು ಮತ್ತು ಸಂಗ್ರಹಿಸುವುದು.

ಎಂಡ್ಯುರಾ ಮಿಕ್ಸರ್ ಗ್ರೈಂಡರ್ 1000W
38%-48% ರಿಯಾಯಿತಿ*

ಪ್ರೆಷರ್ ಕುಕ್ಕರ್‌ನ ವಿಜಿಲ್ ಲೆಕ್ಕ ಹಾಕುವ ಅನುಕೂಲಕರ ಇಂಡಕ್ಷನ್ ಕುಕ್‌ಟಾಪ್



ಇಂಡಕ್ಷನ್ ಕುಕ್‌ಟಾಪ್ 2000W
38%-44% ರಿಯಾಯಿತಿ*

ಆರ್ದ್ರ ಮತ್ತು ಡ್ರೈ ಕ್ಲೀನಿಂಗ್ ಎರಡಕ್ಕೂ ಸೂಕ್ತವಾದ ವ್ಯಾಕ್ಯೂಮ್ ಕ್ಲೀನರ್

ಟೈಫೂನ್ 05 ವ್ಯಾಕ್ಯೂಮ್ ಕ್ಲೀನರ್
ಫ್ಲ್ಯಾಟ್ 46% ರಿಯಾಯಿತಿ*

ನಿಮ್ಮ ಅನುಕೂಲಕ್ಕಾಗಿ ಸಣ್ಣ ಉಪಕರಣಗಳು

ಜ್ಯೂಸರ್
ಸ್ಯಾಂಡ್‌ವಿಚ್ ಮೇಕರ್
ಒಟಿಜಿ
ಕೆಟಲ್
25%-66% ರಿಯಾಯಿತಿ*

*ಷರತ್ತುಗಳು ಅನ್ವಯಿಸುತ್ತವೆ. ಈ ಕೊಡುಗೆಗಳು ಕೇವಲ ಎಕ್ಸ್‌ಚೇಂಜ್‌ಗೆ ಮಾತ್ರ ಅನ್ವಯಿಸುತ್ತದೆ. ಎಲ್ಲ ಡಿಸ್ಕೌಂಟ್‌ಗಳು ಎಮ್‌ಆರ್‌ಪಿ ಮೇಲೆ ಮಾತ್ರ. ಆಯ್ದ ಡೀಲರ್ ಔಟ್‌ಲೆಟ್‌ಗಳಲ್ಲಿ ದಾಸ್ತಾನು ಇರುವವರೆಗೆ ಮಾತ್ರ. ಬದಲಾವಣೆ ಬೆಲೆಯು ಖರೀದಿಸಿದ ಸಾಮಾನು ಮತ್ತು ಹಿಂತಿರುಗಿಸಲಾಗುವ ಹಳೆಯ ಸಾಮಾನುಗಳನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ : 10 ಲೀ ಅಲ್ಯುಮೀನಿಯಂ ಪ್ರೆಷರ್ ಕುಕ್ಕರ್‌ಗೆ ಬದಲಾವಣೆಯ ಮೇಲೆ ನೀವು 3 ಲೀ ಪಾಪ್ಯುಲರ್ ಸ್ವಚ್ಛ ಪ್ರೆಷರ್ ಕುಕ್ಕರ್ ಖರೀದಿಸಿದರೆ, ವಾಸ್ತವದ ಡಿಸ್ಕೌಂಟ್ ರೂ.615.00 ಆಗಿರುತ್ತದೆ. ವಾಸ್ತವಿಕ ಬದಲಾವಣೆ ಕೊಡುಗೆ ಬೆಲೆಯ ಬಗ್ಗೆ ತಿಳಿದುಕೊಳ್ಳಲು, ದಯವಿಟ್ಟು ಆಯ್ದ ಡೀಲರ್ ಅಂಗಡಿಗಳಲ್ಲಿ ಲಭ್ಯವಿರುವ ಯಾವುದಕ್ಕಾದರೂ ಏನನ್ನಾದರೂ ಬದಲಾವಣೆ ಕೊಡುಗೆ ಬೆಲೆ ಪಟ್ಟಿಯನ್ನು ನೋಡಿರಿ. ಹಿಂತಿರುಗಿಸಬಹುದಾದ ಹಳೆಯ ಸಾಮಾನುಗಳೆಂದರೆ ಅಲ್ಯುಮಿನಿಯಮ್/ಸ್ಟೈಯನ್‌ಲೆಸ್ ಸ್ಟೀಲ್ ಪ್ರೆಷರ್ ಕುಕ್ಕರ್‌ಗಳು, ಅಲ್ಯುಮಿನಿಯಮ್/ಸ್ಟೈಯನ್‌ಲೆಸ್ ಸ್ಟೀಲ್ ಕುಕ್‌ವೇರ್ (ಕನಿಷ್ಠ 400 ಗ್ರಾಂ ಪಾತ್ರೆ ತೂಕ), ಗ್ಯಾಸ್ ಸ್ಟವ್‌ಗಳು (ಕನಿಷ್ಠ 2 ಬರ್ನರ್‌ಗಳು), ಮಿಕ್ಸರ್ ಗ್ರೈಂಡರ್‌ಗಳು (ಬಾಡಿ, ಮೋಟರ್ ಮತ್ತು ಎರಡು ಸ್ಟೈನ್‌ಲೆಸ್ ಸ್ಟೀಲ್ ಜಾರ್‌ಗಳನ್ನು ಒಳಗೊಂಡಿರಬೇಕು), ಇಂಡಕ್ಷನ್ ಕುಕ್‌ಟಾಪ್‌ಗಳು, ರೈಸ್ ಕುಕ್ಕರ್‌ಗಳು, ಚಿಮ್ನಿಗಳು, ಹಾಬ್‌ಟಾಪ್‌ಗಳು, ವೆಟ್ ಗ್ರೈಂಡರ್‌ಗಳು, ಒಟಿಜಿಗಳು, ಕೆಟಲ್, ಟೋಸ್ಟರ್‌ಗಳು, ಇಸ್ತ್ರಿ ಪೆಟ್ಟಿಗೆಗಳು, ಮೈಕ್ರೊವೇವ್ ಅವೆನ್, ಜ್ಯೂಸರ್‌ಗಳು, ಬ್ಲೆಂಡರ್‌ಗಳು, ವಾಟರ್ ಪ್ಯೂರಿಫೈಯರ್‌ಗಳು ಮತ್ತು ವಾಕ್ಯೂಮ್ ಕ್ಲೀನರ್‌ಗಳು.

Prestige®

ತಮ್ಮವರನ್ನು ಪ್ರೀತಿಸುವವರು ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?

CUSTOMER CARE NO 080-6000 4411 | Follow 'TTK Prestige' on | PRESTIGE XPERT on WhatsApp 97423 34411 | shop.ttkprestige.com

Prestige Xclusive **Outer Ring Road-Hennur Coco,** Ph:7204250679; **Tumkur Rd. 8th Mile T.Dasarahalli,** Ph:9972541116; **Koramangala,** Ph:9742901122; **Bull Temple Rd,** Ph:26609012; **Malleswaram,** Ph:9448282470; **Rt Nagar Main Rd,** Ph:41698761; **Ganganagar Cbi Rd,** Ph:43705914; **Wheeler Rd,** Ph:25803080; **Kattriguppe Circle,** Ph:40900685; **Vijayanagar,** Ph:41330034; **Hsr Bda Cmplx,** Ph:25726991;**Marathahalli,** Ph:42197088; **Sanjaynagar,** Ph:41258300;**Banaswadi Ring Rd,** Ph:41634115; **Jayanagar,** Ph:9845066549; **J.P.Nagar,**Ph:41122235; **Rajarajeshwaringr,** Ph:28603540, 9008418800; **Kengeri Stl Town,** Ph:28485296;**Rajajinagar,** Ph:41731224;**B.T.M.Layout,** Ph:40939168;**Sarjapura Rd,** Ph:42038646;**Konankunte Cross,** Ph:26860350; **Nagharabhavi Bda Cmplx,** Ph:9739004750; **Begur,** **Ph:**8073408322; **Vidyaranayapura,** Ph:9845518824; **Wilson Garden,** Ph:-9480010720; **Brookefield,** Ph:28541555; **Ramamurthynagar,** Ph:420449545; **Kr Puram,** Ph:8861494277; **Cambridge Layout,** Ph:42074468; **Kaggadaspura,** Ph:7306666610; **Kammanahalli,** Ph:41606044;**Whitefield,** Ph:40907273;**Chandapura,** Ph:9036190725;**Hoskote,** Ph:27932227; **Dommasandra,** Ph:9611423555; **Hesarghatta Road,** Ph:28370400; **Uttarahalli,** Ph:9986879095; **Anjananagr Magadi Rd,** Ph:23281206; **Kadugodi,** Ph:8123042234; **Hosur Rd Huskur Gate,** Ph:9606406009; **Yelahanka Newtown,** Ph:8668034376; **Jayamahal Ext,** Ph:41616484; **Mahalakshmi Lyt,** Ph:23572233; **Jpnagar 7th Phase, Puttenahalli,** Ph:41465855; **Kumaraswamy Lyt,** Ph:9739011252;**Chandralyt,** Ph:9845146418; **Channasandra,** Ph:9986369569; **Sheshadripuram,** Ph:8711090976; **Kasturinagar,** Ph:08049923166; **Tc Palya,** Ph:9740333334; **Attibele,** Ph:9341221525; **Jigani,**Ph:8762069852; **Sarjapura Town,**Ph:9036373175; **Hosa Rd Junction,**Ph:9845597099; **Mathikere,** Ph:6366636592; **Basaveshwaranagar,** Ph:9739591008; **Thalagatapura,Vajarahalli,** Ph: 9964116888; **Hegganahalli,** Ph:28360289; **Gottigere,** Ph:8431241099;**Amruthahalli,** Ph:9141169883;**Ullal,** Ph:9686646565; **Jayanagar 4th Block East Extension,** Ph: 9945446335; **Nelamangala,** Ph:9632356627, **Kolar,** Ph:9738882584; **Channapatna,** Ph:9686661294; **Madhugiri,** Ph:9611552805; **Gauribidanur,** Ph:8317399465; **Gubbi,** Ph:9035195120,8095459040; **Banshankari Stage 2, Bda Complex, Ph:**49890679,9740677740; **Vijayabank Colony, Bilekahalli,** Ph:8970366139; **Whitefield,** Ph:08040907273; **Malur,** Ph:9845028859; **Kumbalagodu,** Ph:9845014860; **Devanahalli,** Ph:9845737576; **Thanisandra,** Ph:9686340159; **E.City Phase 1,** Ph:7557000060; **Hulimavu,** Ph:8904654433; **Singanayakanahalli,** Ph:9591059156; **Anekal,** Ph:8660070202.

Also Available At :Jayanagar: Sarathy, Ph:41210047;Vishaals, Ph:08022447285; Royal Mart, Ph:8790311104;Anjana Superstores, Ph:41301836; Kitchenmart, Ph:26652885;Aravinda, Ph:41301989;**Sajjan Rao Circle:** Vardhaman Intl, Ph:8073383878; **Vv Puram:**Kesariya, Ph:080-41531515, 41131535; **Bankcolony:**Vardhaman Ind, Ph:22428300;**Banashankari:**Varada Glass & Crky, Ph:9980949316;Patel Agn, Ph:26714285;Patel Ktchen Apl, Ph:9079061706;Chamundi Ind, Ph:26712633;**Bilekhalli:**Sree Pooja Ha, Ph:9036919084;**Begur Rd:**Omsar Intl, Ph:9241650196;**Bommanahalli:**Sri Durga Ha, Ph:9900674018;**Chamarjpet:**Vadirajstores, Ph:41517646;**Hosa Rd:**Maharaja Kw, Ph:9036400829;**Isro Layout:**Bhumi Kitchen, Ph:9916830850;**Jp Nagar**:Santripti, Ph:9986699193;**Kanakapura Rd**: Royal Mart, Ph:28425777;**Padmanabnagar**:Royalmart, Ph:9886088993;**Uttarahalli:**Royalmart, Ph:26394114;Rme Super Market, Ph:9964228208;**Mysore Road:**The Karnataka Metal Industry, Ph:9449342727;**Ayyappanagar:**Top Mart Sm, Ph:7204448111; **Babusapalya**:Karnataka Ha, Ph:8105754544;**Basaveshwarnagar:**Bigday Hm, Ph:9972517344;Mahaveer Ha, Ph:9844173501; Modern Colln, Ph:23583440;Aadhinath Kitchen Gal, Ph:41220555;**Gayathri Ngr**:J.K.Steel, Ph:23320853;**Giri Nagar**:Vidya Ent, Ph:9449988650;Matahji Ha, Ph: 7019385120; **Bagalgunte**:Royal Mart, Ph:9538000072;**Chandra Layout:**Rajguru Kw, Ph:9513034351; Pavan Kw, Ph:8618028319;**Ganganagar:**Patel Ind, Ph:8050899296;**Hanumathanagar**:Home Studio, Ph:9945933111; Kamal Appliances, Ph:9008800881;**Hesargatta Main Rd:**Royal Mart, Ph:28398200;**Horamavu:**Mamtha Ha, Ph:8880050050;**Hbr Layout**:Bhavani Ha, Ph:9845916164;**Harlur** Vinayaka Ha, Ph:7760531454:**Katriguppe**:Mk Metal Mart, Ph:9035779199;**Kr Puram**:Srm Elect, Ph:9845445748; Pooja Ele And, Ph:9738850503; **Kammanahalli:**Ramdev Steel, Ph:7259575732; Hm Traders, Ph:9964797616;**Konenkunte Cross:Mahalaxmi Elct & Ha, Ph:8123203588,Kasavanahalli:**Mathaji Ha, Ph:8880796036;**Kundanhalli**: New Prakash Ha, Ph:7090444111; **Kengeri**:Falcon Hm, Ph:7829999066;**Koramangala:**Sowbhagya Traders, Ph:7337733887;**Kmr Swy Layout**: Bhoomi Kitchen, Ph:9036850850;Patel Ha, Ph:8951979665;**Laggere**:Top Mart, Ph:9110246047;**Lnpura:**Arihanth Ent, Ph:7899633338;**Malleshwaram:**Deviprasad Ha, Ph:23564536;Bright Novelty, Ph:23343505; Hanuman Ha, Ph:8095429312;**Mathikere:**M.Bhawarlals Inc, Ph:41724740;Maharaja Agency, Ph:41278050;**Kadugodi:**Little Wonder, Ph:9961224224;**Madiwala:**Surya Ha, Ph:9449635332;**Malleshpalya:**Bajrang Ha, Ph:9449526463;New Bheru Ha, Ph:9448680738;Ramdev Ha, Ph:9035175860;Sri Bhagawathi Ha, Ph:9590575427; Maa Ambe Ha, Ph:8884198322;**Magadiroad:** Kesariya, Ph:6361685271;Royal Mart, Ph:23584498;**Annaporneshwari Nagar:**Deepak Ha, Ph:9148912736;**M S Palya:**Royal Mart, Ph:8147014079;**B Narayanpura:**Yellow Mart, Ph:7676726487;**Rajajinagar:**Mahalakshmi Metal House, Ph:23355994;Rathna Sales, Ph:23375566;Dhanalakshmi Kitchen World, Ph:41285801;Jayalakshmi Kw, Ph:9844755146;R S Mart, Ph:6363602929;Pooja Stl Cent, Ph:23327014; Vardhaman Intl, Ph:080-40974556;**Rajankunte:**Rmr Super Market, Ph:9108636912;**Rr Nagar:**Milan Ha, Ph:28605619;Pavan Kg, Ph:9739207043;**Tavarakere:**Mytri Mart Sm, Ph:9036466761;**T C Palya:**Rhk Super Mkt, Ph:9731668995;Big Day Sm, Ph:8867604818;Karnataka Ha, Ph:6363064024;**Tipsandra:**Pawar Ha, Ph:9980517021;Milan Ha, Ph:9986196375;Ramdev Ha, Ph:7406901545;**Ulsoor:**Aishwaryapranam Hn, Ph:9902788429;Pranam Steel Center, Ph:9448053781;**Udaynagar:**Mother India, Ph:9036189765;**Madanayakak Halli:** Vardhaman Intl, Ph: 8553170346;**Venkatapura:**Pooja Kg, Ph:9900426176;**Vijayanagar:**Vijaylaxmi Kw, Ph:9845022284;Maruthi Ha, Ph:8904689155;**Vidyarnapura:**Praksh Kw, Ph:8050620877;Mahalakshmi Steel House, Ph:9663375159;All Seasons Hm, Ph:9946728736;**Whitefield:** Little Wonder, Ph:7975372794; Rolla Hm, Ph:9148003448;Loyalcity, Ph:7892565797;Royal Mart, Ph:7079734574;**Yelahanka:**Royalmart, Ph:41705760; Mutha Electricals, Ph:22971920;Sai Kitchen World, Ph:9632811797; **Btm Layout**:Patel Agencies, Ph:9482853401;**Indranagar:**Kitchen Expert, Ph:7350436750; **Lalbagh Road:** Mohankheda Impex, Ph: 9986198760; **Nagrathpet**: Mahipal Entpr, Ph:41248070;Mahadev Dist, Ph:41514943;Shubham Home Appliances, Ph:9448674150;Bhagawathi Ha, Ph:9663850009;Marudhar Ha, Ph:9945444454;Ramdev Metal, Ph:8618014985; Puckraj & Sons, Ph:9448771841;B M Agencies, Ph:9886617028;Bhagavti Spares, Ph: 9513992993; Rajendra Appl, Ph:9036848312;Pramod Steel, Ph:9844074193;Jainam Marketing, Ph:9036783828;Usha Home Ind, Ph:41519106; Karnataka Metal Ind, Ph:9844515458;Renuka Mktg, Ph:41224591; Pooja Dist, Ph:41234022;**Bvk Iyengar Rd**: Jain Wire Emporium, Ph:9844731913;Crockery World, Ph:9845025420;Manglik Mktng, Ph:9448970501; Shahgulab Chand & Sons, Ph:080-41222095; **Chickpet:** Mahesh Dist, Ph:9916086085; **Vartur:** Kitchen Kettles, Ph:9148994805; **Haraluru:** Maharaja Kitchen World, Ph:9036400829; **Hsr Layout:** Pawan Home Applianes, Ph:9686549035;**Tumkur:**N.R Metal Agency, Ph:08162-275003;Kavitha Kitchen Ware, Ph:9538537166, Ph:Surya Metal Store, Ph:9731351050; Tumkur Trade Centre, Ph:9901432287;Darshan Ha, Ph:9632132567;Sudha Ha, Ph:9964011253;Niketana Trading Co, Ph:9538826927;**Gubbi**:Keerthi Gas Stove, Ph:9686004169;**Tiptur**: Sri Sai Electronics, Ph:8861432166;Srirama-Ent, Ph:9880362018;Kumar And Kumar, Ph:9141609900;**Turuvekere**:Sri Sai Electronics, Ph:8861432166;**Pavgada:**Shivanagere Ha, Ph:9880768236;Meenakshi Appl, Ph:9880360326;**Sira**:Swamy Ent, Ph:9741561491;Lakshmi Steel, Ph:9060434807; Mallikarjuna Home Appliances, Ph:8123206930;**Madhugiri**:Akshya Ha, Ph:9141786066;Vinayaka Store, Ph:9900219291;**Kunigal**:Karnataka Metal Stores, Ph:9448550390;New Karnataka Steel Centre, Ph:08132221548;Karnataka Home Appliances, Ph:8892197645;**Chiknayakakanhalli**:Rhythm Music, Ph:9845194086;Huliyar:Abhi Electronics, Ph:944866833;**Kgf**:Prakash Ha, Ph:9845113454;**Bangarpet**:Kumar Stores, Ph:9845935240;**Gauribidanur:**Sri Raju Hn, Ph:9448249527;Dhighvijaya Elec, Ph: 7204757456;**Kanakapura:**Sri Kabbalamma Ha, Ph:9880835508;**Kolar**:Reddy Ele, Ph:9844472531;Rakesh Ele, Ph:9880634555;Naveenprakash Ha, Ph:9844997787;**Malur**:Srm Elec, Ph:9845445748;Reddy Ele, Ph:9844435121;**Vijayapura**:Rmcity, Ph:9845164990;Reddy Ele, Ph:9900336061;**Devanahalli**:New Sowmya Ele, Ph:9141335210;**Chintamani:**Great India Ele, Ph:9742963551;Lavanya Stores, Ph:9242498294. **For Franchisee Enquiry, Please Contact: Goutham G Ramaswamy, Ph:9663242707.**

ALSO AVAILABALE AT: SPAR Hypermarket

'ಉರಿಯ ಉಯ್ಯಾಲೆ'ಯ ರಂಗತಾಲೀಮು ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

'ಉರಿಯ ಉಯ್ಯಾಲೆ'ಯಲ್ಲಿ ಜೀಕುತ್ತಾ..

ಹೆಣ್ಣನ್ನು ನದಿಗೆ ಹೋಲಿಸುವುದು ಇಂದಿನದ್ದೇನಲ್ಲ. ಕಾಲ ಬದಲಾದರೂ ಹೆಣ್ಣಿನ ಕಷ್ಟಗಳು ಬದಲಾಗಿಲ್ಲ.ಅವನ್ನು ಎದುರಿಸುವ ಹೆಣ್ಣಿನ ಶಕ್ತಿಯೂ ಬದಲಾಗಿಲ್ಲ. ಅಖಂಡ ಸ್ತ್ರೀಶಕ್ತಿಯ ರೂಪಕದಂತಿರುವ ದ್ರೌಪದಿ ಎಂಬ ಕಥಾನಾಯಕಿಯ ಬದುಕು-ಬವಣೆಯನ್ನು ಹೆಣ್ಣುಮಕ್ಕಳೆಲ್ಲ ಸೇರಿ ರಂಗದ ಮೇಲೆ ತೆರೆದಿಡಲಿದ್ದಾರೆ.

ಕೆ.ನರಸಿಂಹಮೂರ್ತಿ

ಎಷ್ಟೋ ವರ್ಷಗಳಿಂದ.. ಹೀಗೇ.. ಒಂದೇ ಸಮ್ನೆ..ತುಂಬಿಕೊಂಡು ಹರೀತಿರೋ ನಮ್ಮ ಯಮುನೆ ಮುದುಕಿ ಆಗ್ತಿದಾಳಾ..?

ಕೃಷ್ಣೆ ಏಕಪ್ಪಾ ಮುದುಕಿ ಆಗ್ಬೇಕು..?

ಏಕಾಗ್ಬೇಕೂ ಅಂತೀನಿ...?

–ಎಚ್.ಎಸ್.ವೆಂಕಟೇಶಮೂರ್ತಿಯವರ ಪುಟ್ಟ ನಾಟಕ, 'ಉರಿಯ ಉಯ್ಯಾಲೆ'ಯ ಏಕೈಕ ಪಾತ್ರ ದ್ರೌಪದಿಯ ಸ್ವಗತ ಇದು.

ನಾಟಕದ ಮೈತುಂಬ ಆವರಿಸಿರುವ ದ್ರೌಪದಿಯ ಇಂಥ ತೀವ್ರ ಸ್ವರೂಪದ ಸ್ವಗತಗಳ ಗುಚ್ಛವನ್ನು ರಂಗಕ್ಕೆ ತರುವ ಉಮ್ಮೇದಿನಲ್ಲಿರುವ ಮೈಸೂರಿನ ಎಂಟು ಮಹಿಳೆಯರು ಈಗ, ಮಹಾಭಾರತದ ಕಾಲವನ್ನು ಮರೆತು, ಈ ಕಾಲದ ಸ್ವಗತಗಳಿಗೆ ಮುಖಾಮುಖಿಯಾಗುತ್ತಿದ್ದಾರೆ. ಕೃತಿಯೊಂದು ಕಾಲಾತೀತವಾಗುವ ಪರಿಯೇ ಹೀಗೆ.

ಹೆಣ್ಣನ್ನು ನದಿಗೆ ಹೋಲಿಸುವುದು ಇಂದಿನದ್ದೇನಲ್ಲ. ಕಾಲ ಬದಲಾದರೂ ಹೆಣ್ಣಿನ ಕಷ್ಟಗಳು ಬದಲಾಗಿಲ್ಲ. ಕಷ್ಟಗಳನ್ನು ಎದುರಿಸುವ ಹೆಣ್ಣಿನ ಶಕ್ತಿಯೂ ಬದಲಾಗಿಲ್ಲ. ಹೀಗಾಗಿಯೇ ದ್ರೌಪದಿ, 'ಯಮುನಾ ನದಿಗೇ ವಯಸ್ಸಾಗುವುದಿಲ್ಲ, ಇನ್ನು ನನಗೇಕೆ ವಯಸ್ಸಾಗಬೇಕು' ಎಂದು ಪ್ರತಿಪಾದಿಸುತ್ತಾಳೆ. ಅವಳ ಪ್ರಕಾರ, 'ಹೆಣ್ಣಿಗೆ ವಯಸ್ಸಾಗುತ್ತೆ ಅಂದ್ರೆ ಒಪ್ತೀನಿ... ಆದ್ರೆ ಪ್ರಾಯ ಹೋಗುತ್ತೆ ಅಂದ್ರೆ ಒಪ್ಪಲ್ಲ..'

ದ್ರೌಪದಿಯ ಈ ಸ್ವಗತವನ್ನು ಒಪ್ಪುವುದು–ಬಿಡುವುದು ಬೇರೆ ವಿಚಾರ. ಆದರೆ ಈ ಸ್ವಗತ ನಾಟಕವು, ಎಂಟು ಮಹಿಳಾ ಪಾತ್ರಧಾರಿಗಳಲ್ಲಿರುವ ಅಸಲಿ ಶಕ್ತಿಯನ್ನು ಅವರಿಗೇ ತೆರೆದು ತೋರಿಸಿದೆ. ಈ ಕಾಲಕ್ಕೆ ಬೇಕಾದ ಹೊಸ ಆಲೋಚನೆ–ಶಕ್ತಿಯನ್ನು ತುಂಬಿದೆ ಎಂಬುದಂತೂ ಸತ್ಯ. ನಾಟಕವನ್ನು ಅಭಿನಯಿಸುತ್ತಿರುವ ಎಂಟು ಮಂದಿ ಪೈಕಿ ಆರು ಗೃಹಿಣಿಯರು. ಇನ್ನಿಬ್ಬರು ಕಾಲೇಜು ವಿದ್ಯಾರ್ಥಿನಿಯರು.

ಮಹಾಭಾರತದಲ್ಲಿ ಯಾರು ಹೆಚ್ಚು ದುಃಖಿಗಳು ಎಂಬ ಚರ್ಚೆ ಎಂದಿಗೂ ಮುಗಿಯದು. 'ಉರಿಯ ಉಯ್ಯಾಲೆ'ಯ ಸ್ವಗತದುದ್ದಕ್ಕೂ, ಸ್ವರ್ಗಾರೋಹಣಕ್ಕೆ ಸಿದ್ಧತೆ ನಡೆಸುವ ರಾಣಿ ದ್ರೌಪದಿಯ ಸುಖ–ದುಃಖಗಳೆರಡೂ ಮುಖಾಮುಖಿಯಾಗುತ್ತವೆ. 'ಈ ಮುಖಾಮುಖಿಯನ್ನು ರಂಗಕ್ಕೆ ತರುವ ಪ್ರಯತ್ನ ಹಳೆಯದಾದರೂ, ನಮ್ಮೊಳಗೆ ಮೂಡುವ ಭಾವ ನವನವೀನ' ಎನ್ನುತ್ತಾರೆ ರಂಗದ ಮೇಲಿನ ದ್ರೌಪದಿ ಪಾತ್ರಧಾರಿಗಳು.

ರಂಗಾಯಣದ ಹಿರಿಯ ಕಲಾವಿದೆ ಬಿ.ಎನ್.ಶಶಿಕಲಾ ಅವರು ಹುಟ್ಟು ಹಾಕಿದ 'ಶಶಿ ಥಿಯೇಟರ್' ಮೂಲಕ ನಾಲ್ಕು ವರ್ಷದ ಹಿಂದೆಯೇ, ಅವರ ನಿರ್ದೇಶನದಲ್ಲೇ, ಇದೇ ನಾಟಕವನ್ನು ರಂಗಕ್ಕೆ ತಂದಾಗ, ಈಗಿನ ಎಂಟು ಮಹಿಳೆಯರ ಪೈಕಿ ಸರಳಾ ನಟರಾಜ, ಜಯಶ್ರೀ ರವಿಕುಮಾರ, ಶೃತಿ ಆರ್. ಎಂ.ವಾಸ್ತುಶಿಲ್ಪಿ ಮತ್ತು ಸುಮಾ ಪ್ರಶಾಂತ್ ದ್ರೌಪದಿಗೆ ಮುಖಾಮುಖಿಯಾಗಿದ್ದರು. ಈಗ ಅವರೊಂದಿಗೆ ಎಚ್.ಎಚ್.ಸುನೀತ, ಕಾವ್ಯ, ಅಕ್ಷಯರಾವ್ ಮತ್ತು ದೀಪ್ತಿ ಶೆಟ್ಟಿ ಜೊತೆಯಾಗಿದ್ದಾರೆ.

'ಬೆಂಕಿ ಮಗಳು' ದ್ರೌಪದಿಯ ಉರಿವ ಮನೋಲೋಕದ ಮಾತುಗಳಿಗೆ ಪಾತ್ರಧಾರಿಗಳಾಗಿರುವುದು, ಈ ಮಹಿಳೆಯರಲ್ಲಿ ಮಾತಿಗೆ ನಿಲುಕದ ಬೆರಗನ್ನಂತೂ ಮೂಡಿಸಿದೆ. ಅದನ್ನು ನುಡಿಗೆ ಹೊರತಾದ ಭಾವನೆ ಎಂದೂ ಹೇಳಬಹುದು. ಆದರೂ ಅವರ ಭಾಷೆ ಸೋಲುವುದಿಲ್ಲ.

'ಮನೆಗಷ್ಟೇ ಸೀಮಿತವಾಗಿದ್ದವರು ಹೊರಗಿನ ಚಟುವಟಿಕೆಗಳಿಗೆ ಓಪನ್ ಅಪ್ ಆಗುವುದು ಬಹಳ ಕಷ್ಟ. ಶಾಲೆ, ಕಾಲೇಜು ಓದಿನ ಬಳಿಕ ಮದುವೆಯಾದ ಕೂಡಲೇ ಬದುಕು ಅಷ್ಟಕ್ಕೇ ನಿಂತುಬಿಡುತ್ತದೆ. ಈಗ ಇದೆಲ್ಲ ಯಾಕೆ? ಇದೆಲ್ಲ ಬೇಕೆ ಎನ್ನಿಸುವುದೂ ಸಹಜ. ಆದರೆ ನಾಟಕಕ್ಕೆ ಇಳಿದೆವು ನೋಡಿ. ನಮಗೆ ವಯಸ್ಸಾಯ್ತು ಅನ್ನಿಸಿಲ್ಲ. ಮನೆ ಜವಾಬ್ದಾರಿಯ ಎಲ್ಲ ಅಡೆ–ತಡೆ ತೆಗೆದುಹಾಕಿ ನಾಟಕ ಮಾಡುತ್ತಿದ್ದಂತೆ ನಮ್ಮ ಒಳಗಿನ ಶಕ್ತಿ ಗೊತ್ತಾಯಿತು' ಎಂದು ಜಯಶ್ರೀ ಅವರು ಹೇಳುತ್ತಿದ್ದರೆ, ಅವರ ಮಾತಿನ ಬೆಳಕು ಉಳಿದವರ ಕಣ್ಣುಗಳಲ್ಲಿ ಹೊಳೆಯುತ್ತಿತ್ತು.

'ಸ್ಟೇಜ್ ಮೇಲೆ ನಿಂತು ಆಡಿಯನ್ಸ್ ಕಡೆಗೆ ನೋಡಿ ಅಭಿನಯಿಸಲು ಶಕ್ತಿ ಬೇಕು. ಅದಕ್ಕೆ, ಒಬ್ಬರನ್ನೊಬ್ಬರು ನೋಡಿ ಧೈರ್ಯ ತಂದುಕೊಂಡೆವು. ಎಷ್ಟೇ ಆದರೂ, ಈ ನಾಟಕ ನಮ್ಮ ಹೊಟ್ಟೆಪಾಡಿಗಲ್ಲ. ಬದಲಿಗೆ, ನಮ್ಮ ಆಸಕ್ತಿ, ಅಭಿರುಚಿಗಳ ಪೋಷಣೆಗೆ ಎಂಬುದೇ ನಮ್ಮಲ್ಲಿ ಹುರುಪು ತುಂಬುತ್ತಿತ್ತು' ಎಂಬುದು ಶೃತಿಯವರ ನೆನಪು.

'ದ್ರೌಪದಿ ಮಹಾಭಾರತದ ಪಾತ್ರವಾಗಿರಬಹುದು. ಆದರೆ ಅವಳ ಬದುಕಿನಲ್ಲಿ ಆದದ್ದು ಇಂದಿನ ಮಹಿಳೆಯರ ಬದುಕಿನಲ್ಲೂ ನಡೆಯುತ್ತಿರುತ್ತದೆ. ಇವತ್ತಿನದು ಉಪಪತ್ಯವಷ್ಟೇ' ಎಂದು ಕಾವ್ಯ ಈ ಕಾಲಕ್ಕಿಳಿದರು. ಅವರು, ಕ್ಲಾಸಿಕ್ ಪತ್ಯಗಳಾದ 'ಈಡಿಪಸ್', 'ಚಂದ್ರಗಿರಿಯ ತೀರದಲ್ಲಿ', 'ಹಯವದನ' ನಾಟಕದಲ್ಲಿ ಅಭಿನಯಿಸಿದ ಅನುಭವವುಳ್ಳವರು. ಅಕ್ಷಯ ಹೇಳುತ್ತಾರೆ: ನಾಟಕವು ಹಳೆಯ ಕಾಲದಿಂದ ಹೊಸ ಕಾಲಕ್ಕೆ ಪಾಠ.

ದ್ರೌಪದಿಯ ವರ್ಣರಂಜಿತ, ವೈವಿಧ್ಯಮಯ, ಘನ–ಗಂಭೀರ ವ್ಯಕ್ತಿತ್ವದ ನೆರಳುಗಳಂತೆ ಕಾಣುವ ಈ ಮಹಿಳೆಯರು ಕೇಳುವುದು ಇಷ್ಟೇ: ದ್ರೌಪದಿ ರಾಣಿಯಾಗಿದ್ದಳು. ಅವಳಿಗೆ ಎಲ್ಲವೂ ಇತ್ತು. ಆದರೆ ನೆಮ್ಮದಿ ಇತ್ತಾ? ಆಸ್ತಿ–ಅಂತಸ್ತಿನಲ್ಲಿ ವ್ಯತ್ಯಾಸವಿದ್ದರೂ ಇವತ್ತಿನ ಹೆಣ್ಣು ಮಕ್ಕಳಿಗೂ ನೆಮ್ಮದಿ ಇದೆಯಾ? ಅಂದು–ಇಂದಿನ ಪರಿಸ್ಥಿತಿ ಬೇರೆ ಇಲ್ಲ.

ಸ್ವರ್ಗಾರೋಹಣದ ಹಿಂದಿನ ರಾತ್ರಿ ದ್ರೌಪದಿ ತನ್ನ ಅಂತಃಪುರದಲ್ಲಿ ಏರ್ಪಡಿಸಿಕೊಳ್ಳುವ ಸ್ವಗತ–ಸಂವಾದಕ್ಕೆ ಜೀವ ತುಂಬುವ ತಾಲೀಮಿನಲ್ಲಿ ಈ ಮಹಿಳೆಯರು ತಮ್ಮ ಬದುಕು–ಬವಣೆಯ ಕುರಿತು ಹೊಸ ವಿಶ್ವಾಸದ ವ್ಯಾಖ್ಯಾನವನ್ನೇ ರಚಿಸಿಕೊಳ್ಳುತ್ತಿದ್ದಾರೆ.

ಜೂ.10,11ಪ್ರದರ್ಶನ

ರಂಗಾಯಣದ ಹಿರಿಯ ಕಲಾವಿದೆ ಬಿ.ಎನ್. ಶಶಿಕಲಾ ಅವರು ತಮ್ಮ ಪತಿ ಬಸವರಾಜ ಕೊಡಗೆ ಅವರ 21ನೇ ವರ್ಷದ ನೆನಪಿಗೆ ಪ್ರಸ್ತುತಪಡಿಸಲಿರುವ 'ಉರಿಯ ಉಯ್ಯಾಲೆ' ನಾಟಕದ ಪ್ರದರ್ಶನ ಮೈಸೂರಿನ ರಮಾಬಾಯಿ ಗೋವಿಂದ ರಂಗಮಂದಿರದಲ್ಲಿ ಜೂನ್ 10 ಮತ್ತು 11ರಂದು ನಡೆಯಲಿದೆ



ಬಿ.ಎನ್.ಶಶಿಕಲಾ

ನೆನಪಿನ ಮರಕ್ಕೆ ಬೊಗಸೆ ನೀರು

21 ವರ್ಷದ ಹಿಂದೆ ಅಗಲಿದ ಪತಿ ಬಸವರಾಜ ಕೊಡಗೆಯವರ ನೆನಪಿನಲ್ಲಿ ಇದುವರೆಗೆ ಹಮ್ಮಿಕೊಂಡ ರಂಗಚಟುವಟಿಕೆಗಳ ಕುರಿತ ಟಿಪ್ಪಣಿಗೆ ರಂಗಾಯಣದ ಹಿರಿಯ ಕಲಾವಿದೆ ಬಿ.ಎನ್. ಶಶಿಕಲಾ ಅವರು ಕೊಟ್ಟಿರುವ ತಲೆಬರಹ ಇದು. ಪತಿಯೆಡೆಗಿನ ಅವರ ಪ್ರೀತಿ–ಬದ್ಧತೆ ಸಾರಲು ಇದೊಂದೇ ಮಾತು ಸಾಕು.

ಪ್ರತಿ ವರ್ಷವೂ ಅವರು ಪತಿಯ ನೆನಪಿನಲ್ಲಿ ರಂಗ ಚಟುವಟಿಕೆಗಳನ್ನು ಆಯೋಜಿಸಿದ್ದಾರೆ. ಏಕವ್ಯಕ್ತಿ ಪ್ರದರ್ಶನಗಳನ್ನೂ ನೀಡಿದ್ದಾರೆ. ರಂಗಭೂಮಿಯ ಹಲವು ದಿಗ್ಗಜರ ಸಹಯೋಗದಲ್ಲಿ ನಾಟಕಗಳ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಸಿನಿಮಾ ನಿರ್ಮಿಸಿದ್ದಾರೆ.

ಅವರದ್ದೂ 'ಉರಿಯ ಉಯ್ಯಾಲೆ'ಯಂಥ ಬದುಕೇ. ಅದಕ್ಕೇ ಈ ನಾಟಕದ ಪ್ರದರ್ಶನ ಇದುವರೆಗೆ ಹತ್ತು ಬಾರಿ ನಡೆದಿದೆ. ಹನ್ನೊಂದನೆಯ ಪ್ರಯೋಗದ ವಿಶೇಷವೆಂದರೆ, ಅವರು ತೆರೆಯ ಹಿಂದೆ, ಉಳಿದವರೆಲ್ಲ ಮುಂದೆ..

ಫಟಾಫಟ್ ಮಶ್ರೂಮ್ ಖಾದ್ಯಗಳು..

ಅಣಬೆ ಅಥವಾ ಮಶ್ರೂಮ್‌ನಿಂದ ಸೂಪು, ಸಾರು, ದೋಸೆ.. ಹೀಗೆ ವಿವಿಧ ರೀತಿಯ ಖಾದ್ಯಗಳನ್ನು ತಯಾರಿಸಬಹುದು. ಸುಲಭವಾಗಿ ಹಾಗೂ ಕಡಿಮೆ ಸಮಯದಲ್ಲಿ ಫಟಾಫಟ್ ಅಂತ ತಯಾರಿಸಬಹುದಾದ ಮೂರು ಮಶ್ರೂಮ್ ಖಾದ್ಯಗಳ ರೆಸಿಪಿಗಳನ್ನು ಇಲ್ಲಿ ಪರಿಚಯಿಸಿದ್ದಾರೆ ದೀಪಕ್ ಗೌಡ.

ಮಶ್ರೂಮ್ ಬಿರಿಯಾನಿ

ಬೇಕಾಗುವ ಸಾಮಗ್ರಿಗಳು: ಮಶ್ರೂಮ್ –ಎರಡು ಪ್ಯಾಕೆಟ್ (400 ಗ್ರಾಂ), ಅಕ್ಕಿ –ಅರ್ಧ ಕೆ.ಜಿ, ಸ್ಟಾರ್ ಮಸಾಲ ಹೂವು– 2, ಮರಾಠಿ ಮೊಗ್ಗು, ಶುಂಠಿ - ಬೆಳ್ಳುಳ್ಳಿ ಪೇಸ್ಟ್, ಕೊತ್ತಂಬರಿ ಸೊಪ್ಪು, ಪುದಿನ ಸೊಪ್ಪು, ಹಸಿ ಮೆಣಸಿನಕಾಯಿ – 10, ಕಾಳುಮೆಣಸು – 20, ಏಲಕ್ಕಿ – 2, ಲವಂಗ – 5, ಚಕ್ಕೆ – 2 ಇಂಚು ಉದ್ದದ್ದು, ಪಲಾವ್ ಎಲೆ – 2, ಮರಾಠಿ ಮೊಗ್ಗು – 2, ಕಸ್ತೂರಿ ಮೆಂತ್ಯ –ಒಂದು ಚಮಚ, ಈರುಳ್ಳಿ – 2, ಟೊಮೆಟೊ – 1, ಮೊಸರು –ನಾಲ್ಕು ಟೇಬಲ್ ಸ್ಪೂನ್, ಎಣ್ಣೆ– ನಾಲ್ಕು ಚಮಚ, ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಸುವ ವಿಧಾನ: ಈರುಳ್ಳಿ, ಹಸಿಮೆಣಸಿನಕಾಯಿ, ಟೊಮೆಟೊ, ಕೊತ್ತಂಬರಿ ಮತ್ತು ಪುದಿನ ಕತ್ತರಿಸಿಟ್ಟುಕೊಳ್ಳಿ. ಚೆನ್ನಾಗಿ ತೊಳೆದ ಮಶ್ರೂಮ್, ನೀರು, ಅರಿಸಿನ ಪುಡಿ, ಸ್ವಲ್ಪ ಉಪ್ಪನ್ನು ಬೆರೆಸಿ ಕುಕರ್‌ನಲ್ಲಿ ಚೆನ್ನಾಗಿ ಬೇಯಿಸಿಕೊಳ್ಳಿ. ಅಗಲವಾದ ತೆರೆದ ಪಾತ್ರೆಗೆ ಎಣ್ಣೆ ಮತ್ತು ತುಪ್ಪ ಸಮ ಪ್ರಮಾಣದಲ್ಲಿ ಹಾಕಿ. ಅದು ಬಿಸಿಯಾದ (ಕಾದ) ನಂತರ ಸಾಸಿವೆ ಸಿಡಿಸಿ ಚಕ್ಕೆ, ಲವಂಗ, ಪತ್ರೆ, ಪಲಾವ್ ಎಲೆ, ಮರಾಠಿ ಮೊಗ್ಗು, ಹಸಿ ಮೆಣಸಿನಕಾಯಿ, ಈರುಳ್ಳಿ ಹಾಕಿ ಕಂದು ಬಣ್ಣ ಬರುವರೆಗೆ ಹುರಿದುಕೊಳ್ಳಿ. ನಂತರ ಬೇಯಿಸಿದ ಮಶ್ರೂಮ್, ಶುಂಠಿ - ಬೆಳ್ಳುಳ್ಳಿ ಪೇಸ್ಟ್, ಉಪ್ಪು, ಬಿರಿಯಾನಿ ಮಸಾಲೆ, ಖಾರದ ಪುಡಿ, ದನಿಯಾ ಪುಡಿ, ಅರಿಸಿನ ಪುಡಿ, ರುಬ್ಬಿದ ಕೊತ್ತಂಬರಿ ಮತ್ತು ಪುದಿನ, 2 ಕಪ್ ಮೊಸರು ಹಾಕಿ ಹಸಿ ವಾಸನೆ ಹೋಗುವತನಕ ಹುರಿದುಕೊಳ್ಳಿ. ನಂತರ ಟೊಮೆಟೊ ಹಾಕಿ ಮತ್ತೆ ಹುರಿಯಿರಿ. ಎಣ್ಣೆ ಬಿಡುವವರೆಗೂ ಕುದಿಸಿ. ಅಗತ್ಯಕ್ಕೆ ತಕ್ಕಷ್ಟು ನೀರನ್ನು ಬಳಸಿಕೊಳ್ಳಿ. ಅಕ್ಕಿಯನ್ನು ಈ ಮಿಶ್ರಣಕ್ಕೆ ಸೇರಿಸಿ ರುಚಿ ನೋಡಿ ಉಪ್ಪು, ಖಾರ ಕಡಿಮೆಯಿದ್ದನ್ನು ಸೇರಿಸಿ ಮುಚ್ಚಳ ಮುಚ್ಚಿ. ಕುಕರ್ ಅನ್ನು ಬೇಯಲು ಇಡಿ. 15 ರಿಂದ 20 ನಿಮಿಷದ ನಂತರ ಮುಚ್ಚಳ ತೆಗೆದು ಚೆನ್ನಾಗಿ ಮಿಶ್ರಣ ಮಾಡಿ. ಈಗ ಘಮ್ಮೆನ್ನುವ ಮಶ್ರೂಮ್ ಬಿರಿಯಾನಿ ಸೇವಿಸಲು ಸಿದ್ಧ.

ಮಶ್ರೂಮ್ ಕಬಾಬ್

ಬೇಕಾಗುವ ಸಾಮಗ್ರಿಗಳು: ಮಶ್ರೂಮ್ – ಒಂದು ಪ್ಯಾಕೆಟ್ (200 ಗ್ರಾಂ), ಕಬಾಬ್ ಪೌಡರ್ –ಒಂದು ಪ್ಯಾಕೆಟ್, ಶುಂಠಿ– ಬೆಳ್ಳುಳ್ಳಿ ಪೇಸ್ಟ್, ಖಾರದಪುಡಿ –ಅರ್ಧ ಚಮಚ, ಚಿಕನ್ ಮಸಾಲ– ಅರ್ಧ ಚಮಚ, ಮೊಟ್ಟೆ –ಒಂದು, ರುಚಿಗೆ ತಕ್ಕಷ್ಟು ಉಪ್ಪು.ಸ್ವಲ್ಪ ಎಣ್ಣೆ ಸ್ವಲ್ಪ ನೀರು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಬೇಕು ಬಳಿಕ ಇದಕ್ಕೆ ಮಶ್ರೂಮ್ ಸೇರಿಸಿ ಮಸಾಲೆ ಹಿಡಿಯುವವರೆಗೆ ಕೈಯಾಡಿಸಿ. 10ರಿಂದ 15 ನಿಮಿಷಗಳ ಕಾಲ ನೆನೆಸಿಡಬೇಕು.

ತಯಾರಿಸುವ ವಿಧಾನ: ಪಾತ್ರೆಯಲ್ಲಿ ಎಣ್ಣೆ ಹಾಕಿ ಮಧ್ಯಮ ಉರಿಯಲ್ಲಿ ಬಿಸಿ ಮಾಡಿ. ಅದಕ್ಕೆ ನೆನೆಸಿಟ್ಟಿದ್ದ ಮಶ್ರೂಮ್ ಹಾಕಿ. ಅದು ಕೆಂಪು ಬಣ್ಣಕ್ಕೆ ತಿರುಗುವವರೆಗೂ ಬೇಯಿಸಬೇಕು. ಈಗ ಬಿಸಿ ಬಿಸಿಯಾದ ಅಣಬೆ ಕಬಾಬ್ ರೆಡಿಯಾಗಿದೆ.

ಮಶ್ರೂಮ್ ಗ್ರೇವಿ

ಬೇಕಾಗುವ ಸಾಮಗ್ರಿಗಳು: ಮಶ್ರೂಮ್ –ಎರಡು ಪ್ಯಾಕೆಟ್, ಈರುಳ್ಳಿ –2, ಟೊಮೆಟೊ– 4, ದನಿಯಾ ಪುಡಿ– ಎರಡು ಚಮಚ, ಗರಂ ಮಸಾಲ –ಒಂದು ಚಮಚ, ಅರಿಸಿನ ಪುಡಿ– ಒಂದು ಚಮಚ, ಶುಂಠಿ -ಬೆಳ್ಳುಳ್ಳಿ ಪೇಸ್ಟ್, ಕಸ್ತೂರಿ ಮೆಂತ್ಯ –ಒಂದು ಚಮಚ, ಸೋಂಪು ಕಾಳು –ಒಂದು ಚಮಚ ಚಕ್ಕೆ –2, ಲವಂಗ –2, ಸ್ಟಾರ್ ಮಸಾಲ ಹೂ– 2, ಅನಾನಸ್ ಮೊಗ್ಗು 2, ಏಲಕ್ಕಿ –2, ಎಣ್ಣೆ ನಾಲ್ಕು ಟೇಬಲ್ ಸ್ಪೂನ್, ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಸುವ ವಿಧಾನ: ಪಾತ್ರೆಯಲ್ಲಿ ಎಣ್ಣೆ ಹಾಕಿ ಮಧ್ಯಮ ಉರಿಯಲ್ಲಿ ಬಿಸಿ ಮಾಡಿಕೊಳ್ಳಬೇಕು. ಕಸ್ತೂರಿ ಮೆಂತ್ಯ, ಸೋಂಕು ಕಾಳು, ಚಕ್ಕೆ -ಲವಂಗ, ಸ್ಟಾರ್ ಮಸಾಲ ಹೂ, ಅನಾನಸ್ ಮೊಗ್ಗು, ಏಲಕ್ಕಿ ಸೇರಿಸಿ ಮಿಶ್ರಣ ಮಾಡಬೇಕು. ಬಳಿಕ ಹೆಚ್ಚಿದ ಈರುಳ್ಳಿ ಹಾಕಿ ಕಂದು ಬಣ್ಣ ಬರುವವರೆಗೆ ಚೆನ್ನಾಗಿ ಫ್ರೈ ಮಾಡಿಕೊಳ್ಳಬೇಕು. ಬಳಿಕ ಟೊಮೆಟೊ, ಶುಂಠಿ -ಬೆಳ್ಳುಳ್ಳಿ ಪೇಸ್ಟ್ ಹಾಗೂ ಸ್ವಲ್ಪ ಉಪ್ಪು ಹಾಕಿಕೊಂಡು ಬೆರೆಸಿಕೊಡಬೇಕು. ನಂತರ ಮಸಾಲ ಪುಡಿಗಳನ್ನು ಸೇರಿಸಿ ಬೆರೆಸಿದ ನಂತರ ನೀರನ್ನು ಹಾಕಿಕೊಂಡು ಬಿಸಿಯಾಗಲು ಬಿಡಬೇಕು. ಇದಕ್ಕೆ ಕತ್ತರಿಸಿದ ಮಶ್ರೂಮ್ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. 10 ರಿಂದ 15 ನಿಮಿಷ ಬೇಯಲು ಬಿಡಿ. ಕೊನೆಯಲ್ಲಿ ಕೊತ್ತಂಬರಿ ಸೊಪ್ಪನ್ನು ಉದುರಿಸಿ. ಈಗ ಮಶ್ರೂಮ್ ಗ್ರೇವಿ ಸಿದ್ಧ. ಚಪಾತಿ, ರೊಟ್ಟಿ ಅಷ್ಟೇ ಅಲ್ಲ, ಯಾವುದೇ ಖಾದ್ಯಗಳಿಗೂ ನೆಂಚಿಕೊಳ್ಳಲು ಚೆನ್ನಾಗಿರುತ್ತದೆ.

ಆತ್ಮಹತ್ಯೆಗೆ ಹಲವು ಕಾರಣ

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

ಇತ್ತೀಚೆಗೆ ಐಐಟಿಯಂತಹ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಂತಹ ಸುದ್ದಿಗಳು ವರದಿಯಾಗುತ್ತಿವೆ. ಆದರೆ ನಮ್ಮ ಸರ್ಕಾರಗಳು ಮತ್ತು ಸಮಾಜ ಇದಕ್ಕೆ ಪ್ರತಿಕ್ರಿಯಿಸುತ್ತಿರುವ ರೀತಿಯನ್ನು ನೋಡಿದರೆ ಸಮಸ್ಯೆಯ ತ್ರೀವ್ರತೆ ಯಾರೂ ಗ್ರಹಿಸಿದಂತೆ ಕಾಣಿಸುವುದಿಲ್ಲ. ಬದಲಿಗೆ, ಕೇವಲ ಅರ್ಥಹೀನ ಶಬ್ದಗಳಿಂದ ಧೈರ್ಯ ಹೇಳುವವರೇ ಹೆಚ್ಚಾಗಿದ್ದಾರೆ. ಕೆಲವರಂತೂ 'ಆತ್ಮಹತ್ಯೆಯಂತಹ ಹೇಡಿತನದ ಪ್ರಯತ್ನಕ್ಕೆ ಕೈಹಾಕಬೇಡಿ' ಎಂದು ಕಳಕಳಿಯ ಮನವಿ ಮಾಡುವ ಭರದಲ್ಲಿ ಆತ್ಮಹತ್ಯಗೆ ಶರಣಾಗುತ್ತಿರುವವರನ್ನು ಅವಮಾನಿಸುತ್ತಿರುತ್ತಾರೆ. ಈ ದೃಷ್ಟಿಕೋನದಿಂದ ಪ್ರಾಮಾಣಿಕ ಪ್ರಯತ್ನದಿಂದ ವಿಫಲನಾಗುವ ವಿದ್ಯಾರ್ಥಿ ದುರ್ಬಲನಾದರೆ ಮೋಸದಿಂದ ಸಫಲನಾಗುವವನು ಧೈರ್ಯವಂತ ಎನ್ನಿಸಿಕೊಳ್ಳುತ್ತಾನೆ !



ಆತ್ಮಹತ್ಯೆಗೆ ಕೇವಲ ವೈಯುಕ್ತಿಕವಾದ ಮಾನಸಿಕ ದೌರ್ಬಲ್ಯ ಕಾರಣ ಎನ್ನುವುದು ಸತ್ಯವಲ್ಲ. ಜನಸಮುದಾಯದ ದೈಹಿಕ ಮಾನಸಿಕ ಆರೋಗ್ಯದ ಮೇಲೆ ಒಟ್ಟಾರೆ ಸಾಮಾಜಿಕ ರಾಜಕೀಯ ಸಾಂಸ್ಕೃತಿಕ ಆರ್ಥಿಕ ಪರಿಸ್ಥಿತಿಗಳೆಲ್ಲದರ ಪ್ರಭಾವ ಇದ್ದೇ ಇರುತ್ತದೆ. ವ್ಯಕ್ತಿಯನ್ನು ಸಮಾಜದಿಂದ ಹೊರತಾಗಿಸಿ ನೋಡುವುದು ಸಾಧ್ಯವೇ ಇಲ್ಲ. ಹಾಗಾಗಿ ಅಂಕಗಳಿಕೆಯಲ್ಲಿ ವಿಫಲನಾಗುವ ವಿದ್ಯಾರ್ಥಿ ಅಥವಾ ಸಾಲಬಾಧೆಯಿಂದ ನರಳುತ್ತಿರುವ ರೈತ ಆತ್ಮಹತ್ಯೆ ಮಾಡಿಕೊಂಡರೆ ಅದರಲ್ಲಿ ಸಾಮಾಜಿಕ ಆರ್ಥಿಕ ಶೈಕ್ಷಣಿಕ ಮುಂತಾದ ವ್ಯವಸ್ಥೆಯ ಪಾಲು ಇರಲೇಬೇಕು. ವ್ಯವಸ್ಥೆ ಹೇರುವ ಒತ್ತಡಗಳನ್ನು ಸಹಿಸಲಾಗದೆ ಇರುವುದಕ್ಕೆ ವೈಯುಕ್ತಿಕ ಮಾನಸಿಕ ಅಂಶಗಳು ಕಾರಣವಾಗಬಹುದು.

ಒಟ್ಟಾರೆ ಶೈಕ್ಷಣಿಕ ವ್ಯವಸ್ಥೆ, ಹಣ ಸಾಧನೆಗಳನ್ನು ವೈಭವೀಕರಿಸುವ ನಾಗರಿಕತೆ, ಮಕ್ಕಳ ಯಶಸ್ಸಿಗಾಗಿ ಆತಂಕದಲ್ಲಿರುವ ಪೋಷಕರು.. ಇಂಥವೆಲ್ಲವೂ ಮಕ್ಕಳ ಮೇಲೆ ಪ್ರಭಾವ ಬೀರಲೇಬೇಕಲ್ಲವೇ? ಇವು ಬೆಳವಣಿಗೆಯ ಹಂತದಲ್ಲಿರುವ ಮಕ್ಕಳ ಮಿದುಳು ನರಮಂಡಲಗಳ ಮೇಲೆ ಹಾಕುವ ಒತ್ತಡ ಅಗಾಧವಾಗಿರುತ್ತದೆ. ಇದನ್ನು ನಿಭಾಯಿಸಲು ಸೂಕ್ತ ಬೆಂಬಲ ಸಿಗದಿದ್ದಾಗ ಅವರು ಆತ್ಮಗೌರವವನ್ನು ಕಳೆದುಕೊಂಡು ಸುತ್ತಲಿನ ಪರಿಸ್ಥಿತಿಗಳಿಂದ ಸಂಪರ್ಕವನ್ನು ಕಡಿದುಕೊಳ್ಳುತ್ತಾ ಹೋಗುತ್ತಾರೆ. ಅವರ ಒಂಟಿತನ ಹತಾಶೆಗಳು ಹೆಚ್ಚುತ್ತಾ ಹೋಗುತ್ತವೆ. ಎಲ್ಲರಿಂದ ಭಾವನಾತ್ಮಕವಾಗಿ ದೂರಹೋದಂತೆ ಯಾವ ಸಂಬಂಧವೂ ಅರ್ಥಪೂರ್ಣ ಎನ್ನಿಸದೆ ನನ್ನ ಬದುಕು ನಿಷ್ಪ್ರಯೋಜಕ ಎನ್ನುವ ಮನಸ್ಥಿತಿಗೆ ಬರುತ್ತಾರೆ. ತಮ್ಮದೇ ಕಣ್ಣುಗಳಲ್ಲಿ ಕುಸಿಯುತ್ತಾ ಹೋದಾಗ ಯಾವುದೇ ಧೈರ್ಯದ ಮಾತುಗಳು ಆಶ್ವಾಸನೆಗಳು ಅವರ ಅಂತರಂಗ ವನ್ನು ತಲುಪುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಬೇಕಿರುವುದು ಅವರ ನೋವು ತಲ್ಲಣಗಳನ್ನು ಕೇಳಬಲ್ಲ ಅರ್ಥಮಾಡಿಕೊಳ್ಳಬಲ್ಲ ಮತ್ತು ಮೌಲ್ಯಮಾಪನೆ ಮಾಡದೆ ಸ್ಪಂದಿಸಬಲ್ಲ ಒಂದು ಆತ್ಮೀಯ ಸಂಬಂಧ. ಕುಟುಂಬದವರಿಗೆ ಇದು ಸಾಧ್ಯವಾಗದಿದ್ದಾಗ ಒಬ್ಬ ಮನೋಚಿಕಿತ್ಸಕ ತಾತ್ಕಾಲಿಕವಾಗಿಯಾದರೂ ಇಂತಹ ಆತ್ಮೀಯತೆಯ ಅನುಭವವನ್ನು ನೀಡಿ ನಿಧಾನವಾಗಿ ವ್ಯಕ್ತಿಯ ಮಾನಸಿಕ ಏರುಪೇರುಗಳನ್ನು ಶಾಂತಗೊಳಿಸಬಹುದು. ಕೆಲವೊಮ್ಮೆ ಮನೋವೈದ್ಯರ ಸಹಾಯವೂ ಬೇಕಾಗಬಹುದು.

ಕುಟುಂಬದವರೇನು ಮಾಡಬಹುದು?

1 ಮಕ್ಕಳೊಡನೆ ಭಾವನಾತ್ಮಕ ಬಾಂಧವ್ಯ ಉಳಿಸಿಕೊಳ್ಳುವುದು ಪೋಷಕರ ಪ್ರಥಮ ಆದ್ಯತೆಯಾಗಬೇಕು. ಯಾವುದೇ ಸಂದರ್ಭದಲ್ಲಿಯೂ ಅಂತಹ ಬಾಂಧವ್ಯಕ್ಕೆ ಹಾನಿಯಾಗದಂತೆ ಎಚ್ಚರವಿರಬೇಕು. ಮಕ್ಕಳಿಂದ ಸಾಧನೆ ಯಶಸ್ಸನ್ನು ನಿರೀಕ್ಷಿಸುವುದು ಸಹಜ. ಅವು ಸಾಧ್ಯವಾಗದಿದ್ದರೂ ನಮ್ಮ ಪ್ರೀತಿಯ ಕೊರತೆಯಾಗುವುದಿಲ್ಲ ಎನ್ನುವ ಸಂದೇಶ ಮಕ್ಕಳಿಗೆ ತಲುಪಬೇಕು.

2 ಪೋಷಕರು ಮೊದಲು ತಮ್ಮ ಆತಂಕ ಒತ್ತಡಗಳನ್ನು ನಿಭಾಯಿಸುವುದನ್ನು ಕಲಿಯಬೇಕು. ತಮ್ಮ ನಿರೀಕ್ಷೆಗಳ ಭಾರವನ್ನು ಮಕ್ಕಳ ಮೇಲೆ ಹಾಕಬಾರದು. ಯಾವುದೇ ಸಂದರ್ಭದಲ್ಲಿಯೂ ನಿಮ್ಮ ಬೆಂಬಲಕ್ಕೆ ನಾವಿದ್ದೇವೆ ಎನ್ನುವ ಅನುಭವ ಮಕ್ಕಳಲ್ಲಿ ಮೂಡದಿದ್ದರೆ ಸಂಬಂಧಗಳ ಸಂಪರ್ಕದ ಕೊಂಡಿ ದುರ್ಬಲವಾಗುತ್ತದೆ.

3 ಮಕ್ಕಳಿಗೆ ಉಪದೇಶ ಬುದ್ಧಿವಾದ ಸಲಹೆಗಳನ್ನು ಕೊಡಲೇಬೇಕಾಗಿಲ್ಲ. ಅವರ ನೋವು ಕಷ್ಟ ಹಿಂಜರಿಕೆಗಳ ಕುರಿತು ಮಾತನಾಡಲು ಉತ್ತೇಜಿಸಬೇಕು. ತಮ್ಮ ಮನದಾಳದ ಮಾತುಗಳನ್ನು ಆಡಿದರೆ ಪೋಷಕರು ತಮ್ಮನ್ನು ದೂಷಿಸಬಹುದು ಅಥವಾ ಪೋಷಕರು ಆತಂಕಗೊಳ್ಳಬಹುದು, ಕೋಪಿಸಿಕೊಳ್ಳಬಹುದು ಎನ್ನಿಸುವ ವಾತಾವರಣವಿದ್ದರೆ ಸಂಬಂಧಗಳ ನಡುವೆ ಸಂವಹನ ಸಹಜವಾಗಿ ನಡೆಯುವುದಿಲ್ಲ.

4 ಸಹಾಯದ ಅಗತ್ಯವಿದೆ ಎನ್ನಿಸಿದರೆ ತಕ್ಷಣ ಮನೋಚಿಕಿತ್ಸಕರನ್ನು ಸಂಪರ್ಕಿಸಬೇಕು. ಆತ್ಮಹತ್ಯೆಯ ತೀವ್ರ ಒತ್ತಡಗಳಿದ್ದಾಗ ತಾತ್ಕಾಲಿಕವಾಗಿ ಔಷಧಗಳ ಅಗತ್ಯವೂ ಬೀಳಬಹುದು. ಆತ್ಮಹತ್ಯೆಯ ಪ್ರಯತ್ನದ ಕಳಂಕವನ್ನು ತಪ್ಪಿಸಲು ಸಹಾಯ ಪಡೆಯಲು ಹಿಂಜರಿದರೆ ಅಪಾಯದ ಸಾಧ್ಯತೆಗಳು ಹೆಚ್ಚಾಗುತ್ತವೆ.

5 ಆಪ್ತಸಮಾಲೋಚಕರ ಸಹಾಯ ಪಡೆಯುವಾಗ ಪೋಷಕರು ಕೂಡ ಅದರಲ್ಲಿ ಭಾಗವಹಿಸಬೇಕು. ಮಕ್ಕಳಲ್ಲಿಯೇ ದೊಡ್ಡ ತೊಂದರೆಯಿದೆ ಎನ್ನುವ ಮನೋಭಾವದಿಂದ ಅವರ ಮೇಲಿನ ಒತ್ತಡ ಹೆಚ್ಚಾಗುತ್ತದೆ. ತಮ್ಮ ಮಾತು ವರ್ತನೆಗಳು ಮಕ್ಕಳ ಮೇಲೆ ಬೀರಿರಬಹುದಾದ ಪರಿಣಾಮಗಳ ಕುರಿತು ಚರ್ಚಿಸಲು ಪೋಷಕರು ಸಿದ್ಧರಾಗಿರಬೇಕು.

ಅಂಕಿಅಂಶಗಳ ಆಧಾರದ ಮೇಲೆ ಆತ್ಮಹತ್ಯೆಯ ಕಾರಣಗಳನ್ನು ನಿಖರವಾಗಿ ಪಟ್ಟಿಮಾಡಲಾಗುವುದಿಲ್ಲ. ಎಲ್ಲಾ ಆತ್ಮಹತ್ಯೆಗಳ ಹಿಂದೆ ನಿಧಾನವಾಗಿ ಮಡುವುಗಟ್ಟುತ್ತಾ ಹೋಗುವ ಹಲವಾರು ಕಾರಣಗಳಿರುತ್ತವೆ. ದುರ್ಘಟನೆಗೆ ಕೊನೆಯಲ್ಲಿ ಕಾರಣವಾಗುವ ಒಂದೇ ಅಂಶದ ಆಧಾರದ ಮೇಲೆ ಏನನ್ನೂ ನಿರ್ಧರಿಸಲಾಗುವುದಿಲ್ಲ. ಕೆಲವೊಮ್ಮೆ ತಜ್ಞರು ಆತ್ಮಹತ್ಯೆಯ ಕಾರಣಗಳಲ್ಲಿ ಕೆಲವನ್ನು ಕ್ಷುಲ್ಲಕ ಎನ್ನುತ್ತಾರೆ. ಇದೂ ಕೂಡ ವ್ಯಕ್ತಿಯನ್ನು ಮಾನಸಿಕವಾಗಿ ದುರ್ಬಲನಾದವನು ಎಂದು ಅವಮಾನಿಸುವ ಹೇಳಿಕೆಯಾಗುತ್ತದೆ. ಶೇ 90 ಅಂಕಗಳನ್ನು ಗಳಿಸಿಯೂ ಇನ್ನೂ ಹೆಚ್ಚಿಗೆ ಪಡೆಯಲಾಗದ್ದಕ್ಕೆ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳಬಹುದು. ಆದರೆ ಅನುತ್ತೀರ್ಣನಾಗಿರುವ ವಿದ್ಯಾರ್ಥಿ ವೈಫಲ್ಯವನ್ನು ಸಹಜವಾಗಿ ಸ್ವೀಕರಿಸಬಹುದು. ಇದರ ಅರ್ಥವೇನೆಂದರೆ ಹೊರಗಡೆ ನಡೆಯುವ ಘಟನೆಗಳು ಮುಖ್ಯವಲ್ಲ, ಆದರೆ ಆ ಘಟನೆಗಳ ಪರಿಣಾಮಗಳನ್ನು ವ್ಯಕ್ತಿ ಸ್ವೀಕರಿಸುವ ರೀತಿ ಮಾತ್ರ ಆತ್ಮಹತ್ಯೆಗೆ ಪ್ರಚೋದನೆಯಾಗುತ್ತದೆ. ವ್ಯಕ್ತಿಯೊಬ್ಬನ ಆಂತರಂಗದ ಮಾನಸಿಕ ಹೋರಾಟಗಳನ್ನು ಯಾವ ಮಾನದಂಡದ ಆಧಾರದಿಂದ ಕ್ಷುಲ್ಲಕ ಅಥವಾ ಗಹನವಾದದ್ದು ಎಂದು ವರ್ಗೀಕರಿಸಲು ಸಾಧ್ಯ?

ಯಾವ ಆತ್ಮಹತ್ಯೆಯೂ ಆ ಕ್ಷಣದ ನಿರ್ಧಾರವಾಗಿರುವುದಿಲ್ಲ. ನಿಧಾನವಾಗಿ ಒಟ್ಟಾಗುತ್ತಾ ಹೋಗುವ ಮಾನಸಿಕ ನೋವು ಹತಾಶೆಗಳು ಸ್ಫೋಟವಾಗಲು ಹಲವಾರು ವರ್ಷಗಳೇ ಬೇಕಾಗಬಹುದು. ಸಮೀಕ್ಷೆಗಳ ಪ್ರಕಾರ ಮಾರಣಾಂತಿಕ ಪ್ರಯತ್ನ ಮಾಡುವ ಮೊದಲು ವ್ಯಕ್ತಿಯೊಬ್ಬನು ಅದರ ಸೂಚನೆಗಳನ್ನು ನೀಡಿರುತ್ತಾನೆ ಅಥವಾ ಕೆಲವೊಂದು ವಿಫಲ ಪ್ರಯತ್ನಗಳನ್ನೂ ಮಾಡಿರುತ್ತಾನೆ. ಇಂತಹ ಪ್ರಾಥಮಿಕ ಹಂತದಲ್ಲಿ ವ್ಯಕ್ತಿ ಮತ್ತು ಅವನ ಕುಟುಂಬದವರು ಸೂಕ್ತ ಸಹಾಯವನ್ನು ಪಡೆಯಲು ಸಾಧ್ಯವಾದರೆ ಸಾಕಷ್ಟು ಆತ್ಮಹತ್ಯೆಗಳನ್ನು ತಪ್ಪಿಸಬಹುದು. ಹಾಗಾಗಿ ಮೊದಲು ಸಹಾಯವನ್ನು ಕೇಳಲು ಸಾಧ್ಯವಾಗುವಂತಹ ಒಂದು ಮುಕ್ತವಾತಾವರಣವನ್ನು ಸೃಷ್ಟಿಸುವುದು ಕುಟುಂಬ ಸರ್ಕಾರ ಸಮಾಜವಿಜ್ಞಾನಿಗಳ ಹೊಣೆಯಾಗಬೇಕು.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಮುಕ್ತ ವಿವಿ; ಸೆಮಿಸ್ಟರ್ ಬದಲು ವಾರ್ಷಿಕ ಪರೀಕ್ಷೆ ಪದ್ಧತಿಗೆ ಆಗ್ರಹ

ಉದ್ಯೋಗಿಗಳ ಓದಿನ ಕನಸಿಗೆ ಅಡ್ಡಿ

● ಆರ್. ಜಿತೇಂದ್ರ

ಮುಖ್ಯಾಂಶಗಳು

- ಮುಕ್ತ ವಿವಿ ಹೊಸ ನಿಯಮದಿಂದ ಸಮಸ್ಯೆ
- ಉದ್ಯೋಗದಲ್ಲಿದ್ದು ಓದು ಬಯಸುವವರಿಗೆ ತೊಂದರೆ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಸೆಮಿಸ್ಟರ್ ಪದ್ಧತಿ ಜಾರಿಗೊಳಿಸಿದ್ದು, ಉದ್ಯೋಗದ ಜೊತೆಗೇ ಉನ್ನತ ಶಿಕ್ಷಣದ ಆಸೆ ಹೊತ್ತ ಸಾವಿರಾರು ಮಂದಿಗೆ ತೊಂದರೆ ಎದುರಾಗಿದೆ.

ಮುಕ್ತ ವಿವಿಗೆ ಪದವಿ ಹಾಗೂ ಸ್ನಾತಕೋತ್ತರ ಪದವಿ ಶಿಕ್ಷಣಕ್ಕಾಗಿ ದಾಖಲಾಗುವವರಲ್ಲಿ ಶೇ 70–80ರಷ್ಟು ಮಂದಿ ವಿವಿಧ ಕ್ಷೇತ್ರಗಳ ಉದ್ಯೋಗಿಗಳೇ ಇದ್ದಾರೆ.

ಈ ಹಿಂದೆ ಕೋರ್ಸುಗಳಿಗೆ ವಾರ್ಷಿಕ ಪರೀಕ್ಷೆ ಪದ್ಧತಿ ಇತ್ತು. ಆದರೆ, 2021–22ನೇ ಸಾಲಿನಿಂದ ವಿಶ್ವವಿದ್ಯಾಲಯವು ಸಿಬಿಸಿಎಸ್ ಪದ್ಧತಿ ಅಳವಡಿಸಿಕೊಂಡಿದೆ. ಅದರಂತೆ ಸ್ನಾತಕೋತ್ತರ ಕೋರ್ಸುಗಳಿಗೆ ವಾರ್ಷಿಕ ಪರೀಕ್ಷೆಗೆ ಬದಲಾಗಿ ಸೆಮಿಸ್ಟರ್ ಪದ್ಧತಿ ಪರಿಚಯಿಸಲಾಗಿದೆ. ಅದರಿಂದಾಗಿ ಪ್ರತಿ ಸೆಮಿಸ್ಟರ್‌ಗೆ 5 ದಿನ ಪರೀಕ್ಷೆ ಹಾಗೂ 10 ದಿನ ಸಂಪರ್ಕ ತರಗತಿಯಂತೆ 15 ದಿನವನ್ನು ಅಭ್ಯರ್ಥಿಗಳು ಮೀಸಲಿಡಬೇಕಿದೆ.

‘ಇಗ್ನೋ ಮೊದಲಾದ ವಿಶ್ವವಿದ್ಯಾಲಯಗಳು ಸಿಬಿಸಿಎಸ್ ಪದ್ಧತಿಯನ್ನು ಅಳವಡಿಸಿಕೊಂಡಿದ್ದರೂ ವಾರ್ಷಿಕ

> ಉದ್ಯೋಗದಲ್ಲಿದ್ದು ಓದಬಯಸುವವರಿಗೆ ತೊಂದರೆಯಾಗುತ್ತಿರುವ ಬಗ್ಗೆ ತಿಳಿದಿದೆ. ಕುಲಪತಿ ಗಮನಕ್ಕೆ ತರಲಾಗುವುದು
>
> **ಕೆಎಲ್‌ಎನ್ ಮೂರ್ತಿ**
> ಕುಲಸಚಿವ, ಕರಾಮುವಿವಿ

ಪರೀಕ್ಷೆ ಮಾನದಂಡವನ್ನೇ ಅನುಸರಿಸುತ್ತಿವೆ. ಅದರಂತೆ ಮುಕ್ತ ವಿ.ವಿಯೂ ಸ್ನಾತಕೋತ್ತರ ಪದವಿ ದೂರಶಿಕ್ಷಣ ಕೋರ್ಸುಗಳಿಗೆ ವಾರ್ಷಿಕ ಪರೀಕ್ಷೆ ಪದ್ಧತಿಯನ್ನೇ ಮುಂದುವರಿಸಬೇಕು’ ಎನ್ನುವುದು ಶಿಕ್ಷಣ ಆಕಾಂಕ್ಷಿಗಳ ಆಗ್ರಹ.

‘ವಾರ್ಷಿಕ ಪರೀಕ್ಷೆ ಪದ್ಧತಿಯಲ್ಲಿ ಅಭ್ಯರ್ಥಿಗಳಿಗೆ ಕನಿಷ್ಠ 15 ದಿನ ರಜೆ ಸಾಕಿತ್ತು. ಈಗ ವರ್ಷಕ್ಕೆ ಕನಿಷ್ಠ 30 ದಿನವಾದರೂ ರಜೆ ಬೇಕು. ಉದ್ಯೋಗದಲ್ಲಿರುವವರಿಗೆ ಅಷ್ಟು ದಿನ ರಜೆ ಸಿಗುವುದೇ ಕಷ್ಟ. ಅದರಿಂದ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆಯಲು ಯೋಚನೆ ಮಾಡುವಂತಾಗಿದೆ’ ಎಂದು ಮೈಸೂರು ಜಿಲ್ಲೆಯ ಸರಗೂರು ತಾಲ್ಲೂಕಿನ ಅಡಹಳ್ಳಿಯ ಆರ್. ನವೀನ್‌ಕುಮಾರ್ ಹೇಳಿದರು.

35 ಕೋರ್ಸ್: ವಿಶ್ವವಿದ್ಯಾಲಯವು ಒಟ್ಟು 35 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಅವಕಾಶ ನೀಡಿದೆ. ಕಲಾ ವಿಭಾಗದ ಒಟ್ಟು 16 ವಿಷಯಗಳ ಪೈಕಿ 12 ವಿಷಯಗಳಿಗೆ ಸೆಮಿಸ್ಟರ್ ಪದ್ಧತಿ ಜಾರಿಯಾಗಿದ್ದು, ಉಳಿದ ನಾಲ್ಕು ವಿಷಯಗಳಿಗೆ ವಾರ್ಷಿಕ ಪರೀಕ್ಷೆಯೇ ಮುಂದುವರಿದಿದೆ. ಎಂ.ಕಾಂನ 4, ಎಂಬಿಎನ 7, ಎಂ.ಎಸ್ಸಿಯಲ್ಲಿನ 15 ಕೋರ್ಸುಗಳಿಗೆ ಸೆಮಿಸ್ಟರ್ ಪದ್ಧತಿ ಜಾರಿಗೆ ಬಂದಿದೆ.

ಜುಲೈ 3ರಿಂದ ಬಜೆಟ್ ಅಧಿವೇಶನ

ಬೆಂಗಳೂರು: 16 ನೇ ವಿಧಾನಸಭೆಯ ಮೊದಲ ಹಾಗೂ ಬಜೆಟ್ ಅಧಿವೇಶನ ಜುಲೈ 3 ರಿಂದ 14ರವರೆಗೆ 10 ದಿನಗಳ ಕಾಲ ನಡೆಯಲಿದೆ.

ಜುಲೈ 3ರ ಸೋಮವಾರ ಮಧ್ಯಾಹ್ನ 12ಗಂಟೆಗೆ ವಿದಾನಸಭೆ ಮತ್ತು ಪರಿಷತ್ತಿನ ಸದಸ್ಯರ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಭಾಷಣ ಮಾಡಲಿದ್ದಾರೆ. ಹೊಸ ಸರ್ಕಾರದ ದೂರದೃಷ್ಟಿಯನ್ನು ವಿವರಿಸುವ ದಿಕ್ಸೂಚಿ ಭಾಷಣ ಇದಾಗಿರಲಿದೆ. ಭಾಷಣದ ಮೇಲಿನ ವಂದನಾ ನಿರ್ಣಯದ ಕುರಿತು ಮೂರು ದಿನ ಚರ್ಚೆ ನಡೆಯಲಿದೆ.

ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹೊಸ ಸರ್ಕಾರದ ಮೊದಲ ಬಜೆಟ್ ಅನ್ನು ಜುಲೈ 7ರಂದು ಮಂಡಿಸಲಿದ್ದಾರೆ.

ಮಲಪ್ರಭೆ ಒಡಲು ಖಾಲಿ..

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನಯಾನಗರ ಬಳಿ ಮಲಪ್ರಭಾ ನದಿ ಒಡಲು ಬರಿದಾಗಿರುವುದು

– ಪ್ರಜಾವಾಣಿಚಿತ್ರ: ಇಮಾಮ್‌ಹುಸೇನ್ ಗೂಡುನವರ

ದುರ್ಬಲರ ‘ಸಾಮಾಜಿಕ ಭದ್ರತೆ’ ಅಭದ್ರ

ಒಂದನೇ ಪುಟದಿಂದ

‘ಕಳೆದ ಎರಡು ಮೂರು ತಿಂಗಳುಗಳಿಂದ ಪಿಂಚಣಿ ಮೊತ್ತ ಸಿಕ್ಕಿಲ್ಲ. ಪ್ರತಿತಿಂಗಳು ಬ್ಯಾಂಕಿಗೆ ಎಡತಾಕಿ ವಿಚಾರಿಸಿದರೂ ‘ಯಾವುದೇ ಜಮೆಯಾಗಿಲ್ಲ’ ಎಂಬ ಉತ್ತರ ಬರುತ್ತಿದೆ. ಜೀವನ ನಿರ್ವಹಣೆ, ಔಷಧಿಗಳಿಗಾಗಿ ಇದೇ ಹಣವನ್ನು ನಂಬಿಕೊಂಡವರು ಸಂಕಷ್ಟಕ್ಕೆ ಸಿಲುಕಿದ್ದೇವೆ. ಯಾರನ್ನು ಕೇಳಬೇಕೋ ಗೊತ್ತಾಗುತ್ತಿಲ್ಲ’ ಎಂದು ಸಂತ್ರಸ್ತ ಫಲಾನುಭವಿಯೊಬ್ಬರು ತಮ್ಮ ಅಳಲು ತೋಡಿಕೊಂಡರು.

ಮೃತ ಫಲಾನುಭವಿಗಳೂ ಸೇರಿದಂತೆ ಕೆಲವರನ್ನು ಪಟ್ಟಿಯಿಂದ ತೆಗೆದು, ಹೊಸ ಫಲಾನುಭವಿಗಳನ್ನು ಸೇರ್ಪಡೆ ಮಾಡಿ ಆಯಾ ತಿಂಗಳು ಪಟ್ಟಿ ಪರಿಷ್ಕರಿಸಲಾಗುತ್ತದೆ. ಅದಕ್ಕಾಗಿ ಪ್ರತಿ ತಾಲ್ಲೂಕಿನ ತಹಶೀಲ್ದಾರ್ ಕಚೇರಿಯಲ್ಲಿ ಪ್ರತ್ಯೇಕ ವಿಭಾಗ ತೆರೆಯಲಾಗಿದೆ. ಇಂತಹ ಕಾರ್ಯಗಳನ್ನು ಮಾಡುವಾಗ ತಹಶೀಲ್ದಾರ್ ಕಚೇರಿಗಳಲ್ಲೇ ವಿಳಂಬವಾಗುತ್ತಿದೆ ಎನ್ನುವ ದೂರುಗಳೂ ಇವೆ.

‘ಪ್ರತಿ ತಾಲ್ಲೂಕು ಕಚೇರಿಯಿಂದಲೂ ಪಟ್ಟಿ ಪರಿಷ್ಕರಣೆ ನಂತರ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಕಳುಹಿಸುತ್ತಾರೆ. ಕೆಲ ತಾಲ್ಲೂಕು ಅಥವಾ ಜಿಲ್ಲೆಗಳಿಂದ ಬರುವ ಪಟ್ಟಿ ವಿಳಂಬವಾದರೆ, ಅವುಗಳನ್ನು ಬಿಟ್ಟು ಉಳಿದ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಹಾಗೆ ಕೈಬಿಟ್ಟವರಿಗೆ ಮುಂದಿನ ಎರಡು ತಿಂಗಳ ಪಿಂಚಣಿ ಸೇರಿಸಿ ಕೊಡಲಾಗುತ್ತದೆ. ಇದು ವಿಳಂಬಕ್ಕೆ ಮೂಲ ಕಾರಣ ಎನ್ನುತ್ತಾರೆ’ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಯಾರಿಗೆ ಎಷ್ಟು

- ₹600 — 65ರ ಒಳಗಿನ ವೃದ್ಧರಿಗೆ
- ₹1200 — 65 ದಾಟಿದವರಿಗೆ
- ₹800 — ವಿಧವಾ ವೇತನ
- ₹800 — ಶೇ 74ರ ಒಳಗಿನ ಅಂಗವಿಕಲತೆಗೆ
- ₹1400 — ಶೇ 75 ಮೇಲ್ಪಟ್ಟು
- ₹2000 — ಮನೋವೈಕಲ್ಯ ಇರುವವರಿಗೆ
- ₹800 — ಮನಸ್ವಿನಿ, ಮೈತ್ರಿಗೆ
- ₹2000 — ರೈತ ಕಲ್ಯಾಣದ ಫಲಾನುಭವಿಗಳಿಗೆ
- ₹10000 — ಆ್ಯಸಿಡ್ ಸಂತ್ರಸ್ತರಿಗೆ

‘ನಿಯಮದಂತೆ ಪ್ರತಿ ಬಾರಿಯೂ ಪಟ್ಟಿ ಪರಿಷ್ಕರಿಸಿದಾಗ ಕೆಲವರು ಯೋಜನೆಯಿಂದ ಹೊರಗೆ ಉಳಿಯುತ್ತಾರೆ.

ಉದಾ: ವಿಧವಾ ವೇತನ ಪಡೆಯುತ್ತಿರುವ ಮಹಿಳೆಯ ಪುತ್ರನಿಗೆ 18 ವರ್ಷ ತುಂಬಿದರೆ ಅವರಿಗೆ ಪಿಂಚಣಿ ಸೌಲಭ್ಯವನ್ನು ಸ್ಥಗಿತಗೊಳಿಸಲಾಗುತ್ತದೆ. ನಿಯಮಗಳ ಕುರಿತು ಮಾಹಿತಿ ಇಲ್ಲದೇ ಇಂಥವರು ಅನಗತ್ಯವಾಗಿ ಕಚೇರಿಗಳಿಗೆ ಅಲೆದಾಡುತ್ತಾರೆ.

ಗ್ರಾಮಮಟ್ಟದಲ್ಲೇ ಇಂಥವರಿಗೆ ಮನವರಿಕೆ ಮಾಡಿಕೊಡುವ ಕೆಲಸ ಸರಿಯಾಗಿ ಆಗುತ್ತಿಲ್ಲ’ ಎಂದು ಅವರು ಹೇಳಿದರು.

ಸರ್ಕಾರ ನಿಗದಿತವಾಗಿ ಹಣ ಬಿಡುಗಡೆ ಮಾಡದಿದ್ದಾಗಲೂ ಕೆಲವೊಮ್ಮೆ ವಿಳಂಬವಾಗುತ್ತದೆ. ಕೋವಿಡ್ ಸಮಯದಲ್ಲಿ ಇಂತಹ ಸನ್ನಿವೇಶ ಸೃಷ್ಟಿಯಾಗಿತ್ತು. ಉಳಿದಂತೆ ಹಣಕಾಸಿನ ಸಮಸ್ಯೆ ಎದುರಾಗಿಲ್ಲ ಎಂದೂ ವಿವರ ನೀಡಿದರು.

ಮೊದಲು ಯೋಜನೆಗಳ ಫಲಾನುಭವಿಗಳಿಗೆ ಅಂಚೆ ಕಚೇರಿ ಮೂಲಕವೂ ಹಣ ವಿತರಣೆಯಾಗುತ್ತಿತ್ತು. ಖಜಾನೆ 1 ಹಾಗೂ ಖಜಾನೆ 2 ಜಾರಿಗೆ ಬಂದ ನಂತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮೆ ಮಾಡಲಾಗುತ್ತಿದೆ. ಫಲಾನುಭವಿಗಳು ತಮ್ಮ ಆಧಾರ್ ಕಾರ್ಡ್ ಸಂಖ್ಯೆಯನ್ನು ಬ್ಯಾಂಕ್ ಖಾತೆಗೆ ಜೋಡಿಸಬೇಕಿದೆ. ಎರಡು ವರ್ಷಗಳ ಹಿಂದೆಯೇ ಈ ನಿಯಮ ಜಾರಿಯಾದರೂ ಇಂದಿಗೂ 2 ಲಕ್ಷಕ್ಕೂ ಹೆಚ್ಚು ಜನರು ಆಧಾರ್ ಸಂಖ್ಯೆ ಜೋಡಿಸಿಲ್ಲ.

ಹೊಣೆಗಾರಿಕೆ ಇಲ್ಲದ ಹೊರಗುತ್ತಿಗೆ

ಬಹುತೇಕ ಫಲಾನುಭವಿಗಳ ಖಾತೆಗೆ ಹಣ ಜಮೆಯಾಗದೇ ಇರಲು ಆಧಾರ್ ಸಂಖ್ಯೆ ಸೇರಿದಂತೆ ದಾಖಲೆಗಳನ್ನು ಅಪ್‌ಲೋಡ್ ಮಾಡುವಾಗ ಆಗುವ ತಾಂತ್ರಿಕ ದೋಷಗಳು ಪ್ರಮುಖ ಕಾರಣ. ವಿವಿಧ ಯೋಜನೆಗಳ ಪಿಂಚಣಿ ಸೌಲಭ್ಯಗಳ ಫಲಾನುಭವಿಗಳ ದಾಖಲೆಗಳನ್ನು ಹೊರಗುತ್ತಿಗೆದಾರರು ನಿರ್ವಹಿಸುತ್ತಾರೆ. ಲೋಪಗಳಾದಾಗ ಅವರನ್ನು ಹೊಣೆಗಾರರನ್ನಾಗಿ ಮಾಡಲು ಸಾಧ್ಯವಾಗದು. ಹಾಗಾಗಿ, ಸರ್ಕಾರದ ನೌಕರರೇ ಈ ಎಲ್ಲ ಕಾರ್ಯಗಳನ್ನು ನಿಭಾಯಿಸುವಂತಾಗಬೇಕು. ನಕಲಿ ದಾಖಲೆ ನೀಡಿ ಒಂದಕ್ಕಿಂತ ಹೆಚ್ಚು ಯೋಜನೆಯ ಲಾಭ ಪಡೆಯುವವರಿದ್ದು, ಅದಕ್ಕೂ ಕಡಿವಾಣ ಹಾಕಬೇಕು ಎನ್ನುತ್ತಾರೆ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಕಾರ್ಯಾಧ್ಯಕ್ಷ ಚಂದ್ರಶೇಖರ. ಪುಟ್ಟಪ್ಪ.

ಪಂಚಾಯಿತಿಗೆ ತೆರಿಗೆ ಬರ

ಒಂದನೇ ಪುಟದಿಂದ

ಕೃಷಿ ಜಮೀನುಗಳನ್ನು ಹೊರತು ಪಡಿಸಿದ ಆಸ್ತಿಗಳಿಗೆ ಗ್ರಾಮ ಪಂಚಾಯಿತಿಗಳು ಆಸ್ತಿ ತೆರಿಗೆ ವಿಧಿಸಲು ಅವಕಾಶವಿದೆ. ಶೇಕಡ 80ಕ್ಕಿಂತಲೂ ಹೆಚ್ಚಿನ ಆಸ್ತಿಗಳು ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿದ್ದವು. ಎಲ್ಲ ಆಸ್ತಿಗಳನ್ನೂ ತೆರಿಗೆ ಪಟ್ಟಿಯ ವ್ಯಾಪ್ತಿಗೆ ತರಲು ಪಂಚಾಯತ್ ರಾಜ್ ಆಯುಕ್ತೆ ಪ್ರಿಯಾಂಕ ಮೇರಿ ಫ್ರಾನ್ಸಿಸ್ 2022ರ ಆಗಸ್ಟ್ 8ರಂದು ಆದೇಶ ಹೊರಡಿಸಿದ್ದರು.

ಬೆಂಗಳೂರು ನಗರ ಜಿಲ್ಲೆಯಲ್ಲಿ ಡಿಜಿಟಲೀಕರಣದ ಮೂಲಕ ಹಾಗೂ ತುಮಕೂರು ಜಿಲ್ಲೆಯಲ್ಲಿ ‘ಮ್ಯಾನ್ಯುಯಲ್’ ಆಗಿ ಆಸ್ತಿಗಳ ಸಮೀಕ್ಷೆಗೆ ಆದೇಶಿಸಲಾಗಿತ್ತು. ಆ ಬಳಿಕ ಅದೇ ಮಾದರಿಯಲ್ಲಿ ರಾಜ್ಯದಾದ್ಯಂತ ಪ್ರಕ್ರಿಯೆ ಆರಂಭಿಸಿದ್ದು, ವರ್ಷ ಕಳೆಯುವುದರೊಳಗೆ ಹಲವು ಲಕ್ಷ ಆಸ್ತಿಗಳು ತೆರಿಗೆ ವ್ಯಾಪ್ತಿಗೆ ಬಂದಿವೆ.

‘ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಕೃಷಿಯೇತರ ಆಸ್ತಿಗಳಲ್ಲಿ ಹೆಚ್ಚಿನ ಸ್ವತ್ತುಗಳು ತೆರಿಗೆ ಪಟ್ಟಿಗೆ ಬಂದಿಲ್ಲ ಎಂಬುದು ಪಂಚತಂತ್ರ 2.0 ತಂತ್ರಾಂಶದ ಪ್ರಾಯೋಗಿಕ ಅನುಷ್ಠಾನದಲ್ಲಿ ಕಂಡುಬಂದಿದೆ. ಆಸ್ತಿ ತೆರಿಗೆ ಸಂಗ್ರಹದಲ್ಲಿ ಹಲವು ಪಂಚಾಯಿತಿಗಳಲ್ಲಿ 2 -3 ಪಟ್ಟು ಮತ್ತು ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಏರಿಕೆ ಕಂಡುಬಂದಿದೆ’ ಎಂದು ಪ್ರಿಯಾಂಕ ತಿಳಿಸಿದರು.

‘ಪಿಡಿಒಗಳನ್ನೇ ಹೊಣೆ ಮಾಡಬೇಕಿದೆ’

‘ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ಸಂಗ್ರಹ ಸರಿಯಾಗಿ ನಡೆಯುತ್ತಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿರುವ ಸತ್ಯ. ತೆರಿಗೆ ಸಂಗ್ರಹ ಮತ್ತು ಪಂಚಾಯಿತಿ ಆಸ್ತಿಗಳ ರಕ್ಷಣೆ, ನಿರ್ವಹಣೆಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನೇ (ಪಿಡಿಒ) ಹೊಣೆ ಮಾಡಲಾಗುವುದು. ಆ ಮೂಲಕ ತೆರಿಗೆ ಸಂಗ್ರಹ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಾಗುವುದು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದರು.

ಯಾವ ಆಸ್ತಿಗಳಿಗೆ ತೆರಿಗೆ ವಿಧಿಸಬಹುದು?

- ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕಾ ಉದ್ದೇಶಕ್ಕೆ ಭೂ ಪರಿವರ್ತನೆ ಹೊಂದಿದ ಜಮೀನು.
- ಭೂಸ್ವಾಧೀನಗೊಂಡಿರುವ ಖಾಲಿ ಜಮೀನು.
- ವಸತಿ ನಿವೇಶನ, ವಾಣಿಜ್ಯ, ವಸತಿಯೇತರ ಮತ್ತು ಕೈಗಾರಿಕಾ ನಿವೇಶನಗಳು.
- ಗ್ರಾಮ ಠಾಣಾ ಸುತ್ತಮುತ್ತ ಇರುವ ನಿವೇಶನಗಳು.
- ಸಾರ್ವಜನಿಕ ನಿವೇಶನಗಳು ಹಾಗೂ ಹೆದ್ದಾರಿಗಳಿಗೆ ಹೊಂದಿಕೊಂಡ ನಿವೇಶನಗಳು.
- ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕಾ ಕಟ್ಟಡಗಳು.
- ಫಾರ್ಮ್ ಹೌಸ್‌ಗಳು, ಸಾರ್ವಜನಿಕ ಕಟ್ಟಡಗಳು.

ಬಿಗಿ ಕ್ರಮಕ್ಕೆ ಸಿದ್ಧತೆ: ಎಲ್ಲ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲು 2019ರಲ್ಲೇ ಆದೇಶ ಹೊರಡಿಸಲಾಗಿತ್ತು. ಆದರೆ, ಹೆಚ್ಚು ಪ್ರಗತಿ ಆಗಿರಲಿಲ್ಲ. ಆಗಸ್ಟ್‌ನಲ್ಲಿ ಸಮೀಕ್ಷೆಗೆ ಆದೇಶ ಹೊರಡಿಸಿದ ಬಳಿಕ ಬಹುತೇಕ ಗ್ರಾಮ ಪಂಚಾಯಿತಿಗಳಲ್ಲಿ ಆಸ್ತಿ ತೆರಿಗೆ ಸಂಗ್ರಹದಲ್ಲಿ ಏರಿಕೆಯಾಗಿದೆ.

ಇನ್ನೂ ಒಂದು ಕೋಟಿಗೂ ಹೆಚ್ಚಿನ ಆಸ್ತಿಗಳು ತೆರಿಗೆ ಪಟ್ಟಿಗೆ ಸೇರುವುದು ಬಾಕಿ ಇದೆ ಎಂಬ ಅಂದಾಜನ್ನು ಪಂಚಾಯತ್ ರಾಜ್ ಆಯುಕ್ತಾಲಯದ ಹಿರಿಯ ಅಧಿಕಾರಿಗಳ ತಂಡ ಮಾಡಿದೆ. ಈ ಎಲ್ಲ ಆಸ್ತಿಗಳನ್ನೂ ತೆರಿಗೆ ವ್ಯಾಪ್ತಿಗೆ ತರುವುದಕ್ಕಾಗಿ ಬಿಗಿ ಕ್ರಮಗಳನ್ನು ಕೈಗೊಳ್ಳಲು ಸಿದ್ಧತೆ ನಡೆದಿದೆ.

‘ಆಸ್ತಿ ತೆರಿಗೆ ಸಂಗ್ರಹ ವೈಜ್ಞಾನಿಕವಾಗಿ ನಡೆದರೆ ಪಂಚಾಯಿತಿಗಳ ವರಮಾನ ಹೆಚ್ಚಲಿದೆ. ಇದಕ್ಕಾಗಿ ಎಲ್ಲ ಆಸ್ತಿಗಳನ್ನೂ ತೆರಿಗೆ ಪಟ್ಟಿಗೆ ತರಲಾಗುವುದು’ ಎಂದು ಪ್ರಿಯಾಂಕ ತಿಳಿಸಿದರು.

ಮೂರು ಸಾವಿರ ಕೈಗಾರಿಕೆಗಳಿಂದ ತೆರಿಗೆ ಬಾಕಿ!

ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಮಾಚೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 3 ಸಾವಿರ ಕೈಗಾರಿಕೆಗಳಿವೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಈ ಕೈಗಾರಿಕೆಗಳ ಮಾಲೀಕರು 30 ವರ್ಷಗಳಿಂದ ಪಂಚಾಯಿತಿಗೆ ಆಸ್ತಿ ತೆರಿಗೆಯನ್ನೇ ಪಾವತಿಸಿಲ್ಲ!

‘ಪಂಚತಂತ್ರ 2.0 ತಂತ್ರಾಂಶದ ಪ್ರಾಯೋಗಿಕ ಅನುಷ್ಠಾನಕ್ಕಾಗಿ ಬೆಂಗಳೂರು ನಗರ ಜಿಲ್ಲೆಯ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಆಸ್ತಿಗಳ ಡಿಜಿಟಲ್ ಸಮೀಕ್ಷೆ ಕೈಗೊಳ್ಳಲಾಗಿತ್ತು. ಆಗ ಈ ಪ್ರಕರಣ ಪತ್ತೆಯಾಗಿದೆ. 30 ವರ್ಷಗಳ ಹಿಂಬಾಕಿಯೂ ಸೇರಿದರೆ ಗ್ರಾಮ ಪಂಚಾಯಿತಿಗೆ ₹500 ಕೋಟಿಗಿಂತ ಹೆಚ್ಚು ತೆರಿಗೆ ಪಾವತಿಸಬೇಕಾಗುತ್ತದೆ’ ಎಂದು ಪಂಚತಂತ್ರ 2.0 ಅನುಷ್ಠಾನದ ತರಬೇತಿ ಕಾರ್ಯಕ್ರಮದ ನೋಡಲ್ ಅಧಿಕಾರಿಯಾಗಿರುವ ಪಂಚಾಯತ್ ರಾಜ್ ಆಯುಕ್ತಾಲಯದ ಉಪ ನಿರ್ದೇಶಕ ಕೆ.ಜಿ. ಜಗದೀಶ್ ವಿವರಿಸುತ್ತಾರೆ. ರಾಜ್ಯದ ಸಾವಿರಾರು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಇಂತಹ ಪ್ರಕರಣಗಳು ಇರುವ ಸಾಧ್ಯತೆ ಇದೆ. ಎಲ್ಲ ಕೈಗಾರಿಕೆಗಳೂ ಆಸ್ತಿ ತೆರಿಗೆ ಪಟ್ಟಿಗೆ ಸೇರಿದರೆ ಪಂಚಾಯಿತಿಗಳ ಸ್ವಂತ ತೆರಿಗೆ ಆದಾಯದಲ್ಲಿ ಭಾರಿ ಏರಿಕೆ ಆಗಲಿದೆ ಎನ್ನುತ್ತಾರೆ ಅವರು.

ಸಿಇಟಿ: 80 ಸಾವಿರ ಅಭ್ಯರ್ಥಿಗಳ ಅರ್ಜಿಗಳಲ್ಲಿ ಲೋಪ

ಬೆಂಗಳೂರು: ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶ ಬಯಸಿ ಸಿಇಟಿಗೆ ಅರ್ಜಿ ಸಲ್ಲಿಸಿದ 80 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳ ಕಂದಾಯ ದಾಖಲೆಗಳ ಸಂಖ್ಯೆ (ಆರ್‌ಡಿ) ಹೊಂದಾಣಿಕೆಯಾಗಿಲ್ಲ. ಹಾಗಾಗಿ, ಕೆಇಎ ತಿದ್ದುಪಡಿಗೆ ಜೂನ್ 12ರವರೆಗೂ ಅವಕಾಶ ನೀಡಿದೆ.

ಜಾತಿ, ಆದಾಯ, ಕಲ್ಯಾಣ ಕರ್ನಾಟಕ ಪ್ರಮಾಣ ಪತ್ರಗಳನ್ನು ಸರಿಯಾಗಿ ಅಪ್‌ಲೋಡ್ ಮಾಡಿಲ್ಲ. ದಾಖಲೆ ಸರಿಪಡಿಸಿಕೊಳ್ಳದಿದ್ದರೆ ಮೀಸಲಾತಿ ಸೌಲಭ್ಯ ರದ್ದಾಗುತ್ತದೆ. ಅಂತಹ ಅಭ್ಯರ್ಥಿ ಸಾಮಾನ್ಯ ವರ್ಗದ ಕೋಟಾದಲ್ಲಿ ಪ್ರವೇಶ ಪಡೆಯಬೇಕಾಗುತ್ತದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

‘ಶಕ್ತಿ’ ಉಚಿತ ಪ್ರಯಾಣ ನಮ್ಮ ಪ್ರಮಾಣ

ಕರ್ನಾಟಕ ಸರ್ಕಾರ

ಮಹಿಳಾ ಸಬಲೀಕರಣದತ್ತ ದಿಟ್ಟ ಹೆಜ್ಜೆ

‘ಶಕ್ತಿ’ ಯೋಜನೆಗೆ ಚಾಲನೆ

ದಿನಾಂಕ: 11.06.2023
ಸಮಯ: ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ವಿಧಾನಸೌಧ ಪೂರ್ವದ್ವಾರ (ಗ್ರ್ಯಾಂಡ್ ಸ್ಟೆಪ್ಸ್) ಮುಂಭಾಗ, ಬೆಂಗಳೂರು



‘ಶಕ್ತಿ’ ಯೋಜನೆಯು ದಿನಾಂಕ 11ನೇ ಜೂನ್ 2023ರಂದು ಮಧ್ಯಾಹ್ನ 1 ಗಂಟೆಯಿಂದ ಜಾರಿಗೆ

- ಕರ್ನಾಟಕ ರಾಜ್ಯದ ನಿವಾಸಿ ಮಹಿಳೆಯರಿಗೆ, ವಿದ್ಯಾರ್ಥಿನಿಯರಿಗೆ ಮತ್ತು ಲಿಂಗತ್ವ ಅಲ್ಪಸಂಖ್ಯಾತರುಗಳಿಗೆ ಉಚಿತ ಪ್ರಯಾಣದ ಸೌಲಭ್ಯ.
- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ನಗರ ಸಾರಿಗೆ, ಸಾಮಾನ್ಯ ಮತ್ತು ವೇಗದೂತ (ತಡೆರಹಿತ ಸಾರಿಗೆಗಳು ಒಳಗೊಂಡಂತೆ) ಬಸ್ಸುಗಳಲ್ಲಿ ಮಹಿಳೆಯರು ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸಲು ಅವಕಾಶ.
- ಮಹಿಳಾ ಪ್ರಯಾಣಿಕರಿಗೆ ರಾಜ್ಯದೊಳಗೆ ಪ್ರಯಾಣಿಸಲು ದೂರದ ಮಿತಿ ಇರುವುದಿಲ್ಲ.
- ಅಂತರರಾಜ್ಯ ಸಾರಿಗೆಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಲು ಅವಕಾಶವಿರುವುದಿಲ್ಲ.
- ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸುವ ಮಹಿಳೆಯರು ತಮ್ಮ ವಾಸಸ್ಥಳದ ದಾಖಲೆಯಾಗಿ ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಚಾಲನಾ ಪರವಾನಗಿ ಪತ್ರ, ಭಾರತ ಸರ್ಕಾರದ / ಕರ್ನಾಟಕ ಸರ್ಕಾರದ ಸಂಸ್ಥೆಗಳು ವಿತರಿಸಿರುವ ಗುರುತಿನ ಚೀಟಿ ಹಾಗೂ ಕರ್ನಾಟಕ ಸರ್ಕಾರದ ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ನಿರ್ದೇಶನಾಲಯದ ಗುರುತಿನ ಚೀಟಿ ತೋರಿಸಿ ಪ್ರಯಾಣಿಸಬಹುದು.
- ಮಹಿಳಾ ಪ್ರಯಾಣಿಕರು ‘ಶಕ್ತಿ’ ಸ್ಮಾರ್ಟ್ ಕಾರ್ಡ್‌ಗಾಗಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸುವುದು, ಅಲ್ಲಿಯವರೆಗೆ ಈ ಮೇಲಿನ ದಾಖಲೆಗಳನ್ನು ತೋರಿಸಿ ಪ್ರಯಾಣಿಸಬಹುದು.

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಬೃಹತ್ ಮತ್ತು ಮಧ್ಯಮ ನೀರಾವರಿ, ಬೆಂ.ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ರಾಮಲಿಂಗಾರೆಡ್ಡಿ
ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರು, ಕರ್ನಾಟಕ ಸರ್ಕಾರ

ಗೌರವಾನ್ವಿತ ಅತಿಥಿಗಳು
ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಎಂ. ರಾಜೀವ್ ಚಂದ್ರಶೇಖರ್
ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಹಾಗೂ ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು, ಭಾರತ ಸರ್ಕಾರ

ಅಧ್ಯಕ್ಷತೆ
ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು
ಶಿವಾಜಿನಗರ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು
ಶ್ರೀ ಕೆ.ಜೆ. ಜಾರ್ಜ್ — ಮಾನ್ಯ ಇಂಧನ ಸಚಿವರು ಕರ್ನಾಟಕ ಸರ್ಕಾರ
ಶ್ರೀ ದಿನೇಶ್ ಗುಂಡೂರಾವ್ — ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಕೃಷ್ಣ ಬೈರೇಗೌಡ — ಮಾನ್ಯ ಕಂದಾಯ ಸಚಿವರು ಕರ್ನಾಟಕ ಸರ್ಕಾರ
ಶ್ರೀ ಬಿ. ಝಡ್ ಜಮೀರ್ ಅಹಮದ್ ಖಾನ್ — ಮಾನ್ಯ ವಸತಿ, ವಕ್ಫ್, ಅಲ್ಪಸಂಖ್ಯಾತ ಸಚಿವರು ಕರ್ನಾಟಕ ಸರ್ಕಾರ
ಶ್ರೀ ಸುರೇಶ್ ಬಿ.ಎಸ್ — ಮಾನ್ಯ ನಗರ ಅಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಎಲ್ಲಾ ಮಾನ್ಯ ಸಚಿವರುಗಳು, ಮಾನ್ಯ ಸಂಸದರು ಲೋಕಸಭೆ, ಮಾನ್ಯ ಸಂಸದರು ರಾಜ್ಯಸಭೆ, ಮಾನ್ಯ ಶಾಸಕರು, ವಿಧಾನಸಭೆ, ಮಾನ್ಯ ಶಾಸಕರು, ವಿಧಾನ ಪರಿಷತ್ ಹಾಗೂ ಎಲ್ಲಾ ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳು.

ಡಾ॥ ಎನ್.ವಿ. ಪ್ರಸಾದ್, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ

ಸರ್ವರಿಗೂ ಆದರದ ಸ್ವಾಗತ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು

ಸುರಕ್ಷಿತ ಮತ್ತು ವಿಶ್ವಾಸಾರ್ಹ ಪ್ರಯಾಣದ ಪ್ರತೀಕ

❦ ಸುಭಾಷಿತ ❦
ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿರುವವನಿಗೆ ಜಗತ್ತು ಎಂದಿಗೂ ಬೇಸರ ಎನಿಸುವುದಿಲ್ಲ.
— ಮಹಾತ್ಮ ಗಾಂಧಿ

ಹೊಸಕೆರೆಹಳ್ಳಿ ಕೆರೆಯಲ್ಲೇ ರಸ್ತೆ: ಉನ್ನತ ಅಧಿಕಾರಿಗಳ ವಿರುದ್ಧ ತನಿಖೆ ಆಗಲಿ

ಬೆಂಗಳೂರಿನ ಹೊಸಕೆರೆಹಳ್ಳಿ ಕೆರೆಯ ಒಡಲಿಗೆ ಲೋಡ್‌ಗಟ್ಟಲೆ ಮಣ್ಣು ಸುರಿದು, ರಸ್ತೆ ನಿರ್ಮಿಸಲು ಅವಕಾಶ ಕಲ್ಪಿಸಿದ್ದಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಇಬ್ಬರು ಎಂಜಿನಿಯರ್‌ಗಳನ್ನು ಅಮಾನತು ಮಾಡಿದೆ. ಬೆಂಗಳೂರು ಉಸ್ತುವಾರಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಿರ್ದೇಶನದ ಮೇರೆಗೆ, ಬಿಬಿಎಂಪಿ ಕೆರೆ ನಿರ್ವಹಣೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಎಚ್.ಎಸ್.ಮೇಘಾ ಹಾಗೂ ಕೆರೆ ವಿಭಾಗದ ಸಹಾಯಕ ಎಂಜಿನಿಯರ್ ಶಿಲ್ಪಾ ಅವರನ್ನು ಅಮಾನತುಗೊಳಿಸಲಾಗಿದೆ. ಅಪಾರ್ಟ್‌ಮೆಂಟ್ ಸಮುಚ್ಚಯವೊಂದಕ್ಕೆ ಅನುಕೂಲ ಕಲ್ಪಿಸಲು ಕೆರೆಯ ಮಧ್ಯೆಯೇ ರಸ್ತೆ ನಿರ್ಮಿಸುತ್ತಿರುವುದನ್ನು ಪತ್ರಿಕಾ ವರದಿಗಳು ಬಯಲಿಗೆಳೆದಿದ್ದವು. ಈ ಕುರಿತು ಸಾರ್ವಜನಿಕರಿಂದಲೂ ವಿರೋಧ ವ್ಯಕ್ತವಾಗಿತ್ತು. ಆದರೂ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಈ ಬಗ್ಗೆ ತಮಗೆ ಮಾಹಿತಿಯೇ ಇಲ್ಲ ಎಂದು ಹೇಳಿದ್ದರು. ಇನ್ನೊಂದೆಡೆ, ಈ ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ತೋಟಗಾರಿಕಾ ಸಚಿವರಾಗಿದ್ದ ಮುನಿರತ್ನ ಅವರು, ಮುಖ್ಯಮಂತ್ರಿಯವರ ವಿಶೇಷ ಅನುದಾನದಲ್ಲಿ ಈ ಕೆರೆಯ ಅಭಿವೃದ್ಧಿ ಕಾಮಗಾರಿ ನಡೆಸಲಾಗುತ್ತಿದೆ ಎಂದು ಹೇಳಿದ್ದರು. ನೂರಾರು ವರ್ಷಗಳಿಂದ ತುಂಬಿರುವ ಹೂಳನ್ನು ತೆರವುಗೊಳಿಸಿ ಈ ಜಲಮೂಲವನ್ನು ಪುನರುಜ್ಜೀವನಗೊಳಿಸಲಾಗುತ್ತಿದೆ ಹಾಗೂ ಕೆರೆಯನ್ನು ಸುಂದರಗೊಳಿಸಲಾಗುತ್ತಿದೆ ಎಂದೂ ಅವರು ಪ್ರತಿಪಾದಿಸಿದ್ದರು. ಕಾಮಗಾರಿಯ ನೈಜ ಉದ್ದೇಶವೇ ಇದೇ ಆಗಿದ್ದಿದ್ದರೆ, ಕೆರೆಗೆ ಟನ್‌ಗಟ್ಟಲೆ ಮಣ್ಣು ಸುರಿದಿದ್ದು ಏಕೆ ಮತ್ತು ಕೆರೆಯ ನಡುವೆಯೇ ರಸ್ತೆ ನಿರ್ಮಿಸುತ್ತಿರುವುದು ಏಕೆ ಎಂಬ ಪ್ರಶ್ನೆಗಳಿಗೆ ಉತ್ತರ ಸಿಕ್ಕಿರಲಿಲ್ಲ. ಮೇಲಧಿಕಾರಿಯ ಗಮನಕ್ಕೆ ತಾರದೆಯೇ ಬಿಬಿಎಂಪಿಯ ಕಾರ್ಯಪಾಲಕ ಎಂಜಿನಿಯರ್ ದರ್ಜೆಯ ಅಧಿಕಾರಿ ಈ ರೀತಿಯ ಕಾಮಗಾರಿ ಕೈಗೆತ್ತಿಕೊಳ್ಳಲು ಹೇಗೆ ಸಾಧ್ಯವಾಗಿತ್ತು ಎಂಬುದು ಚೋದ್ಯದ ವಿಷಯ. ಅಥವಾ ರಾಜಕೀಯ ಅಧಿಕಾರಸ್ಥರ ಆದೇಶದ ಮೇರೆಗೆ ತಮ್ಮ ಮೇಲಧಿಕಾರಿಗಳ ಜಾಣ ಕುರುಡು ಪ್ರದರ್ಶಿಸಿದ್ದರೆ ಎಂಬುದು ಯಕ್ಷಪ್ರಶ್ನೆ.

ಮುಂದೆ ಯಾವ ಅಧಿಕಾರಿಯೂ ನಿಯಮಗಳನ್ನು ಗಾಳಿಗೆ ತೂರಿ ಕೆರೆಯ ಅವನತಿಗೆ ಕಾರಣವಾಗುವಂತಹ ಪ್ರಯತ್ನಗಳಿಗೆ ಕೈಹಾಕದಂಥ ಕಠಿಣ ಸಂದೇಶವನ್ನು ಸರ್ಕಾರ ನೀಡಬೇಕು

ಹೊಸಕೆರೆಹಳ್ಳಿ ಕೆರೆಯನ್ನು ಪುನರುಜ್ಜೀವನಗೊಳಿಸಲಾಗುತ್ತಿತ್ತು ಎಂಬ ವಾದದಲ್ಲಿ ಹುರುಳೇ ಇಲ್ಲ ಎಂಬುದು ತೋರುತ್ತದೆ. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಪ್ರಕಾರ, ಅದರ ಅನುಮತಿ ಇಲ್ಲದೇ ಕೆರೆ ತೆಗೆಯುವುದು, ಹೂಳೆತ್ತುವುದನ್ನು ಸೇರಿದಂತೆ ಕೆರೆಗೆ ಸಂಬಂಧಿಸಿದ ಯಾವುದೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತಿಲ್ಲ. ಹೊಸಕೆರೆಹಳ್ಳಿ ಕೆರೆ ಅಭಿವೃದ್ಧಿಗೆ ಬಿಬಿಎಂಪಿಯು ಈ ಪ್ರಾಧಿಕಾರದಿಂದ ಯಾವುದೇ ಅನುಮತಿಯನ್ನು ಪಡೆದಿರಲಿಲ್ಲ. ಹಿಂದಿನಿಂದಲೂ ಈ ಕೆರೆಗೆ ಕಸವನ್ನು ಮತ್ತು ಕಟ್ಟಡಗಳ ಅವಶೇಷಗಳನ್ನು ಸುರಿಯುವ ಮೂಲಕ ಒತ್ತುವರಿ ಮಾಡಲಾಗುತ್ತಿತ್ತು. ಕೊಳಚೆ ನೀರನ್ನು ಶುದ್ಧೀಕರಿಸದೆಯೇ ರಾಜಕಾಲುವೆ ಮೂಲಕ ಕೆರೆಯ ಒಡಲಿಗೆ ಹರಿಸಲಾಗುತ್ತಿತ್ತು ಎಂಬುದು ಗುಟ್ಟಿನ ವಿಷಯವೇನಲ್ಲ. ಈ ಕೆರೆಗೆ ಕೊಳಚೆ ನೀರನ್ನು ಹರಿಸುವ ಉದ್ದೇಶದಿಂದಲೇ ರಾಜಕಾಲುವೆಯ ವಿನ್ಯಾಸ ಬದಲಿಸಿದ್ದ ಬಗ್ಗೆ 2021ರ ಮಹಾಲೇಖಪಾಲರ ವರದಿಯಲ್ಲೂ ಉಲ್ಲೇಖಿಸಲಾಗಿತ್ತು. ಒಟ್ಟು 57 ಎಕರೆ ವಿಸ್ತೀರ್ಣವನ್ನು ಹೊಂದಿರುವ ಈ ಕೆರೆಯಲ್ಲಿ ಸುಮಾರು 7 ಎಕರೆಗಳಷ್ಟು ಪ್ರದೇಶ ಈಗಾಗಲೇ ಒತ್ತುವರಿಯಾಗಿದೆ ಎಂದು ವರದಿಯಾಗಿದೆ.

ನಗರದ ಅನೇಕ ಕೆರೆಗಳು ರಿಯಲ್ ಎಸ್ಟೇಟ್ ಮಾಫಿಯಾದ ಕೈಗೆ ಸಿಲುಕಿ ಅವಸಾನದ ಅಂಚನ್ನು ತಲುಪಿವೆ. ಹೊಸಕೆರೆಹಳ್ಳಿ ಕೆರೆಯೂ ಇದೇ ರೀತಿ ಆಗಬಾರದು. ಈ ಜಲಮೂಲವನ್ನು ಕಾಪಾಡಬೇಕಿದೆ. ಬಿಬಿಎಂಪಿಯ ಮಧ್ಯಮ ಹಂತದ ಇಬ್ಬರು ಅಧಿಕಾರಿಗಳ ಮೇಲೆ ಹೊಣೆ ಹೊರಿಸಿದ ಮಾತ್ರಕ್ಕೆ ಬೇರೆಯವರ ಪಾತ್ರ ಇದರಲ್ಲಿ ಇಲ್ಲ ಎಂದು ಹೇಳಲಾಗದು. ಯಾರ ಆದೇಶದ ಮೇರೆಗೆ ಈ ಕೆರೆಗೆ ಮಣ್ಣು ಸುರಿದು ರಸ್ತೆ ನಿರ್ಮಿಸಲಾಯಿತು, ಯಾವೆಲ್ಲ ಉನ್ನತ ಅಧಿಕಾರಿಗಳ ಗಮನಕ್ಕೆ ತಂದು ಕಾಮಗಾರಿ ನಡೆಸಲಾಗಿತ್ತು ಎಂಬುದನ್ನು ಪತ್ತೆ ಹಚ್ಚಲು ಸರ್ಕಾರ ತನಿಖೆ ನಡೆಸಬೇಕು. ಅವರೆಲ್ಲರನ್ನೂ ಈ ಲೋಪಕ್ಕೆ ಹೊಣೆಗಾರರನ್ನಾಗಿಸಬೇಕು. ಮುಂದೆ ಯಾವ ಅಧಿಕಾರಿಯೂ ಎಷ್ಟೇ ಒತ್ತಡಗಳಿದ್ದರೂ ನಿಯಮಗಳನ್ನು ಗಾಳಿಗೆ ತೂರಿ ಕೆರೆಯ ಅವನತಿಗೆ ಕಾರಣವಾಗುವಂತಹ ಪ್ರಯತ್ನಗಳಿಗೆ ಕೈಹಾಕಬಾರದು. ಅಂತಹ ಸಂದೇಶವನ್ನು ಸಮಾಜಕ್ಕೆ ಸರ್ಕಾರ ನೀಡಬೇಕು.

ದಿನದ ಟ್ವೀಟ್

ಪ್ರಮುಖ ಕಾರಣಗಳೆಲ್ಲಿ?

ಬಿಜೆಪಿಯ ಆತ್ಮಾವಲೋಕನ ಸಭೆಯಲ್ಲಿ ಸೋಲಿಗೆ ಪ್ರಮುಖ ಕಾರಣಗಳನ್ನು ಬಿಟ್ಟು ಉಳಿದೆಲ್ಲ ಕಾರಣಗಳೂ ಹೊರಬಂದಿವೆ... ಪ್ರಮುಖ ಕಾರಣಗಳೆಂದರೆ, ನಾಯಕರ ದುರಹಂಕಾರಿ ಧೋರಣೆ, ಕೆಲಸಗಳು ಆಗದಿರುವುದು ಮತ್ತು ಮೋದಿ ಮೇಲಿನ ಅತಿಯಾದ ಅವಲಂಬನೆ. ಇವನ್ನು ಸಲೀಸಾಗಿ ಬಿಟ್ಟುಬಿಟ್ಟಿದ್ದಾರೆ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಗಂಭೀರವಾದ ಸಂಗತಿ... ದೆಹಲಿ ಪೊಲೀಸರೇ. ಇದು, ಲೈಂಗಿಕ ದೌರ್ಜನ್ಯ ಪ್ರಕರಣಗಳ ತನಿಖೆ ನಡೆಸುವ ರೀತಿಯೇ? ಮಾಧ್ಯಮದವರಿಗೆ– ಕ್ಷಮಿಸಿ, ಮಾಧ್ಯಮದ ಆಯ್ದ ಮಂದಿಗೆ ಈ ಸಂದರ್ಭದಲ್ಲಿ ಹಾಜರಿರುವಂತೆ ನೀವು ಆಹ್ವಾನ ಕಳಿಸಿರುತ್ತೀರಿ ಹಾಗೂ ಉನ್ಮಾದಕರ ಊಹಾತ್ಮಕ ವರದಿಗಳನ್ನು ಪ್ರಕಟಿಸುವಂತೆ ಕೇಳಿಕೊಂಡಿರುತ್ತೀರಿ ಎಂಬ ಬಗ್ಗೆ ನನಗೆ ಯಾವ ಅನುಮಾನವೂ ಇಲ್ಲ! ನ್ಯಾಯಾಲಯಗಳು ಗಮನಿಸುತ್ತಿವೆಯೇ?

(ಅಪರಾಧ ಕೃತ್ಯ ಆರೋಪದ ಪುನರ್‌ಸೃಷ್ಟಿ ಸಲುವಾಗಿ ಸಂಗೀತಾ ಫೋಗಟ್ ಅವರನ್ನು ಡಬ್ಲ್ಯುಎಫ್‌ಐ ಮುಖ್ಯಸ್ಥರ ನಿವಾಸಕ್ಕೆ ಕರೆದೊಯ್ದ ದೆಹಲಿ ಪೊಲೀಸರ ನಡೆಗೆ ಪ್ರತಿಕ್ರಿಯೆ)

ಸುಚೇತಾ ದಲಾಲ್, ಪತ್ರಕರ್ತೆ, ಲೇಖಕಿ

25 ವರ್ಷಗಳ ಹಿಂದೆ

ಬುಧವಾರ, 10-6-1998

● ಗುಜರಾತ್ ಕರಾವಳಿಯಲ್ಲಿ ಭೀಕರ ಚಂಡಮಾರುತಕ್ಕೆ 100 ಜನ ಬಲಿ

ಗಾಂಧಿನಗರ, ಜೂನ್ 9 (ಯುಎನ್‌ಐ)– ಅರಬ್ಬಿ ಸಮುದ್ರದಲ್ಲಿ ಭುಗಿಲೆದ್ದ ಭೀಕರ ಚಂಡಮಾರುತ ಗುಜರಾತ್ ರಾಜ್ಯದ ಕರಾವಳಿ ದಾಟಿ 420 ಕಿ.ಮೀ. ಒಳಗೆ ಪ್ರವೇಶಿಸಿ ಉಂಟು ಮಾಡಿರುವ ಅಲ್ಲೋಲಕಲ್ಲೋಲದಿಂದಾಗಿ ಇದುವರೆಗೆ ಕನಿಷ್ಠ 100 ಮಂದಿ ಸತ್ತಿದ್ದಾರೆಂದು ಶಂಕಿಸಲಾಗಿದೆ.

ದೂರಸಂಪರ್ಕ ವ್ಯವಸ್ಥೆ, ವಿದ್ಯುತ್ ಪೂರೈಕೆ ಹಾಗೂ ವಾಹನಗಳ ಸಂಚಾರ ಹಾಗೂ ಜನಜೀವನ ಅಸ್ತವ್ಯಸ್ತಗೊಂಡಿವೆ. ಸೌರಾಷ್ಟ್ರದ ಕರಾವಳಿ ಪ್ರದೇಶ ಹಾಗೂ ಕೇಂದ್ರ ಗುಜರಾತ್‌ನಲ್ಲಿ ಬೀಸಿದ ಭೀಕರ ಚಂಡಮಾರುತದಿಂದ ಮಳೆ ಗಾಳಿಯಿಂದಾದ ಹಾನಿಯ ಘಟನೆಗಳು ವರದಿಯಾಗಿವೆ.

● ಕುಪಿತ ಮಹಿಳೆಯರಿಂದ ಅತ್ಯಾಚಾರಿಯ ಹತ್ಯೆ

ಮಂಗಳೂರು, ಜೂನ್ 9– ತಲವಾರ್ ಹಿಡಿದು ಮನೆಗಳಿಗೆ ನುಗ್ಗಿ ತರುಣಿಯರ ಮೇಲೆ ಅತ್ಯಾಚಾರ ಮಾಡುತ್ತ ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸಿದ್ದ ರೌಡಿಯೊಬ್ಬನನ್ನು ಮಹಿಳೆಯರೇ ಹೆಚ್ಚಾಗಿದ್ದ ನೂರಕ್ಕೂ ಹೆಚ್ಚು ಜನರ ಗುಂಪೊಂದು ಕೊಂದು ಹಾಕಿದ ಘಟನೆ ಸುರತ್ಕಲ್ ಬಳಿ ನಡೆದಿದೆ.

ಸುರತ್ಕಲ್‌ನ ಮುಂಚೂರಿನಲ್ಲಿದ್ದ ಕುಪ್ರಸಿದ್ಧ ರೌಡಿ ಹರೀಶ್ ಕರ್ಕೇರ (26) ಎಂಬುವನ ಮನೆಗೆ ನಿನ್ನೆ ಮಧ್ಯರಾತ್ರಿ ನುಗ್ಗಿದ ಮಹಿಳೆಯರು ಬಾಗಿಲು ಒಡೆದು, ಮಲಗಿದ್ದ ಅವನ ಮೇಲೆ ಕಲ್ಲುಗಳನ್ನು ಹೇರಿದರು. ಹರೀಶ್ ಎದ್ದು ಎರಡು ಕೈಗಳಲ್ಲೂ ತಲವಾರ್ ಝಳಪಿಸುತ್ತಾ, ಬಂದವರ ಮೇಲೆ ನುಗ್ಗಿದಾಗ ನಾಲ್ವರು ಗಾಯಗೊಂಡರು. ಆದರೆ ಪಟ್ಟುಬಿಡದ ಮಹಿಳೆಯರು ಅವನಿಗೆ ತಾವು ತಂದಿದ್ದ ಮರದ ರೀಪುಗಳು, ಕಲ್ಲುಗಳು ಮತ್ತು ತಲವಾರ್‌ಗಳಿಂದ ಚಚ್ಚಿದರು.

ನಂತರ ಮಂಚೂರಿನ ಬಳಿ ಇರುವ ರೈಲ್ವೆ ಹಳಿಯ ಮೇಲೆ ತಲೆ ಒಡೆದುಹೋಗಿದ್ದ ಹರೀಶನ ಶವ ಬೆಳಿಗ್ಗೆ ಪತ್ತೆಯಾಯಿತು. ಅವನ ಮನೆಯೊಳಗೆ ಮಹಿಳೆಯರು ತಂದಿದ್ದ ಕಲ್ಲುಗಳ ರಾಶಿಯೇ ಬಿದ್ದಿತ್ತು.

50 ವರ್ಷಗಳ ಹಿಂದೆ

ಭಾನುವಾರ, 10-6-1973

● ಕೃಷಿ- ಕೈಗಾರಿಕೆ ಸಂಸ್ಥೆ ಬಂಡವಾಳ ಹೂಡಿಕೆ ‘ನಮ್ಮೆಲ್ಲರ ತೀರ್ಮಾನ’

ಬೆಂಗಳೂರು, ಜೂನ್ 9– ಎರಡು ಸಂಸ್ಥೆಗಳಿಗೆ ಕೃಷಿ– ಕೈಗಾರಿಕೆ ಕಾರ್ಪೊರೇಷನ್ ಹಣ ಕೊಡುವ ತೀರ್ಮಾನ ‘ಕೆ.ಎಚ್. ಪಾಟೀಲರೊಬ್ಬರ ನಿರ್ಧಾರವಲ್ಲ. ನಾವೆಲ್ಲ ಒಪ್ಪಿರುವ ತೀರ್ಮಾನ’ ಎಂದು ಮುಖ್ಯಮಂತ್ರಿ ಅರಸು ಅವರು ಇಂದು ವಿಧಾನಪರಿಷತ್ತಿನಲ್ಲಿ ಪ್ರಕಟಿಸಿದರು.

‘ಇದು ಔಪಚಾರಿಕವಾಗಿ ಅಥವಾ ಅನೌಪಚಾರಿಕವಾಗಿ ನಾವೆಲ್ಲ ಒಪ್ಪಿರುವ ತೀರ್ಮಾನ. ಆ ಸಂಸ್ಥೆಗಳಿಗೆ ತಾವು ಏಕೆ ಸಹಾಯ ಮಾಡಬೇಕೆಂದಿರುವುದನ್ನು ಪಾಟೀಲರು ನನಗೆ ಹೇಳುತ್ತಾ ಬಂದಿದ್ದಾರೆ. ವಿವರ ಹೇಳಿಲ್ಲದಿರಬಹುದು. ಆದರೆ ನನ್ನ ಗಮನಕ್ಕೆ ತಂದಿದ್ದಾರೆ’ ಎಂದು ಸಹೋದ್ಯೋಗಿಯನ್ನು ಸಮರ್ಥಿಸಿದರು.

ಹತ್ತಿ ಬೆಳೆಯುವ ರೈತರಿಗೆ ಹಾಗೂ ಸಹಕಾರ ಸಕ್ಕರೆ ಕಾರ್ಖಾನೆಯೊಂದರ ಸ್ಥಾಪನೆಗೆ ಸಹಾಯ ಮಾಡುವುದನ್ನು ಮೆಚ್ಚಬೇಕೆ ಹೊರತು ಟೀಕಿಸುವುದು ಸರಿಯಲ್ಲವೆಂದು ಒತ್ತಿ ಹೇಳಿದರು.

ಶತಮಾನಗಳಿಂದ ಶ್ರಮಪಡದೆ ಉಂಡವರೇ ಬಡವರಿಗೆ ನೀಡಿದ್ದನ್ನೆಲ್ಲಾ ‘ಬಿಟ್ಟಿ ಭಾಗ್ಯ’ ಎಂದು ಹಂಗಿಸುತ್ತಿದ್ದಾರೆ!

ಹೊರೆಯಲ್ಲ, ಇದೊಂದು ಪ್ರಯೋಗ

ಅನುರಣನ

ನಾರಾಯಣ ಎ.

ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದ ಐದು ಜನಕಲ್ಯಾಣ ಯೋಜನೆಗಳ ಸಾಧಕ– ಬಾಧಕಗಳ ಬಗ್ಗೆ ಒಂದು ಆರೋಗ್ಯಪೂರ್ಣ ಚರ್ಚೆಯ ಅಗತ್ಯವಿತ್ತು. ಯೋಜನೆಗಳ ಜಾರಿಯಿಂದಾಗುವ ಆರ್ಥಿಕ ಹೊರೆಯ ವಿಚಾರವಾಗಿ ಚಿಂತನ– ಮಂಥನ ನಡೆಯಬೇಕಿತ್ತು. ಅದೆಲ್ಲಾ ಆದ ನಂತರ ಎಲ್ಲಾ ಜಾರಿಯಾಗಿದ್ದರೆ ಚೆನ್ನಾಗಿತ್ತು. ಆದರೆ ಈಗ ನಡೆಯುತ್ತಿರುವುದು ಚರ್ಚೆಯಲ್ಲ, ಮಂಥನವಲ್ಲ. ಬದಲಿಗೆ, ಉಳ್ಳವರೆಲ್ಲಾ ಒಂದಾಗಿ, ಅದೇನೋ ಆರ್ಥಿಕ ಅಪರಾಧ ನಡೆಯುತ್ತಿದೆ ಎನ್ನುವಂತೆ ಪ್ರತಿಕ್ರಿಯಿಸುತ್ತಿದ್ದಾರೆ. ಕುಚೋದ್ಯದ ಹೇಳಿಕೆ ನೀಡುತ್ತಿದ್ದಾರೆ. ಸುಳ್ಳುಗಳನ್ನು ಹರಿಯಬಿಡುತ್ತಿದ್ದಾರೆ. ಬಡವರನ್ನು ಹಂಗಿಸಿ ಅವಮಾನಿಸುತ್ತಿದ್ದಾರೆ. ಇನ್ನು ಕೆಲವರು ಇಲ್ಲೂ ಕೋಮು ಆಯಾಮ ಏನಾದರೂ ಸಿಗಬಹುದೇನೋ ಎಂದು ಹೊಂಚುಹಾಕುತ್ತಿದ್ದಾರೆ.

ವಿರೋಧ ಪಕ್ಷವಾದ ಬಿಜೆಪಿಯವರು ಈ ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತದೆ ಎಂದು ಬೊಬ್ಬಿಡುತ್ತಾ, ಇನ್ನೊಂದೆಡೆ, ಯಾವುದೇ ಷರತ್ತುಗಳಿಲ್ಲದೆ ಅವುಗಳನ್ನು ಜಾರಿಗೊಳಿಸಿ ಎನ್ನುವ ಎಡಬಿಡಂಗಿ ಬೇಡಿಕೆಗಳನ್ನು ಮುಂದಿಡುತ್ತಿದ್ದಾರೆ. ರಾಜ್ಯದಲ್ಲಿ ಒಂದು ಜವಾಬ್ದಾರಿಯುತ ವಿರೋಧ ಪಕ್ಷ ಇದ್ದಿದ್ದರೆ ಮತ್ತು ಮಾಧ್ಯಮಗಳಲ್ಲಿ ಹೆಚ್ಚಿನವು ವಸ್ತುನಿಷ್ಠವಾಗಿ ಏನಾದರೂ ಇದ್ದಿದ್ದರೆ, ಚುನಾವಣಾ ಕಾಲದಲ್ಲಿ ನೀಡಿದ ಆತುರದ ಭರವಸೆ ಏನೇ ಇರಲಿ, ಈಗ ಷರತ್ತುಗಳನ್ನು ಅನ್ವಯಿಸಿಯೇ ಜಾರಿಗೊಳಿಸಿ, ವೆಚ್ಚ-ಪ್ರತಿಫಲ ಲೆಕ್ಕ ಹಾಕಿ ಮುಂದುವರಿಯಿರಿ ಅಂತ ಪಟ್ಟುಹಿಡಿಯಬೇಕಿತ್ತು.

ಅವೆಲ್ಲ ಬಿಟ್ಟುಬಿಡಿ. ಶತಮಾನಗಳಿಂದ ಬಿಟ್ಟಿ ಕೊಡುಗೆಗಳನ್ನೇ ಅನುಭವಿಸಿ ಪ್ರವರ್ಧಮಾನಕ್ಕೆ ಬಂದಿರುವ, ಮೇಲ್ವರ್ಗ ಎಂದು ಕರೆಯಬಹುದಾದ ಮಂದಿಯೇ ಈ ಯೋಜನೆಗಳನ್ನು ‘ಬಿಟ್ಟಿ ಭಾಗ್ಯ’ಗಳೆಂದು ಹಂಗಿಸುತ್ತಿದ್ದಾರೆ. ಇದು ವಿಪರ್ಯಾಸಕರವೂ, ಅಸಂಗತವೂ ಆದ ವಿದ್ಯಮಾನ. ಎಂದೂ ಹಸಿವನ್ನು ಅನುಭವಿಸಿ ಗೊತ್ತಿರದ, ಎಂದೂ ರೇಷನ್ ಅಕ್ಕಿ ತಿನ್ನದ, ಎಂದೂ ಕೆಂಪು ಬಸ್‌ಗಳಲ್ಲಿ ಪ್ರಯಾಣಿಸದ, ಎಂದೂ ಅಂದಿನ ಅನ್ನವನ್ನು ಅಂದೇ ದುಡಿದು ಸಂಪಾದಿಸುವ ಅನಿಶ್ಚಿತ ಬದುಕಿನ ಬವಣೆ ಏನೆಂದು ತಿಳಿಯದ ಈ ಮಂದಿಯ ಹಸಿಹಸಿ ಅಹಂಕಾರ ಎಷ್ಟಿದೆಯೆಂದರೆ, ಅವರು ‘ನಮ್ಮ ತೆರಿಗೆ ಅಭಿವೃದ್ಧಿಗಾಗಿಯೇ ವಿನಾ ಬಿಟ್ಟಿ ಭಾಗ್ಯಗಳಿಗಲ್ಲ’ ಎನ್ನುವ ಪೋಸ್ಟರ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಯಥೇಚ್ಛವಾಗಿ ಪ್ರದರ್ಶಿಸುತ್ತಿದ್ದಾರೆ.

ಈ ಪ್ರಪಂಚದಲ್ಲಿ ಭಿಕ್ಷೆ ಬೇಡಿ ತಿನ್ನುವ ವ್ಯಕ್ತಿಗಳೂ ತೆರಿಗೆ ಕಟ್ಟುತ್ತಾರೆ. ಅದೇ ರೀತಿ ಈ ದೇಶದ ಶ್ರೀಮಂತಾತಿಶ್ರೀಮಂತರು ಕೂಡಾ ಒಂದಲ್ಲ ಒಂದು ರೀತಿಯ ಬಿಟ್ಟಿ ಭಾಗ್ಯಗಳ ಫಲಾನುಭವಿಗಳಾಗಿದ್ದಾರೆ. ಬುದ್ಧನೇನಾದರೂ ಈಗ ಇದ್ದಿದ್ದರೆ, ಕಿಸಾಗೌತಮಿಗೆ ಸಾವಿಲ್ಲದ ಮನೆಯ ಸಾಸಿವೆ ತಂದುಕೊಡು ಎನ್ನುವ ಬದಲು, ಸರ್ಕಾರ ನೀಡುವ ‘ಬಿಟ್ಟಿ’ ಭಾಗ್ಯಗಳ ಲಾಭ ಪಡೆಯದವರ ಮನೆಯ ಸಾಸಿವೆ ತಂದುಕೊಡು ಎನ್ನುತ್ತಿದ್ದನೇನೊ?

ಹಾಗಾಗಿ, ‘ನಮ್ಮ ತೆರಿಗೆ- ನಿಮಗೆ ಬಿಟ್ಟಿ ಕೊಡುಗೆ’ ಎಂದು ಹಂಗಿಸುವ ಹಕ್ಕು ಯಾರಿಗೂ ಇಲ್ಲ. ಇದೆ ಎಂದಾದರೆ, ನಾಳೆ ದೇಶದ ಬಡವರೆಲ್ಲಾ ಎದ್ದು, ನಾವು ನೀಡಿದ ತೆರಿಗೆಯನ್ನು ದೇವಸ್ಥಾನ ಕಟ್ಟಲಿಕ್ಕೆ, ಮಠಮಾನ್ಯಗಳಿಗೆ ದೇಣಿಗೆ ನೀಡಲಿಕ್ಕೆ, ಪ್ರತಿಮೆ ನಿರ್ಮಿಸಲಿಕ್ಕೆ, ಪಾರ್ಲಿಮೆಂಟ್ ಕಟ್ಟಡಕ್ಕೆ ಪೂಜೆ ಮಾಡಲು ಪುರೋಹಿತರನ್ನು ವಿಶೇಷ ವಿಮಾನದಲ್ಲಿ ಸಾಗಿಸುವುದಕ್ಕೆ, ಮಾಧ್ಯಮಗಳಿಗೆ ಮನಸೋಇಚ್ಛೆ ಜಾಹೀರಾತು ನೀಡುವುದಕ್ಕೆ ಹಾಗೂ ಸರ್ಕಾರದ ಜವಾಬ್ದಾರಿಗೆ ಸಂಬಂಧಪಡದ ಇಂತಹ ಇನ್ನಿತರ ಕೆಲಸಗಳಿಗೆ ಬಳಸಬಾರದು ಅಂತ ಬೀದಿಗಿಳಿಯಬಹುದಲ್ಲ.

ಐದು ಯೋಜನೆಗಳನ್ನೊಮ್ಮೆ ಸೂಕ್ಷ್ಮವಾಗಿ ನೋಡಿದರೆ, ‘ಇದ್ಯಾಕೆ ಬೇಕಿತ್ತು’ ಅನ್ನಿಸುವಂತಹದ್ದು ಏನೂ ಅಲ್ಲಿ ಕಾಣಿಸುವುದಿಲ್ಲ. ಆಹಾರ ಭದ್ರತಾ ಕಾಯ್ದೆಯಡಿಯಲ್ಲಿ ಅಕ್ಕಿ ನೀಡಬೇಕಾಗಿರುವ ಜವಾಬ್ದಾರಿ ಸರ್ಕಾರದ್ದು. ಹಾಗಾಗಿ ಉಚಿತ ಅಕ್ಕಿ ನೀಡಿದ್ದನ್ನು ಪ್ರಶ್ನಿಸುವಂತಿಲ್ಲ. ನಿರುದ್ಯೋಗ ಭತ್ಯೆ ಬಹುಕಾಲದಿಂದಲೂ ಚರ್ಚೆಯಲ್ಲಿದೆ. ಎಷ್ಟೋ ದೇಶಗಳು ಇದನ್ನು ನೀಡುತ್ತಿವೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣವು ಬಡವರ ವಾಹನವಾದ ಕೆಂಪು ಬಸ್‌ಗೆ ಸೀಮಿತ. ಬಡ ಮಹಿಳೆಯರು ಬಹುತೇಕ ಪ್ರಯಾಣಿಸುವುದು ಉದ್ಯೋಗ ಅಥವಾ ಅಗತ್ಯ ಕೆಲಸದ ನಿಮಿತ್ತ. ತಮಿಳುನಾಡಿನಲ್ಲಿ ಜಾರಿಯಲ್ಲಿರುವ ಈ ಯೋಜನೆಯ ಸತ್ಪರಿಣಾಮಗಳ ಬಗ್ಗೆ ಅಧ್ಯಯನಗಳಿವೆ.

ಬಹಳ ವಿವಾದಕ್ಕೆ ಒಳಗಾಗಿರುವುದು ಎಂದರೆ 200 ಯೂನಿಟ್‌ವರೆಗಿನ ಉಚಿತ ವಿದ್ಯುತ್. ಹಿಂದೆ ಇಂಧನ (ಅಡುಗೆ ಅನಿಲ) ಸಬ್ಸಿಡಿ ಇತ್ತು. ಅದನ್ನೀಗ ಕಡಿತಗೊಳಿಸಿದ ಕಾರಣ ಬಡವರು ಕಷ್ಟದಲ್ಲಿದ್ದಾರೆ. ಹಾಗಾಗಿ, ರಾಜ್ಯ ಸರ್ಕಾರ ತನ್ನ ಸುಪರ್ದಿಯಲ್ಲಿರುವ ಇನ್ನೊಂದು ಇಂಧನದ ವಿಚಾರದಲ್ಲಿ ವಿನಾಯಿತಿ ತೋರಿದೆ. ಅಡುಗೆ ಅನಿಲದ ಸಬ್ಸಿಡಿಯನ್ನು ನಿರಾಕರಿಸಿದವರಿದ್ದಾರೆ. ಹಾಗೆಯೇ, ಬೇಡವಾದವರು ಉಚಿತ ವಿದ್ಯುತ್ ಬಿಟ್ಟುಬಿಡಬಹುದು. ಅಷ್ಟೇ ವಿವಾದಕ್ಕೆ ಒಳಗಾಗಿರುವುದು ಮನೆಯೊಡತಿಗೆ ನೀಡಲಿರುವ ಮಾಸಿಕ ₹ 2,000. ಇದು ಪ್ರಪಂಚದಾದ್ಯಂತ ಚಾಲ್ತಿಗೆ ಬರುತ್ತಿರುವ ಸಾರ್ವತ್ರಿಕ ಕನಿಷ್ಠ ಆದಾಯ (ಯೂನಿವರ್ಸಲ್ ಬೇಸಿಕ್ ಇನ್‌ಕಂ) ಎಂದು ಕರೆಯಲಾಗುವ ಯೋಜನೆ. ಅಗತ್ಯ ಇರುವ ಎಲ್ಲರಿಗೂ ಇಂತಿಷ್ಟು ಕನಿಷ್ಠ ವೇತನ ಅಂತ ನೀಡುವ ಈ ಪರಿಪಾಟವು ಕಲ್ಯಾಣ ಕಾರ್ಯಕ್ರಮಗಳ ಪೈಕಿ ಹೊಸ ಆವಿಷ್ಕಾರ. ಇದನ್ನು ಮಹಿಳೆಯರಿಗೆ ಸೀಮಿತವಾಗಿ ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. ನಾಳೆ ಇದು ದೇಶದಾದ್ಯಂತ ಪ್ರಯೋಗಕ್ಕೆ ಬಂದರೂ ಬಂದೀತು.



ಆರ್ಥಿಕ ಅಭಿವೃದ್ಧಿ ಚಿಂತನೆಯಲ್ಲಿ ನೂರಾರು ಕವಲುಗಳಿವೆ. ಅಭಿವೃದ್ಧಿ ಸಾಧಿಸುವ ಒಂದು ಹಂತದಲ್ಲಿ ಬಡವರ ಜೇಬಿಗೆ ಹಣ ಹರಿಯುವಂತೆ ಮಾಡುವುದು ಕೂಡಾ ಒಂದು ಅಭಿವೃದ್ಧಿ ಮಾದರಿ ಅಂತ ಅರ್ಥಶಾಸ್ತ್ರವೇ ಹೇಳುತ್ತದೆ. ಯಾಕೆಂದರೆ ಬಡವರು ತಮಗೆ ಸಿಕ್ಕ ಹಣವನ್ನು ಖರ್ಚು ಮಾಡುತ್ತಾರೆ. ತಮ್ಮ ಅಗತ್ಯಗಳೆಲ್ಲಾ ತೀರಿರುವ ಶ್ರೀಮಂತರ ಕೈಸೇರಿದ ಹಣ ಖರ್ಚಾಗದೇ ಉಳಿಯುತ್ತದೆ. ಆರ್ಥಿಕತೆ ಬೆಳೆಯುವುದು ಗಳಿಸಿದ್ದನ್ನು ಖರ್ಚು ಮಾಡುವ ಒಲವು ಜನರಲ್ಲಿ ಎಷ್ಟಿದೆ ಎನ್ನುವುದರ ಆಧಾರದಲ್ಲಿ. ಹಾಗಾಗಿ ‘ಬಿಟ್ಟಿ ಭಾಗ್ಯ’ ಅಂತ ಹಂಗಿಸುವಲ್ಲಿ ಕಾಣುವುದು ಅರ್ಥಶಾಸ್ತ್ರವಲ್ಲ, ಅಲ್ಲಿರುವುದು ಚುನಾವಣೆಯಲ್ಲಿ ರಾಜ್ಯದ ಬಡಜನರು ನೀಡಿದ ತೀರ್ಪಿನ ಬಗ್ಗೆ ಇರುವ ಅಸೂಯೆ.

ನಮ್ಮ ಪಕ್ಕದ ರಾಜ್ಯವಾದ ಆಂಧ್ರಪ್ರದೇಶ ಈ ವರ್ಷ ಇಂತಹ ಕಾರ್ಯಕ್ರಮಗಳಿಗೆ ಬರೋಬ್ಬರಿ ₹ 54,228 ಕೋಟಿ ಖರ್ಚು ಮಾಡುತ್ತಿದೆ. ಅಲ್ಲಿನ ಆರ್ಥಿಕತೆ ಚಿಗಿತುಕೊಳ್ಳುತ್ತಿರುವವರ್ತಮಾನವಿದೆ. ಕರ್ನಾಟಕದಲ್ಲೂ ಒಂದು ಪ್ರಯೋಗ ನಡೆಯಲಿ. ಕೆಲವರಿಗೆ ಮಾತ್ರ ಅಗೋಚರವಾಗಿ ಸಿಗುತ್ತಿದ್ದ ‘ಬಿಟ್ಟಿ’ ಭಾಗ್ಯ ಎಲ್ಲರಿಗೂ ಸಿಗಲಿ. ಹಸಿದವರಿಗೆ ಮೀನು ನೀಡಬಾರದು, ಮೀನು ಹಿಡಿಯಲು ಕಲಿಸಬೇಕು ಎನ್ನುವ ನಾಣ್ನುಡಿಯನ್ನು ಹಲವರು ಗುನುಗುನಿಸುತ್ತಿದ್ದಾರೆ. ಆದರೆ ಈ ಯೋಜನೆಗಳಿರುವುದು ಮೀನು ಹಿಡಿಯಲು ಕಲಿತ ನಂತರವೂ ಕಷ್ಟ ಎದುರಿಸುತ್ತಿರುವವರಿಗಾಗಿ ಎನ್ನುವ ಸತ್ಯವನ್ನು ಮರೆಯುತ್ತಾರೆ.

ಈ ವಾದಗಳನ್ನೆಲ್ಲ ಬದಿಗಿಡೋಣ. ಜನರನ್ನು ಮರುಳು ಮಾಡಿ ಚುನಾವಣೆ ಗೆಲ್ಲಲೆಂದೇ ಕಾಂಗ್ರೆಸ್ ಈ ಯೋಜನೆಗಳನ್ನು ಪ್ರಕಟಿಸಿದೆ ಎನ್ನುವುದೇ ಸರಿ ಎಂದುಕೊಳ್ಳೋಣ. ಈ ಪ್ರಕಾರ ನೋಡಿದರೆ, ಚುನಾವಣಾ ಕಾಲದಲ್ಲಿ ರಾಜ್ಯದ ಮತದಾರರ ಮುಂದೆ ಎರಡು ಆಯ್ಕೆಗಳಿದ್ದವು. ಒಂದೋ ‘ಪುಕ್ಕಟೆ’ ಯೋಜನೆಗಳ ಭರವಸೆಗೆ ಮರುಳಾಗಿ ಒಂದು ಪಕ್ಷಕ್ಕೆ ಮತ ನೀಡುವುದು. ಇಲ್ಲವೇ ಮತಾಂಧತೆಯ ಅಮಲೇರಿಸಿಕೊಂಡು ಇನ್ನೊಂದು ಪಕ್ಷಕ್ಕೆ ಮತ ನೀಡುವುದು. ಕರ್ನಾಟಕದ ಮತದಾರರು ‘ಪುಕ್ಕಟೆ’ ಯೋಜನೆಗಳಿಗೆ ಮರುಳಾಗುವ ಮಾದರಿಯನ್ನು ಆಯ್ದುಕೊಂಡಿದ್ದಾರೆ. ಮತಾಂಧತೆಯ ಅಮಲೇರಿಸಿಕೊಂಡು ಮತ ನೀಡುವ ಆಯ್ಕೆಯನ್ನು ತಿರಸ್ಕರಿಸಿದ್ದಾರೆ. ಅದಕ್ಕೆ ಮತದಾರರ ವಿವೇಕ ಕಾರಣವೋ ಅಥವಾ ವ್ಯಾವಹಾರಿಕ ಬದುಕಿನ ಲೆಕ್ಕಾಚಾರ ಕಾರಣವೋ ಗೊತ್ತಿಲ್ಲ.

ಏನೇ ಆಗಲಿ, ‘ಪುಕ್ಕಟೆ’ ಯೋಜನೆಗಳ ಕಾರಣಕ್ಕೆ ಹೆಚ್ಚೆಂದರೆ ರಾಜ್ಯದಲ್ಲಿ ಒಂದಷ್ಟು ಆರ್ಥಿಕ ಮುಗ್ಗಟ್ಟು ಉಂಟಾಗಬಹುದು. ಆಗಲಿ ಬಿಡಿ. ಅದು ಮತಾಂಧತೆಯ ವಿಷ ಉಂಟುಮಾಡುವ ದಾರುಣ ದುರಂತಕ್ಕೆ ಹೋಲಿಸಿದರೆ ಏನೇನೂ ಅಲ್ಲ. ಆರ್ಥಿಕ ಬಿಕ್ಕಟ್ಟು ಎನ್ನುವುದು ಒಂದು ತಾತ್ಕಾಲಿಕ ಸ್ಥಿತಿ. ಯಾವುದೇ ರಾಜ್ಯ ಶಾಶ್ವತವಾಗಿ ದಿವಾಳಿಯಾಗಿ ನಾಶವಾದ ನಿದರ್ಶನ ಇಲ್ಲ. ಆದರೆ ಮತಾಂಧತೆಯ ವಿಷ ಅಡರಿದಾಗ ಸಂಭವಿಸಬಹುದಾದ ವಿವಿಧ ರೀತಿಯ ಹಾನಿಗಳು ಏನಿವೆ ಅವೆಲ್ಲವೂ ಒಂದು ಸಮಾಜವನ್ನು ಶಾಶ್ವತವಾದ ಬಿಕ್ಕಟ್ಟಿಗೆ ನೂಕಬಲ್ಲವು. ಹಾಗಾಗಿ, ಮತಾಂಧತೆಯ ಮೂಲಕ ಮತದಾರರನ್ನು ಮರುಳುಗೊಳಿಸುವ ಮಾದರಿಯನ್ನು ಸೋಲಿಸಬಲ್ಲ ಇನ್ಯಾವುದೇ ಮರುಳುಗೊಳಿಸುವ ಮಾದರಿಯನ್ನಾದರೂ ಮರುಮಾತಿಲ್ಲದೆ ಮನ್ನಿಸಬಹುದು.

ಚುರುಮುರಿ



ಪಾರ್ಕಿನಲ್ಲೊಂದು ಸುತ್ತು...

● ಕೆ.ವಿ.ರಾಜಲಕ್ಷ್ಮಿ

ಮನೆಯಲ್ಲಿ ಗ್ಯಾರಂಟಿಗಳದ್ದೇ ಚರ್ಚೆಯ ನಡುವೆ ಎರಡನೇ ಕಾಫಿ ಸಿಗುವ ಗ್ಯಾರಂಟಿ ಕಾಣಿಸದಾಗ ಕಂಠಿಯ ಜೊತೆ ಪಾರ್ಕಿನ ಕಡೆಗೆ ಹೆಜ್ಜೆ ಹಾಕಿದೆ.

‘ಮೀಟಿಂಗ್ ಶುರುವಾಗಿರುತ್ತೆ ಜಾಯಿನ್ ಆಗೋಣ’ ಎಂದು ಕಂಠಿ ಹೇಳಿದಾಗ, ಏನೂ ಅರ್ಥವಾಗದೆ ಮಿಕಮಿಕ ನೋಡಿದೆ. ‘ನೊಂದ ಗಂಡಸರ ಸಂಘ, ಮಳೆ ಬಂದರೆ ನಿಲ್ಲೋಕ್ಕೆ ಶೆಲ್ಟರ್ ಇದೆಯಲ್ಲ? ನಮ್ಮಂಥವರು ದಿನಾಲೂ ಅಲ್ಲಿ ಕುಳಿತು ಕಷ್ಟ ಸುಖ ಹಂಚ್ಕೋತಾರೆ’ ಎಂದು ಸಂಘಕ್ಕೆ ನನ್ನನ್ನು ಪರಿಚಯಿಸಿದ.

‘ಬಸ್ಸಿನಲ್ಲಿ ನಮಗೂ, ಐ ಮೀನ್ ಹಿರಿಯ ನಾಗರಿಕರಿಗೂ ಫ್ರೀ ಇರ್ಬೇಕಿತ್ತು, ಹೊತ್ತು ಹೋಗದಿದ್ದಾಗ ಬಸ್ಸಲ್ಲಿ ಕುಳಿತು ಸುತ್ತಾಡಿಕೊಂಡು ಬರಬಹುದಿತ್ತು’ ಒಬ್ಬರ ಅಳಲು.

‘ಗೃಹಲಕ್ಷ್ಮಿ ಯೋಜನೆಯಲ್ಲಿ ಯಾರು ಹೆಡ್ಡು ಅನ್ನೋ ವಿಷಯಕ್ಕೆ ಮನೇಲಿ ನಿತ್ಯ ಜಗಳ, ಕದನ, ಟೈಮ್ ಟೈಮ್‌ಗೆ ಊಟ ತಿಂಡಿ ಕಾಣ್ತಿಲ್ಲ’ ಮತ್ತೊಬ್ಬರ ಸಂಕಟ.

‘ಅಲ್ಲ, ಕರೆಂಟ್ ಫ್ರೀ ಅಂತ ಹೇಳ್ತಿದ್ದ ಹಾಗೇ ಬೆಲೆ ಜಾಸ್ತಿ ಮಾಡಿ ಶಾಕ್ ಕೊಟ್ರು. ಅದಿರಲಿ, ಆರು ತಿಂಗಳಿಂದ ಖಾಲಿ ಇದ್ದ ನಮ್ಮ ಮನೆಗೆ ಬಾಡಿಗೆಗೆ ಬರೋಕ್ಕೆ ಹಿಂದೇಟು, ವರ್ಷದ ಸರಾಸರಿ ಯೂನಿಟ್‌ಗೆ ಹೊಡೆತ ಬಿತ್ತಲ್ಲ? ಅದೇ ಪಕ್ಕದ್ಮನೆಗೆ ನಾ ಮುಂದು ತಾ ಮುಂದು ಅಂತ ಮುಗಿಬೀಳ್ತಿದ್ದಾರೆ. ವಿಪರೀತ ಕರೆಂಟ್ ಬಿಲ್ ಬರ್ತಿದ್ದ ಮನೆಗೆ ಡಿಮ್ಯಾಂಡು’.

‘ಹೈದರಾಬಾದಿಗೆ ಮದುವೆಗೆ ಹೋಗ್ಬೇಕು ಖರ್ಚಿಗೆ ದುಡ್ಡು ಅಂದ್ಲು. ಬೀದರ್‌ತನಕ ಫ್ರೀಯಾಗಿ ಹೋಗಿ ಅಲ್ಲಿಂದ ಬಸ್ ಹಿಡಿ ಅಂತ ನಾನು ತಲೆ ಉಪಯೋಗಿಸಿದೆ’.

‘ಡಿಗ್ರಿ ಮುಗಿದ ಮೇಲೆ ಆರು ತಿಂಗಳು ಹಾಯಾಗಿ ರಿಲ್ಯಾಕ್ಸ್ ಆಗಿ, ಎರಡು ವರ್ಷ ನಿರುದ್ಯೋಗ ಭತ್ಯೆ ಎಂಜಾಯ್ ಮಾಡಿ ಆಮೇಲೆ ಕೆಲಸ ನೋಡ್ಕೋತೀನಿ ಅಂತಾನೆ ನನ್ನ ಸೋಮಾರಿ ಸುಪುತ್ರ. ಎಲ್ಲಿ ಹೋಗಿ ತಲೆ ಚಚ್ಕೊಳ್ಳೋದು?’ ಚರ್ಚೆ ರೋಚಕವಾಗಿತ್ತು.

‘ಇವತ್ತು ಕಾಫಿ ಯಾರು ಸ್ಪಾನ್ಸರ್ ಮಾಡ್ತಿರೋದು?’

‘ಇವರು, ಇವತ್ತೇ ಜಾಯಿನ್ ಆಗಿರೋದು’ ಕಂಠಿ ನನ್ನತ್ತ ಬೊಟ್ಟುಮಾಡಿದ.

ಸಂಗತ

ಬರಲಿದೆ ಇನ್ನೊಂದು ಹಗಲು ನಕ್ಷತ್ರ!

400 ವರ್ಷಗಳಿಂದ ನಮಗೆ ಕಾಣಸಿಗದ ನಕ್ಷತ್ರಸ್ಫೋಟದ ಅಪೂರ್ವ ಅನುಭವಕ್ಕೆ ಸಿದ್ಧರಾಗೋಣ

● ಬಿ.ಎಸ್.ಶೈಲಜಾ

ಹಗಲಿಗೆ ಒಂದೇ ನಕ್ಷತ್ರ- ನಮ್ಮ ಸೂರ್ಯ. ಅದರ ಪ್ರಖರತೆಯಲ್ಲಿ ಇನ್ನುಳಿದ ನಕ್ಷತ್ರಗಳೆಲ್ಲ ಕಾಣದಂತಾಗುತ್ತವೆ. ಇದು ಹೊಸ ವಿಷಯವೇನಲ್ಲ. ಆದರೆ ಹಿಂದೆ ಹಗಲಿನಲ್ಲೂ ಜನ ಇನ್ನೊಂದು ನಕ್ಷತ್ರವನ್ನು ಕಂಡಿದ್ದರು (1054, 1572 ಮತ್ತು 1604ರಲ್ಲಿ). ಸ್ತಂಭೀಭೂತರಾದವರು ಕಂಡದ್ದನ್ನು ಬರೆದಿಟ್ಟಿದ್ದರಿಂದ ನಮಗಿಂದು ಅದು ತಿಳಿದಿದೆ. ಆದರೆ ಹಾಗೆ ಇನ್ನೊಂದು ನಕ್ಷತ್ರ ಹೇಗೆ ಕಾಣಲು ಸಾಧ್ಯ? ಅದು ಯಾವುದು?

ಈ ಬಗೆಯ ನಕ್ಷತ್ರಸ್ಫೋಟಕ್ಕೆ ಸೂಪರ್ನೋವಾ ಎಂಬ ಹೆಸರಿದೆ. 400 ವರ್ಷಗಳಿಂದ ಇಂತಹ ಒಂದು ನೋಟ ಜನಸಾಮಾನ್ಯರಿಗೆ ಸಿಕ್ಕಿರಲಿಲ್ಲ. ಈಗ ಒಂದು ಪರಿಚಿತ ನಕ್ಷತ್ರವು ಸ್ಫೋಟಕ್ಕೆ ಅಣಿಯಾಗುತ್ತಿರುವ ಸೂಚನೆ ಸಿಕ್ಕಿದೆ. ರಾತ್ರಿಯ ಆಕಾಶದಲ್ಲಿ ಬಹಳ ಆಕರ್ಷಕವಾಗಿ ಕಾಣುವ ನಕ್ಷತ್ರಪುಂಜ ಒರೈಯನ್ ಅಥವಾ ಮಹಾವ್ಯಾಧ. ಇದರಲ್ಲಿದೆ ಕೆಂಪು ದೈತ್ಯ ಆರಿದ್ರಾ (ಬೆಟೆಲ್‌ಜ್ಯೂಸ್). ಅದರ ವ್ಯಾಸ ನಮ್ಮ ಗುರುಗ್ರಹದ ಕಕ್ಷೆಯಷ್ಟು. ಆದ್ದರಿಂದ ಅದು ದೈತ್ಯ ಎಂಬ ಬಿರುದು ಪಡೆದುಕೊಂಡಿದೆ.

ಬರಿಗಣ್ಣಿನಿಂದ ಸುಲಭವಾಗಿ ಗುರುತಿಸಬಹುದಾದ್ದರಿಂದ ವೀಕ್ಷಕರು ಅದರ ಪ್ರಕಾಶದಲ್ಲಿ ಸಣ್ಣ ಪ್ರಮಾಣದ ವ್ಯತ್ಯಾಸಗಳನ್ನು ಗಮನಿಸಿದ್ದಾರೆ. ಇದರಲ್ಲೊಂದು ನಿಯತಕಾಲಿಕತೆ ಇದೆ, ಸುಮಾರು 6 ವರ್ಷಗಳ ಏರಿಳಿತವಿದೆ ಎಂಬುದನ್ನು ಅಧ್ಯಯನ ತೋರಿಸಿದೆ. ಬೆಟೆಲ್‌ಜ್ಯೂಸ್ 2019ರ ಡಿಸೆಂಬರ್‌ನಲ್ಲಿ ಸುದ್ದಿ ಮಾಡಿತು. ಅದರ ಪ್ರಕಾಶ ಕಡಿಮೆಯಾಯಿತು. ಎರಡು– ಮೂರು ತಿಂಗಳಲ್ಲಿ ಪುನಃ ಪ್ರಕಾಶಮಾನವಾಯಿತು. 2020ರ ಆಗಸ್ಟ್‌ನಲ್ಲಿ ಮತ್ತೆ ಪ್ರಕಾಶ ಕುಂದಿತು. ಹಳೆಯ ನಿಯತಕಾಲಿಕ ವ್ಯತ್ಯಾಸಗಳ ಆಧಾರದ ಮೇಲೆ ಲೆಕ್ಕಹಾಕಿದ ತಜ್ಞರು, 2022ರ ಜುಲೈನಲ್ಲಿ ಪುನಃ ಅದರ ಪ್ರಕಾಶ ಕುಂದಬಹುದು ಎಂದಿದ್ದರು. ಆದರೆ ಈಗ ಅದು ಮತ್ತೆ ಸತತವಾಗಿ ಪ್ರಕಾಶ ಹೆಚ್ಚಿಸಿಕೊಳ್ಳುತ್ತಿದೆ. ಪರೀಕ್ಷಿಸಬೇಕೆ? ಸ್ವಲ್ಪ ತಾಳ್ಮೆ ಇರಲಿ. ಈಗದು ಸೂರ್ಯನೊಡನೆ ಉದಯಿಸಿ ಕಂತುತ್ತಿದೆ. ಇನ್ನೊಂದು ತಿಂಗಳ ನಂತರ ಮುಂಜಾವಿನಲ್ಲಿ ಪೂರ್ವದಲ್ಲಿ ಕಾಣುತ್ತದೆ.

ಅನೇಕ ಹವ್ಯಾಸಿ ವೀಕ್ಷಕರು ಒದಗಿಸಿದ್ದ ಪ್ರಕಾಶದ ಅಳತೆಗಳಲ್ಲಿ ಪುರ್ಕಿಂಜೆ ಪರಿಣಾಮದ ಪ್ರಭಾವ ಇದೆಯೇ ಎಂಬುದನ್ನು ಪರಿಶೀಲಿಸಲಾಯಿತು. ಕೆಂಪು ಬಣ್ಣದ ಗುಲಾಬಿ ಹೂವು ಹಗಲಿನಲ್ಲಿ ಕಾಣುವಂತೆ ಚಂದ್ರನ ಬೆಳಕಿನಲ್ಲಿ ಕಾಣುವುದಿಲ್ಲ ಎಂಬುದನ್ನು ನೀವು ಗಮನಿಸಿರಬೇಕು. ಇದಕ್ಕೆ ಕಾರಣ ನಮ್ಮ ಕಣ್ಣಿನೊಳಗಿನ ಸಂವೇದಕಗಳು. ಪ್ರಕಾಶಮಾನವಾದ ಬೆಳಕಿನಲ್ಲಿ ಅವು ನಮಗೆ ತೋರಿಸಿಕೊಡುವ ಬಣ್ಣವು ಮಂದ ಬೆಳಕಿನಲ್ಲಿಯ ಬಣ್ಣಕ್ಕಿಂತ ಗಾಢವಾಗಿರುತ್ತದೆ. ಇದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದ ಝೆಕ್ ವಿಜ್ಞಾನಿ ಯಾನ್ ಎವಾಂಜೆಲಿಸ್ಟ ಪುರ್ಕಿಂಜೆ, ಮಂದ ಬೆಳಕಿನಲ್ಲಿ ನೀಲಿ ಸಂವೇದಕಗಳು ಕೆಂಪು ಸಂವೇದಕಗಳಿಗಿಂತ ಹೆಚ್ಚು ಕ್ರಿಯಾಶೀಲವಾಗುತ್ತವೆ ಎಂದು ತೋರಿಸಿಕೊಟ್ಟರು.

ಸೂರ್ಯಾಸ್ತದಂತಹ ಸಂಜೆಯ ದೃಶ್ಯಗಳನ್ನು ಚಿತ್ರಿಸುವ ಕಲಾವಿದರಿಗೆ ಈ ಅನುಭವವಾಗಿರುತ್ತದೆ. ಹೀಗೆ ನಮ್ಮ ಕಣ್ಣಿನ ಸಂವೇದಕಗಳು ಕಡಿಮೆ ಬೆಳಕಿನಲ್ಲಿ ಕೆಂಪುಬಣ್ಣಕ್ಕೆ ಕಡಿಮೆ ಸ್ಪಂದಿಸಿರುವುದರಿಂದ ಕೆಂಪು ನಕ್ಷತ್ರವಾದ ಆರಿದ್ರಾ ಅನೇಕರ ಕಣ್ಣಿಗೆ ಮಂಕಾಗಿ ಕಂಡಿರಬಹುದು ಎಂಬುದು ತರ್ಕ. ಆದರೆ ಕ್ಯಾಮೆರಾದಂತಹ ಉಪಕರಣಗಳೂ ಪ್ರಕಾಶ ಕುಂದಿದ್ದು ನಿಜ ಎಂದು ರುಜುವಾತುಪಡಿಸಿದವು.

ಈ ನಕ್ಷತ್ರದ ಅಂತರಾಳದ ವಿದ್ಯಮಾನಗಳನ್ನು ನಾವು ನೇರವಾಗಿ ತಿಳಿಯುವಂತಿಲ್ಲ. ನಮ್ಮಿಂದ 548 ಜ್ಯೋತಿರ್ವರ್ಷ ದೂರದಲ್ಲಿರುವ ಇದು ಬಹಳಷ್ಟು ಪ್ರಮಾಣದಲ್ಲಿ ವಸ್ತುವನ್ನು ಚಿಮ್ಮಿಸಿ ಬಹಳ ವಸ್ತುವನ್ನು ಕಳೆದುಕೊಳ್ಳುತ್ತದೆ. ಸೂರ್ಯ ಕೂಡ ಸೌರ ಮಾರುತದ ಮೂಲಕ ವಸ್ತುವನ್ನು ಕಳೆದುಕೊಳ್ಳುತ್ತದೆ. ಆದರೆ ಬೆಟೆಲ್‌ಜ್ಯೂಸ್ ಇದರ ಲಕ್ಷ ಪಟ್ಟು ಹೆಚ್ಚು ವಸ್ತುವನ್ನು ಚಿಮ್ಮಿಸುವುದರಿಂದ ಆ ವಸ್ತು ದೂಳಿನ ಮೋಡದಂತೆ ನಕ್ಷತ್ರವನ್ನು ಆವರಿಸಿರಬೇಕು ಎಂಬುದು ವಿವರಣೆ.

ಹೀಗೆ ಇತರ ನಕ್ಷತ್ರಗಳಿಗೂ ಆಗುತ್ತಿರಬಹುದು. ಆದರೆ ಆರಿದ್ರಾ ನಕ್ಷತ್ರದಲ್ಲಿ ಈ ಬಗೆಯ ಉತ್ಸರ್ಜನೆ ಬಹಳ ತ್ವರಿತವಾಗಿ ನಡೆಯುತ್ತಿದೆ. ದೈತ್ಯ ಹಂತವಾದ ಮೇಲೆ ಸೂಪರ್‌ನೋವಾ ಸ್ಫೋಟ ಆಗಿ ನಕ್ಷತ್ರದ ಅವಸಾನವಾಗುತ್ತದೆ. ಹೈಡ್ರೋಜನ್ ಸಂಲಯನದಿಂದ (ಫ್ಯೂಷನ್) ಹೀಲಿಯಂ, ಹೀಲಿಯಂ ಸಂಲಯನದಿಂದ ಕಾರ್ಬನ್- ಹೀಗೆ ಹಂತ ಹಂತವಾಗಿ ನಡೆಯುವ ಸಂಲಯನ ಕ್ರಿಯೆಗಳಲ್ಲಿ ಈ ನಕ್ಷತ್ರ ಯಾವ ಹಂತವನ್ನು ತಲುಪಿದೆ? ಆ ಹಂತದಲ್ಲಿ ಕೇಂದ್ರದಲ್ಲಿ ನ್ಯೂಟ್ರಾನ್ ನಕ್ಷತ್ರ ಉಂಟಾಗುತ್ತದೆಯೋ ಕಪ್ಪುಕುಳಿ ಉಂಟಾಗುತ್ತದೆಯೋ ಎಂಬುದನ್ನು ಇಂತಹ ಉತ್ಸರ್ಜನೆಯ ವಿದ್ಯಮಾನಗಳೇ ನಿರ್ಧರಿಸುವುದರಿಂದ ಆರಿದ್ರಾ ಪ್ರಾಮುಖ್ಯ ಪಡೆದುಕೊಳ್ಳುತ್ತದೆ.

ಇತ್ತೀಚೆಗೆ ಪ್ರಕಟವಾದ ಅಧ್ಯಯನದ ಪ್ರಕಾರ, ಅದು ಈಗಾಗಲೇ ಕಾರ್ಬನ್ ಸಂಲಯನದ ಹಂತವನ್ನು ತಲುಪಿದೆ. ಮುಂದಿನ ಆಕ್ಸಿಜನ್, ನಿಯಾನ್- ಈ ಎಲ್ಲ ಹಂತಗಳೂ ನಡೆಯಬೇಕಿದೆ. ಆದರೆ ಅವುಗಳೆಲ್ಲ ಬಹಳ ಕ್ಷಿಪ್ರವಾಗಿ ನಡೆಯುವಂತಹವು. ಕ್ಷಿಪ್ರ ಎಂದರೆ ಖಗೋಳೀಯ ಅಳತೆಗಳಲ್ಲಿ ಕೆಲವೇ ತಿಂಗಳಾಗಬಹುದು, ಹತ್ತು ವರ್ಷಗಳೂ ಆಗಬಹುದು. ಕಾದು ನೋಡಬೇಕಷ್ಟೇ.

ಆಗ ನಮ್ಮ ಆಕಾಶದಲ್ಲಿ ಕನಿಷ್ಠ ಒಂದು ವರ್ಷ ಹಗಲಿನಲ್ಲಿಯೂ ಈ ನಕ್ಷತ್ರ ದರ್ಶನ ಸಾಧ್ಯ. ಅದರ ಪ್ರಕಾಶ ಗೆಲಿಲಿಯೋ ಅಥವಾ ಕೆಪ್ಲರ್ ಇವರು ಕಂಡದ್ದಕ್ಕಿಂತ ಬಹಳ ಹೆಚ್ಚು. ಇದನ್ನು ಊಹಿಸಿಕೊಳ್ಳಲು ಹುಣ್ಣಿಮೆಯ ಚಂದ್ರನನ್ನು ಚುಕ್ಕೆಯ ಗಾತ್ರಕ್ಕಿಳಿಸಿ. ಪ್ರಕಾಶವನ್ನು ಕುಗ್ಗಿಸಬೇಡಿ. ನೀವು ನಡುರಾತ್ರಿಯಲ್ಲೂ ಹೊರಗೆ ಕುಳಿತು ಪೇಪರ್ ಓದಬಹುದು ಅಥವಾ ನಿಮ್ಮ ನೆರಳನ್ನೂ ಕಾಣಬಹುದು. ಇಂತಹದ್ದೊಂದು ಅಪೂರ್ವ ಅನುಭವಕ್ಕೆ ಸಿದ್ಧರಾಗೋಣ.

ವಾಚಕರ ವಾಣಿ

ಜಾತಿ ಸಮೀಕ್ಷೆ ಮತ್ತೊಮ್ಮೆ ನಡೆಯಲಿ

ಜಾತಿವಾರು ಸಮೀಕ್ಷೆಯನ್ನು ಅಂಗೀಕರಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಈ ವಿವಾದಾತ್ಮಕ ಸಮೀಕ್ಷೆಯನ್ನು ಲಿಂಗಾಯತ ಮತ್ತು ಒಕ್ಕಲಿಗ ಸಂಘಟನೆಗಳು ಮೊದಲಿನಿಂದಲೂ ವಿರೋಧಿಸುತ್ತಾ ಬಂದಿವೆ. ‘ಉಪಜಾತಿಗಳನ್ನು ಮೂಲ ಜಾತಿಗಳಿಂದ ವಿಂಗಡಿಸಿ ಜನಸಂಖ್ಯೆಯ ಸ್ವರೂಪವನ್ನು ಏರುಪೇರು ಮಾಡಲಾಗಿದೆ. ಈ ಸಮೀಕ್ಷೆ ವೈಜ್ಞಾನಿಕವಾಗಿಲ್ಲ ಮತ್ತು ಪಾರದರ್ಶಕವಾಗಿಲ್ಲ. ಉಪಜಾತಿಗಳ ಜನರಲ್ಲಿ ಸಮೀಕ್ಷೆ ಬಗ್ಗೆ ಜಾಗೃತಿ ಮೂಡಿಸಲು ಹೆಚ್ಚಿನ ಕಾಲಾವಕಾಶ ನೀಡಿಲ್ಲ. ಗಣತಿದಾರರು ಖುದ್ದಾಗಿ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆಯೇ ವಿನಾ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಡಿಜಿಟಲ್ ಸಾಧನಗಳನ್ನು ಬಳಸಿಲ್ಲ. ಈ ಸಮೀಕ್ಷೆ ಹಲವು ದೋಷಗಳಿಂದ ಕೂಡಿರುವ ಸಾಧ್ಯತೆಯಿದೆ. ಇದರ ಹಿಂದೆ ಜಾತಿಗಳನ್ನು ವಿಭಜನೆ ಮಾಡುವ ಹುನ್ನಾರವಿದೆ. ಇದು ದುರುದ್ದೇಶಗಳಿಂದ ಕೂಡಿದೆ ಮತ್ತು ರಾಜಕೀಯಪ್ರೇರಿತವಾಗಿದೆ’ ಎಂಬೆಲ್ಲ ಆತಂಕಗಳು ವ್ಯಕ್ತವಾಗಿದ್ದವು. ಅದಕ್ಕೆ ಇಂಬು ನೀಡುವಂತೆ, ಆ ವರದಿಯಲ್ಲಿನ ಜಾತಿವಾರು ಸಂಖ್ಯೆಯನ್ನು ಮಾತ್ರ ಮಾಧ್ಯಮಗಳಿಗೆ ಸೋರಿಕೆ ಮಾಡಿ ಗೊಂದಲ ಸೃಷ್ಟಿಸಲಾಗಿತ್ತು.

ಪರಿಪೂರ್ಣವಾದ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯೊಂದನ್ನು ಯಾರೂ ವಿರೋಧಿಸಲಾರರು. ಪುನಃ ಗೊಂದಲ ಸೃಷ್ಟಿಸುವ ಬದಲು ಸರ್ಕಾರವು ವೈಜ್ಞಾನಿಕ, ಪಾರದರ್ಶಕ ಮತ್ತು ನಿಖರವಾದ ಮತ್ತೊಂದು ಜಾತಿವಾರು ಸಮೀಕ್ಷೆಯನ್ನು ಮಾಡಲಿ. ಎಲೆಕ್ಟ್ರಾನಿಕ್ ಉಪಕರಣಗಳನ್ನು ಬಳಸಿ ಪ್ರತಿ ಮನೆಯನ್ನು ಒಂದು ಘಟಕವಾಗಿ ಪರಿಗಣಿಸಬೇಕು. ಇದಕ್ಕೆ ಆಧಾರ್ ಜೋಡಣೆಯಾಗಬೇಕು. ಮಾಹಿತಿಗಳು, ಅಂಕಿಅಂಶಗಳು ಮತ್ತು ದತ್ತಾಂಶಗಳ ಕ್ರೋಡೀಕರಣಕ್ಕೆ, ಜೋಡಣೆಗೆ ಹಾಗೂ ವರ್ಗೀಕರಣಕ್ಕೆ ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್ ಆಧಾರಿತ ವಿನೂತನ ಸಾಧನಗಳನ್ನು ಬಳಸಿ ಪರಿಪೂರ್ಣವಾದ ಸಮೀಕ್ಷೆ ನಡೆಯಲಿ. ಇದರಿಂದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಸುಧಾರಣೆಗೆ ಸಹಾಯವಾಗುತ್ತದೆ.

ಲಂಬೋದರ, ಸಾಗರ

ಭಾರತ ವಿರೋಧಿ ನಿಲುವು

ಖಾಲಿಸ್ತಾನ ಪ್ರತ್ಯೇಕತಾವಾದಿಗಳು ಕೆನಡಾದಲ್ಲಿ ಭಾರತದ ಮಾಜಿ ಪ್ರಧಾನಿ, ಧೀಮಂತ ಮಹಿಳೆ ಇಂದಿರಾ ಗಾಂಧಿ ಅವರ ಹತ್ಯೆಯನ್ನು ಬಿಂಬಿಸುವ ಸ್ತಬ್ಧಚಿತ್ರದ ಮೆರವಣಿಗೆ ನಡೆಸಿರುವುದಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವುದು (ಪ್ರ.ವಾ., ಜೂನ್ 9) ಸರಿಯಾಗಿದೆ. ಖಾಲಿಸ್ತಾನೀಯರು ಇಂದಿರಾ ಅವರ ಹತ್ಯೆಯನ್ನು ಬಿಂಬಿಸುವ ಮೂಲಕ ವಿಕೃತಿ ಮೆರೆದಿರುವುದು, ಸಂಭ್ರಮಾಚರಣೆ ಮಾಡಿರುವುದು ಸ್ಪಷ್ಟವಾಗಿ ಭಾರತ ವಿರೋಧಿ ನಿಲುವಾಗಿದೆ.

ಕೆನಡಾ ಸರ್ಕಾರ ತನ್ನ ನೆಲದಲ್ಲಿ ನಡೆದ ಇಂತಹ ಕೃತ್ಯದ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಉಗ್ರವಾದವನ್ನು ತೀವ್ರ ತೆರನಾಗಿ ಹತ್ತಿಕ್ಕಬೇಕು. ಭಾರತ ಹಾಗೂ ಕೆನಡಾ ಉಭಯ ರಾಷ್ಟ್ರಗಳ ಹಿತದೃಷ್ಟಿಯಿಂದಲೂ ಹೀಗೆ ಮಾಡುವುದು ಒಳಿತು.

ಎಚ್.ಎನ್.ಕಿರಣ್ ಕುಮಾರ್ ಹಳೇಹಳ್ಳಿ, ಗೌರಿಬಿದನೂರು

ಪತಿ, ಮಗನ ಆದಾಯ ಪರಿಗಣನೆ ಸಲ್ಲದು

ಗೃಹಲಕ್ಷ್ಮಿ ಯೋಜನೆಯಡಿ ಪ್ರಸ್ತುತ ರೂಪಿಸಿರುವ ನಿಯಮಗಳಲ್ಲಿ, ಫಲಾನುಭವಿಯ ಪತಿ ಅಥವಾ ಪುತ್ರ ತೆರಿಗೆ ಪಾವತಿದಾರರಾಗಿದ್ದರೆ ಮಹಿಳೆಗೆ ಯೋಜನೆಯ ಲಾಭ ಸಿಗುವುದಿಲ್ಲ. ಅಂತಹ ಕುಟುಂಬ ಆರ್ಥಿಕವಾಗಿ ಸದೃಢವಾಗಿರುತ್ತದೆ, ಹಾಗಾಗಿ ಅಂಥವರಿಗೆ ಪ್ರತಿ ತಿಂಗಳು ₹ 2,000 ಕೊಡುವ ಅಗತ್ಯವಿಲ್ಲ ಎಂದು ಸರ್ಕಾರ ಭಾವಿಸಿದಂತಿದೆ. ಆದರೆ ವಾಸ್ತವ ಬೇರೆಯೇ ಇದೆ. ಮಹಿಳೆಯನ್ನು ಪತಿಯ ಅಥವಾ ಮಗನ ಆದಾಯದ ಜೊತೆ ತಳಕು ಹಾಕುವ ಕ್ರಮವೇ ಸರಿಯಲ್ಲ ಎನಿಸುತ್ತದೆ. ಸರ್ಕಾರದಲ್ಲಿ ಕೆಲಸ ಮಾಡುತ್ತಿರುವ ಬಹುತೇಕ ನಾಲ್ಕನೇ ದರ್ಜೆ ನೌಕರರು ಆದಾಯ ತೆರಿಗೆಯನ್ನು ಕಟ್ಟುತ್ತಾರೆ. ಏಕೆಂದರೆ ಅವರ ವಾರ್ಷಿಕ ಆದಾಯಕ್ಕೆ ಸ್ಪಷ್ಟವಾಗಿ ಲೆಕ್ಕ ಸಿಕ್ಕುತ್ತದೆ. ಆದರೆ ಇವರೆಲ್ಲರೂ ಆರ್ಥಿಕವಾಗಿ ಮುಂದುವರಿದಿರುವುದಿಲ್ಲ.

ಅದೇ ವ್ಯಾಪಾರ- ವ್ಯವಹಾರ ಮಾಡುವ ಜನರ ವಾರ್ಷಿಕ ಆದಾಯದ ಲೆಕ್ಕ ನಿಖರವಾಗಿ ಸಿಗುವುದಿಲ್ಲ. ಆದ್ದರಿಂದ ಅವರು ತೆರಿಗೆ ಕುಣಿಕೆಯಿಂದ ಬಚಾವಾಗುತ್ತಾರೆ. ಅಂದಮಾತ್ರಕ್ಕೆ ಇವರು ಆರ್ಥಿಕವಾಗಿ ಹಿಂದುಳಿದವರಲ್ಲ. ಹೀಗಾಗಿ, ಮಹಿಳೆಯ ಮಗ ಅಥವಾ ಗಂಡ ತೆರಿಗೆ ಪಾವತಿದಾರರಾದ ಮಾತ್ರಕ್ಕೆ ಆಕೆಯನ್ನು ಗೃಹಲಕ್ಷ್ಮಿ ಯೋಜನೆಯಿಂದ ಹೊರಗಿಡುವುದು ಆಕೆಗೆ ಅನ್ಯಾಯ ಮಾಡಿದಂತಾಗುತ್ತದೆ. ಸ್ವತಃ ಆಕೆಯೇ ತೆರಿಗೆ ಪಾವತಿದಾರಳಾದರೆ, ಆಗ ಈ ಯೋಜನೆಯ ಲಾಭ ಆಕೆಗೆ ದೊರೆಯದಂತೆ ನಿಯಮ ರೂಪಿಸಬಹುದು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಗೃಹಜ್ಯೋತಿ: ನೋಂದಣಿ ಅಗತ್ಯವಿಲ್ಲ

ಗೃಹಜ್ಯೋತಿ ಸೌಲಭ್ಯ ಪಡೆಯಲು ನೋಂದಾಯಿಸಿಕೊಳ್ಳಬೇಕು ಎಂದು ಸರ್ಕಾರ ತಿಳಿಸಿದೆ. ಸರ್ಕಾರದ ಅಂಕಿಅಂಶಗಳ ಪ್ರಕಾರವೇ ರಾಜ್ಯದಲ್ಲಿ 2.16 ಕೋಟಿ ಗೃಹ ವಿದ್ಯುತ್ ಬಳಕೆದಾರರಿದ್ದು, ಅವರಲ್ಲಿ, 2.14 ಕೋಟಿ ಬಳಕೆದಾರರು ಬಳಸುವ ವಿದ್ಯುತ್ ಪ್ರಮಾಣ 200 ಯೂನಿಟ್ ಒಳಗೆ ಇರುವುದರಿಂದ ಈ ಎಲ್ಲರೂ ಗೃಹಜ್ಯೋತಿ ಪಡೆಯಲು ಅರ್ಹರಾಗಿದ್ದಾರೆ (ಕೇವಲ 2 ಲಕ್ಷ ಬಳಕೆದಾರರು ಯೋಜನೆಯಿಂದ ಹೊರಗುಳಿಯುತ್ತಾರೆ). ಅಂದರೆ ಯಾರು ಎಷ್ಟು ವಿದ್ಯುತ್ ಬಳಸುತ್ತಾರೆ ಎಂಬ ಅಂಕಿಅಂಶಗಳನ್ನು ಮೊದಲೇ ಪಡೆದುಕೊಂಡು, ಬರೀ ನೂರು ಯೂನಿಟ್ ಉಚಿತ ಎಂದು ಪ್ರಣಾಳಿಕೆಯಲ್ಲಿ ಸೇರಿಸಿದ್ದರೆ ಇಷ್ಟೊಂದು ಪ್ರಮಾಣದಲ್ಲಿ ಫಲಾನುಭವಿಗಳು ಇರುತ್ತಿರಲಿಲ್ಲ.

ಬೇರೆಲ್ಲ ಗ್ಯಾರಂಟಿಗಳಿಗೆ ಷರತ್ತು ವಿಧಿಸಿರುವುದು ಸರಿ ಇರಬಹುದು. ಆದರೆ ವಿದ್ಯುತ್ ಬಳಕೆದಾರರು ಎಷ್ಟು ವಿದ್ಯುತ್ ಬಳಸುತ್ತಾರೆ, ವರ್ಷದ ಸರಾಸರಿ ಬಳಕೆ ಎಷ್ಟು ಎನ್ನುವ ಮಾಹಿತಿಯೆಲ್ಲಾ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ಬಳಿಯೇ ಇದೆ. ಹೀಗಿರುವಾಗ ಯೋಜನೆಗೆ ಅರ್ಹರಿರುವ, 200 ಯೂನಿಟ್ ಒಳಗೆ ವಿದ್ಯುತ್ ಬಳಸುವ ಯಾವುದೇ ಮನೆ ಮಾಲೀಕರು ಯಾವುದೇ ನೋಂದಣಿ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ ಎನಿಸುತ್ತದೆ. ಆದ್ದರಿಂದ 200 ಯೂನಿಟ್ ಒಳಗೆ ಇರುವವರಿಗೆ ವಿದ್ಯುತ್ ಸರಬರಾಜು ಕಂಪನಿಗಳು ಶೂನ್ಯ ದರ ಪಾವತಿ ಬಿಲ್ ನೀಡಲಿ. ಇದರಿಂದ ಗ್ರಾಹಕರಿಗೆ ಅನುಕೂಲವಾಗುತ್ತದೆ. ಹಾಗೆಯೇ ಯಾರು ಬಯಸುವರೋ ಅಂತಹವರು ಬೇಕಾದರೆ ಬಿಲ್ ಪಾವತಿಸಲಿ.

ಮುಳ್ಳೂರು ಪ್ರಕಾಶ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆಯನ್ನು (ಗೋಹತ್ಯೆ ನಿಷೇಧ ಕಾಯ್ದೆ) ರದ್ದುಪಡಿಸಬೇಕೇ?

ಹಸಿವೆಂದು ಕೈನೀಡಿದರೆ ಒಂದು ಹಿಡಿ ಭತ್ತವನ್ನೋ, ಅಕ್ಕಿಯನ್ನೋ, ಅಸಿಟನ್ನೂ ಪಡೆಯುತ್ತಿದ್ದ ದಲಿತರಿಗೆ ಪೌಷ್ಟಿಕ ಆಹಾರ ಸಿಗುತ್ತಿದ್ದುದಾದರೂ ಎಲ್ಲಿ? ಅದಕ್ಕೆ ಅವರು ಹೆಚ್ಚು ಅವಲಂಬಿಸಿದ್ದು ಈ ಗೋ ಮಾಂಸವನ್ನೇ. ಅತ್ಯಂತ ಪೌಷ್ಟಿಕ ಆಹಾರ ಅವರಿಗೆ ಸುಲಭವಾಗಿ ಸಿಗುತ್ತಿದ್ದುದು ಇದೇ. ಸಗಣಿಯಲ್ಲಿರುವ ಉರುಳಿಕಾಳನ್ನೋ, ಜೋಳವನ್ನೋ ತಿಂದು ಬದುಕಿ ಎಂದು ಹೇಳುತ್ತಿದ್ದ ಸಮಾಜದಲ್ಲಿ ಸಹಜವಾಗೇ ಅವರು ಇತ್ತ ಕಡೆ ವಾಲಲೇಬೇಕಿರುತ್ತದೆ. ಈ ವಾಲಿದ ಪರಿಣಾಮ ಗೋಮಾಂಸ ಅವರಿಗೆ ಆಹಾರದ ಹಕ್ಕಿನ ಪ್ರಶ್ನೆಯಾಯಿತು

ಜನರ ಬಾಳಿಗೆ ಗೋಳಾದ ಗೋಹತ್ಯೆ ನಿಷೇಧ

● ಉಮಾಶಂಕರ ಎಚ್.ಡಿ.

ಯಾವುದೇ ಒಂದು ಕಾಯ್ದೆ ಅನುಷ್ಠಾನಕ್ಕೆ ಬರುವ ಮೊದಲು ಅದರ ಸಾಮಾಜಿಕ ಮತ್ತು ಆರ್ಥಿಕ ಆಯಾಮಗಳನ್ನು ಅವಲೋಕಿಸಬೇಕು. ಜನಪರವಾದ ಕಾಯ್ದೆಗಳ ಅನುಷ್ಠಾನದ ಮೂಲನೆಲೆಯಿದು. ಈಗ ಸದ್ಯಕ್ಕೆ ಮತ್ತೆ ಗೋ ಹತ್ಯೆ ನಿಷೇಧ ಕಾಯ್ದೆ ಕುರಿತಾದ ಚರ್ಚೆ ಮುನ್ನೆಲೆಗೆ ಬಂದಿದೆ. ಗೋವನ್ನು ಸಾಕುವುದು, ಅದರಿಂದ ಸಿಗುವ ಎಲ್ಲ ಅನುಕೂಲಗಳನ್ನು ಪಡೆದುಕೊಳ್ಳುವುದು, ನಂತರ ಮಾರುವುದು, ಮತ್ತೆ ಬೇರೆಯದನ್ನು ಕೊಂಡುಕೊಳ್ಳುವುದು, ಸಾಕುವುದು, ಮತ್ತೆ ಮಾರುವುದು ಇದು ರೈತ ಬದುಕಿನ ನಿತ್ಯ ಸುರುಳಿ ಚಕ್ರ. ಕಾಲಾನುಕಾಲದಿಂದ ಈ ಕ್ರಮ ನಿರಂತರವಾಗಿ ನಡೆದುಕೊಂಡು ಬಂದಿದೆ. ಇಲ್ಲಿ ರೈತರು ಗೋವಿನೊಂದಿಗೆ ಏಕಕಾಲದಲ್ಲಿ ಭಾವನಾತ್ಮಕತೆಯನ್ನೂ, ವ್ಯವಹಾರತನವನ್ನೂ ಜೊತೆಜೊತೆಯಾಗಿ ಸಾಗಿಸಿಕೊಂಡು ಬಂದಿದ್ದಾರೆ.

ಇದರೊಂದಿಗೆ ಗೋವಿನೊಂದಿಗೆ ಸುದೀರ್ಘ ಬದುಕು ಕಟ್ಟಿಕೊಂಡು ಬಂದವರು ದಲಿತರು. ಕೃಷಿ ವಲಯದಲ್ಲಿ ನಿಜವಾದ ಶ್ರಮಿಕರು ಮತ್ತು ಕೂಲಿಯಾಳುಗಳು ಅಂದರೆ ದಲಿತರು. ಇದನ್ನು ಸಾಕುವವರು, ಅದರ ಆರೋಗ್ಯವನ್ನು ನೋಡಿಕೊಳ್ಳುವವರು ಬಹುತೇಕ ದಲಿತರೇ ಆಗಿದ್ದಾರೆ. ಅದು ಸತ್ತಾಗ ಅದನ್ನು ವಿಲೇವಾರಿ ಮಾಡುವವರು ಇವರೇ. ಇಂದಿಗೂ ಇದು ಬದಲಾಗಿಲ್ಲ. ಹಾಗಾಗಿ ಗೋವಿನೊಂದಿಗಿನ ಹೆಚ್ಚಿನ ಒಡನಾಟ ಇದ್ದಿದ್ದೇ ಈ ದಲಿತರಿಗೆ. ಇದಿಷ್ಟೇ ಆಗಿದ್ದರೆ ಸುಮ್ಮನಾಗಬಹುದಿತ್ತು. ಇದಕ್ಕಿಂತಲೂ ಹೆಚ್ಚಾಗಿ ಕಾಲನುಕಾಲದಿಂದ ಈ ದಲಿತ ಜಗತ್ತನ್ನು ಈ ಗೋವಿನ ಜಗತ್ತು ಕಾಪಾಡಿಕೊಂಡು ಬಂದಿದೆ. ಹಸಿವೆಂದು ಕೈನೀಡಿದರೆ ಒಂದು ಹಿಡಿ ಭತ್ತವನ್ನೋ, ಅಕ್ಕಿಯನ್ನೋ, ಅಸಿಟನ್ನೂ ಪಡೆಯುತ್ತಿದ್ದ ದಲಿತರಿಗೆ ಪೌಷ್ಟಿಕ ಆಹಾರ ಸಿಗುತ್ತಿದ್ದುದಾದರೂ ಎಲ್ಲಿ? ಅದಕ್ಕೆ ಅವರು ಹೆಚ್ಚು ಅವಲಂಬಿಸಿದ್ದು ಈ ಗೋ ಮಾಂಸವನ್ನೇ. ಅತ್ಯಂತ ಪೌಷ್ಟಿಕ ಆಹಾರ ಅವರಿಗೆ ಸುಲಭವಾಗಿ ಸಿಗುತ್ತಿದ್ದುದು ಇದೇ. ಸಗಣಿಯಲ್ಲಿರುವ ಉರುಳಿಕಾಳನ್ನೋ, ಜೋಳವನ್ನೋ ತಿಂದು ಬದುಕಿ ಎಂದು ಹೇಳುತ್ತಿದ್ದ ಸಮಾಜದಲ್ಲಿ ಸಹಜವಾಗೇ ಅವರು ಇತ್ತ ಕಡೆ ವಾಲಲೇಬೇಕಿರುತ್ತದೆ. ಈ ವಾಲಿದ ಪರಿಣಾಮ ಗೋಮಾಂಸ ಅವರಿಗೆ ಆಹಾರದ ಹಕ್ಕಿನ ಪ್ರಶ್ನೆಯಾಯಿತು. ಸಂಸ್ಕೃತಿಯ ರೂಪದಲ್ಲಿ ಅಣುರೇಣು ತೃಣಕಾಷ್ಠದಲ್ಲಿ ನಿಂತು ಒಂದಾಯಿತು. ಅಂಬೇಡ್ಕರ್ ಅವರು ಕೂಡ 'ಅಸ್ಪೃಶ್ಯತೆಯ ಉಗಮಕ್ಕೆ ಈ ಗೋಮಾಂಸ ಭಕ್ಷಣೆಯೂ ಒಂದು ಕಾರಣ' ಎಂದು ಹೇಳಿದ್ದಾರೆ. ಇಂತಹ ಪರಂಪರೆಯ ನಂಟು ಗೋವಿನೊಂದಿಗೆ ದಲಿತರಿಗಿದೆ. ದಲಿತರು 'ಇದು ನಮ್ಮ ಪಾರಂಪರಿಕ ಆಹಾರ, ಇದರ ಮೇಲೆ ನಮಗೆ ಹಕ್ಕಿದೆ. ಈ ಹಕ್ಕನ್ನು ಕಿತ್ತುಕೊಳ್ಳಲು ನಿಮಗೆ ಯಾವ ತರದ ಪ್ರಾಮಾಣಿಕತೆ ಇದೆ' ಎನ್ನುವುದನ್ನು ಮುಂಚೂಣಿಯಲ್ಲಿ ನಿಂತು ಕೇಳಿರುತ್ತಿರುವುದು ಈ ಕಾರಣದಿಂದಲೇ.

ಇದು ದಲಿತರ, ರೈತರ ಮತ್ತು ಆದಿವಾಸಗಳ ಬದುಕಷ್ಟೇ ಅಲ್ಲ. ಇಡೀ ದೇಶವೇ ಒಂದಲ್ಲಾ ಒಂದು ರೀತಿಯಲ್ಲಿ ಗೋವಿನ ಮೇಲೆ ನಿಂತಿದೆ. ಗೋವಿನ ವಿವಿಧ ಭಾಗಗಳಿಂದ ಔಷಧ ಲೋಕಕ್ಕೆ ಲಾಭವಿದೆ. ಚರ್ಮೋದ್ಯಮಕ್ಕಂತೂ ಗೋವಿನ ಚರ್ಮಗಳು ಬೇಕೇ ಬೇಕು. ಅನೇಕ ರಾಸಾಯನಿಕಗಳ ತಯಾರಿಕೆಗೆ ಗೋವಿನ ಉತ್ಪನ್ನಗಳು ಬೇಕು. ಕೈಗಾರಿಕಾ ರಂಗಕ್ಕೆ ಈ ಉತ್ಪನ್ನಗಳಿಂದ ತುಂಬಾ ಲಾಭವಿದೆ. ಆದರೆ ಇಂದು ಗೋಹತ್ಯೆ ನಿಷೇಧ ಕಾನೂನು ಸಾರಾಸಗಟಾಗಿ ಜಾರಿಗೊಳಿಸಿದ್ದರಿಂದ ದೇಶದಲ್ಲಿ ವರ್ಷಕ್ಕೆ ಸುಮಾರು ಎರಡು ಲಕ್ಷ ಕೋಟಿ ರೂಪಾಯಿ ನಷ್ಟವಾಗಬಹುದು. ಇನ್ನೂ ಮುಂದುವರಿದು ಹೇಳುವುದಾದರೆ, ದೇಶದ ಬೆನ್ನೆಲುಬು ರೈತ ಎಂದು ಹೇಳುವ ಈ ದೇಶದಲ್ಲಿ ರೈತನ ಬೆನ್ನನ್ನೇ ಮುರಿಯುವುದಕ್ಕಾಗಿ ಈ ಕಾಯ್ದೆ ಅನುಷ್ಠಾನಕ್ಕೆ ಬಂದಿತು. ಅನುತ್ಪಾದಕ ಹಸುವನ್ನು ಮಾರಾಟ ಮಾಡದಿದ್ದರೆ ಅವುಗಳ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತದೆ. ಇವುಗಳನ್ನು ಸಾಕುವ ಹೆಚ್ಚುವರಿ ಹೊಣೆಗಾರಿಕೆ ರೈತರ ಮೇಲೆ ಬೀಳುತ್ತದೆ. ವೆಚ್ಚವು ಅಧಿಕಗೊಳ್ಳುತ್ತದೆ. ಮೊದಲೇ 'ವ್ಯವಸಾಯ ಮನೆಮಂದಿಯೆಲ್ಲಾ ಸಾಯ' ಎನ್ನುವಂತೆ ಬದುಕುವವರು ಅವರು. ಈ ಕಾಯ್ದೆಯ ಮೂಲಕ ಅವರ ಮೇಲೆ ಮತ್ತಷ್ಟು ಬರೆ ಎಳೆಯಲಾಯಿತು.

ಈ ಮಗ್ಗಲುಗಳನ್ನು ಮುಖ್ಯವಾಗಿ ಪರಿಗಣಿಸದೆ 'ಗೋಹತ್ಯೆ ನಿಷೇಧ' ಕಾಯ್ದೆಯನ್ನು ಜಾರಿಗೆ ತರಲಾಯಿತು. ಇದರ ಹಿಂದೆ ಭಾವನಾತ್ಮಕತೆಯನ್ನು ಪರಿಗಣಿಸಲಾಯಿತೇ ಹೊರತು ಇದಕ್ಕಿರುವ ಸಾಮಾಜಿಕ ಮತ್ತು ಆರ್ಥಿಕ ಆಯಾಮಗಳನ್ನು ಪರಿಗಣನೆಗೆ ತೆಗೆದುಕೊಳ್ಳಲೇ ಇಲ್ಲ. ಪರಿಗಣಿಸಿದ್ದೇವೆ ಎನ್ನುವುದನ್ನು ಸೂಚಿಸಿದರೂ ಅದನ್ನು ಪೂರ್ಣವಾಗಿ ಕಡೆಗಣಿಸಲಾಯಿತು. ಇದು ಜೀವನ ಕ್ರಮದ ಮೇಲೆ, ಅದರಲ್ಲೂ ಅವಲಂಬಿತ ಆಹಾರ ಚಕ್ರದ ಮೇಲೆ ಏಕಾಏಕಿ ದಾಳಿ ಮಾಡಿತು. ಆಹಾರ ಸರಪಳಿ ತುಂಡಾದರೆ ಅದರ ನೇರ ಮತ್ತು ಮೊದಲ ಹೊಡೆತ ತಿನ್ನುವುದು ಇಲ್ಲಿನ ಬಡವರು, ನಿರ್ಗತಿಕರು, ಅಸಹಾಯಕರು ಮತ್ತು ದಲಿತರು. ಇದು ಈಗ ನಡೆಯುತ್ತಿದೆ.

ಇಂತಹ ಸೂಕ್ಷ್ಮಗಳನ್ನು ಅರ್ಥಮಾಡಿಕೊಳ್ಳದೆಯೇ ಕಾಯ್ದೆ ಜಾರಿ ಮಾಡಲಾಯಿತು. ಎದುರಾಗಬಹುದಾದ ಸಮಸ್ಯೆಗಳಿಗೆ ಕೆಲವು ಸರಳ ಸೂತ್ರಗಳನ್ನು ಮುಂದಿಡಲಾಯಿತು. ಇದರಲ್ಲಿ ಬಹಳ ಮುಖ್ಯ ಪರಿಹಾರವಾಗಿ ಗೋಶಾಲೆಗಳು ಅಸ್ತಿತ್ವಕ್ಕೆ ಬಂದವು. ಆದರೆ ದೇಶದ ನಾನಾ ಹೈಕೋರ್ಟ್‌ಗಳು ಆ ಗೋಶಾಲೆಗಳು ಸಂಪೂರ್ಣವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬುದನ್ನು ಕಂಡುಕೊಂಡು, ಖಂಡಿಸಿದವು. ಕರ್ನಾಟಕದ ಹೈಕೋರ್ಟ್ ಕೂಡ ಖಂಡಿಸಿದೆ. ಇವುಗಳಿಗೆ ಬೇಕಾದಂತಹ ಹಣಕಾಸನ್ನು ಕೊಟ್ಟಿಲ್ಲ. ಗೋವುಗಳನ್ನು ನಿಜವಾಗಿಯೂ ಉಳಿಸುವಂತಹ ಕೆಲಸವನ್ನು ಇಲ್ಲಿ ಮಾಡಿಲ್ಲ. ಆದ್ದರಿಂದಲೇ ದನಗಳು ಬೀಡಾಡಿ ದನಗಳಾಗಿ ಮಾರ್ಪಟ್ಟವು. ಎಲ್ಲೆಂದರಲ್ಲಿ ನುಗ್ಗಲು, ತಂಗಲು, ಮೇಯಲು ಪ್ರಾರಂಭಿಸಿದವು. ಉತ್ತರ ಪ್ರದೇಶದಲ್ಲಿ ಇವುಗಳದ್ದೇ ಒಂದು ದೊಡ್ಡ ಸಮಸ್ಯೆಯಾಗಿ ನಿಂತದ್ದನ್ನು ನಾವು ಮರೆಯುವಂತಿಲ್ಲ. ಇವೆಲ್ಲವೂ ಗೋರಕ್ಷಣಾ ಕಾಯ್ದೆಯನ್ನು ಗಟ್ಟಿಯಾಗಿ ನೆಲೆಯೂರಿಸಿದ್ದರ ಪರಿಣಾಮ.

ಇನ್ನೊಂದು ವಿಪರ್ಯಾಸ ಎಂದರೆ, ಯಾವ ದೇಶದಲ್ಲಿ ಗೋರಕ್ಷಣೆಯ ಬಗ್ಗೆ ಮಾತು ಕೇಳಿ ಬರುತ್ತಿದೆಯೋ, ಅದಕ್ಕಾಗಿ ಒಂದು ಕಾಯ್ದೆಯನ್ನೇ ರೂಪಿಸಲಾಗಿದೆಯೋ ಅಂತಹ ದೇಶದಲ್ಲೇ ಗೋಮಾಂಸ ರಫ್ತಿನ ವಹಿವಾಟು ಜಾಗತಿಕವಾಗಿ ಅಗ್ರ ಕ್ರಮಾಂಕದ 5ರ ಆಸುಪಾಸಿನಲ್ಲೇ ಸುತ್ತುತ್ತಿದೆ. ಯಾವ ಸರ್ಕಾರ ಕಾನೂನನ್ನು ತಂದಿತೋ ಅದರ ಅವಧಿಯಲ್ಲೇ ಅಗ್ರಕ್ರಮಾಂಕದ ಕಡೆಗೆ ರಫ್ತು ವಹಿವಾಟು ಮುಖಮಾಡಿತು. ಈ ಗೋವಿನ ಹೆಸರಿನಲ್ಲಿ ಮುಸ್ಲಿಮರನ್ನು, ದಲಿತರನ್ನು ಗುರಿ ಮಾಡಿ ಕೊಲೆ ಮತ್ತು ಗುಂಪು ಹಲ್ಲೆಗಳನ್ನು ನಡೆಸಲಾಗಿದೆ. ದುರಂತವೆಂದರೆ ಗೋಮಾಂಸ ರಫ್ತಿನಲ್ಲಿ ಹಿಂದೂ ಪ್ರಬಲ ಜಾತಿಗಳ ಜನರೇ ಮುಂಚೂಣಿಯಲ್ಲಿದ್ದಾರೆ. ಹಾಕಿಕೊಳ್ಳುವ ಶೂ, ಚಪ್ಪಲಿ, ತೊಡುವ ಬೆಲ್ಟ್, ಹಿಡಿವ ವ್ಯಾನಿಟಿ ಬ್ಯಾಗ್‌ಗಳು, ಜೇಬಿನಲ್ಲಿನ ಪರ್ಸ್, ವಾಚಿನ ಬೆಲ್ಟ್ ಎಲ್ಲ ಎಲ್ಲವೂ ಚರ್ಮದ್ದೇ ಆಗಿರಬೇಕು. ಆದರೆ ಚರ್ಮೋದ್ಯಮವನ್ನು ಗೋವಿನ ಹೆಸರಿನಲ್ಲಿ ಕಡಿತಗೊಳಿಸುತ್ತಿರುವುದರ ಬಗ್ಗೆ ನಮಗ್ಯಾರಿಗೂ ತಕರಾರಿಲ್ಲ. ಅದರಲ್ಲೂ ಕರ್ನಾಟಕದ ಅಕ್ಕಪಕ್ಕದ ರಾಜ್ಯಗಳಾದ ಕೇರಳ ಮತ್ತು ಗೋವಾದಲ್ಲಿ ಅತಿ ಹೆಚ್ಚು ಗೋವಿನ ಮಾಂಸ ತಿನ್ನುವವರು ಇರುವ ಕಾರಣ ಅಲ್ಲಿ ನಿಷೇಧ ಅನ್ನುವ ಪದವನ್ನು ಬಲಪಂಥೀಯರೇ ಬಳಸುವುದಿಲ್ಲ.

ಇಷ್ಟೆಲ್ಲವನ್ನೂ ಯೋಚಿಸಿದಾಗ ಅಂತಿಮವಾಗಿ ತಲೆಯಲ್ಲಿ ಉಳಿಯುವುದು ಒಂದೇ ಆಲೋಚನೆ. ಇಲ್ಲಿ ಗೋವಿನ ಹೆಸರಲ್ಲಿ ರಾಜಕಾರಣ ಮಾಡಲಾಗುತ್ತಿದೆ. ಅದರಲ್ಲೂ ಮತಬ್ಯಾಂಕಿನ ಜಾಡು ಹಿಡಿದು ಇದನ್ನು ಅನುಷ್ಠಾನಕ್ಕೆ ತರಲಾಗಿದೆ. ಗೋವಿನ ಮೇಲಿನ ಪ್ರೀತಿಗಿಂತ ಜನಾಂಗ ಮತ್ತು ಸಮುದಾಯಗಳನ್ನು ಈ ಮೂಲಕ ಬಗ್ಗು ಬಡಿಯುವ ಕುತಂತ್ರವೇ ಇಲ್ಲಿ ಹೆಚ್ಚಾಗಿ ಕೆಲಸ ಮಾಡಿದೆ ಎನಿಸುತ್ತಿದೆ. ಮುಸ್ಲಿಮರು, ದಲಿತರನ್ನು ಹಳಿಯುವ ಈ ರಾಜಕಾರಣ ಈಗಾಗಲೇ ಇನ್ನಿತರ ಶೂದ್ರ ಸಮುದಾಯಗಳನ್ನೂ ಹತ್ತಿಕ್ಕುತ್ತಿದೆ. ಏಕೆಂದರೆ ಈ ರಾಜಕಾರಣವು ನಮಗೆ ಮನುಷ್ಯರಿಗಿಂತ ಗೋವೇ ಮುಖ್ಯ ಎಂಬುದನ್ನು ಈಗಾಗಲೇ ಸಾಬೀತುಮಾಡಿದೆ. ಭಾರತದ ಬಹುತ್ವದ ನೆಲೆಗಳಿಗೆ ಕೊಡಲಿ ಪೆಟ್ಟಾಗುವ ಮೊದಲು ಇಂತಹ ಕಾಯ್ದೆಗಳ ಹಿಂದಿರುವ ತಂತ್ರಗಳನ್ನು ಅರ್ಥಮಾಡಿಕೊಳ್ಳಬೇಕಿದೆ. ಭಾರತಕ್ಕೆ ಗೋವುಗಳು ಬೇಕು. ಗೋವುಗಳೊಂದಿಗೆ ನಿರಂತರವಾಗಿ ಬದುಕುವ ರೈತರೂ, ದಲಿತರೂ ಇನ್ನಿತರ ಸಮುದಾಯಗಳೂ ಇದೇ ಭಾರತದಲ್ಲಿ ಗೋಳಿಲ್ಲದೆ ಬದುಕಬೇಕು. ಗೋವು ಮತ್ತಿತರ ಜಾನುವಾರಗಳನ್ನು ನಂಬಿ ಉಸಿರಾಡುತ್ತಿರುವ ಎಲ್ಲ ಉದ್ಯಮಗಳೂ ಜನಸಮೂಹಕ್ಕೆ ಇನ್ನೂ ಹೆಚ್ಚಿನ ಆಸರೆಯಾಗಬೇಕು. ಇದಾಗಬೇಕೆಂದರೆ ಈ ಗೋ ಹತ್ಯಾ ನಿಷೇಧ ಕಾಯ್ದೆಯು ಭಾರತಕ್ಕೆ ತಕ್ಕದಾದುದಲ್ಲ ಎನ್ನುವುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು.

ಲೇಖಕ: ಅಧ್ಯಾಪಕ

ಪ್ರಜಾವಾಣಿ ಚರ್ಚೆ

ಗೋವುಗಳ ಸಂಖ್ಯೆ ಹಲವು ಪಟ್ಟು ಹೆಚ್ಚಬೇಕು



ಮುದಿ ಗೋವಿನಲ್ಲಿ ದೈವಿಕ ಶಕ್ತಿಯೂ ಇದ್ದು, ಗೋಮಯ, ಗೋಮೂತ್ರಗಳಿಂದ ಮನುಷ್ಯನಿಗೆ ಪ್ರಯೋಜನವಾಗುವ ಗೋಉತ್ಪನ್ನಗಳನ್ನು ತಯಾರಿಸಲು ಸಾಧ್ಯವಿದೆ. ಈಗಾಗಲೇ ಬಹಳಷ್ಟು ಜನರು ಅದನ್ನು ಮಾಡುತ್ತಲೇ ಇದ್ದಾರೆ. ಕೆಲವು ಆಲಸಿಗಳು ಮಾತ್ರ, ಸರಿಯಾದ ಮಾಹಿತಿಯೂ ಇಲ್ಲದೆ ಮುದಿ ಗೋವುಗಳನ್ನು ವ್ಯರ್ಥ ಎಂದು ತಿಳಿದಿದ್ದಾರೆ

● ಅಶ್ವಿನಿ ಶಂಕರ್ ಎನ್.ಎಸ್.

ಕರ್ನಾಟಕ ರಾಜ್ಯದಲ್ಲಿ ಪ್ರಬಲ ಗೋಹತ್ಯಾ ನಿಷೇಧ ಕಾಯ್ದೆಯ ಅವಶ್ಯಕತೆ ಇದೆ. ರಾಜ್ಯದಲ್ಲಿ ಪ್ರಾಚೀನ ಕಾಲದಿಂದ ಇವತ್ತಿನವರೆಗೆ ಯಾವತ್ತೂ ಗೋ ವಧೆಗೆ ಅವಕಾಶವಿರಲಿಲ್ಲ. ಯಾರೆಲ್ಲಾ ಇದುವರೆಗೆ ಗೋ ವಧೆ ಮಾಡಿದ್ದಾರೋ ಅದನ್ನೆಲ್ಲಾ ಕಾನೂನುಬಾಹಿರವಾಗಿಯೇ ಮಾಡಿರುತ್ತಾರೆ. ರಾಜರ ಕಾಲದಲ್ಲಿ ಗೋವಧೆಗೆ ಅವಕಾಶವಿರಲಿಲ್ಲ. 1948ರಲ್ಲಿ ಹಾಗೂ 1964ರಲ್ಲಿ ಇದ್ದ ಕಾಂಗ್ರೆಸ್ ಸರ್ಕಾರವೇ ಗೋವಧೆ ನಿಷೇಧಿಸಿತ್ತು. ಇದರಲ್ಲಿ ಮುದಿ ದನಗಳ ವಧೆಯನ್ನೂ ನಿಷೇಧಿಸಿತ್ತು. ಆದರೆ ಶಿಕ್ಷೆ ಮಾತ್ರ ₹1,000 ದಂಡ ಹಾಗೂ ಆರು ತಿಂಗಳ ಜೈಲು ಇತ್ತು.

ಈ ಕಾಯ್ದೆ ದುರ್ಬಲವಾದ್ದರಿಂದ ಸಮರ್ಪಕವಾಗಿ ಅನುಷ್ಠಾನವಾಗದೆ ದಿನಂಪ್ರತಿ ಅಕ್ರಮ ಗೋವಧೆ ಆಗುತ್ತಿತ್ತು. ಆರೋಪಿಗಳಿಗೆ ಸರಿಯಾದ ಶಿಕ್ಷೆ ಆಗುತ್ತಿರಲಿಲ್ಲ. ಅಕ್ರಮ ಗೋಸಾಗಟ ಅತ್ಯಂತ ಹಿಂಸಾತ್ಮಕವಾಗಿತ್ತು. ಮುಚ್ಚಿದ ಕಂಟೇನರ್‌ಗಳಲ್ಲಿ ಯಾವುದೇ ಗಾಳಿ ಬೆಳಕಿಲ್ಲದೆ, 70–80 ಗೋವುಗಳನ್ನು ಕೈಕಾಲು ಕಟ್ಟಿ, ಒಂದರ ಮೇಲೊಂದು ಮೂಟೆಯಂತೆ ರಾಶಿ ಹಾಕಿ, ಹತ್ತಾರು ಕರುಗಳನ್ನು ಲಕ್ಷುರಿ ಕಾರುಗಳ ಡಿಕ್ಕಿಯಲ್ಲಿ ತುಂಬಿ ಕೊಂಡೊಯ್ಯುತ್ತಿದ್ದರು. ಹಲವಾರು ಸಂದರ್ಭಗಳಲ್ಲಿ ಅವುಗಳ ಕಣ್ಣಿಗೆ ಮೆಣಸಿನ ಪುಡಿ ಹಾಕಲಾಗುತ್ತಿತ್ತು, ಕಾಲಿನ ಹಿಂದೆ ಗಾಯ ಮಾಡಿ ಮೆಣಸಿನ ಪುಡಿ ಹಾಕಲಾಗುತ್ತಿತ್ತು. ಯಾರಾದರೂ ಅದನ್ನು ತಡೆಯಲು ಹೋದರೆ ಕೈಕಾಲು ಕಟ್ಟಿದ ಗೋವುಗಳನ್ನು ಓಡುತ್ತಿರುವ ವಾಹನದಿಂದ, ಹಿಂದೆ ತಡೆಯಲು ಬರುತ್ತಿದ್ದವರ ಮೇಲೆ ಒಂದೊಂದಾಗಿ ರಸ್ತೆಗೆ ಬಿಸಾಕುತ್ತಿದ್ದರು.

ಹೀಗೆ ಹಲವಾರು ರೀತಿಯಲ್ಲಿ ಅತ್ಯಂತ ಅಮಾನುಷ ರೀತಿಯಲ್ಲಿ ಸಾಗಾಟವಾಗುತ್ತಿದ್ದ ಈ ವಾಹನಗಳನ್ನು ತಡೆದು ಪರಿಶೀಲಿಸಿದಾಗ, ಅದಾಗಲೇ ಹಲವು ಗೋವುಗಳು ಉಸಿರುಗಟ್ಟಿ ಅಥವಾ ಒಂದರ ಕೊಂಬು ಇನ್ನೊಂದಕ್ಕೆ ತಾಗಿ ಆದ ನೋವಿನಿಂದ ಸತ್ತಿರುತ್ತಿದ್ದವು. ಬದುಕಿರುವ ಗೋವುಗಳು ಆಂತರಿಕವಾಗಿ ಪೆಟ್ಟಾಗಿ ದೇಹದೊಳಗೆ ಕೀವು ತುಂಬಿ ಕೆಲವು ದಿನಗಳಲ್ಲಿ ಸತ್ತು ಹೋಗುತ್ತಿದ್ದವು.

ಇಂತಹ ಘೋರ, ಅಮಾನುಷ ಸಾಗಾಟ ನಿಲ್ಲಬೇಕಾದರೆ, ಗೋಹತ್ಯೆ ನಿಲ್ಲಬೇಕಾದರೆ ಬಲಿಷ್ಠವಾದ ಕಾನೂನೊಂದರ ಅವಶ್ಯಕತೆ ಇತ್ತು. ಪ್ರಜಾಪ್ರಭುತ್ವ ಅಂದರೆ, ಬಹುಸಂಖ್ಯಾತ ಜನರ ಆಶಯವನ್ನು ಸರ್ಕಾರ ಈಡೇರಿಸುವುದಾಗಿದೆ. ರಾಜ್ಯದಲ್ಲಿ ಬಹುಸಂಖ್ಯಾತರು ಗೋವನ್ನು ಪೂಜಿಸುತ್ತಾರೆ. ಅದರಲ್ಲಿ ದೇವಶಕ್ತಿ ಇದೆ ಎಂದು ನಂಬಿದ್ದಾರೆ. ಅದನ್ನು ಪೂಜಿಸುವುದರಿಂದ ತಮಗೂ, ದೇಶಕ್ಕೂ ಒಳ್ಳೆಯದಾಗುತ್ತದೆ ಎಂದು ತಿಳಿದುಕೊಂಡಿದ್ದಾರೆ. ಒಂದು ಸಣ್ಣ ಮಗು ಸಹ ಒಂದು ಗೋವು ಎದುರಲ್ಲಿ ಕಂಡರೆ ಸಂತೋಷದಿಂದ ಹೋಗಿ ಮುಟ್ಟಿ ನಮಸ್ಕಾರ ಮಾಡುತ್ತದೆ ಅಂದರೆ, ರಾಜ್ಯದ ಜನರ ರಕ್ತದಲ್ಲಿ ಗೋವು ಪೂಜನೀಯ ಎಂಬ ಭಾವನೆ ಇದೆ.

ಈ ಎಲ್ಲಾ ಕಾರಣದಿಂದ ರಾಜ್ಯದಲ್ಲಿ ಪ್ರಬಲವಾದ ಗೋ ಹತ್ಯೆ ನಿಷೇಧ ಕಾಯ್ದೆಯ ಅವಶ್ಯಕತೆ ಇತ್ತು. ಇದನ್ನು ಮನಗಂಡ ಈ ಹಿಂದಿನ ಬಿಜೆಪಿ ಸರ್ಕಾರದ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪನವರು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಹಾಗೂ ಸಂರಕ್ಷಣೆ ಕಾಯ್ದೆ–2020 ಹಾಗೂ ಅದರನ್ವಯ ಗೋಸಾಗಾಟ ನಿಯಮಾವಳಿ 2021ನ್ನು ಜಾರಿಗೆ ತಂದದ್ದು ಅಭಿನಂದನೀಯ. ಈ ಕಾಯ್ದೆಯಲ್ಲಿ ಎಲ್ಲಾ ವಯಸ್ಸಿನ ದನ, ಹೋರಿ, ಕರುಗಳನ್ನು ಹಾಗೂ 13 ವರ್ಷದೊಳಗಿನ ಎಮ್ಮೆ, ಕೋಣಗಳ ವಧೆಯನ್ನು ನಿಷೇಧಿಸಲಾಗಿದೆ. ವಧಿಸಿದವರಿಗೆ ಏಳು ವರ್ಷಗಳವರೆಗೆ ಶಿಕ್ಷೆ ವಿಧಿಸಲಾಗಿದೆ. ₹5 ಲಕ್ಷದವರೆಗೆ ದಂಡ ವಿಧಿಸಲಾಗಿದೆ.

ಈ ಕಾಯ್ದೆಯಲ್ಲಿ ಜಾನುವಾರು ಹತ್ಯೆಯನ್ನು ಪ್ರತಿಬಂಧಿಸಿದ್ದು ಮಾತ್ರವಲ್ಲ. ಅವುಗಳ ಸಂರಕ್ಷಣೆಗೂ ಒತ್ತು ಕೊಡಲಾಗಿದೆ. ಮುಖ್ಯವಾಗಿ ರೈತರ ಹಿತದೃಷ್ಟಿಯಿಂದ ಹಾಗೂ ಗೋವುಗಳ ಆರೋಗ್ಯದ ದೃಷ್ಟಿಯಿಂದ ಪ್ರಬಲವಾದ ಗೋಸಾಗಾಟ ನಿಯಮಾವಳಿ ತಂದಿರುತ್ತಾರೆ. ರೈತರು ಅವರ ಜಾನುವಾರುಗಳನ್ನು ಅವರ ತೋಟಕ್ಕೇ ಸಾಗಿಸುವುದಕ್ಕೆ ಸಹ ಇದು ಅನ್ವಯಿಸುತ್ತದೆ. ಜಾನುವಾರುಗಳನ್ನು ಹೈನುಗಾರಿಕೆಗೆ ಕೊಂಡು ಹೋಗುವಾಗಲೂ ವಾಹನದಲ್ಲಿ ಜಾಗರೂಕತೆಯಿಂದ ಕೊಂಡೊಯ್ಯದೆ ಇದ್ದಲ್ಲಿ, ಗೋವುಗಳಿಗೆ ಪೆಟ್ಟಾಗಿ ನರಳುತ್ತವೆ. ರೈತರಿಗೂ ಇದರಿಂದ ಔಷಧೋಪಚಾರಕ್ಕೆ ಖರ್ಚಾಗುತ್ತದೆ. ಹಾಲು ಉತ್ಪಾದನೆ ಕಡಿಮೆಯಾಗುತ್ತದೆ. ಒಂದು ವೇಳೆ ಗೋವು ನರಳಾಟದಿಂದ ಸತ್ತರೆ, ರೈತನಿಗೆ ಆರ್ಥಿಕ ನಷ್ಟ ಹಾಗೂ ಭಾವನಾತ್ಮಕವಾಗಿ ದುಃಖವಾಗುತ್ತದೆ. ಆದ್ದರಿಂದ ಸರ್ಕಾರವೇ ಇದರ ರಕ್ಷಣೆಯ ಜವಾಬ್ದಾರಿ ತೆಗೆದುಕೊಂಡಿದೆ. ಅದಕ್ಕೆ ಪ್ರಬಲ ಶಿಕ್ಷೆಗೆ ಕಾನೂನಿನಲ್ಲಿ ಅವಕಾಶ ಕೊಟ್ಟಿದ್ದೂ ಸಮರ್ಥನೀಯವಾಗಿದೆ.

ಗುಜರಾತ್ ಸರ್ಕಾರ ಗೋವುಗಳ ಹಿತದೃಷ್ಟಿಯಿಂದ, ರೈತರ ಹಿತದೃಷ್ಟಿಯಿಂದ ಗುಜರಾತ್ ಗೋಹತ್ಯಾ ನಿಷೇಧ ಕಾಯ್ದೆಗೆ 1994ರಲ್ಲಿ ತಿದ್ದುಪಡಿ ಕಾಯ್ದೆಯನ್ನು ತಂದಿತು. ಇದನ್ನು ಗುಜರಾತ್ ಹೈಕೋರ್ಟ್, ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠದಲ್ಲಿ ಪ್ರಶ್ನಿಸಲಾಗಿತ್ತು. ಅಂತಿಮವಾಗಿ ಸುಪ್ರೀಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳ ಪೀಠವು, ಗುಜರಾತ್ ಸರ್ಕಾರ ಮತ್ತು ಮಿರ್ಜಾಪುರ್ ಕಸಬ್ ಕುರೇಶಿ ಪ್ರಕರಣದಲ್ಲಿ 2005ರಲ್ಲಿ ನೀಡಿರುವ ಐತಿಹಾಸಿಕ ತೀರ್ಪಿನಲ್ಲಿ ಗುಜರಾತ್ ಸರಕಾರವು ದನ, ಎತ್ತು, ಹೋರಿ ಅಂದರೆ ಗೋ ಹತ್ಯೆಗೆ ನಿಷೇಧ ಹೇರಿದ್ದನ್ನು ಸಂವಿಧಾನ ಬದ್ಧ ಎಂದು ಹೇಳಿತ್ತು ಮತ್ತು ಹಾಗೆ ನಿಷೇಧ ಮಾಡಿದ್ದರಿಂದ ಸಂವಿಧಾನದ 19ನೇ ವಿಧಿಯ ಉಲ್ಲಂಘನೆ ಆಗುವುದಿಲ್ಲ. ಕಟುಕರ ಉದ್ಯೋಗದ ಹಕ್ಕು ಉಲ್ಲಂಘನೆ ಆಗುವುದಿಲ್ಲ. ಹಾಗೇ ಗೋವು ದೇಶದ ಆರ್ಥಿಕತೆಗೆ ತೀರಾ ಅಗತ್ಯ ಮುಂತಾದ ವಿಚಾರಗಳನ್ನು ಕೂಲಂಕುಷ ವಿಚಾರ ಮಾಡಿ ಗುಜರಾತ್ ಸರಕಾರ ಸಂಪೂರ್ಣ ಗೋ ಹತ್ಯೆ ನಿಷೇಧ ಹೇರಿದ್ದು ಸಂವಿಧಾನದನ್ವಯ ಸಮರ್ಥನೀಯ ಎಂದು ಹೇಳಿದೆ.

ಈ ತೀರ್ಪನ್ನು ಅನುಸರಿಸಿ, ಗೋವಂಶ ಹತ್ಯೆ ನಿಷೇಧಿಸಿ ಹಲವು ರಾಜ್ಯಗಳಲ್ಲಿ ಕಾಯಿದೆ ಬಂದಿದೆ. ಹಾಗೇ ಜಾರ್ಖಂಡ್ ರಾಜ್ಯದಲ್ಲಿ ಕಾಯಿದೆ ತಂದಾಗ 2005ರ ತೀರ್ಪು ಕೇವಲ ಗುಜರಾತಿಗೆ ಸೀಮಿತವಲ್ಲ, ಎಲ್ಲಾ ರಾಜ್ಯಗಳಿಗೆ ಅನ್ವಯಿಸುತ್ತದೆ ಎಂದು ಮತ್ತೆ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ತೀರ್ಪು ನೀಡಿದೆ. ಅದರಂತೆ ಕರ್ನಾಟಕ ಸರಕಾರವು ತಂದಿರುವ ಗೋವಂಶ ಹತ್ಯೆ ನಿಷೇಧವು ಸಂವಿಧಾನ ಬದ್ಧವಾಗಿರುತ್ತದೆ. ಈಗಲೂ ರಾಜ್ಯದಲ್ಲಿ ಗೋಮಾಂಸ ತಮ್ಮ ಆಹಾರದ ಹಕ್ಕು ಎಂದು ಹಾಸ್ಯಾಸ್ಪದವಾಗಿ ಕೆಲವರು ಪ್ರತಿಪಾದನೆ ಮಾಡುತ್ತಾರೆ. ಎಲ್ಲರಿಗೂ ಆಹಾರ ಸಿಗಬೇಕು ಎಂಬುದು ನಿಜ. ಆದರೆ ಇಂಥದ್ದೇ ಆಹಾರದಿಂದ ಹೊಟ್ಟೆ ತುಂಬಬೇಕಾದ ಯಾವ ಅವಶ್ಯಕತೆಯೂ ಇರುವುದಿಲ್ಲ. ರಾಜ್ಯದಲ್ಲಿ ಯಾವತ್ತೂ ದನಗಳ ಹತ್ಯೆಗೆ ಅವಕಾಶ ಇಲ್ಲದಾಗ ಅವರು ರಾಜ್ಯದಲ್ಲಿ ಹತ್ಯೆ ಮಾಡಿದ ದನದ ಮಾಂಸವನ್ನು ತಿಂದಿದ್ದರೆ ಅದು ಕಾನೂನುಬಾಹಿರ, ಶಿಕ್ಷಾರ್ಹ.

ಜನರ ಆರೋಗ್ಯದ ಹಿತದೃಷ್ಟಿಯಿಂದ ಜಾನುವಾರುಗಳ ಸಂಖ್ಯೆ ರಾಜ್ಯದಲ್ಲಿ ನಾಲ್ಕಾರು ಪಟ್ಟು ಹೆಚ್ಚಾಗಬೇಕಿದೆ. ಯಾವುದೇ ಪದಾರ್ಥ ಈ ಜಗತ್ತಿನಲ್ಲಿ ವ್ಯರ್ಥವೆಂದಿಲ್ಲ. ಮುದಿ ಗೋವಿನಲ್ಲಿ ದೈವಿಕ ಶಕ್ತಿಯೂ ಇದ್ದು, ಗೋಮಯ, ಗೋಮೂತ್ರಗಳಿಂದ ಮನುಷ್ಯನಿಗೆ ಪ್ರಯೋಜನವಾಗುವ ಗೋಉತ್ಪನ್ನಗಳನ್ನು ತಯಾರಿಸಲು ಸಾಧ್ಯವಿದೆ. ಈಗಾಗಲೇ ಬಹಳಷ್ಟು ಜನರು ಅದನ್ನು ಮಾಡುತ್ತಲೇ ಇದ್ದಾರೆ. ಕೆಲವು ಆಲಸಿಗಳು ಮಾತ್ರ, ಸರಿಯಾದ ಮಾಹಿತಿಯೂ ಇಲ್ಲದೆ ಮುದಿ ಗೋವುಗಳನ್ನು ವ್ಯರ್ಥ ಎಂದು ತಿಳಿದಿದ್ದಾರೆ. ಎಮ್ಮೆ ಕಡಿಯಬಹುದಾದರೆ, ಮುದಿ ಗೋವುಗಳನ್ನು ವಧಿಸಿದರೆ ಏನು ಎಂಬ ಉಡಾಫೆಯ ಅಸಂಬದ್ಧ ಪ್ರಶ್ನೆ ಎತ್ತುತ್ತಿದ್ದಾರೆ.

ಗೋವಿನ ಸೆಗಣಿಯನ್ನು ಕಪ್ಪುವಜ್ರ ಎಂದು ಕರೆಯಲಾಗುತ್ತದೆ. ಇದರ ಹಲವು ರೀತಿಯ ಸಾಮರ್ಥ್ಯಗಳು ವೈಜ್ಞಾನಿಕವಾಗಿ ಸಾಬೀತಾಗಿದೆ. ಈಗ ಇರುವ ಜಾನುವಾರುಗಳ ಸೆಗಣಿಯಿಂದ ನಮ್ಮ ರಾಜ್ಯದಲ್ಲಿರುವ ಶೇ 25ರಷ್ಟು ಕೃಷಿಗೂ ಗೊಬ್ಬರ ಸಾಲದು. ಈಗ ರಾಸಾಯನಿಕ ಗೊಬ್ಬರದಿಂದ ಬೆಳೆಯುವ ಕೃಷಿ ಉತ್ಪನ್ನ ತಿಂದು ಜನರ ಆರೋಗ್ಯ ಹಾಳಾಗುತ್ತಿರುವುದು ಸರ್ವವಿದಿತ. ನಮ್ಮ ರಾಜ್ಯದಲ್ಲಿ ಅಂದಾಜು ಆರು ಕೋಟಿ ಜನರಿದ್ದಾರೆ. ಆದರೆ ಒಂದು ಕೋಟಿ ಜಾನುವಾರುಗಳಿವೆ. ರಾಜ್ಯದ ಎಲ್ಲಾ ಬೆಳೆಗಳಿಗೆ ಗೋಮಯ ಆಧಾರಿತ ಗೊಬ್ಬರವನ್ನು ಬಳಸಿದರೆ, ಜನರ ಆರೋಗ್ಯಕ್ಕೆ ಸರ್ಕಾರ ಮಾಡುವ ಖರ್ಚು ಉಳಿದು ರಾಜ್ಯದ ಬೊಕ್ಕಸ ತುಂಬಲಿದೆ.

ರಾಜ್ಯದ ಎಲ್ಲಾ ಬೆಳೆಗಳಿಗೆ ಗೋಮಯ ಆಧಾರಿತ ಗೊಬ್ಬರವನ್ನೇ ಬಳಸಬೇಕಾದರೆ, ರಾಜ್ಯದಲ್ಲಿ ಈಗ ಇರುವ ಜಾನುವಾರುಗಳ ಸಂಖ್ಯೆ ನಾಲ್ಕಾರು ಪಟ್ಟು ಹೆಚ್ಚಾಗಬೇಕಾಗಿದೆ. ಸರ್ಕಾರವು ಈ ಕಾಯ್ದೆಯನ್ನು ಪಕ್ಷ, ಧರ್ಮ ಎಂದು ನೋಡಿ ದ್ವೇಷರಾಜಕಾರಣ ಮಾಡದೆ, ಕಾಯ್ದೆಯನ್ನು ಉಳಿಸಬೇಕಾಗಿದೆ. ಇನ್ನಷ್ಟು ಪ್ರಬಲವಾಗಿ ಅನುಷ್ಠಾನಗೊಳಿಸಬೇಕಾಗಿದೆ.

ಲೇಖಕಿ: ಅಧ್ಯಾಪಕಿ

ಪದಬಂಧ 5345

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಚಕಚಕನೆ ನೇಯುವ ರಾಟೆ (3)
3.ಕಿತಾಪತಿ ಏರಿಸಿದ ಬಾವುಟ! (3)
5.ಕಚಕ್ಕನೆ ಕತ್ತರಿಸಿದ ತಲೆಗೂದಲು! (2)
6.ಗುಟುರು ಹಾಕುತ್ತಿರುವ ಗಂಡುಕುರಿ (3)
7.ನೆನಪಲ್ಲೇ ಇರುವ ನೆವ (2)
9.ತರ್ಕ ಮಾಡುವ ವ್ಯಾಪಾರಿ (3)
10.ಗಡಕ್ಕನೆ ಬಂದೆರಗಿದ ಗಂಡುಕೋತಿ (3)
11.ಹಾವಸೆ ಬೆಳೆದಲ್ಲಿ ಉಲ್ಟಾ ರಂಗೋಲಿ (2)
13.ಜನರ ಹತ್ತಿರವಿರುವ ತಾಯಿ (3)
15.ಆ ಮನೆ ಮುಂದಿರುವ ಗಜ (2)
16.ಕಕ್ಷದಲ್ಲಿದ್ದು ಕಾಪಾಡುವವನು (3)
17.ವರ್ತಮಾನದ ಕುಣಿತ (3)

ಮೇಲಿಂದ ಕೆಳಕ್ಕೆ

1.ಇದು ಚಮತ್ಕಾರಿ ಸ್ಪೂನು! (3)
2.ಕರದಲ್ಲಿ ಹಿಡಿದಿಹ ಚಿಪ್ಪು (3)
3. ಪರಿಮಳಯುಕ್ತ ನೀರು (3)
4. ನೆರೆ ಬಂದಾಗ ಉಲ್ಟಾಪಲ್ಟಾ ಆಗಿರುವ ತಡಿಕೆ (3)
5.ಕತ್ತಿ ಹಿಡಿದು ತೋರುವ ಪಟ್ಟು (5)
8.ಈ ಪರಿ ಆದ ಬದಲಾವಣೆ (5)
12.ಹತ್ತಿ ಹಿಡಿದವನ ಸಮೀಪ! (3)
13.ಧನಕನಕ ನೀಡಿದ ತಂದೆ (3)
14. ಸನ್ನಿಧಾನ ಸೇರುವಾಗಿನ ತಡ (3)
15.ಆ ಮಾನವನ ಮುಖ (3)



5344ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚದುರಂಗ 3.ಮದುಮಗ
5.ಯಾಚಕ 6.ದಿನಕರ
8.ರಿಯಾಯಿತಿ 10.ಕಬಳಿಸು
12.ಅವಸರ 14.ದಡಿಯ
15.ರಸಾಯನ 16.ತರಕಾರಿ

ಮೇಲಿಂದ ಕೆಳಕ್ಕೆ:
1.ಚತುಷ್ಪಾದಿ 2.ಗಡಿಯಾರ
3.ಮಧುಕರಿ 4.ಗಣಪತಿ
7.ನವಾಬ 9.ಯಮಸ
10.ಕಳೇಬರ 11.ಸುದರ್ಶನ
12.ಅಯಸ್ಕಾಂತ 13.ರಹದಾರಿ

ಸುಡೊಕು 5731

	1		3		8		2	
8		6				5		3
	5		4		6		7	
5			1		2		4	
	2	9						
6			8		9	2		5
	8		6		1		9	
7		2		8		3		1
	6		2		3		5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5730 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜೂನ್ 10, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಸಪ್ತಮಿ ಗಂ. 14-02 ನಕ್ಷತ್ರ: ಶತಭಿಷಾ ಗಂ. 15-39 ಯೋಗ: ವಿಷ್ಕಂಭ 12-49 ಕರಣ: ಬವ ಗಂ. 14-02, ವೃಷಭ ಮಾಸದ 26 ನೇ ದಿನ, ಮಳೆನಕ್ಷತ್ರ: ಮೃಗಶಿರ 1. ರಾಹುಕಾಲ : ಬೆಳಿಗ್ಗೆ 09-00 – 10-30, ಸೂರ್ಯೋದಯ : 06-07 ಸೂರ್ಯಾಸ್ತ : 06-53
ಮುಸ್ಲಿಂ ದಿನಾಂಕ : 21 ಜುಲ್ಖಾಯದ್
ಅದೃಷ್ಟ ಸಂಖ್ಯೆ : 2, 3

ಮೇಷ: ಈ ದಿನ ಹೆಚ್ಚಿನ ಆತ್ಮಸ್ಥೈರ್ಯದಿಂದ ಕೆಲಸ ಪ್ರಾರಂಭಿಸಿದರೂ ಜಯ ಕಾಣುವಿರಿ. ಸಮಾಜದಲ್ಲಿ ಗೌರವಯುತ ಸ್ಥಾನಮಾನಗಳು ದೊರಕುತ್ತದೆ. ವರಮಾನ ತೆರಿಗೆ ಸಿಬ್ಬಂದಿಗೆ ಕೆಲಸದಲ್ಲಿ ಸ್ವಲ್ಪ ಬಿಡುವು ಸಿಗುವುದು.

ವೃಷಭ: ಸೃಜನಶೀಲ ಯೋಜನೆ ಮುಂದುವರಿಸಲು ಇದು ಶುಭದಿನ. ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯ ಸೂಕ್ತ ರೀತಿಯಲ್ಲಿ ಮಾಡಿಕೊಳ್ಳುವುದು ಒಳ್ಳೆಯದು. ದಿನದ ಅಂತ್ಯದಲ್ಲಿ ಸಂತಸದ ಸುದ್ದಿ ಕೇಳಿ ಬರುವುದು.

ಮಿಥುನ: ಶೈಕ್ಷಣಿಕ ರಂಗದಲ್ಲಿನ ಚಟುವಟಿಕೆಗಳಿಂದ ಉತ್ತಮ ಹೆಸರನ್ನು ಗಳಿಸಿಕೊಳ್ಳಬಹುದು. ಕಾರ್ಮಿಕರ ಸಮಸ್ಯೆಗಳಿಗೆ ಪ್ರತಿಕ್ರಿಯೆ ನೀಡಿ ಅವರ ಮನಸ್ಸಿನಲ್ಲಿ ಉತ್ತಮ ಸ್ಥಾನವನ್ನು ಸಂಪಾದಿಸಿಕೊಳ್ಳುವಂತೆ ಆಗಲಿದೆ.

ಕರ್ಕಾಟಕ: ಉದ್ಯೋಗಕ್ಕಾಗಿ ನಡೆಸಿದ ಪ್ರಯತ್ನ ಈ ದಿನ ಫಲ ನೀಡಲಿದೆ. ಈ ದಿನ ಸಿಗುವ ಅನಿರೀಕ್ಷಿತ ಅವಕಾಶಗಳನ್ನು ಯಾವುದೇ ಮುಜುಗರವಿಲ್ಲದೆ ಬಳಸಿಕೊಳ್ಳದಿದ್ದರೆ ದಡ್ಡತನ ಪ್ರದರ್ಶಿಸಿದಂತಾಗುವುದು.

ಸಿಂಹ: ಸಾಧನೆ ಹಾಗೂ ಅಭಿವೃದ್ಧಿ ಸಾಧಿಸುವ ದಿನ ಎನಿಸಲಿದೆ. ಆಫೀಸಿನ ಕೆಲಸಗಳಿಗಾಗಿ ದೂರದ ಪ್ರಯಾಣ ಲಾಭದಾಯಕ. ವೈಯಕ್ತಿಕ ಕೆಲಸಗಳಿಗೆ ಮೇಲಧಿಕಾರಿಗಳಿಂದ ಅಡಚಣೆ ಇರುವುದಿಲ್ಲ.

ಕನ್ಯಾ: ಪೊಲೀಸ್ ಅಧಿಕಾರಿಗಳು ವರ್ಗಾವಣೆಗಾಗಿ ಮಾಡಿದ ಭಾರಿ ಪ್ರಯತ್ನ ವ್ಯರ್ಥವಾಗುವುದು. ನಿಮ್ಮಲ್ಲಿನ ಏಕಾಗ್ರತೆಯಿಂದಾಗಿ ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಯಾವುದೇ ಕೆಲಸ ಒಪ್ಪಿಕೊಳ್ಳಬಹುದು.

ತುಲಾ: ಸರ್ಕಾರಿ ಅಧಿಕಾರಿಗಳು ಕಾನೂನು ವಿಷಯಗಳ ಬಗ್ಗೆ ಗಮನ ಹರಿಸಬೇಕಾಗಬಹುದು. ಅವಶ್ಯಕತೆಗಳು ಆಶ್ಚರ್ಯಕರ ರೀತಿಯಲ್ಲಿ ಲಭಿಸಲಿದೆ. ಸಹೋದ್ಯೋಗಿಗಳ ಸಂಯಮದ ವರ್ತನೆಯಿಂದ ಅನುಕೂಲ.

ವೃಶ್ಚಿಕ: ಆಫೀಸಿನ ಕೆಲಸದ ವಿಚಾರದಲ್ಲಿ ಕಟ್ಟು ನಿಟ್ಟಿನ ಕ್ರಮ ಮತ್ತು ಉತ್ಸಾಹ ಕೈಗೊಳ್ಳಬೇಕಾಗುವುದು. ಬೆಂಕಿಯಿಂದ ಅನಾಹುತಗಳು ಸಂಭವಿಸುವ ಲಕ್ಷಣಗಳಿರುವುದು. ನಿರೀಕ್ಷೆಗೂ ಮೀರಿದ ಫಲಿತಾಂಶ ಕಾಣುವಿರಿ.

ಧನು: ಎಲ್ಲಾ ಆಸೆಗಳನ್ನು ಕೈಬಿಟ್ಟು ಜೀವನ ನಡೆಸುವ ಸಮಯದಲ್ಲಿ ಪುನಃ ಅದೃಷ್ಟ ನಿಮ್ಮನ್ನು ಕೈ ಬೀಸಿ ಕರೆಯುವುದು. ಕ್ರೀಡಾಪಟುಗಳಿಗೆ ದೇಹಬಾಧೆ ಕಾಣಿಸಬಹುದು. ವಿದ್ಯಾರ್ಥಿಗಳು ಪರಿಶ್ರಮ ಪಡಬೇಕಾಗುವುದು.

ಮಕರ: ವಿದ್ಯಾರ್ಥಿ ವರ್ಗಕ್ಕೆ ಬಂದಿರುವ ಜವಾಬ್ದಾರಿಯುಕ್ತ ನಡವಳಿಕೆ ಮತ್ತು ಉತ್ಸಾಹದಿಂದ ಏಳಿಗೆಯ ಸೂಚನೆ ಇರುವುದು. ದೇಹದಲ್ಲಿ ಉತ್ಸಾಹವಿರುವುದರಿಂದ ಎಲ್ಲ ಕೆಲಸ ಕಾರ್ಯಗಳಲ್ಲಿ ಯಶಸ್ಸು ದೊರೆಯುವುದು.

ಕುಂಭ: ವಾಹನಾದಿಗಳ ಅಥವಾ ದೊಡ್ಡ ದೊಡ್ಡ ಯಂತ್ರಗಳಲ್ಲಿ ಕೆಲಸ ಮಾಡುವವರಿಗೆ ಜಾಗ್ರತೆ ಅಗತ್ಯ. ಆಸ್ತಿ ಕೊಳ್ಳುವಾಗ ಎಲ್ಲಾ ವಿವರಗಳ ಬಗ್ಗೆ ಎರಡೆರಡು ಬಾರಿ ಮಾಹಿತಿ ಪಡೆದುಕೊಳ್ಳಿರಿ. ಕೆಲಸದ ಒತ್ತಡ ಕಡಿಮೆಯಾಗಲಿದೆ.

ಮೀನ: ನಿಯಮ, ನಿಷ್ಠೆಗಳಿಂದ ಅಧಿಕಾರದಲ್ಲಿ ಪದೋನ್ನತಿ ಪಡೆಯಬಹುದು. ವಿದೇಶ ಪ್ರಯಾಣದ ನಿಮ್ಮ ಹಲವು ವರ್ಷಗಳ ಕನಸು ನೆರವೇರುವ ಅವಕಾಶ ಸಿಗುವುದು. ನಾಸ್ತಿಕತೆಯನ್ನು ಬದಿಗಿಟ್ಟು ದೇವತಾರಾಧನೆಯ ಹಾದಿ ಹಿಡಿಯಿರಿ.

ಷೇರುಪೇಟೆ ವಹಿವಾಟು ▼223



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,634
ಇಂದಿನ ಅಂತ್ಯ	18,563
▼	71
ದಿನದ ಕನಿಷ್ಠ	18,555

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹330-470

ದ್ವಿತಳಿ (ಬಿ.ವಿ) ₹307-631

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹572

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1600(1590)
ಸೋಯಾ (ರಿಫೈಂಡ್)	₹910(890)
ಸೂರ್ಯಕಾಂತಿ (ರಿಫೈಂಡ್)	₹890(880)
ಪಾಮೋಲಿನ್	₹835820)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1600
ಮಧ್ಯಮ	₹800-1000
ಸಣ್ಣ	₹400-800

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8000-8910
ಪುತ್ತೂರು	₹ 4500-7300
ಚನ್ನರಾಯಪಟ್ಟಣ	₹ 9000-9000
ತುರುವೇಕೆರೆ	₹ 8850-8850

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹128

ನಗರ ಸಹಕಾರ ಬ್ಯಾಂಕ್‌ಗಳ ಬಲವರ್ಧನೆಗೆ ಅಧಿಸೂಚನೆ

ನವದೆಹಲಿ (ಪಿಟಿಐ): ನಗರ ಸಹಕಾರ ಬ್ಯಾಂಕ್‌ಗಳ (ಯುಸಿಬಿ) ಬಲವರ್ಧನೆಯ ಉದ್ದೇಶದಿಂದ ಆರ್‌ಬಿಐ ನಾಲ್ಕು ಪ್ರಮುಖ ಕ್ರಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ಹೇಳಿದೆ.

ಯುಸಿಬಿ ಬಲವರ್ಧನೆಯ ಉದ್ದೇಶದಿಂದ ಕೇಂದ್ರ ಸಹಕಾರ ಸಚಿವ ಅಮಿತ್ ಶಾ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಸಭೆ ನಡೆಸಿದ್ದರು.

ಯುಸಿಬಿಗಳು ಇನ್ನು ಮುಂದೆ, ಹಿಂದಿನ ಆರ್ಥಿಕ ವರ್ಷದಲ್ಲಿ ತಾವು ಹೊಂದಿದ್ದ ಶಾಖೆಗಳ ಸಂಖ್ಯೆಯ ಶೇಕಡ 10ರಷ್ಟು ಹೊಸ ಶಾಖೆಗಳನ್ನು ಆರ್‌ಬಿಐ ಪೂರ್ವಾನುಮತಿ ಇಲ್ಲದೆ ಆರಂಭಿಸಬಹುದು. ಇದಕ್ಕೆ ಸಂಬಂಧಿಸಿದ ನೀತಿಗೆ ಯುಸಿಬಿಗಳು ತಮ್ಮ ಆಡಳಿತ ಮಂಡಳಿಯ ಒಪ್ಪಿಗೆ ಪಡೆಯಬೇಕು.

ಯುಸಿಬಿಗಳು ಇನ್ನು ಮುಂದೆ ವಾಣಿಜ್ಯ ಬ್ಯಾಂಕ್‌ಗಳ ರೀತಿಯಲ್ಲಿಯೇ ಸಾಲಗಳ ಒಂದು ಬಾರಿ ಮರುಪಾವತಿ (ಒಟಿಎಸ್) ಅವಕಾಶ ಕಲ್ಪಿಸಬಹುದು. ತಮ್ಮ ಆಡಳಿತ ಮಂಡಳಿ ಒಪ್ಪಿರುವ ನಿಯಮಗಳಿಗೆ ಅನುಗುಣವಾಗಿ ಅವು ಸಾಲದ ರೈಟ್‌ಆಫ್‌ಗೆ ಅವಕಾಶ ಕಲ್ಪಿಸಬಹುದು.

ಈಕ್ವಿಟಿ ಎಂಎಫ್ ಹೂಡಿಕೆ ಇಳಿಕೆ

ಲಾಭ ಗಳಿಕೆಗೆ ಹೂಡಿಕೆದಾರರ ಗಮನ: 6 ತಿಂಗಳ ಕನಿಷ್ಠ ಮಟ್ಟಕ್ಕೆ ಒಳಹರಿವು

ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಮೇ ತಿಂಗಳಿನಲ್ಲಿ ₹3,240 ಕೋಟಿ ಹೂಡಿಕೆ ಆಗಿದೆ. ಏಪ್ರಿಲ್‌ನಲ್ಲಿ ₹6,480 ಕೋಟಿ ಹೂಡಿಕೆ ಆಗಿತ್ತು. ಇದಕ್ಕೆ ಹೋಲಿಸಿದರೆ ಹೂಡಿಕೆ ಅರ್ಧದಷ್ಟು ಇಳಿಕೆ ಆಗಿದೆ.

ಮಾರುಕಟ್ಟೆಯು ಉತ್ತಮ ಗಳಿಕೆ ಕಂಡುಕೊಳ್ಳುತ್ತಿರುವುದರಿಂದ ಹೂಡಿಕೆದಾರರು ಲಾಭ ಮಾಡಿಕೊಳ್ಳಲು ಗಮನ ಹರಿಸುತ್ತಿದ್ದಾರೆ. ಹೀಗಾಗಿ ಸತತ ಎರಡನೇ ತಿಂಗಳಿನಲ್ಲಿಯೂ ಹೂಡಿಕೆ ಪ್ರಮಾಣ ಕಡಿಮೆ ಆಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್‌ಗಳ ಒಕ್ಕೂಟ (ಎಎಂಎಫ್‌ಐ) ಮಾಹಿತಿ ನೀಡಿದೆ.

ಮ್ಯೂಚುವಲ್ ಫಂಡ್ ಉದ್ಯಮದಲ್ಲಿ ಇರುವ 42 ಕಂಪನಿಗಳು ಮೇ ತಿಂಗಳಿನಲ್ಲಿ ಒಟ್ಟು ₹57,420 ಕೋಟಿ ಬಂಡವಾಳ ಆಕರ್ಷಿಸಿವೆ. ಏಪ್ರಿಲ್‌ನಲ್ಲಿ ₹1.21 ಲಕ್ಷ ಕೋಟಿ ಹೂಡಿಕೆ ಆಕರ್ಷಿಸಿದ್ದವು.

ಮುಖ್ಯಾಂಶಗಳು

- ಸತತ 27ನೇ ತಿಂಗಳಿನಲ್ಲಿಯೂ ಮುಂದುವರಿದ ಒಳಹರಿವು
- ಸ್ಮಾಲ್, ಮಿಡ್ ಕ್ಯಾಪ್‌ಗಳತ್ತ ಹೂಡಿಕೆದಾರರ ಗಮನ

ಎಂಎಫ್ ನಿರ್ವಹಣಾ ಸಂಪತ್ತು (ಲಕ್ಷ ಕೋಟಿಗಳಲ್ಲಿ)

ಏಪ್ರಿಲ್	ಮೇ
₹41.62	₹43.2

ಡೆಟ್ ಫಂಡ್‌ಗಳಲ್ಲಿ ಹೂಡಿಕೆಯು ಅರ್ಧದಷ್ಟು ಇಳಿಕೆ ಕಂಡಿದೆ. ಡೆಟ್ ಫಂಡ್‌ಗಳಲ್ಲಿ ಮೇ ತಿಂಗಳಿನಲ್ಲಿ ₹46 ಸಾವಿರ ಕೋಟಿ ಹೂಡಿಕೆ ಆಗಿದೆ. ಏಪ್ರಿಲ್‌ನಲ್ಲಿ ₹1.06 ಲಕ್ಷ ಕೋಟಿ ಹೂಡಿಕೆ ಆಗಿತ್ತು.

ಹೂಡಿಕೆದಾರರು ರಜೆ ಮತ್ತು ಶಿಕ್ಷಣದ ವೆಚ್ಚಕ್ಕಾಗಿ ಹಣ ಬಳಸುತ್ತಿದ್ದಾರೆ, ಅವರು ಲಾಭ ಗಳಿಕೆಗೆ ಕೂಡ ಮುಂದಾಗಿದ್ದಾರೆ. ಹೀಗಾಗಿ ಮೇ ತಿಂಗಳಲ್ಲಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಕಡಿಮೆ ಆಗಿದೆ ಎಂದು ಕೋಟಕ್ ಮಹೀಂದ್ರ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯ ರಾಷ್ಟ್ರೀಯ ಮುಖ್ಯಸ್ಥ ಮನಿಷ್ ಮೆಹ್ತಾ ಹೇಳಿದ್ದಾರೆ.

ಈಕ್ವಿಟಿಯಲ್ಲಿ ಸ್ಮಾಲ್ ಕ್ಯಾಪ್‌ಗಳ ಕಡೆಗೆ ಹೂಡಿಕೆದಾರರು ಹೆಚ್ಚು ಗಮನ ಹರಿಸಿದ್ದಾರೆ. ಸ್ಮಾಲ್ ಕ್ಯಾಪ್‌ಗಳಲ್ಲಿ ಹೂಡಿಕೆಯು ಶೇ 50ರಷ್ಟು ಹೆಚ್ಚಾಗಿ ₹3,282 ಕೋಟಿಗೆ ತಲುಪಿದೆ ಎಂದು ಫೈರ್ಸ್ ರಿಸರ್ಚ್ ಸಂಸ್ಥೆಯ ಉಪಾಧ್ಯಕ್ಷ ಗೋಪಾಲ್ ಕಾವಲಿರೆಡ್ಡಿ ತಿಳಿಸಿದ್ದಾರೆ.

ವ್ಯವಸ್ಥಿತ ಹೂಡಿಕೆ ಯೋಜನೆಗಳಲ್ಲಿ (ಎಸ್‌ಐಪಿ) ಬಂಡವಾಳ ಒಳಹರಿವು ಮತ್ತೆ ಹೆಚ್ಚಾಗಿದೆ. ಮೇ ತಿಂಗಳಲ್ಲಿ ₹14 ಸಾವಿರ ಕೋಟಿಗೆ ತಲುಪಿದೆ. ಏಪ್ರಿಲ್‌ನಲ್ಲಿ ₹13,728 ಕೋಟಿ ಆಗಿತ್ತು ಎಂದೂ ಅವರು ಹೇಳಿದ್ದಾರೆ. ಹೈಬ್ರಿಡ್ ವಿಭಾಗದಲ್ಲಿ ಒಳಹರಿವು ಶೇ 84ರಷ್ಟು ಹೆಚ್ಚಾಗಿ ₹6,093 ಕೋಟಿಗೆ ತಲುಪಿದೆ.

ಸುದ್ದಿ 2 ನಿಮಿಷ

ಮಾರಾಟದ ಒತ್ತಡ: ಎರಡನೇ ದಿನವೂ ಇಳಿಕೆ ಕಂಡ ವಹಿವಾಟು

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ದಿನವೂ ಇಳಿಕೆ ಕಂಡವು. ಹೂಡಿಕೆದಾರರು ಎಫ್‌ಎಂಸಿಜಿ, ಐ.ಟಿ. ಮತ್ತು ಟೆಕ್ ಷೇರುಗಳನ್ನು ಮಾರಾಟ ಮಾಡಿದ್ದರಿಂದ ಶುಕ್ರವಾರವೂ ನಕಾರಾತ್ಮಕ ವಹಿವಾಟು ನಡೆಯಿತು.

ಮಾರುಕಟ್ಟೆ ಮೌಲ್ಯದಲ್ಲಿ ಮುಂಚೂಣಿಯಲ್ಲಿ ಇರುವ ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾಗಿದ್ದು ಸಹ ವಹಿವಾಟಿನ ಮೇಲೆ ಪ್ರತಿಕೂಲ ಪರಿಣಾಮ ಬೀರಿತು.


ಮುಂಬೈ ಷೇರುಪೇಟೆ

ಸೂಚ್ಯಂಕ ಸೆನ್ಸೆಕ್ಸ್ 223 ಅಂಶ ಇಳಿಕೆ ಕಂಡು, 62,625 ಅಂಶಗಳಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 71 ಅಂಶ ಇಳಿಕೆ ಕಂಡು 18,563 ಅಂಶಗಳಲ್ಲಿ ದಿನದ ವಹಿವಾಟು ಅಂತ್ಯಗೊಂಡಿತು. ವಾರದ ವಹಿವಾಟಿನಲ್ಲಿ ಬಿಎಸ್‌ಇ 78 ಅಂಶ ನಿಫ್ಟಿ 29 ಅಂಶಗಳಷ್ಟು ಏರಿಕೆ ಕಂಡಿದೆ.

ಸೆನ್ಸೆಕ್ಸ್‌ನಲ್ಲಿ ಟಾಟಾ ಸ್ಟೀಲ್ ಷೇರು ಶೇ 2ರವರೆಗೆ ಇಳಿಕೆ ಕಂಡಿತು. ವಲಯವಾರು ಎಫ್‌ಎಂಸಿಜಿ ಶೇ 0.82, ಟೆಕ್ ಶೇ 0.79 ಮತ್ತು ಐ.ಟಿ. ಶೇ 0.68ರಷ್ಟು ಇಳಿಕೆ ಕಂಡಿತು. ಬ್ರೆಂಟ್ ಕಚ್ಚಾ ತೈಲ ದರ ಶೇ 0.38ರಷ್ಟು ಹೆಚ್ಚಾಗಿ ಬ್ಯಾರಲ್‌ಗೆ 76.25 ಡಾಲರ್‌ಗೆ ತಲುಪಿತು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಶುಕ್ರವಾರದ ವಹಿವಾಟಿನಲ್ಲಿ ₹ 309 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

‘ಜಿಡಿಪಿ ಬೆಳವಣಿಗೆಗೆ ಗಟ್ಟಿ ನೆಲೆ’

ಕೋಲ್ಕತ್ತ (ಪಿಟಿಐ): ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆಯು ಈಗ ಗಟ್ಟಿ ನೆಲೆಯ ಮೇಲೆ ನಿಂತಿದೆ, ನಗರ ಪ್ರದೇಶಗಳಲ್ಲಿ ಒಳ್ಳೆಯ ಬೇಡಿಕೆ ವ್ಯಕ್ತವಾಗುತ್ತಿದೆ ಎಂದು ಎಸ್‌ಬಿಐ ಸಂಶೋಧನಾ ವರದಿ ಹೇಳಿದೆ.

ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆ ಕಡಿಮೆ ಇರುವುದು ಕಳವಳಕಾರಿ ಎಂದು ಅದು ಅಭಿಪ್ರಾಯ ವ್ಯಕ್ತಪಡಿಸಿದೆ.

ಮಾರುಕಟ್ಟೆಯಲ್ಲಿ ಕಾರ್ಮಿಕರಿಗೆ ಇದ್ದ ಅತಿಯಾದ ಬೇಡಿಕೆಯನ್ನು ತಗ್ಗಿಸುವಲ್ಲಿ ಆರ್‌ಬಿಐ ಯಶಸ್ಸು ಕಂಡಿದೆ. ಆದರೆ ಇದೇ ಹೊತ್ತಿನಲ್ಲಿ ಆರ್‌ಬಿಐ, ಉದ್ಯೋಗಗಳ ಸಂಖ್ಯೆ ಕಡಿಮೆ ಆಗದಂತೆಯೂ ನೋಡಿಕೊಂಡಿದೆ ಎಂದು ಎಸ್‌ಬಿಐ ಹೇಳಿದೆ.

ಹಣದುಬ್ಬರ ಕಡಿಮೆ ಆಗುತ್ತಿರುವುದು ಹಾಗೂ ಮುಂದೆ ಹಣದುಬ್ಬರವು ಇನ್ನಷ್ಟು ಕಡಿಮೆ ಆಗಬಹುದು ಎಂಬ ಅಂದಾಜು, ಮುಂದಿನ ದಿನಗಳಲ್ಲಿ ಆರ್‌ಬಿಐ ಬೆಲೆ ಏರಿಕೆಯನ್ನು ನಿಯಂತ್ರಿಸುವಲ್ಲಿ ಯಶಸ್ಸು ಕಾಣಬಹುದು ಎಂಬ ಸ್ಪಷ್ಟ ಸೂಚನೆಯನ್ನು ನೀಡಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಶಿಯೋಮಿ ಪ್ರಕರಣ: ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹5,551.27 ಕೋಟಿ ಮೊತ್ತವನ್ನು ಕಾನೂನುಬಾಹಿರವಾಗಿ ಪಾವತಿಸಿರುವ ಆರೋಪದ ಅಡಿ ಜಾರಿ ನಿರ್ದೇಶನಾಲಯ ಸಲ್ಲಿಸಿರುವ ಆರೋಪ ಪಟ್ಟಿ ಆಧರಿಸಿ ಸಕ್ಷಮ ಪ್ರಾಧಿಕಾರವು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯ ಅಡಿಯಲ್ಲಿ ಶಿಯೋಮಿ ಕಂಪನಿ, ಅದರ ಅಧಿಕಾರಿಗಳು ಹಾಗೂ ಮೂರು ಬ್ಯಾಂಕ್‌ಗಳಿಗೆ ನೋಟಿಸ್ ಜಾರಿಮಾಡಿದೆ.

ಶಿಯೋಮಿ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಮಾಜಿ ವ್ಯವಸ್ಥಾಪಕ ನಿರ್ದೇಶಕ ಮನು ಕುಮಾರ್ ಜೈನ್, ಹಾಲಿ ನಿರ್ದೇಶಕ ಮತ್ತು ಮುಖ್ಯ ಹಣಕಾಸು ಅಧಿಕಾರಿ ಸಮೀರ್ ಬಿ. ರಾವ್, ಸಿಟಿ ಬ್ಯಾಂಕ್, ಎಚ್‌ಎಸ್‌ಬಿಸಿ ಬ್ಯಾಂಕ್ ಮತ್ತು ಡಾಯಿಚ್ ಬ್ಯಾಂಕ್‌ಗಳಿಗೆ ಸಕ್ಷಮ ಪ್ರಾಧಿಕಾರ ಶೋಕಾಸ್ ನೋಟಿಸ್ ಜಾರಿ ಮಾಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	475
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಹೊಸನಗರ	
ಬಿಳಿಗೋಟು	29899-32889
ಚಾಲಿ	29899-37209
ಕೆಂಪುಗೋಟು	33399-37599
ರಾಶಿ	44009-51300
ಸಿಪ್ಪೆಗೋಟು	18899-18999
ಕಾರ್ಕಳ	
ಹೊಸತು	30000-40500
ಹಳತು	40000-53000
ಕುಮಟಾ	
ಚಿಪ್ಪು	29999-32809
ಕೋಕ	19999-32799
ಫ್ಯಾಕ್ಟರಿ	14609-23179
ಹಳೆಚಾಲಿ	36599-39599
ಹೊಸಚಾಲಿ	35999-37619
ಪುತ್ತೂರು	
ಕೋಕ	11000-25000
ಹೊಸತು	33500-40500
ಶಿವಮೊಗ್ಗ	
ಬೆಟ್ಟೆ	45000-54550
ಗೊರಬಲು	17001-37258
ರಾಶಿ	35499-50258
ಸರಕು	52233-83540
ಸಿದ್ದಾಪುರ	
ಬಿಳಿಗೋಟು	28909-33699
ಚಾಲಿ	35809-38111
ಕೋಕ	28919-32889
ಕೆಂಪುಗೋಟು	31312-32589
ರಾಶಿ	44209-48349
ತಟ್ಟಿಬೆಟ್ಟೆ	38889-43209
ಶಿರಸಿ	
ಬೆಟ್ಟೆ	35199-46899
ಬಿಳಿಗೋಟು	23699-32933
ಚಾಲಿ	35098-38201
ಕೆಂಪುಗೋಟು	26296-36099
ರಾಶಿ	45499-48098
ಯಲ್ಲಾಪುರ	
ಬಿಳಿಗೋಟು	26899-34866
ಚಾಲಿ	34699-38070
ಕೋಕ	18618-32016
ಕೆಂಪುಗೋಟು	28011-34726
ರಾಶಿ	43599-53399
ತಟ್ಟಿಬೆಟ್ಟೆ	38090-47100

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15500	15700	15300	194.85ಸೆಂಟ್ಸ್
ಎಸಿ	8120	8100	7700	
ಆರ್‌ಪಿ	10800	10950	10800	ಲಂಡನ್
ಆರ್‌ಸಿ	6230	248on OT	6025	2760ಡಾಲರ್ಸ್

‘ಆರ್‌ಬಿಐ ನಿರ್ಧಾರ ಪ್ರಶ್ನಿಸಿ ಅರ್ಜಿ: ತುರ್ತು ವಿಚಾರಣೆ ಇಲ್ಲ’

ನವದೆಹಲಿ (ಪಿಟಿಐ): ಯಾವುದೇ ಅರ್ಜಿ ಹಾಗೂ ಗುರುತಿನ ಚೀಟಿಗಳು ಇಲ್ಲದೆ ₹ 2 ಸಾವಿರ ಮುಖಬೆಲೆಯ ನೋಟುಗಳನ್ನು ವಿನಿಮಯ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತೆಗೆದುಕೊಂಡ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ತುರ್ತು ವಿಚಾರಣೆ ನಡೆಸುವುದಕ್ಕೆ ಸುಪ್ರೀಂಕೋರ್ಟ್ ಶುಕ್ರವಾರ ನಿರಾಕರಿಸಿತು.

ಈ ವಿಚಾರವಾಗಿ ಸಲ್ಲಿಕೆಯಾದ ಅರ್ಜಿಯನ್ನು ವಿಚಾರಣೆ ಪಟ್ಟಿಗೆ ಸೇರಿಸುವುದಕ್ಕೆ ಸಂಬಂಧಿಸಿ ರಿಜಿಸ್ಟ್ರಿ ಸಲ್ಲಿಸಿದ್ದ ವರದಿಯನ್ನು ಪರಿಶೀಲಿಸಿದ ನಂತರ ಸುಪ್ರೀಂಕೋರ್ಟ್ ಈ ವಿಷಯ ಸ್ಪಷ್ಟಪಡಿಸಿತು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಹಾಗೂ ರಾಜೇಶ್ ಬಿಂದಲ್ ಅವರಿದ್ದ ರಜಾಕಾಲದ ನ್ಯಾಯಪೀಠ, ಬೇಸಿಗೆ ರಜೆ ಮುಗಿದ ನಂತರ, ಈ ವಿಷಯವನ್ನು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರಲ್ಲಿ ಮಂಡಿಸುವಂತೆ ಸೂಚನೆ ನೀಡಿತು.

ಅರ್ಜಿಯ ತುರ್ತು ವಿಚಾರಣೆ ನಡೆಸುವಂತೆ ಅರ್ಜಿದಾರರೂ ಆದ ವಕೀಲ ಅಶ್ವಿನಿ ಉಪಾಧ್ಯಾಯ ಮನವಿ ಸಲ್ಲಿಸಿದ್ದರು.

‘ನಕಾರಾತ್ಮಕ ಪರಿಣಾಮ ಬೀರದಂತೆ ಎ.ಐ. ನಿಯಂತ್ರಣ’

ಪ್ರಜಾವಾಣಿ ವಾರ್ತೆ

ನವದೆಹಲಿ: ಡಿಜಿಟಲ್ ಬಳಕೆದಾರರ ಮೇಲೆ ನಕಾರಾತ್ಮಕ ಪರಿಣಾಮ ಆಗದಂತೆ ಕೇಂದ್ರ ಸರ್ಕಾರ ಸರ್ಕಾರ ಕೃತಕ ಬುದ್ಧಿಮತ್ತೆ (ಎ.ಐ) ಅನ್ನು ನಿಯಂತ್ರಿಸಲಿದೆ ಎಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಶುಕ್ರವಾರ ಹೇಳಿದರು.

‘ಕೃತಕ ಬುದ್ಧಿಮತ್ತೆಯನ್ನು ಕೆಟ್ಟದ್ದಕ್ಕಾಗಿ ಅಲ್ಲ, ಒಳ್ಳೆಯದಕ್ಕೆ ಬಳಕೆಯಾಗಲಿದೆ ಎಂದೂ ಸರ್ಕಾರ ಖಾತರಿ ಪಡಿಸಿಕೊಳ್ಳಲಿದೆ’ ಎಂದರು. ಪ್ರಧಾನಿ ಮೋದಿ ಆಡಳಿತದ ಒಂಬತ್ತು ವರ್ಷಗಳಲ್ಲಿ ಭಾರತದಲ್ಲಿ ಡಿಜಿಟಲೀಕರಣದ ಪ್ರಗತಿ ಕುರಿತು ಅವರು ಮಾತನಾಡಿದರು.

ವೆಬ್3 ವೇದಿಕೆಯನ್ನು ಒಳಗೊಂಡಂತೆ ತಾಂತ್ರಿಕ ಮತ್ತು ಡಿಜಿಟಲ್ ಆಧಾರಿತ ಯಾವುದೇ ಕ್ಷೇತ್ರಕ್ಕೂ ಇದೇ ಮಾನದಂಡವನ್ನು ಸರ್ಕಾರ ಅನುಸರಿಸಲಿದೆ ಎಂದು ತಿಳಿಸಿದರು.

ರಾಜೀವ್ ಚಂದ್ರಶೇಖರ್

ವೆಬ್ 3.0 ಎಂದೂ ಗುರುತಿಸುವ ‘ವೆಬ್ 3’ ಇಂಟರ್‌ನೆಟ್‌ನ ಹೊಸ ಸಂಪರ್ಕ ವೇದಿಕೆಯಾಗಿದೆ. ವಿಕೇಂದ್ರೀಕರಣ, ಬ್ಲಾಕ್‌ಚೇನ್ ಟೆಕ್ನಾಲಜಿ ಮತ್ತು ಟೋಕನ್ ಆಧರಿತ ಅರ್ಥಶಾಸ್ತ್ರದ ಕಲ್ಪನೆಗಳನ್ನು ಇದು ಒಳಗೊಂಡಿದೆ.

‘ಇಂಟರ್‌ನೆಟ್‌ನಲ್ಲಿ ಇಂದು ದ್ವೇಷ ಮತ್ತು ಅಪರಾಧದ ಮನಸ್ಥಿತಿ ಹೆಚ್ಚಾಗಿದೆ. ಡಿಜಿಟಲ್ ಬಳಕೆದಾರರಿಗೆ ಕೆಡುಕಾಗಬೇಕು ಎಂದು ನಾವು ಬಯಸುವುದಿಲ್ಲ. ಬಳಕೆದಾರರಿಗೆ ಕೆಡುಕಾಗಲಿದೆ ಎನ್ನಲಾಗುವ ಎ.ಐ ಅಥವಾ ಸಂಬಂಧಿತ ಕಾರ್ಯಕ್ರಮಗಳ ನಿರ್ವಹಣೆಗೆ ಭಾರತದಲ್ಲಿ ಅವಕಾಶವನ್ನು ನೀಡಲಾಗುವುದಿಲ್ಲ ಎಂದು ಸಚಿವರು ಹೇಳಿದರು.

ಎ.ಐ ಅನ್ವೇಷಣೆಯು ಉದ್ಯೋಗಾವಕಾಶಗಳ ಮೇಲೆ ಪರಿಣಾಮ ಬೀರಲಿದೆಯೇ ಎಂಬ ಪ್ರಶ್ನೆಗೆ, ‘ಕಳೆದ ಕೆಲ ವರ್ಷಗಳಲ್ಲಿ ಎ.ಐನಿಂದ 1 ಕೋಟಿಗೂ ಅಧಿಕ ಉದ್ಯೋಗಗಳು ಸೃಷ್ಟಿಯಾಗಿವೆ. ಐದು ವರ್ಷಗಳ ಬಳಿಕ ಇದು ಮಾನವ ಕಾರ್ಯಪಡೆಯನ್ನು ಅತಿಕ್ರಮಿಸುವ ಸಾಧ್ಯತೆಗಳು ಇವೆ. ಸದ್ಯ, ಎ.ಐ ನಿರ್ದಿಷ್ಟ ಉದ್ದೇಶಗಳಿಗಷ್ಟೇ ಬಳಕೆಯಾಗುತ್ತಿದೆ. ಇದು, ದಕ್ಷತೆಯನ್ನು ಹೆಚ್ಚಿಸಲಿದೆ. ಬಹುತೇಕ ಪುನರಾವರ್ತಿತ ಹಾಗೂ ಯಾಂತ್ರಿಕ ಕಾರ್ಯಶೈಲಿಯ ಉದ್ಯೋಗಗಳಲ್ಲಿ ಕ್ರಮೇಣ ಇದು ಬಳಕೆಯಾಗಬಹುದು‘ ಎಂದರು.

ಚಾಟ್ ಜಿಪಿಟಿ ಅನ್ನು ಅನ್ವೇಷಿಸಿರುವ ಓಪನ್ ಎಐ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸ್ಯಾಮ್ ಅಲ್ಟ್‌ಮನ್ ಅವರು ಪ್ರಧಾನಿ ಮೋದಿ ಅವರನ್ನು ಭೇಟಿಯಾಗಿದ್ದು, ಕೃತಕ ಬುದ್ಧಿಮತ್ತೆ (ಎಐ) ವಿವಿಧ ಆಯಾಮಗಳ ಕುರಿತು ಚರ್ಚಿಸಿದರು.

ವ್ಯಂಗ್ಯಚಿತ್ರಕಾರರಾದ ಅತೀನಾ ಮತ್ತೊಮ್ಮೆ ಬಂಧನ

ದುಬೈ (ಎಪಿ): ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ರಾಜಕೀಯ ಪೋಸ್ಟ್‌ಗಳನ್ನು ಅಪ್‌ಲೋಡ್ ಮಾಡಿದ್ದಕ್ಕೆ ಬಂಧನಕ್ಕೊಳಗಾಗಿದ್ದ ವ್ಯಂಗ್ಯಚಿತ್ರಕಾರರಾದ ಅತೀನಾ ಫರ್ಗದಾನಿ ಅವರನ್ನು ಇರಾನ್ ಅಧಿಕಾರಿಗಳು ಮತ್ತೆ ಬಂಧಿಸಿದ್ದಾರೆ.

ಅತೀನಾ ಅವರ ವಕೀಲರಾದ ಮೊಹಮದ್ ಮೊಗ್ಮಿ ಈ ಕುರಿತಂತೆ ಶುಕ್ರವಾರ ಟ್ವೀಟ್ ಮಾಡಿದ್ದು, ‘ಟೆಹ್ರಾನ್‌ನ ಎವಿನ್ ಕೋರ್ಟ್‌ಹೌಸ್‌ಗೆ ಕರೆಸಿಕೊಂಡ ಅಧಿಕಾರಿಗಳು ಬಂಧಿಸಿದ್ದಾರೆ. ಯಾಕೆ ವಶಕ್ಕೆ ಪಡೆದಿದ್ದಾರೆ ಎಂಬುದನ್ನು ತಿಳಿಸಿಲ್ಲ’ ಎಂದಿದ್ದಾರೆ.

ಕರಡು ಕಾನೂನನ್ನು ವಿರೋಧಿಸಿ 2016ರಲ್ಲಿ ವ್ಯಂಗ್ಯಚಿತ್ರವೊಂದನ್ನು ರಚಿಸಿದ್ದಕ್ಕೆ 18 ತಿಂಗಳು ಸೆರೆವಾಸ ಅನುಭವಿಸಿದ್ದ ಫರ್ಗದಾನಿ ಇದೀಗ ಮತ್ತೆ ಬಂಧನಕ್ಕೊಳಗಾಗಿದ್ದಾರೆ. ಬುಧವಾರ ಸಹ ಪ್ರಾಣಿಯ ಜೊತೆಗೆ ಪೈಶಾಚಿಕ ಮುಖ ಬಿಂಬಿಸುವ ವ್ಯಂಗ್ಯಚಿತ್ರವೊಂದನ್ನು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು. ಪತ್ರಕರ್ತರನ್ನು ರಕ್ಷಿಸುವ ನ್ಯೂಯಾರ್ಕ್ ಮೂಲದ ಸಮಿತಿಯು ಫರ್ಗದಾನಿ ಅವರನ್ನು ಬಿಡುಗಡೆ ಮಾಡುವಂತೆ ಇರಾನ್ ಸರ್ಕಾರವನ್ನು ಆಗ್ರಹಿಸಿದೆ.

ನ್ಯಾಯಾಂಗ ಇಲಾಖೆಯಿಂದ ಏಳು ಕ್ರಿಮಿನಲ್ ಆರೋಪ ನಿಗದಿ

ದೋಷಾರೋಪ: ಟ್ರಂಪ್‌ಗೆ ಸಂಕಷ್ಟ

ಮಿಯಾಮಿ (ಎಪಿ): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇಲೆ ವರ್ಗೀಕೃತ ದಾಖಲೆಗಳನ್ನು ತಪ್ಪಾಗಿ ನಿರ್ವಹಿಸಿದ ಆರೋಪದ ಮೇಲೆ ಏಳು ದೋಷಾರೋಪಗಳನ್ನು ನಿಗದಿ ಮಾಡಲಾಗಿದೆ.

ಮಾಜಿ ಅಧ್ಯಕ್ಷರೊಬ್ಬರ ಮೇಲೆ ಕ್ರಿಮಿನಲ್ ಆರೋಪಗಳನ್ನು ಹೊರಿಸಿರುವುದು ಅಮೆರಿಕದ ಇತಿಹಾಸದಲ್ಲಿಯೇ ಮೊದಲು. ಅಧ್ಯಕ್ಷೀಯ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿಯೇ ಈ ಬೆಳವಣಿಗೆ ನಡೆದಿದೆ. ಇದು, ಚುನಾವಣಾ ತಯಾರಿ ನಡೆಸುತ್ತಿರುವ ಟ್ರಂಪ್ ಅವರಿಗೆ ಸಂಕಷ್ಟ ತಂದೊಡ್ಡಿದೆ.

ಟ್ರಂಪ್ ಅವರ ವಿರುದ್ಧದ ಆರೋಪಗಳು ಸಾಬೀತಾದರೆ ಜೈಲು ಶಿಕ್ಷೆಯಾಗುವ ಸಾಧ್ಯತೆಯೂ ಇದೆ.

ಡೊನಾಲ್ಡ್ ಟ್ರಂಪ್

ನ್ಯಾಯಾಂಗ ಇಲಾಖೆಯು ಟ್ರಂಪ್ ಮೇಲಿನ ದೋಷಾರೋಪ ಪಟ್ಟಿಯನ್ನು ಸದ್ಯಕ್ಕೆ ಸಾರ್ವಜನಿಕವಾಗಿ ಪ್ರಕಟಿಸಿಲ್ಲ. ಆದರೆ ಈ ಪಟ್ಟಿಯಲ್ಲಿ ಟ್ರಂಪ್ ವಿರುದ್ಧ ಏಳು ಕ್ರಿಮಿನಲ್ ಆರೋಪಗಳನ್ನು ನಿಗದಿಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ವಿಷಯ ಬಹಿರಂಗ ಆಗುತ್ತಿದ್ದಂತೆಯೇ ಡೊನಾಲ್ಡ್ ಟ್ರಂಪ್ ಅವರು ಮಿಯಾಮಿಯ ನ್ಯಾಯಾಲಯಕ್ಕೆ ಮಂಗಳವಾರ ಮಧ್ಯಾಹ್ನ ಹಾಜರಾಗುವುದಾಗಿ ಘೋಷಿಸಿದ್ದಾರೆ. ಅಲ್ಲದೆ ತಾವು ಅಮಾಯಕ, ಇದು ರಾಜಕೀಯ ದ್ವೇಷ ಸಾಧನೆ ಎಂದೂ ಅವರು ಪ್ರತಿಕ್ರಿಯಿಸಿದ್ದಾರೆ.

ಈ ಪ್ರಕರಣವು ಟ್ರಂಪ್‌ಗೆ ತೀವ್ರವಾದ ಕಾನೂನು ಅಪಾಯ ತಂದೊಡ್ಡಬಹುದು ಎನ್ನಲಾಗುತ್ತಿದೆ. ಅವರು ಈಗಾಗಲೇ ನ್ಯೂಯಾರ್ಕ್‌ನಲ್ಲಿ ದೋಷಾರೋಪಣೆಗೆ ಒಳಗಾಗಿದ್ದಾರೆ. ವಾಷಿಂಗ್ಟನ್ ಮತ್ತು ಅಟ್ಲಾಂಟಾದಲ್ಲಿಯೂ ಅವರ ವಿರುದ್ಧ ತನಿಖೆ ನಡೆಯುತ್ತಿದೆ.

ಪ್ರಮುಖ ಆರೋಪಗಳು

ರಾಷ್ಟ್ರೀಯ ರಕ್ಷಣಾ ಸೂಕ್ಷ್ಮ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಹಿಡಿದಿಟ್ಟುಕೊಂಡಿರುವುದು, ಬೇಹುಗಾರಿಕೆ ಕಾಯ್ದೆ ಉಲ್ಲಂಘನೆ, ಸುಳ್ಳು ಹೇಳಿಕೆಗಳನ್ನು ನೀಡುವುದು, ಕೆಲಸಕ್ಕೆ ಅಡಚಣೆ ಮಾಡುವುದು, ಪಿತೂರಿ ಸೇರಿದಂತೆ ಏಳು ಆರೋಪಗಳನ್ನು ಟ್ರಂಪ್ ವಿರುದ್ಧ ಹೊರಿಸಲಾಗಿದೆ.

ಟ್ರಂಪ್ ಅವರು ಅಧ್ಯಕ್ಷ ಸ್ಥಾನ ಬಿಟ್ಟು ಶ್ವೇತಭವನದಿಂದ ನಿರ್ಗಮಿಸುವ ವೇಳೆ ವರ್ಗೀಕೃತ ದಾಖಲೆಗಳನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಿ, ಫ್ಲಾರಿಡಾದ ಮಾರ್ ಎ ಲಾಗೋದಲ್ಲಿನ ತಮ್ಮ ಖಾಸಗಿ ಕ್ಲಬ್ ಮತ್ತು ನಿವಾಸದಲ್ಲಿ ಇಟ್ಟಿದ್ದರು ಎಂಬುದು ಮುಖ್ಯ ಆರೋಪವಾಗಿದೆ.

ತ್ರಿವಳಿ ರೈಲು ದುರಂತ: ಶವಾಗಾರ ಆಗಿದ್ದ ಶಾಲೆ ನೆಲಸಮ

ಭುವನೇಶ್ವರ (ಪಿಟಿಐ): ತ್ರಿವಳಿ ರೈಲು ದುರಂತದಲ್ಲಿ ಮೃತರಾದವರ ಶವಗಳನ್ನು ಇರಿಸಿದ್ದ 65 ವರ್ಷ ಹಳೆಯದಾದ ಬಹನಾಗಾ ಗ್ರಾಮದ ಪ್ರೌಢ ಶಾಲೆಯ ಕಟ್ಟಡವನ್ನು ಕೆಡವಲು ಸರ್ಕಾರ ಶುಕ್ರವಾರ ಅನುಮತಿ ನೀಡಿದೆ.

ಶಾಲೆಯಲ್ಲಿ ಶವ ಇಟ್ಟ ಕಾರಣ ಮಕ್ಕಳು ಶಾಲೆಗೆ ಬರಲು ಹೆದರುತ್ತಿದ್ದು, ಪಾಲಕರು ಮಕ್ಕಳನ್ನು ಬೇರೆ ಶಾಲೆಗೆ ಸೇರಿಸುವ ಚಿಂತನೆ ನಡೆಸಿದ್ದಾರೆ. ಅಲ್ಲದೇ ಶಾಲಾ ಕಟ್ಟಡ ಹಳೆಯದಾಗಿದೆ. ಆದ್ದರಿಂದ ಕಟ್ಟಡ ನವೀಕರಣ ಮಾಡುವಂತೆ ಶಾಲಾ ಆಡಳಿತ ಮಂಡಳಿಯು (ಎಸ್‌ಎಂಸಿ) ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಈ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ ನವೀನ್ ಪಟ್ನಾಯಕ್, ಹಿರಿಯ ಅಧಿಕಾರಿಗಳು ಹಾಗೂ ಮುಖ್ಯ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿ, ಶಾಲೆ ಮರು ನಿರ್ಮಾಣಕ್ಕೆ ಅನುಮತಿ ನೀಡಿದರು.

ಅಲ್ಲದೇ ಗ್ರಂಥಾಲಯ, ವಿಜ್ಞಾನ ಪ್ರಯೋಗಾಲಯ, ಡಿಜಿಟಲ್ ತರಗತಿಗಳಂತಹ ಆಧುನಿಕ ಸೌಲಭ್ಯಗಳನ್ನು ಹೊಂದಿರುವ ಮಾದರಿ ಶಾಲೆಯನ್ನಾಗಿ ಮಾಡುವ ಪ್ರಸ್ತಾವನೆಗೂ ಅನುಮೋದನೆ ನೀಡಿದರು.

ಮಕ್ಕಳು ಮತ್ತು ಪಾಲಕರ ಮನಸ್ಸಿನಲ್ಲಿರುವ ಭಯ ಹೋಗಲಾಡಿಸಲು ಸಮಾಲೋಚನೆ (ಕೌನ್ಸೆಲಿಂಗ್) ಕಾರ್ಯಕ್ರಮವನ್ನು ಶಾಲೆಯಲ್ಲಿ ಆಯೋಜಿಸಲಾಗುವುದು ಎಂದು ಶಾಲೆ ಮತ್ತು ಸಮೂಹ ಶಿಕ್ಷಣ ಇಲಾಖೆ ಕಾರ್ಯದರ್ಶಿ ಎಸ್.ಅಶ್ವಥಿ ತಿಳಿಸಿದರು.

ಹಣ ಅಕ್ರಮ ವರ್ಗಾವಣೆ: ‘ಎಂ3ಎಂ’ ನಿರ್ದೇಶಕ ಬಂಧನ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣ ಕುರಿತು ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ), ಗುರುಗ್ರಾಮ ಮೂಲದ ‘ಎಂ3ಎಂ’ ಸಮೂಹದ ನಿರ್ದೇಶಕ ರೂಪಕುಮಾರ್ ಬನ್ಸಲ್ ಎಂಬುವವರನ್ನು ಬಂಧಿಸಿದೆ ಎಂದು ಅಧಿಕಾರಿಗಳು ಶುಕ್ರವಾರ ಹೇಳಿದ್ದಾರೆ.

ತನಿಖೆಯ ಭಾಗವಾಗಿ ಬನ್ಸಾಲ್ ಅವರನ್ನು ಗುರುವಾರ ವಶಕ್ಕೆ ಪಡೆಯಲಾಗಿತ್ತು ಎಂದೂ ಅವರು ತಿಳಿಸಿದ್ದಾರೆ.

ಜೂನ್ 1ರಂದು ‘ಎಂ3ಎಂ’ ಸಮೂಹದ ಕಚೇರಿ ಹಾಗೂ ನಿರ್ದೇಶಕರಿಗೆ ಸೇರಿದ ಸ್ಥಳಗಳ ಮೇಲೆ ಇ.ಡಿ ದಾಳಿ ನಡೆಸಿತ್ತು. ದೆಹಲಿ ಮತ್ತು ಗುರುಗ್ರಾಮ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ‘ಐಆರ್‌ಇಒ’ ಎಂಬ ರಿಯಲ್ ಎಸ್ಟೇಟ್ ಸಮೂಹದ ಮೇಲೂ ದಾಳಿ ನಡೆಸಿತ್ತು.

‘ಈ ಎರಡು ಸಮೂಹದ ಮೇಲೆ ನಡೆಸಿದ ದಾಳಿ ವೇಳೆ, ₹ 60 ಕೋಟಿ ಮೌಲ್ಯದ ಐಷಾರಾಮಿ ಕಾರುಗಳು, ₹ 5.75 ಕೋಟಿ ಮೌಲ್ಯದ ಚಿನ್ನಾಭರಣಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಇ.ಡಿ ಸೋಮವಾರ ತಿಳಿಸಿತ್ತು.

ಈ ದಾಳಿ ಹಾಗೂ ಸಮನ್ಸ್ ಜಾರಿ ಮಾಡಿದ ಬೆನ್ನಲ್ಲೇ, ‘ಎಂ3ಎಂ’ ಸಮೂಹದ ನಿರ್ದೇಶಕರಾದ ಬಸಂತ್ ಬನ್ಸಲ್, ರೂಪಕುಮಾರ್ ಬನ್ಸಲ್ ಹಾಗೂ ಪಂಕಜ್ ಬನ್ಸಲ್ ಅವರು, ‘ತಾವು ಯಾವುದೇ ತಪ್ಪು ಮಾಡಿಲ್ಲ’ ಎಂದು ಹೇಳಿ, ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

9–6–2023

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610(1600)
ಒಂದು ವಾರದ ಡೆಲಿವರಿ	1605(1595)
ಸೋಯಾ ಕಚ್ಚಾ	860(845)
ಪಾಮ್ ವಾರದ ಡೆಲಿವರಿ	833(818)
ಸೂರ್ಯಕಾಂತಿ ಎಣ್ಣೆ ಕಚ್ಚಾ	800(780)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 59,750 (59,350)

ಬೆಳ್ಳಿ ಕೆ.ಜಿ 73,650 (72,050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

‘ತೀವ್ರವಾಗಿ ಹೆಚ್ಚುತ್ತಿದೆ ತಾಪಮಾನ’

ಲಂಡನ್ (ಪಿಟಿಐ): ಹಸಿರುಮನೆ ಅನಿಲಗಳ ಹೊರಸೂಸುವಿಕೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಈ ಅನಿಲಗಳು ಜಾಗತಿಕ ತಾಪಮಾನ ಹೆಚ್ಚಳಕ್ಕೆ ಕಾರಣವಾಗುತ್ತಿವೆ. ಕಳೆದ ಎರಡು ಶತಮಾನಗಳ ಅವಧಿಯಲ್ಲಿ ಭೂಮಿಯ ಮೇಲ್ಮೈ ತಾಪಮಾನ 1.14 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಳವಾಗಿರುವುದಕ್ಕೆ ಈ ವಿದ್ಯಮಾನವೇ ಕಾರಣ ಎಂದು ಹೊಸ ಅಧ್ಯಯನವೊಂದು ಹೇಳಿದೆ.

ಪ್ರತಿ ದಶಕದ ಅವಧಿಯಲ್ಲಿ ತಾಪಮಾನದಲ್ಲಿ ಆಗುತ್ತಿರುವ ಹೆಚ್ಚಳದ ದರ 0.2 ಡಿಗ್ರಿ ಸೆಲ್ಸಿಯಸ್‌ನಷ್ಟಿದೆ. ಇದರಿಂದ ಹಿಂದೆಂದಿಗಿಂತಲೂ ವೇಗವಾಗಿ ಭೂಮಿಯ ವಾತಾವರಣ ಬಿಸಿಯಾಗುತ್ತಿದೆ ಎಂದು ಇದೇ ಅಧ್ಯಯನ ಹೇಳಿದೆ.

‘ಹವಾಮಾನ ಬದಲಾವಣೆ ಕುರಿತ ವಿಶ್ವಸಂಸ್ಥೆಯ ಅಂತರ ಸರ್ಕಾರ ಸಮಿತಿ’ (ಐಪಿಸಿಸಿ) ಈ ಅಧ್ಯಯನ ನಡೆಸಿ, ವರದಿಯನ್ನು ಪ್ರಕಟಿಸಿದೆ. ವಿಶ್ವದ ವಿವಿಧ ದೇಶಗಳ 50 ವಿಜ್ಞಾನಿಗಳು ಈ ಅಧ್ಯಯನ ಕೈಗೊಂಡಿದ್ದರು.

2019ರಲ್ಲಿ ಈ ಸಮಿತಿಯು ಮೊದಲ ವರದಿ ಸಲ್ಲಿಸಿತ್ತು. ನಂತರದ ವರ್ಷಗಳಲ್ಲಿ, ಪರಿಸರವನ್ನು ಸೇರುತ್ತಿರುವ ಹಸಿರುಮನೆ ಅನಿಲಗಳ ಪ್ರಮಾಣ ಕುರಿತು ಅಧ್ಯಯನ ನಡೆಸಲಾಗಿದೆ.

ಅದರಲ್ಲೂ, ಕೋವಿಡ್ ಪಿಡುಗಿನ ನಂತರದ ದಿನಗಳಲ್ಲಿ ಹಸಿರುಮನೆ ಅನಿಲಗಳ ಹೊರಸೂಸುವಿಕೆ ಅಧಿಕವಾಗಿರುವುದು ಕಂಡುಬಂದಿದೆ. 54 ಶತಕೋಟಿ ಟನ್‌ಗಳಷ್ಟು ಇಂಗಾಲದ ಡೈಆಕ್ಸೈಡ್‌ಗೆ ಸಮನಾದ ಪ್ರಮಾಣದಷ್ಟು ಹಸಿರುಮನೆ ಅನಿಲಗಳು ಒಂದು ವರ್ಷದ ಅವಧಿಯಲ್ಲಿ ಪರಿಸರವನ್ನು ಸೇರಿವೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಅಧ್ಯಯನದಲ್ಲಿ ಕಂಡುಬಂದ ಅಂಶಗಳನ್ನು ಸಂಬಂಧಪಟ್ಟ ರಾಷ್ಟ್ರಗಳು ಗಂಭೀರವಾಗಿ ಪರಿಗಣಿಸಬೇಕು. ಹಸಿರುಮನೆ ಅನಿಲಗಳ ಹೊರಸೂಸುವಿಕೆಗೆ ಕಡಿವಾಣ ಹಾಕಿ, ಆ ಮೂಲಕ ಹವಾಮಾನ ಬದಲಾವಣೆ ತಡೆಯಲು ಶ್ರಮಿಸಬೇಕು ಎಂದು ಸಂಶೋಧಕರು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೋಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ:- 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

Wanted

ಉಚಿತ ಮತ್ತು ಗ್ಯಾರಂಟಿ ಉದ್ಯೋಗ. ಬೆಂಗಳೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡಲು 115 ಜನ, SSLC, PUC ಪಾಸಾದ ಫೇಲಾದ ಕೆಲಸಗಾರರು ಬೇಕಾಗಿದ್ದಾರೆ. ವೇತನ 14000 to 20000 ಊಟ ವಸತಿ ಸೌಲಭ್ಯವಿದೆ ಸಂಪರ್ಕಿಸಿ 9632660308, 9141632106

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ, ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

13.06.2023 11.07.2023 ಮಂತ್ರಾಲಯ,ಶ್ರೀಶೈಲಂ ಅಹೋಬಿಲಂ 5 ದಿನಗಳು. 11.07.2023 ಅಖಂಡ ಆಂಧ್ರಪ್ರದೇಶ 10 ದಿನಗಳು. 10.07.2023 ಕೇರಳ ಪ್ರವಾಸ 7 ದಿನಗಳು. 19.06.2023 17.07.2023 ತಮಿಳುನಾಡು 7 ದಿನಗಳು. 26.06.2023, 24.07.2023 ಶಿರಡಿ ಮತ್ತು 3 ಜ್ಯೋತಿರ್ಲಿಂಗ 7 ದಿನಗಳು. ಪ್ರತಿ ತಿಂಗಳು ವಿಮಾನ/ರೈಲಿನಲ್ಲಿ ಕಾಶಿ,ಗಯಾ ಅಲಹಾಬಾದ್,ಅಯೋಧ್ಯಾ 6 ದಿನಗಳು. 09.07.2023 ಪುರಿ,ಕೋಲ್ಕತಾ ದಾರ್ಜಿಲಿಂಗ್ 11 ದಿನಗಳು. 11.07.2023 ದೆಹಲಿ,ಆಗ್ರಾ,ಕಾಶಿ,ಅಯೋಧ್ಯಾ ವೈಷ್ಣೋದೇವಿ ಅಮೃತಸರ 11 ದಿನಗಳು. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ 9880847001 9342848791

★13.07.2023 8/13ದಿನ★ ದೆಹಲಿ ಆಗ್ರಾ,ಪ್ರಯಾಗ ಗಯ,ಕಾಶಿ ಪ್ರವಾಸ. '15.08.2023 10ದಿನ' ಗುಜರಾತ್,ಉಜ್ಜಯಿನಿ ಓಂಕಾರೇಶ್ವರ ಪ್ರವಾಸ. ಆರ್.ಗಾಂಧಿ ಟೂರ್ಸ್. 9945445809/ 9902433500

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 22/06 ಕಾಶಿ, ಅಯೋಧ್ಯ. 29/06 ರಾಮೇಶ್ವರಂ, ಕನ್ಯಾಕುಮಾರಿ. 11/07 ಗುಜರಾತ್ ಪ್ರವಾಸ. 01/09 ಕೇದಾರನಾಥ, ಬದ್ರಿನಾಥ್ 9964527782

DH ಪ್ರಜಾವಾಣಿ

Book Your Classifieds Ads Online Log in to dhclassifieds.com

Contact : 9845114560 : 9731810277 9901641752 : 9886213331 080 - 45557163 / 164

ಸಂಕ್ಷಿಪ್ತ ಸುದ್ದಿ

ಮಹದಾಯಿ: ಮತ್ತೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿಯ ಕಳಸಾ ನಾಲಾ ತಿರುವು ಯೋಜನೆಗೆ ವನ್ಯಜೀವಿ ಅನುಮೋದನೆ ಪಡೆಯಲು ಅರಣ್ಯ ಇಲಾಖೆಯ ಮೂಲಕ ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಕರ್ನಾಟಕ ಸರ್ಕಾರ ಪ್ರಸ್ತಾವನೆ ಸಲ್ಲಿಸಿದೆ. ಈ ಮೂಲಕ, ಬೆದರಿಕೆ ತಂತ್ರಗಳಿಗೆ ಬಗ್ಗುವುದಿಲ್ಲ ಎಂದು ಗೋವಾ ಸರ್ಕಾರಕ್ಕೆ ಸಂದೇಶ ರವಾನಿಸಿದೆ.

ಜತೆಗೆ, ಯೋಜನೆಗೆ ಅನುಷ್ಠಾನಕ್ಕೆ ಅತ್ಯಗತ್ಯವಾಗಿ ಬೇಕಿರುವ 26.92 ಹೆಕ್ಟೇರ್ ಅರಣ್ಯ ಬಳಕೆಗೆ ಒಪ್ಪಿಗೆ ಪಡೆಯಲು ಕೇಂದ್ರ ಪರಿಸರ, ಅರಣ್ಯ ಹಾಗೂ ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಹೊಸದಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಸಚಿವಾಲಯ ಕೇಳಿರುವ ಸ್ಪಷ್ಟನೆಗಳಿಗೆ ಸಮಜಾಯಿಷಿ ನೀಡುವ ಪ್ರಯತ್ನ ಮಾಡಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಬೆನ್ನಲ್ಲೇ, ಹೊಸ ಪ್ರಸ್ತಾವನೆ (ಮೇ 31ರಂದು) ಸಲ್ಲಿಸಲಾಗಿದೆ.

ಅಕ್ರಮ ಗಣಿ ಕುಸಿತ: ಮೂವರ ಸಾವು

ಧನ್‌ಬಾದ್ (ಪಿಟಿಐ): ಜಾರ್ಖಂಡ್‌ನ ಭೌರಾ ಕೊಲಿಯರಿ ಗಣಿ ಪ್ರದೇಶದಲ್ಲಿ ಅಕ್ರಮವಾಗಿ ನಡೆಯುತ್ತಿದ್ದ ಗಣಿ ಕುಸಿದು ಶುಕ್ರವಾರ ಮೂವರು ಕಾರ್ಮಿಕರು ಮೃತಪಟ್ಟಿದ್ದು, ಹಲವರು ಸಿಲುಕಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಲ್ಲಿಂದ 21 ಕಿ.ಮೀ ದೂರದಲ್ಲಿರುವ ಭಾರತ್ ಕುಕಿಂಗ್ ಕೋಲ್ ಲಿಮಿಟೆಡ್‌ನ (ಬಿಸಿಸಿಎಲ್) ಭೌರಾ ಕೊಲಿಯರಿ ಪ್ರದೇಶದಲ್ಲಿ ಶುಕ್ರವಾರ ಬೆಳಿಗ್ಗೆ 10.30 ಗಂಟೆಗೆ ಈ ಘಟನೆ ಸಂಭವಿಸಿದೆ.

ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಅದು ಪೂರ್ಣಗೊಂಡ ಬಳಿಕವಷ್ಟೇ ಮೃತಪಟ್ಟವರು ಮತ್ತು ಸಿಲುಕಿದ್ದವರ ನಿಖರವಾದ ಮಾಹಿತಿ ದೊರೆಯುತ್ತದೆ ಎಂದು ಡಿಎಸ್‌ಪಿ ಸಿಂದ್ರಿ ಅಭಿಷೇಕ್ ಕುಮಾ ತಿಳಿಸಿದ್ದಾರೆ.

‘ಈ ಭಾಗದಲ್ಲಿ ಗಣಿಗಾರಿಕೆ ಆರಂಭವಾದ ಬಳಿಕ, ಸ್ಥಳೀಯ ಗ್ರಾಮಸ್ಥರು ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದಾರೆ’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ.

ಮುಂಬೈ ಕಾಂಗ್ರೆಸ್ ಅಧ್ಯಕ್ಷೆಯಾಗಿ ವರ್ಷಾ ನೇಮಕ

ವರ್ಷಾ ಗಾಯಕ್ವಾಡ

ಮುಂಬೈ: ಮುಂಬೈ ಪ್ರಾದೇಶಿಕ ಕಾಂಗ್ರೆಸ್ ಸಮಿತಿ (ಎಂಆರ್‌ಸಿಸಿ) ಅಧ್ಯಕ್ಷರಾಗಿ ಪ್ರೊ. ವರ್ಷಾ ಗಾಯಕ್ವಾಡ ಅವರನ್ನು ಶುಕ್ರವಾರ ನೇಮಕ ಮಾಡಲಾಗಿದೆ.

ಜಗತ್ತಿನ ದೊಡ್ಡ ಕೊಳೆಗೇರಿಯಾದ ಧಾರಾವಿಯಿಂದ ನಾಲ್ಕನೇ ಬಾರಿ ಶಾಸಕಿಯಾಗಿ ಆಯ್ಕೆಯಾಗಿರುವ ಅವರು, ಈ ಹುದ್ದೆಗೇರಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ವಿಧಾನ ಪರಿಷತ್ ಸದಸ್ಯ ಭಾಯಿ ಜಗತಾಪ್ ಈವರೆಗೆ ಅಧ್ಯಕ್ಷರಾಗಿದ್ದರು.

‘ಜಾಣ್ಮೆಯಿಂದ ಚೀನಾ ಎದುರಿಸಬೇಕು’

ನವದೆಹಲಿ (ಪಿಟಿಐ): ಚೀನಾ ಒಡ್ಡುತ್ತಿರುವ ಬೆದರಿಕೆಗಳನ್ನು ವಿಶೇಷ ತಂತ್ರಗಾರಿಕೆ, ಜಾಣ್ಮೆಯಿಂದ ಎದುರಿಸಬೇಕೇ ಹೊರತು, ಬಡಾಯಿ ಕೊಚ್ಚಿಕೊಳ್ಳುವುದರಿಂದಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ಹೇಳಿದ್ದಾರೆ.

‘ಗಡಿ ವಿಚಾರದಲ್ಲಿ, ಪ್ರಧಾನಿ ಮೋದಿ ಅವರು ಚೀನಾವನ್ನು ದೋಷ ಮುಕ್ತಗೊಳಿಸಿದ್ದಕ್ಕಾಗಿ ದೇಶ ಭಾರಿ ಬೆಲೆ ತೆರಬೇಕಾಗಿದೆ’ ಎಂದು ಟ್ವೀಟ್‌ಗಳ ಮೂಲಕ ವಾಗ್ದಾಳಿ ನಡೆಸಿದ್ದಾರೆ.

ಉತ್ತರಾಖಂಡದಲ್ಲಿ ವಾಸ್ತವ ನಿಯಂತ್ರಣ ರೇಖೆ(ಎಲ್‌ಎಸಿ)ಗುಂಟ ಸೇನೆಗೆ ಸಂಬಂಧಿಸಿ ಚೀನಾ ಹೊಸ ನಿರ್ಮಾಣಗಳನ್ನು ಕೈಗೆತ್ತಿಕೊಂಡಿರುವ ಕುರಿತ ವರದಿಗಳ ಹಿನ್ನೆಲೆಯಲ್ಲಿ ಖರ್ಗೆ ಅವರು ಟೀಕಾಪ್ರಹಾರ ಮಾಡಿದ್ದಾರೆ.

ಮುಂಬೈ ಪೊಲೀಸರಿಂದ ಎಫ್‌ಐಆರ್ ದಾಖಲು • ನನಗೆ, ಸಹೋದರನಿಗೂ ಬೆದರಿಕೆ ಕರೆ: ಸಂಜಯ್ ರಾವುತ್

ಪವಾರ್‌ಗೆ ಜೀವ ಬೆದರಿಕೆ: ಭದ್ರತೆ ಹೆಚ್ಚಳ



ಶರದ್ ಪವಾರ್

ಮುಂಬೈ (ಪಿಟಿಐ): ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ವರಿಷ್ಠ ಶರದ್ ಪವಾರ್ ಅವರಿಗೆ ಸಾಮಾಜಿಕ ಮಾಧ್ಯಮಗಳ ಮೂಲಕ ಜೀವ ಬೆದರಿಕೆ ಒಡ್ಡಲಾಗಿದೆ. ಈ ಕುರಿತು ಮುಂಬೈ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರೆ, ಪುಣೆಯ ಶಿವಾಜಿನಗರ ಪ್ರದೇಶದಲ್ಲಿರುವ ಪವಾರ್ ನಿವಾಸಕ್ಕೆ ಭದ್ರತೆ ಹೆಚ್ಚಿಸಲಾಗಿದೆ.

ಇನ್ನೊಂದೆಡೆ, ‘ನನಗೆ ಹಾಗೂ ಶಾಸಕರಾದ ನನ್ನ ಸಹೋದರ ಸುನೀಲ್ ರಾವುತ್‌ಗೆ ಜೀವ ಬೆದರಿಕೆ ಕರೆಗಳು ಬಂದಿವೆ. ಈ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು’ ಎಂದು ಶಿವಸೇನಾ (ಯುಬಿಟಿ)ದ ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಹೇಳಿದ್ದಾರೆ.

‘ಎನ್‌ಸಿಪಿ ವರಿಷ್ಠ ಶರದ್ ಪವಾರ್ ಅವರಿಗೆ ಜೀವ ಬೆದರಿಕೆ ಒಡ್ಡಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ತನಿಖೆ ನಡೆಸುವಂತೆ ಸೂಚಿಸಿದ್ದೇನೆ’ ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿದ್ದಾರೆ.

‘ಈ ರೀತಿ ಬೆದರಿಕೆ ಒಡ್ಡುವುದನ್ನು ಸಹಿಸಲು ಸಾಧ್ಯವಿಲ್ಲ’ ಎಂದು ಗೃಹ ಸಚಿವ, ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಶಿಂದೆ, ‘ಪವಾರ್ ಒಬ್ಬ ಗೌರವಾನ್ವಿತ ಹಿರಿಯ ನಾಯಕ. ಅವರ ಭದ್ರತೆಗೆ ಅಗತ್ಯವಿರುವ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಅಗತ್ಯ ಬಿದ್ದರೆ ಅವರಿಗೆ ಒದಗಿಸಿರುವ ಭದ್ರತೆ ಹೆಚ್ಚಿಸುವಂತೆ ಪೊಲೀಸರಿಗೆ ಸೂಚಿಸಿದ್ದೇನೆ’ ಎಂದು ತಿಳಿಸಿದ್ದಾರೆ.

‘ಶಿವಸೇನಾ ಪಕ್ಷದ ವಿಚಾರವಾಗಿ ಸುಪ್ರೀಂಕೋರ್ಟ್ ತೀರ್ಪು ಪ್ರಕಟಿಸಿದ ನಂತರ, ಕೆಲವರು ಅಸಮಾಧಾನಗೊಂಡಿದ್ದಾರೆ. ಔರಂಗಜೇಬ್ ಹಾಗೂ ಟಿಪ್ಪು ಸುಲ್ತಾನ್‌ರನ್ನು ವೈಭವೀಕರಿಸುವ ಮೂಲಕ ರಾಜ್ಯದಲ್ಲಿ ಶಾಂತಿ ಕದಡಲು ಯತ್ನಿಸುತ್ತಿದ್ದಾರೆ. ಇಂಥ ಪ್ರಯತ್ನಗಳನ್ನು ವಿಫಲಗೊಳಿಸಲಾಗುವುದು’ ಎಂದು ಶಿಂದೆ ತಿಳಿಸಿದ್ದಾರೆ.

‘ನಮಗೆ ಬೆದರಿಕೆ ಕರೆಗಳು ಬಂದಿರುವ ಕುರಿತು ದೂರು ದಾಖಲಿಸಿಲ್ಲ’ ಎಂದು ಸಂಜಯ್ ರಾವುತ್ ಹೇಳಿದ್ದಾರೆ.

ಇದಕ್ಕೂ ಮುನ್ನ, ಪವಾರ್ ಪುತ್ರಿ ಹಾಗೂ ಸಂಸದೆ ಸುಪ್ರಿಯಾ ಸುಳೆ ನೇತೃತ್ವದಲ್ಲಿ ಪಕ್ಷದ ಮುಖಂಡರ ನಿಯೋಗವೊಂದು ಮುಂಬೈ ಪೊಲೀಸ್ ಮುಖ್ಯಸ್ಥ ವಿವೇಕ್ ಫಣಸಾಲ್ಕರ್ ಅವರನ್ನು ಭೇಟಿ ಮಾಡಿ, ದೂರು ಸಲ್ಲಿಸಿತು. ‘ವಿಚಾರವಾದಿ ನರೇಂದ್ರ ದಾಭೋಲ್ಕರ್ ಅವರಿಗಾದ ಗತಿಯೇ ನಿಮಗೂ ಶೀಘ್ರವೇ ಬಂದೊದಗುತ್ತದೆ ಎಂಬುದಾಗಿ ಪವಾರ್ ಅವರಿಗೆ ಬೆದರಿಕೆ ಒಡ್ಡಲಾಗಿದೆ’ ಎಂದು ನಿಯೋಗವು ದೂರಿನಲ್ಲಿ ತಿಳಿಸಿದೆ. ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಲಾಗಿರುವ ಈ ಬೆದರಿಕೆ ಸಂದೇಶದ ‘ಸ್ಕ್ರೀನ್ ಶಾಟ್’ಗಳ ಮುದ್ರಿತ ಪ್ರತಿಗಳನ್ನು ಸುಳೆ ಅವರು ಪೊಲೀಸರಿಗೆ ಸಲ್ಲಿಸಿದ್ದಾರೆ. ಈ ಬೆಳವಣಿಗೆಗಳ ಬೆನ್ನಲ್ಲೇ, ಶಾಂತಿ ಕಾಪಾಡುವಂತೆ ಎನ್‌ಸಿಪಿ ವಕ್ತಾರ ಮಹೇಶ್ ತಾಪ್ಸೆ ಅವರು ಪಕ್ಷದ ಕಾರ್ಯಕರ್ತರಿಗೆ ಮನವಿ ಮಾಡಿದ್ದಾರೆ.

‘ಬಿಜೆಪಿ ಬೆಂಬಲಿಗ’: ‘ಸೌರವ್ ಪಿಂಪಲ್ಕರ್ ಎಂಬ ವ್ಯಕ್ತಿ ಈ ಜೀವ ಬೆದರಿಕೆ ಸಂದೇಶ ಕಳುಹಿಸಿದ್ದಾನೆ. ಈ ವ್ಯಕ್ತಿ ಬಿಜೆಪಿ ಬೆಂಬಲಿಗ ಎಂಬುದು ಆತನ ಸಾಮಾಜಿಕ ಮಾಧ್ಯಮದಲ್ಲಿರುವ ವೈಯಕ್ತಿಕ ವಿವರಗಳಿಂದ (ಪ್ರೊಫೈಲ್) ತಿಳಿದು ಬರುತ್ತದೆ’ ಎಂದು ಎನ್‌ಸಿಪಿಯ ಹಿರಿಯ ನಾಯಕ ಅಜಿತ್ ಪವಾರ್ ಹೇಳಿದ್ದಾರೆ. ‘ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಿಕೊಳ್ಳಬಾರದು. ಯಾವುದೇ ಸೈದ್ಧಾಂತಿಕ ಸಂಘರ್ಷವು ಗೌರವಯುತವಾಗಿ ನಡೆಯಬೇಕು’ ಎಂದು ಅವರು ತಿಳಿಸಿದರು.

ಪವಾರ್ ವಿರುದ್ಧ ಟ್ವೀಟ್: ಎನ್‌ಸಿಪಿ ಕಾರ್ಯಕರ್ತರ ಪ್ರತಿಭಟನೆ

ಮುಂಬೈ (ಪಿಟಿಐ): ಶರದ್ ಪವಾರ್ ಅವರನ್ನು ಮೊಘಲ್ ಚಕ್ರವರ್ತಿ ಔರಂಗಜೇಬ್ ಅವರ ‘ಅವತಾರ’ ಎಂದು ಬಣ್ಣಿಸಿರುವುದನ್ನು ವಿರೋಧಿಸಿ ಎನ್‌ಸಿಪಿ ಕಾರ್ಯಕರ್ತರು ಶುಕ್ರವಾರ ಇಲ್ಲಿ ಪ್ರತಿಭಟನೆ ನಡೆಸಿದರು.

ಕೇಂದ್ರ ಸಚಿವ ನಾರಾಯಣ್ ರಾಣೆ ಅವರ ಹಿರಿಯ ಪುತ್ರ, ಬಿಜೆಪಿ ಮುಖಂಡ ನಿಲೇಶ್ ರಾಣೆ ಅವರು, ಬುಧವಾರ ಪೋಸ್ಟ್ ಮಾಡಿದ ಟ್ವೀಟ್‌ನಲ್ಲಿ, ‘ಚುನಾವಣೆ ಸಮೀಪಿಸುತ್ತಿರುವಾಗ ಪವಾರ್ ಸಾಹೇಬರು ಮುಸ್ಲಿಂ ಸಮುದಾಯದ ಬಗ್ಗೆ ಚಿಂತಿತರಾಗಿದ್ದಾರೆ. ಕೆಲವೊಮ್ಮೆ ಶರದ್ ಪವಾರ್ ಔರಂಗಜೇಬನ ಅವತಾರವೆಂಬಂತೆ ತೋರುತ್ತದೆ’ ಎಂದು ಹೇಳಿದ್ದರು.

ಇದನ್ನು ಖಂಡಿಸಿ ಪಕ್ಷದ ಮುಂಬೈ ಘಟಕದ ಕಾರ್ಯಕಾರಿ ಅಧ್ಯಕ್ಷ ನರೇಂದ್ರ ರಾಣೆ ಆಯೋಜಿಸಿದ್ದ ‘ಮುಂಬೈ ಜೈಲ್ ಭರೋ ಆಂದೋಲನ’ದಲ್ಲಿ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು. ಆಜಾದ್ ಮೈದಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಕಾರ್ಯಕರ್ತರನ್ನು ಬಂಧಿಸಿ ಪೊಲೀಸರು ಠಾಣೆಗೆ ಕರೆದೊಯ್ದರು.

‘ನಿಲೇಶ್ ರಾಣೆ ವಿರುದ್ಧ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂಬುದು ಗೊತ್ತು. ಏಕೆಂದರೆ ಸರ್ಕಾರಕ್ಕೆ ಯಾವುದೇ ನೈತಿಕತೆ ಉಳಿದಿಲ್ಲ’ ಎಂದು ಎನ್‌ಸಿಪಿ ವಕ್ತಾರ ಮಹೇಶ್ ತಾಪ್ಸೆ ಹೇಳಿದ್ದಾರೆ.

ಪಕ್ಷದ ವಕ್ತಾರ ಕ್ಲೈಡ್ ಕ್ರಾಸ್ಟೊ ಮತ್ತು ಇತರರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಮುಂಬೈನ ಆಜಾದ್ ಮೈದಾನದಲ್ಲಿ ಎನ್‌ಸಿಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು ಚಿತ್ರ–ಪಿಟಿಐ

ಇವಿಎಂ, ಮತ ದೃಢೀಕರಣ ಯಂತ್ರ ಪರಿಶೀಲನೆ ಶುರು

ನವದೆಹಲಿ (ಪಿಟಿಐ): ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆ ಮತ್ತು ಈ ವರ್ಷಾಂತ್ಯದಲ್ಲಿ ನಡೆಯಲಿರುವ ಐದು ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಚುನಾವಣಾ ಆಯೋಗವು ದೇಶದಾದ್ಯಂತ ವಿದ್ಯುನ್ಮಾನ ಮತಯಂತ್ರಗಳು (ಇವಿಎಂ) ಮತ್ತು ಮತ ದೃಢೀಕರಣ ಯಂತ್ರಗಳ ಮೊದಲ ಹಂತದ ಪರಿಶೀಲನೆಯನ್ನು ಪ್ರಾರಂಭಿಸಿದೆ ಎಂದು ಮೂಲಗಳು ತಿಳಿಸಿವೆ.

‘ಅಣಕು ಮತದಾನಗಳು’ ಮೊದಲ ಹಂತದ ಪರಿಶೀಲನೆ ಪ್ರಕ್ರಿಯೆಯ ಭಾಗ. ಕೇರಳದ ಎಲ್ಲಾ ಕ್ಷೇತ್ರಗಳು ಸೇರಿದಂತೆ ದೇಶದಾದ್ಯಂತ ಹಂತ ಹಂತವಾಗಿ ಪರಿಶೀಲನೆ ನಡೆಯಲಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ನಡೆಯುತ್ತಿರುವ ಅಣಕು ಮತದಾನದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದರು.

ಐದು ರಾಜ್ಯಗಳಾದ ರಾಜಸ್ಥಾನ, ಮಿಜೋರಾಂ, ಛತ್ತೀಸಗಢ, ತೆಲಂಗಾಣ, ಮಧ್ಯಪ್ರದೇಶ ಹಾಗೂ ಉಪಚುನಾವಣೆ ನಡೆಯಲಿರುವ ವಿಧಾನಸಭಾ ಮತ್ತು ಲೋಕಸಭಾ ಸ್ಥಾನಗಳಲ್ಲಿಯೂ ಪರಿಶೀಲನೆ ನಡೆಯಲಿದೆ ಎಂದು ಅಧಿಕಾರಿ ಹೇಳಿದ್ದಾರೆ.

ದೋಷಯುಕ್ತ ಯಂತ್ರಗಳನ್ನು ದುರಸ್ತಿ ಅಥವಾ ಬದಲಿಗಾಗಿ ತಯಾರಕ ಕಂಪನಿಗಳಿಗೆ ಹಿಂದಿರುಗಿಸಲಾಗುತ್ತದೆ.

ಸಿಬಿಐನಿಂದ ಎಸ್‌ಐಟಿ ರಚನೆ

ಮಣಿಪುರ ಹಿಂಸಾಚಾರ: ರಾಜ್ಯ ಸರ್ಕಾರ ಉಲ್ಲೇಖಿಸಿದ 6 ಪ್ರಕರಣಗಳ ತನಿಖೆ

ನವದೆಹಲಿ (ಪಿಟಿಐ): ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಉಲ್ಲೇಖಿಸಿರುವ ಆರು ಪ್ರಕರಣಗಳ ತನಿಖೆಗೆ ಡಿಐಜಿ ದರ್ಜೆಯ ಅಧಿಕಾರಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ಸಿಬಿಐ ರಚಿಸಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಗೃಹ ಸಚಿವ ಅಮಿತ್ ಶಾ ಅವರು ಮಣಿಪುರಕ್ಕೆ ಭೇಟಿ ನೀಡಿದ್ದ ವೇಳೆ, ಐದು ಕ್ರಿಮಿನಲ್ ಪಿತೂರಿ ಹಾಗೂ ಒಂದು ಸಾಮಾನ್ಯ ಪಿತೂರಿಯ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಲಾಗುವುದು ಎಂದು ಘೋಷಿಸಿದ್ದರು.

ಈ ಕುರಿತು ರಾಜ್ಯ ಸರ್ಕಾರದಿಂದ ಕೇಂದ್ರಕ್ಕೆ ಮನವಿ ಬಂದ ಬಳಿಕ, ಸಿಬಿಐ ತನಿಖೆ ಕೈಗೆತ್ತಿಕೊಂಡಿದ್ದು, ಎಸ್‌ಐಟಿ ರಚಿಸಿದೆ ಎಂದು ಅವರು ಹೇಳಿದ್ದಾರೆ.

ತುರ್ತು ವಿಚಾರಣೆ ನಿರಾಕರಿಸಿದ ‘ಸುಪ್ರೀಂ’: ಗಲಭೆಪೀಡಿತ ಮಣಿಪುರದಲ್ಲಿ ಪದೇ ಪದೇ ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸುವುದನ್ನು ಪ್ರಶ್ನಿಸಿ ಮಣಿಪುರದ ಇಬ್ಬರು ನಿವಾಸಿಗಳು ಸಲ್ಲಿಸಿದ್ದ ಅರ್ಜಿಯ ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

‘ಈಗಾಗಲೇ ಹೈಕೋರ್ಟ್‌ನಲ್ಲಿ ಈ ಕುರಿತ ಅರ್ಜಿಗಳ ವಿಚಾರಣೆ ನಡೆಯುತ್ತಿವೆಯಲ್ಲ. ಮತ್ತೊಮ್ಮೆ ಪ್ರಕ್ರಿಯೆ ನಡೆಸುವ ಅಗತ್ಯವೇನಿದೆ’ ಎಂದು ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಹಾಗೂ ರಾಜೇಶ್ ಬಿಂದಲ್ ಅವರಿದ್ದ ರಜಾಕಾಲದ ಪೀಠ ಪ್ರಶ್ನಿಸಿತು. ಅಗತ್ಯವಿದ್ದರೆ ಈ ಕುರಿತು ‘ರೆಗ್ಯುಲರ್’ ಪೀಠದ ಮುಂದೆ ಪ್ರಸ್ತಾಪಿಸಿ ಎಂದು ಪೀಠ ತಿಳಿಸಿತು.

ಶಸ್ತ್ರಾಸ್ತ್ರಗಳ ವಶ (ಕೋಲ್ಕತ್ತ ವರದಿ): ಮಣಿಪುರದಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿರುವ ಭದ್ರತಾ ಪಡೆಗಳು ಶುಕ್ರವಾರ ವಿವಿಧ ಬಗೆಯ 35 ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಹಾಗೂ ಕೆಲವೆಡೆ ಶಸ್ತ್ರಾಸ್ತ್ರ ಕೋಟಿಗಳನ್ನು ವಶಪಡಿಸಿಕೊಂಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೂವರ ಸಾವು

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಮುಂದುವರಿದಿದ್ದು, ಖೋಕೆನ್ ಗ್ರಾಮದಲ್ಲಿ ಮೈತೇಯಿ ಸಮುದಾಯದ ಬಂಡುಕೋರರು ನಡೆಸಿದ ದಾಳಿಯಲ್ಲಿ ಕುಕಿ ಸಮುದಾಯಕ್ಕೆ ಸೇರಿದ ಒಬ್ಬ ಮಹಿಳೆ ಸೇರಿ ಮೂವರು ಮೃತಪಟ್ಟಿದ್ದಾರೆ. ಇಬ್ಬರು ಗಾಯಗೊಂಡಿದ್ದಾರೆ ಎಂದು ಸೇನಾ ಮೂಲಗಳು ಶುಕ್ರವಾರ ತಿಳಿಸಿವೆ.

ಕುಕಿಗಳೇ ಪ್ರಮುಖವಾಗಿರುವ ಕಾಂಗ್‌ಪೋಕಪಿ ಮತ್ತು ಮೈತೇಯಿ ಸಮುದಾಯದವರು ಹೆಚ್ಚಿರುವ ಇಂಫಾಲ್ ವೆಸ್ಟ್ ಜಿಲ್ಲೆಯ ನಡುವಿನ ಗಡಿಯಲ್ಲಿ ಖೋಕೆನ್ ಗ್ರಾಮ ಇದೆ.

ಸೇನಾ ಮೂಲಗಳ ಪ್ರಕಾರ, ದಾಳಿಕೋರರು ತಮ್ಮ ಬಳಿಯ ಸ್ವಯಂ ಚಾಲಿತ ರೈಫಲ್‌ಗಳಿಂದ ಶುಕ್ರವಾರ ಬೆಳಿಗ್ಗೆ 4 ಗಂಟೆಗೆ ಗ್ರಾಮಸ್ಥರ ಮೇಲೆ ಗುಂಡು ಹಾರಿಸಿದ್ದಾರೆ. ಈ ವೇಳೆ ಮೂವರು ಸ್ಥಳದಲ್ಲಿಯೇ ಮೃತಪಟ್ಟರೆ, ಇಬ್ಬರಿಗೆ ಗುಂಡೇಟು ಬಿದ್ದು ಗಾಯಗಳಾಗಿವೆ.

ಈ ಭಾಗದಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ಕೇಂದ್ರೀಯ ಮೀಸಲು ಪೊಲೀಸ್ ಪಡೆಯವರು ಗ್ರಾಮಕ್ಕೆ ಬರುತ್ತಿದ್ದಂತೆ ದಾಳಿಕೋರರು ಅಲ್ಲಿಂದ ಕಾಲ್ಕಿತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇದಕ್ಕೂ ಮುನ್ನ, ಇಂಫಾಲ್ ವೆಸ್ಟ್ ಜಿಲ್ಲೆಯ ಬಿಜೆಪಿ ಶಾಸಕ ಸೊರೈಸಂ ಕೆಬಿ ಅವರ ಮನೆ ಬಳಿ ಗುರುವಾರ ರಾತ್ರಿ 8.30 ಗಂಟೆಗೆ ಬಾಂಬ್ ದಾಳಿ ನಡೆದಿದೆ. ಮೋಟಾರು ಸೈಕಲ್‌ನಲ್ಲಿ ಬಂದಿದ್ದ ಶಂಕಿತ ಬಂಡುಕೋರರು ಶಾಸಕರ ಮನೆಯ ಗೇಟ್ ಬಳಿ ಬಾಂಬ್ ಎಸೆದು ಪರಾರಿಯಾಗಿದ್ದಾರೆ. ಅದೃಷ್ಟವಶಾತ್ ಈ ಘಟನೆಯಿಂದ ಹೆಚ್ಚಿನ ಹಾನಿಯಾಗಿಲ್ಲ.

ಸಂಗಾತಿ ಕೊಲೆ, ಶವ ಕತ್ತರಿಸಿದ ಪ್ರಕರಣ: ಕಾಣದ ಪಶ್ಚಾತ್ತಾಪ

ಆರೋಪಿ ಎಚ್‌ಐವಿ ಸೋಂಕಿತ

ಪ್ರಜಾವಾಣಿ ವಾರ್ತೆ

ಮುಂಬೈ: ಸಂಗಾತಿಯನ್ನು ಕತ್ತರಿಸಿ ಭೀಕರವಾಗಿ ಹತ್ಯೆ ಮಾಡಿದ್ದ ಪ್ರಕರಣದ ಆರೋಪಿ ಮನೋಜ್ ಸಾನೆ ಪೊಲೀಸರ ಪ್ರಶ್ನೆಗಳಿಗೆ ಹಾರಿಕೆಯ ಉತ್ತರ ನೀಡುತ್ತಿದ್ದಾನೆ. ‘ತನ್ನ ಕೃತ್ಯದ ಬಗ್ಗೆ ಆತನಲ್ಲಿ ಪಶ್ಚಾತ್ತಾಪವೂ ಕಂಡುಬಂದಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.

ಆದರೆ, ಆರೋಪಿ ಮತ್ತು ಮೃತ ಮಹಿಳೆ ಇಬ್ಬರೂ ಸಹಜೀವನ ಸಂಗಾತಿಗಳಲ್ಲ, ದೇವಸ್ಥಾನದಲ್ಲಿ ಮದುವೆಯಾಗಿದ್ದರು. ಇಬ್ಬರ ನಡುವಿನ ವಯಸ್ಸಿನ ಅಂತರದ ಕಾರಣಕ್ಕೆ ಈ ವಿಷಯವನ್ನು ಗೋಪ್ಯವಾಗಿಟ್ಟಿದ್ದರು ಎಂಬ ಅಂಶ ತನಿಖೆಯಿಂದ ಗೊತ್ತಾಗಿದೆ.

ಮುಂಬೈನ ಠಾಣೆಯಲ್ಲಿ ಆರೋಪಿ ಮನೋಜ್ ಸಾನೆ (56) ತನ್ನ ಜೊತೆಗಿದ್ದ ಸರಸ್ವತಿ ವೈದ್ಯೆ (32) ಅವರನ್ನು ಕೊಲೆ ಮಾಡಿ, ದೇಹವನ್ನು ತುಂಡುಗಳಾಗಿ ಕತ್ತರಿಸಿದ್ದ. ಮನೆಯಿಂದ ದುರ್ವಾಸನೆ ಬರಲಾರಂಭಿಸಿದ ಬಳಿಕ ಈ ಕೃತ್ಯ ಗುರುವಾರ ಗೊತ್ತಾಗಿತ್ತು.

ಕೃತ್ಯ ನಡೆದಿದ್ದ ಠಾಣೆಯ ಮೀರಾ ರೋಡ್ ಬಡಾವಣೆಯಲ್ಲಿರುವ ವಸತಿ ಸಮುಚ್ಚಯದ ಇತರೆ ಫ್ಲ್ಯಾಟ್‌ಗಳ ನಿವಾಸಿಗಳು ಈ ಇಬ್ಬರೂ ಸಹಜೀವನ ನಡೆಸುತ್ತಿದ್ದರು ಎಂದೇ ಭಾವಿಸಿದ್ದರು.

ಮೃತ ಸರಸ್ವತಿ ಮೂಲತಃ ಔರಂಗಾಬಾದ್‌ನವರು. ತನ್ನ ಸಹೋದರಿಯರ ಜೊತೆ ಅನಾಥಾಶ್ರಮದಲ್ಲಿ ಬೆಳೆದಿದ್ದರು. ಆರೋಪಿಯ ಜೊತೆಗೆ ದೇವಸ್ಥಾನದಲ್ಲಿ ಮದುವೆಯಾಗಿತ್ತು ಎಂಬ ಮಾಹಿತಿಯನ್ನು ಆಕೆ ಸಹೋದರಿಯರೇ ಪೊಲೀಸರಿಗೆ ನೀಡಿದ್ದಾರೆ.

ಮೃತಳು ಒಳಗೊಂಡು ಆಕೆಯ ತಂದೆ–ತಾಯಿಗೆ ಒಟ್ಟು ಐವರು ಪುತ್ರಿಯರು. ತಾಯಿಯ ನಿಧನದ ನಂತರ ತಂದೆಯಿಂದಲೂ ಬೇರ್ಪಟ್ಟಿದ್ದ ಸಹೋದರಿಯರು ಅನಾಥಾಶ್ರಮದಲ್ಲಿ ಬೆಳೆದಿದ್ದರು. ಇವರಲ್ಲಿ ಮೂವರು ಮೃತಳ ಜೊತೆ ಸಂಪರ್ಕದಲ್ಲಿದ್ದರು.

‘ಆ ಮೂವರೂ ಸಹೋದರಿಯರನ್ನು ಗುರುತಿಸಿ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. ಡಿಎನ್‌ಎ ಪರೀಕ್ಷೆಯ ನಂತರ ಶವದ ಅವಶೇಷಗಳನ್ನು ಅಂತ್ಯಕ್ರಿಯೆಗಾಗಿ ಅವರಿಗೆ ಒಪ್ಪಿಸಲಾಗುತ್ತದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸರಸ್ವತಿ ಮತ್ತು ಮನೋಜ್ ಸಾನೆ ಸುಮಾರು ಒಂದು ದಶಕದ ಹಿಂದೆ ಪರಸ್ಪರ ಪರಿಚಿತರಾಗಿದ್ದರು. ಆರಂಭದಲ್ಲಿ ಆರೋಪಿಯನ್ನು ಅಂಕಲ್ ಎಂದೇ ಮಹಿಳೆ ಮಾತನಾಡಿಸುತ್ತಿದ್ದಳು ಎಂದು ತಿಳಿಸಿದ್ದಾರೆ. ಇನ್ನೊಂದೆಡೆ, ಆರೋಪಿ ಮನೋಜ್ ತನ್ನ ಸಂಬಂಧಿಕರಿಂದ ದಶಕದ ಹಿಂದೆಯೇ ಪ್ರತ್ಯೇಕಗೊಂಡಿದ್ದ. ಆತನ ಚಿಕ್ಕಪ್ಪ ಮಧುಕರ್ ಸಾನೆ ಅಪರೂಪಕ್ಕೆ ಭೇಟಿ ಆಗುತ್ತಿದ್ದರು. ಈವರೆಗೆ ಮನೋಜ್ ಕುಟುಂಬ ಸದಸ್ಯರ ಹೇಳಿಕೆಯನ್ನು ಪೊಲೀಸರು ದಾಖಲಿಸಿಕೊಂಡಿಲ್ಲ.

‘ಮಹಿಳೆಯ ಬಗ್ಗೆ ನನಗೇನೂ ಗೊತ್ತಿಲ್ಲ. ನಾನು ಎಂದಿಗೂ ಆತನ ಮನೆಗೂ ಹೋಗಿರಲಿಲ್ಲ. ಹೊರಗೆ ಭೇಟಿಯಾಗುತ್ತಿದ್ದೆವು. ನನ್ನ ಮತ್ತು ಮನೋಜ್ ನಡುವೆ ಕೇವಲ ಔಪಚಾರಿಕ ಮಾತುಗಳಷ್ಟೇ ಇರುತ್ತಿದ್ದವು’ ಎಂದು ಮಧುಕರ್ ಪೊಲೀಸರಿಗೆ ತಿಳಿಸಿದ್ದಾರೆ.

‘ಆತ್ಮಹತ್ಯೆಗೆ ನಿರ್ಧರಿಸಿದ್ದೆ..’

ಮನೋಜ್ ಸಾನೆ

ಆರೋಪಿಗೆ ಎಚ್‌ಐವಿ ಸೋಂಕಿರುವುದು ಗೊತ್ತಾಗಿದೆ. ಆತ ಭಿನ್ನ ಉತ್ತರಗಳನ್ನು ನೀಡುತ್ತಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಸರಸ್ವತಿ ಅವರು ವಿಷವನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಪೊಲೀಸರು ತನಿಖೆ ನಡೆಸುವ ಭೀತಿಯಿಂದಾಗಿ ಶವವನ್ನು ವಿಲೇವಾರಿ ಮಾಡಲು ನಾನು ಯತ್ನಿಸಿದ್ದೆ’ ಎಂದು ಆತ ಪೊಲೀಸರಿಗೆ ತಿಳಿಸಿದ್ದಾನೆ. ‘ನಾನು ಎಂದಿಗೂ ಸರಸ್ವತಿ ಜೊತೆಗೆ ಲೈಂಗಿಕ ಸಂಪರ್ಕ ಹೊಂದಿರಲಿಲ್ಲ. ಆಕೆ ನನ್ನ ಮಗಳಿದ್ದಂತೆ. ಸರಸ್ವತಿಯು 10ನೇ ತರಗತಿ ಬೋರ್ಡ್ ಪರೀಕ್ಷೆ ತೆಗೆದುಕೊಳ್ಳಲು ಸಿದ್ಧತೆ ನಡೆಸಿದ್ದರು. ಆಕೆಗೆ ನಾನು ಗಣಿತ ಹೇಳಿಕೊಡುತ್ತಿದ್ದೆ. ಶವವನ್ನು ಪೂರ್ಣವಾಗಿ ವಿಲೇವಾರಿ ಮಾಡಿದ ಬಳಿಕ ನಾನು ಕೂಡಾ ಆತ್ಮಹತ್ಯೆ ಮಾಡಿಕೊಳ್ಳಲು ಬಯಸಿದ್ದೆ’ ಎಂದು ತನಿಖೆಯ ವೇಳೆ ಪೊಲೀಸರಿಗೆ ತಿಳಿಸಿದ್ದಾನೆ.

ಬ್ರಿಜ್‌ಭೂಷಣ್ ನಿವಾಸಕ್ಕೆ ಫೋಗಟ್ ಕರೆದೊಯ್ದು ತನಿಖೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜೂನ್ 15ರ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸಲು ತನಿಖೆ ಪೂರ್ಣಗೊಳಿಸುವ ಉದ್ದೇಶದಿಂದ ಕುಸ್ತಿಪಟು ಸಂಗೀತಾ ಫೋಗಟ್ ಅವರನ್ನು ಭಾರತ ಕುಸ್ತಿ ಫೆಡರೇಷನ್ ಮುಖ್ಯಸ್ಥ ಬ್ರಿಜ್ ಭೂಷಣ್ ಸಿಂಗ್ ಅವರ ಅಧಿಕೃತ ನಿವಾಸಕ್ಕೆ ದೆಹಲಿ ಪೊಲೀಸರು ಶುಕ್ರವಾರ ಕರೆದೊಯ್ದಿದ್ದರು. ಈ ವೇಳೆ ಲೈಂಗಿಕ ದೌರ್ಜನ್ಯದ ಸನ್ನಿವೇಶವನ್ನು ಮರುಸೃಷ್ಟಿಸಲಾಯಿತು.

ಮಧ್ಯಾಹ್ನ 1.30ರ ಸುಮಾರಿಗೆ ಫೋಗಟ್ ಅವರನ್ನು ಮಹಿಳಾ ಕಾನ್‌ಸ್ಟೆಬಲ್‌ಗಳ ಸಮ್ಮುಖದಲ್ಲಿ ಸಿಂಗ್ ನಿವಾಸಕ್ಕೆ ಕರೆದೊಯ್ಯಲಾಗಿತ್ತು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು.

ಸಿಂಗ್ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪದ ಕುರಿತು ತನಿಖೆ ನಡೆಸುತ್ತಿರುವ ದೆಹಲಿ ಪೊಲೀಸರ ವಿಶೇಷ ತನಿಖಾ ತಂಡವು ಮುಂದಿನ ವಾರ ವರದಿ ಸಲ್ಲಿಸುವ ಸಾಧ್ಯತೆ ಇದೆ. ತನಿಖಾ ತಂಡ ಈಗಾಗಲೇ 180 ಮಂದಿಯನ್ನು ವಿಚಾರಣೆ ನಡೆಸಿದೆ.

ಬ್ರಿಜ್‌ಭೂಷಣ್ ಸಿಂಗ್ ವಿರುದ್ಧದ ಲೈಂಗಿಕ ಕಿರುಕುಳ ಆರೋಪಗಳಿಗೆ ಸಂಬಂಧಿಸಿದ ದೋಷಾರೋಪ ಪಟ್ಟಿಯನ್ನು ಜೂನ್ 15ರೊಳಗೆ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು ಅಧಿಕಾರಿಗಳು ಆಶ್ವಾಸನೆ ನೀಡಿದ್ದಾರೆ. ಹೀಗಾಗಿ ಕುಸ್ತಿಪಟುಗಳು ಅಲ್ಲಿಯವರೆಗೂ ಹೋರಾಟವನ್ನು ಹಿಂಪಡೆದಿದ್ದಾರೆ. ಅನಂತರವೂ ಬೇಡಿಕೆಗಳು ಈಡೇರದಿದ್ದಲ್ಲಿ ಹೋರಾಟವನ್ನು ಮತ್ತೆ ಆರಂಭಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

ದ್ವೇಷ ಭಾಷಣ ಮಾಡಿಲ್ಲ: ಜಂತರ್‌ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಕುಸ್ತಿಪಟುಗಳು ಯಾವುದೇ ದ್ವೇಷ ಭಾಷಣ ಮಾಡಿಲ್ಲ ಎಂದು ದೆಹಲಿ ಪೊಲೀಸರು ಇಲ್ಲಿನ ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ ಎಂದು ಪಿಟಿಐ ವರದಿ ಮಾಡಿದೆ.

ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ‘ಸುಳ್ಳು ಆರೋಪ’ ಮಾಡುತ್ತಿರುವ ಕುಸ್ತಿಪಟುಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿದ್ದ ಅರ್ಜಿಯನ್ನು ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ವಿಚಾರಣೆ ನಡೆಸಿದರು. ಈ ವೇಳೆ ಪೊಲೀಸರು ಈ ಮಾಹಿತಿ ನೀಡಿ ಅರ್ಜಿಯನ್ನು ವಜಾಗೊಳಿಸುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿದರು.

‘ದೂರುದಾರರು ಪೆನ್‌ಡ್ರೈವ್‌ನಲ್ಲಿ ಸಲ್ಲಿಸಿರುವ ವಿಡಿಯೊದಲ್ಲಿ ಜಂತರ್‌ಮಂತರ್‌ನಲ್ಲಿ ಅನಾಮಿಕ ಸಿಖ್ ಪ್ರತಿಭಟನಕಾರರು ಘೋಷಣೆಗಳನ್ನು ಕೂಗಿರುವ ದೃಶ್ಯವಿದೆ. ಯಾವುದೇ ದ್ವೇಷ ಭಾಷಣ ಮಾಡಿಲ್ಲ. | ಪ್ರತಿಭಟನನಿರತ ಕುಸ್ತಿಪಟುಗಳು ಯಾವುದೇ ಘೋಷಣೆ ಕೂಗಿರುವ ದೃಶ್ಯ ಇದರಲ್ಲಿ ಇಲ್ಲ’ ಎಂದು ಪೊಲೀಸರು ತಿಳಿಸಿದರು. ಬಳಿಕ ಕೋರ್ಟ್ ವಿಚಾರಣೆಯನ್ನು ಜೂನ್ 7ಕ್ಕೆ ಮುಂದೂಡಿತು.

‘ತನಿಖೆ ಮುಂದುವರಿಸಬಹುದು’

ಬ್ರಿಜ್‌ಭೂಷನ್ ಸಿಂಗ್ ವಿರುದ್ಧ ಉದ್ದೇಶಪೂರ್ವಕವಾಗಿ ಸುಳ್ಳು ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸಲಾಗಿತ್ತು ಎಂದು ಅಪ್ರಾಪ್ತ ವಯಸ್ಸಿನ ಕುಸ್ತಿಪಟುವಿನ ತಂದೆ ನೀಡಿರುವ ಹೇಳಿಕೆಯು ನಿರ್ಣಾಯಕ ಅಲ್ಲ. ಪೊಲೀಸರು ಈಗಲೂ ತನಿಖೆ ಮುಂದುವರಿಸಬಹುದು ಎಂದು ಶುಕ್ರವಾರ ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ತಮ್ಮ ಮಗಳಿಗಾದ ಅನ್ಯಾಯಕ್ಕೆ ಪ್ರತಿಯಾಗಿ ಸುಳ್ಳು ದೂರು ದಾಖಲಿಸಿದ್ದಾಗಿ ಕುಸ್ತಿಪಟುವಿನ ತಂದೆ ಗುರುವಾರ ಹೇಳಿದ್ದರು.

ಈ ಕುರಿತು ಪ್ರತಿಕ್ರಿಯಿಸಿರುವ ಹಿರಿಯ ವಕೀಲ ರಾಕೇಶ್ ದ್ವಿವೇದಿ, ‘ಪ್ರಕರಣದಲ್ಲಿ ತಂದೆಯ ಹೇಳಿಕೆಯು ನಿರ್ಣಾಯಕ ಅಲ್ಲ. ಒಮ್ಮೆ ಎಫ್‌ಐಆರ್ ದಾಖಲಾದರೆ ತನಿಖೆ ಮುಂದುವರಿಸಬಹುದು’ ಎಂದು ತಿಳಿಸಿದರು.

‘ಪ್ರಕರಣ ತನಿಖೆಯು ವಿಳಂಬವಾಗುತ್ತಿರುವ ಬಗ್ಗೆಯೂ ತನಿಖೆ ನಡೆಯಬೇಕಿದೆ. ಇಂಥ ಸಂದರ್ಭದಲ್ಲಿ ಸಾಕ್ಷ್ಯಗಳು ರಾಜಿ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ’ ಎಂದು ಸುಪ್ರೀಂಕೋರ್ಟ್ ಬಾರ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ವಿಕಾಸ್ ಸಿಂಗ್ ಹೇಳಿದ್ದಾರೆ

ಸಲಹೆಗಾರ ಸ್ಥಾನದಿಂದ ಕೈಬಿಡಲು ಮನವಿ

ಯೋಗೇಂದ್ರ ಯಾದವ್

ನವದೆಹಲಿ (ಪಿಟಿಐ): ‘ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳಲ್ಲಿನ ಕೆಲ ಪಾಠಗಳಿಗೆ ಕತ್ತರಿ ಪ್ರಯೋಗ ಮಾಡಿರುವುದು ಸ್ವೇಚ್ಛೆಯ ಹಾಗೂ ತರ್ಕರಹಿತ ಕ್ರಮ’ ಎಂದು ರಾಜಕೀಯ ವಿಜ್ಞಾನ ಪಠ್ಯಪುಸ್ತಕಗಳ ಮುಖ್ಯ ಸಲಹೆಗಾರರಾಗಿರುವ ಸುಹಾಸ್ ಪಲಶೀಕರ್ ಹಾಗೂ ಯೋಗೇಂದ್ರ ಯಾದವ್ ಹೇಳಿದ್ದಾರೆ.

ಅಲ್ಲದೇ, ರಾಜಕೀಯ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಮುಖ್ಯ ಸಲಹೆಗಾರರು ಎಂದು ನಮೂದಿಸಲಾಗಿರುವ ತಮ್ಮ ಹೆಸರುಗಳನ್ನು ಕೈಬಿಡಬೇಕು ಎಂದೂ ಅವರು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತಿಗೆ (ಎನ್‌ಸಿಇಆರ್‌ಟಿ) ಮನವಿ ಮಾಡಿದ್ದಾರೆ. ‘ಪಠ್ಯಪುಸ್ತಕಗಳನ್ನು ತರ್ಕಬದ್ಧಗೊಳಿಸುವ ಭಾಗವಾಗಿ ಮಾಡಿರುವ ಈ ಕ್ರಮದಿಂದಾಗಿ ನಮಗೆ ಮುಜುಗರವಾಗಿದೆ’ ಎಂದು ಅವರು ಎನ್‌ಸಿಇಆರ್‌ಟಿ ನಿರ್ದೇಶಕ ದಿನೇಶ ಸಕ್ಲಾನಿ ಅವರಿಗೆ ಬರೆದಿರುವ ಪತ್ರದಲ್ಲಿ ವಿವರಿಸಿದ್ದಾರೆ.

‘ಬದಲಾವಣೆಗಳನ್ನು ಮಾಡುವಾಗ ನಮ್ಮೊಂದಿಗೆ ಸಮಾಲೋಚನೆ ನಡೆಸಿಲ್ಲ, ಮಾಹಿತಿ ನೀಡಿಲ್ಲ. ಇತರ ತಜ್ಞರೊಂದಿಗೆ ಪಠ್ಯ ಬದಲಾವಣೆ ಕುರಿತು ಸಮಾಲೋಚನೆ ನಡೆಸಿದ್ದರೂ ಅದಕ್ಕೆ ನಮ್ಮ ಸಹಮತ ಇಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇವೆ’ ಎಂದಿದ್ದಾರೆ.

ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿ

ಭಾರತ–ಜಪಾನ್ ಸೆಮಿ ಸೆಣಸು

ಕಾಕಮಿಗಹರ, ಜಪಾನ್ (ಪಿಟಿಐ): ಲೀಗ್ ಹಂತದಲ್ಲಿ ಅಮೋಘ ಪ್ರದರ್ಶನ ನೀಡಿದ್ದ ಭಾರತ ಮಹಿಳಾ ತಂಡದವರು ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಶನಿವಾರ ಜಪಾನ್ ತಂಡವನ್ನು ಎದುರಿಸಲಿದ್ದಾರೆ.

ಭಾರತ ತಂಡ ‘ಎ’ ಗುಂಪಿನಲ್ಲಿ ಅಜೇಯ ಸಾಧನೆಯೊಂದಿಗೆ ಅಗ್ರಸ್ಥಾನ ಪಡೆದು ಸೆಮಿಯಲ್ಲಿ ಸ್ಥಾನ ಪಡೆದಿತ್ತು. ಉಜ್ಬೆಕಿಸ್ತಾನ (22–0), ಮಲೇಷ್ಯಾ (2–1) ಮತ್ತು ಚೀನಾ ತೈಪೆ (11–0) ತಂಡಗಳನ್ನು ಮಣಿಸಿದ್ದರೆ, ಕೊರಿಯಾ ಜತೆ ಡ್ರಾ ಮಾಡಿಕೊಂಡಿತ್ತು.

ಭಾರತ ತಂಡವು ಶನಿವಾರ ಗೆದ್ದರೆ ಫೈನಲ್‌ನಲ್ಲಿ ಸ್ಥಾನ ಪಡೆಯುವುದು ಮಾತ್ರವಲ್ಲದೆ, ಎಫ್‌ಐಎಚ್ ಜೂನಿಯರ್ ಮಹಿಳೆಯರ ವಿಶ್ವಕಪ್ ಟೂರ್ನಿಗೆ ಅರ್ಹತೆ ಗಿಟ್ಟಿಸಿಕೊಳ್ಳಲಿದೆ.

ಈ ಟೂರ್ನಿಯಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆಯುವ ತಂಡಗಳು ಚಿಲಿಯ ಸ್ಯಾಂಟಿಯಾಗೊದಲ್ಲಿ ನ. 29 ರಿಂದ ಡಿ. 10ರ ವರೆಗೆ ನಡೆಯಲಿರುವ ವಿಶ್ವಕಪ್‌ಗೆ ನೇರ ಅರ್ಹತೆ ಪಡೆದುಕೊಳ್ಳಲಿವೆ.

‘ಟೂರ್ನಿಯಲ್ಲಿ ಇದುವರೆಗೆ ಅತ್ಯುತ್ತಮ ಪ್ರದರ್ಶನ ನೀಡಿದ್ದು, ಸೆಮಿಫೈನಲ್‌ನಲ್ಲೂ ಅದನ್ನು ಮುಂದುವರಿಸುವ ಗುರಿ ಹೊಂದಿದ್ದೇವೆ’ ಎಂದು ಭಾರತ ತಂಡದ ನಾಯಕಿ ಪ್ರೀತಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಪಾನ್ ತಂಡ ಕೂಡಾ ಲೀಗ್ ಹಂತದಲ್ಲಿ ಉತ್ತಮವಾಗಿ ಆಡಿ ‘ಬಿ’ ಗುಂಪಿನಲ್ಲಿ ಚೀನಾ ಬಳಿಕ ಎರಡನೇ ಸ್ಥಾನ ಪಡೆದು ಸೆಮಿಫೈನಲ್ ತಲುಪಿದೆ. ಹಾಂಗ್‌ಕಾಂಗ್ (23–0) ಮತ್ತು ಇಂಡೊನೇಷ್ಯಾ (21–0) ತಂಡಗಳ ವಿರುದ್ಧ ಗೋಲಿನ ಮಳೆಗರೆದಿತ್ತು.

ಪಂದ್ಯ ಆರಂಭ: ಬೆಳಿಗ್ಗೆ 9.30

ಭಾರತ ತಂಡದ ಆಟಗಾರ್ತಿ ದೀಪಿಕಾ ಸೊರೆಂಗ್

ಪ್ರಿಯಾಂಕಾಗೆ ಉನ್ನತ ಸ್ಥಾನ?

ಪ್ರಜಾವಾಣಿ ವಾರ್ತೆ

ನವದೆಹಲಿ: ಶೀಘ್ರದಲ್ಲೇ ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಸಾಂಸ್ಥಿಕ ಘಟಕಗಳ ಪುನರ್‌ರಚನೆ ನಡೆಯಲಿದ್ದು, ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರಿಗೆ ಪ್ರಮುಖ ಪಾತ್ರ ನೀಡುವ ಸಾಧ್ಯತೆ ಇದೆ. ಉತ್ತರ ಪ್ರದೇಶದ ಉಸ್ತುವಾರಿಯಾಗಷ್ಟೇ ಮುಂದುವರಿಯಲು ಬಯಸುವುದಿಲ್ಲ ಎಂದು ಅವರು ಈಗಾಗಲೇ ಪಕ್ಷದ ನಾಯಕತ್ವಕ್ಕೆ ತಿಳಿಸಿದ್ದಾರೆ ಎಂದೂ ತಿಳಿದುಬಂದಿದೆ.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಪಕ್ಷವು ಹೀನಾಯ ಸೋಲು ಕಂಡ ಬಳಿಕ ಹೊಸ ತಂಡದ ರಚನೆಯಾಗಿತ್ತು. ಈ ಬೆನ್ನಲ್ಲೇ ಸೋನಿಯಾಗಾಂಧಿ ಅವರಿಗೆ ಪ್ರಿಯಾಂಕಾ ಗಾಂಧಿ ರಾಜೀನಾಮೆ ಪತ್ರ ಸಲ್ಲಿಸಿದ್ದರು. ಆದರೆ ಅದನ್ನು ಸ್ವೀಕರಿಸಿರಲಿಲ್ಲ. ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಅಧ್ಯಕ್ಷರಾದ ನಂತರ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು ಮತ್ತು ಉಸ್ತುವಾರಿಗಳು ರಾಜೀನಾಮೆ ನೀಡಿದ್ದರು. ಅವುಗಳನ್ನೂ ಸ್ವೀಕರಿಸಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆ ಮತ್ತು ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಪ್ರಚಾರದಲ್ಲಿ ಪ್ರಿಯಾಂಕಾ ಅವರಿಗೆ ಪ್ರಮುಖ ಜವಾಬ್ದಾರಿ ನೀಡುವ ಸಾಧ್ಯತೆ ಇದೆ. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರ ಅನರ್ಹತೆ ಮುಂದುವರಿದರೆ ಪ್ರಿಯಾಂಕಾ ಗಾಂಧಿ ಅವರ ಹೆಸರೇ ಮುಂಚೂಣಿಯಲ್ಲಿ ಇರಲಿದೆ. ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಅವರನ್ನು ಮನವೊಲಿಸುವ ಸಾಧ್ಯತೆಯೂ ಇದೆ.

‘ಜಲ ಜೀವನ ಮಿಷನ್’: ಡಬ್ಲ್ಯುಎಚ್‌ಒ ಅಧ್ಯಯನ

‘4 ಲಕ್ಷ ಸಾವು ತಡೆಯಲು ಸಾಧ್ಯ’

ನವದೆಹಲಿ (ಪಿಟಿಐ): ಗ್ರಾಮೀಣ ಪ್ರದೇಶಗಳ ಮನೆಗಳಿಗೆ ಶುದ್ಧ ಕುಡಿಯುವ ನೀರು ಪೂರೈಸುವ ಉದ್ದೇಶದ ‘ಜಲ ಜೀವನ ಮಿಷನ್’ ಯೋಜನೆಯನ್ನು ನಿಗದಿತ ಗುರಿಯಂತೆ ಅನುಷ್ಠಾನಗೊಳಿಸಿದಲ್ಲಿ ಭೇದಿ ಹಾಗೂ ಸಂಬಂಧಿತ ಕಾಯಿಲೆಗಳಿಂದಾಗಿ ಸಂಭವಿಸುವ 4 ಲಕ್ಷದಷ್ಟು ಸಾವುಗಳನ್ನು ತಡೆಯಲು ಸಾಧ್ಯ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದೆ.

‘ಜಲ ಜೀವನ ಮಿಷನ್’ ಅನುಷ್ಠಾನದಿಂದಾಗಿ ಆರೋಗ್ಯದ ದೃಷ್ಟಿಯಿಂದ ಆಗುವ ಪ್ರಯೋಜನಗಳ ಕುರಿತು ಅಧ್ಯಯನ ನಡೆಸುವಂತೆ ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯವು ವಿಶ್ವ ಆರೋಗ್ಯ ಸಂಸ್ಥೆಗೆ ಮನವಿ ಮಾಡಿತ್ತು. ಹೀಗಾಗಿ, ಡಬ್ಲ್ಯುಎಚ್‌ಒ ಅಧ್ಯಯನ ನಡೆಸಿ, ವರದಿ ಪ್ರಕಟಿಸಿದೆ.

ಗ್ರಾಮೀಣ ಭಾಗದಲ್ಲಿರುವ ಒಟ್ಟು ಮನೆಗಳ ಪೈಕಿ ಶೇ 62ರಷ್ಟು ಮನೆಗಳಿಗೆ ನಲ್ಲಿಗಳ ಮೂಲಕ ಕುಡಿಯುವ ನೀರು ಒದಗಿಸಲಾಗಿದೆ ಎಂದು ಮೂಲಗಳು ಹೇಳಿವೆ. ‘ಭೇದಿಯಿಂದಾಗಿ ಹಲವಾರು ಆರೋಗ್ಯ ಸಮಸ್ಯೆಗಳು ಕಂಡುಬರುತ್ತವೆ. ಬಾಧಿತ ವ್ಯಕ್ತಿಯ ಜೀವನ ಗುಣಮಟ್ಟ ಕುಸಿಯಲಿದೆ. ಆದರೆ, ಜನ ಜೀವನ್ ಮಿಷನ್ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡರೆ ₹8 ಲಕ್ಷ ಕೋಟಿಯಷ್ಟು ಹಣ ಉಳಿತಾಯವಾಗಲಿದೆ’ ಎಂದು ಅಧ್ಯಯನ ಹೇಳುತ್ತದೆ.

‘ವಿಶ್ವವು ಕುಡಿಯುವ ನೀರು ಮತ್ತು ನೈರ್ಮಲ್ಯ ವಿಷಯದಲ್ಲಿ ನಿಗದಿಪಡಿಸಿರುವ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿ) ಸಾಧಿಸಿದ್ದೇ ಆದಲ್ಲಿ, ಅದಕ್ಕೆ ಭಾರತವೇ ಕಾರಣವಾಗಲಿದೆ’ ಎಂದು ಡಬ್ಲ್ಯುಎಚ್‌ಒ/ಯುನಿಸೆಫ್‌ನ ನೀರು ಪೂರೈಕೆ, ನೈರ್ಮಲ್ಯ ಮತ್ತು ಆರೋಗ್ಯ ಕಾರ್ಯಕ್ರಮದ ಸಹ ಮುಖ್ಯಸ್ಥ ರಿಚರ್ಡ್ ಜಾನ್‌ಸ್ಟನ್ ಹೇಳಿದ್ದಾರೆ.

‘ದೊಡ್ಡ ಜನಸಂಖ್ಯೆಗೆ ಶುದ್ಧ ಕುಡಿಯುವ ನೀರು ಪೂರೈಸಲು ಸಾಧ್ಯ ಎಂಬುದನ್ನು ತೋರಿಸಿಕೊಡುವ ಭಾರತದ ನಡೆ ವಿಶ್ವದ ಇತರ ರಾಷ್ಟ್ರಗಳಿಗೆ ಮಹತ್ವದ್ದಾಗುತ್ತದೆ. ಬದ್ಧತೆ ಹಾಗೂ ಹೂಡಿಕೆಯಿಂದ ಇಂಥ ಬೃಹತ್ ಯೋಜನೆ ಅನುಷ್ಠಾನ ಸಾಧ್ಯ ಎಂಬುದನ್ನು ಭಾರತ ತೋರಿಸಿಕೊಟ್ಟಂತಾಗುತ್ತದೆ’ ಎಂದಿದ್ದಾರೆ.

ಅಧ್ಯಯನದಲ್ಲಿ ಕಂಡು ಬಂದ ಅಂಶಗಳು ಸಮಂಜಸ ಎನಿಸುತ್ತವೆ. ಅಪೌಷ್ಟಿಕತೆಗೂ ಕುಡಿಯುವ ನೀರಿಗೂ ಸಂಬಂಧ ಇದ್ದು, ಈ ಸಮಸ್ಯೆ ಬಗ್ಗೆ ಗಮನ ಅಗತ್ಯ

ಡಾ.ರಾಜೀವ್ ಬಹಲ್

ಐಸಿಎಂಆರ್ ಪ್ರಧಾನ ನಿರ್ದೇಶಕ

ಡಬ್ಲ್ಯುಎಫ್‌ಐ ಚುನಾವಣೆ: ಮತದಾರರ ಪಟ್ಟಿ ಪರಿಷ್ಕರಣೆ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಚುನಾವಣೆಗೆ ಸಂಬಂಧಿಸಿದಂತೆ ಅಡ್‌ಹಾಕ್ ಸಮಿತಿಯು ಮೊದಲ ಹೆಜ್ಜೆಯಿಟ್ಟಿದ್ದು, ಮತದಾರರ ಪಟ್ಟಿಯನ್ನು ಅಂತಿಮಗೊಳಿಸುವ ಪ್ರಕ್ರಿಯೆಗೆ ಚಾಲನೆ ನೀಡಿದೆ.

ಕುಸ್ತಿ ಫೆಡರೇಷನ್ ದೈನಂದಿನ ವ್ಯವಹಾರಗಳನ್ನು ನೋಡಿಕೊಳ್ಳಲು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಏ. 27ರಂದು ಮೂವರು ಸದಸ್ಯರ ಅಡ್‌ಹಾಕ್ ಸಮಿತಿಯ ಘೋಷಣೆ ಮಾಡಿತ್ತು. ಸಮಿತಿಯ ಇಬ್ಬರು ಸದಸ್ಯರುಗಳಾದ ಭೂಪೆಂದರ್ ಸಿಂಗ್ ಬಾಜ್ವಾ ಮತ್ತು ಸುಮಾ ಶಿರೂರು ಅವರು ಮೇ 4ರಂದು ಅಧಿಕಾರ ವಹಿಸಿಕೊಂಡಿದ್ದರು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರು ಮೂರನೇ ಸದಸ್ಯರಾಗಿ ಸಮಿತಿಯನ್ನು ಸೇರಿಕೊಳ್ಳಲಿದ್ದಾರೆ. ಆದರೆ ಅವರ ನೇಮಕ ಇನ್ನೂ ಆಗಿಲ್ಲ.

‘ನಿವೃತ್ತ ನ್ಯಾಯಮೂರ್ತಿಯ ಹೆಸರನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು. ಈ ಹಿಂದಿನ ಮತದಾರರ ಪಟ್ಟಿಯನ್ನು ನಾವು ಪಡೆದುಕೊಂಡಿದ್ದು, ಪರಿಷ್ಕರಣೆ ಪ್ರಕ್ರಿಯೆ ನಡೆಸುತ್ತಿದ್ದೇವೆ’ ಎಂದು ಐಒಎ ಮೂಲಗಳು ತಿಳಿಸಿವೆ.

ಡಬ್ಲ್ಯುಎಫ್‌ಐ ಚುನಾವಣೆ ನಡೆಸಲು ಸರ್ಕಾರವು ಅಡ್‌ಹಾಕ್ ಸಮಿತಿಗೆ ಜೂನ್ 30ರ ಗಡುವು ವಿಧಿಸಿದೆ. ಸಮಿತಿಯು ಇನ್ನೆರಡು ದಿನಗಳಲ್ಲಿ ಚುನಾವಣೆಯ ದಿನಾಂಕ ಘೋಷಿಸುವ ಸಾಧ್ಯತೆಯಿದೆ.

ಚಂಡೀಗಢ, ದೆಹಲಿ ಮತ್ತು ವಿವಿಧ ರಾಜ್ಯಗಳ ಕುಸ್ತಿ ಸಂಸ್ಥೆಗಳು ಸೇರಿದಂತೆ ಡಬ್ಲ್ಯುಎಫ್‌ಐ ಮಾನ್ಯತೆ ಹೊಂದಿರುವ ಒಟ್ಟು 25 ಸಂಸ್ಥೆಗಳು ಇವೆ. ಈ ಸಂಸ್ಥೆಗಳು ತಲಾ ಇಬ್ಬರು ಪ್ರತಿನಿಧಿಗಳ ಹೆಸರು ಕಳುಹಿಸಬೇಕು. ಪ್ರತಿಯೊಬ್ಬ ಪ್ರತಿನಿಧಿಗೆ ಒಂದು ಮತ ಇರಲಿದೆ. ಅದರಂತೆ ಡಬ್ಲ್ಯುಎಫ್‌ಐ ಮತದಾರರ ಪಟ್ಟಿಯು ಒಟ್ಟು 50 ಮತದಾರರನ್ನು ಹೊಂದಿರಲಿದೆ.

ಟಿಟಿ: ಕರ್ನಾಟಕಕ್ಕೆ ನಾಲ್ಕು ಕಂಚು

ಬೆಂಗಳೂರು: ಕರ್ನಾಟಕದ ಸ್ಪರ್ಧಿಗಳು ತೆಲಂಗಾಣದಲ್ಲಿ ನಡೆದ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ನಲ್ಲಿ ಸೋಲು ಅನುಭವಿಸಿ ಕಂಚಿನ ಪದಕ ಪಡೆದರು.

ಮಹಿಳೆಯರ ಸಿಂಗಲ್ಸ್ ವಿಭಾಗದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಅರ್ಚನಾ ಕಾಮತ್ ಅವರು 6-11, 10-12, 11-8, 6-11, 7-11 ರಲ್ಲಿ ಆರ್‌ಬಿಐನ ದಿಯಾ ಚಿತಾಳೆ ಎದುರು ಪರಾಭವಗೊಂಡರು. ಯಶಸ್ವಿನಿ ಘೋರ್ಪಡೆ 11-7, 11-7, 3-11, 11-13, 5-11, 6-11 ರಲ್ಲಿ ಆರ್‌ಬಿಐನ ಐಹಿಕಾ ಮುಖರ್ಜಿ ಎದುರು ಸೋತರು.

ಬಾಲಕರ 19 ವರ್ಷದೊಳಗಿನವರ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ರಾಜ್ಯದ ಕೆ.ಜೆ.ಆಕಾಶ್ ಮತ್ತು ರೋಹಿತ್ ಶಂಕರ್ ಅವರು ಬಂಗಾಳದ ಎದುರಾಳಿಗಳ ಕೈಯಲ್ಲಿ ಸೋತರು.

ಆಕಾಶ್ 4-11, 9-11, 11-9, 11-13 ರಲ್ಲಿ ಬೋಧಿಸತ್ವ ಚೌಧರಿ ವಿರುದ್ಧ; ರೋಹಿತ್ 6-11, 7-11, 6-11 ರಲ್ಲಿ ಅಂಕುರ್ ಭಟ್ಟಾಚಾರ್ಯ ಎದುರು ಮಣಿದರು.

ಡಬ್ಲ್ಯುಟಿಸಿ ಫೈನಲ್: ರಹಾನೆ, ಠಾಕೂರ್ ಹೋರಾಟ; ಆಸ್ಟ್ರೇಲಿಯಾ ಬೌಲರ್‌ಗಳ ಪಾರಮ್ಯ

ಆಸ್ಟ್ರೇಲಿಯಾಕ್ಕೆ ಇನಿಂಗ್ಸ್ ಮುನ್ನಡೆ

ಲಂಡನ್ (ಪಿಟಿಐ): ಮುಂಬೈ ಜೋಡಿ ಅಜಿಂಕ್ಯ ರಹಾನೆ ಹಾಗೂ ಶಾರ್ದೂಲ್ ಠಾಕೂರ್ ಅವರು ಶತಕದ ಜೊತೆಯಾಟದ ಮೂಲಕ ಭಾರತದ ಹೋರಾಟಕ್ಕೆ ಬಲ ತುಂಬಿದರು. ಆದರೂ ಆಸ್ಟ್ರೇಲಿಯಾ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಮುನ್ನಡೆ ಸಾಧಿಸಿತು.

11 ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡ ರಹಾನೆ (89; 129ಎಸೆತ) ಹಾಗೂ ದ ಓವಲ್ ಕ್ರೀಡಾಂಗಣದಲ್ಲಿ ಮೂರನೇ ಅರ್ಧಶತಕ ದಾಖಲಿಸಿದ ಶಾರ್ದೂಲ್ (51;109ಎ) ಏಳನೇ ವಿಕೆಟ್ ಜೊತೆಯಾಟದಲ್ಲಿ 109 ರನ್ ಸೇರಿಸಿದರು. ಇದರಿಂದಾಗಿ ತಂಡವು ಮೊದಲ ಇನಿಂಗ್ಸ್‌ನಲ್ಲಿ 69.4 ಓವರ್‌ಗಳಲ್ಲಿ 296 ರನ್ ಗಳಿಸಿತು. ಆದರೆ ಪ್ರಥಮ ಇನಿಂಗ್ಸ್‌ನಲ್ಲಿ 469 ರನ್ ಪೇರಿಸಿದ್ದ ಆಸ್ಟ್ರೇಲಿಯಾ 173 ರನ್‌ಗಳ ಮುನ್ನಡೆ ಸಾಧಿಸಿತು. ಶುಕ್ರವಾರ ಚಹಾ ವಿರಾಮಕ್ಕೂ ಮುನ್ನ ಎರಡನೇ ಇನಿಂಗ್ಸ್ ಆರಂಭಿಸಿದ ಆಸ್ಟ್ರೇಲಿಯಾ ದಿನದಾಟದ ಕೊನೆಗೆ 44 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 123 ರನ್ ಗಳಿಸಿತು. ಒಟ್ಟು 296 ರನ್‌ಗಳ ಮುನ್ನಡೆಯಲ್ಲಿದ್ದು ಪಂದ್ಯದಲ್ಲಿ ಇನ್ನೆರಡು ದಿನಗಳ ಆಟ ಬಾಕಿ ಇದೆ. ಮಾರ್ನಸ್ ಲಾಬುಷೇನ್ (ಬ್ಯಾಟಿಂಗ್ 41) ಹಾಗೂ ಕ್ಯಾಮರಾನ್ ಗ್ರೀನ್ (ಬ್ಯಾಟಿಂಗ್ 7) ಕ್ರೀಸ್‌ನಲ್ಲಿದ್ದಾರೆ.

ಮತ್ತೊಮ್ಮೆ ಮಿಂಚಿದ ವೇಗಿ ಮೊಹಮ್ಮದ್ ಸಿರಾಜ್ ಇನಿಂಗ್ಸ್‌ನ ನಾಲ್ಕನೇ ಓವರ್‌ನಲ್ಲಿಯೇ ಡೇವಿಡ್ ವಾರ್ನರ್ ಅವರ ವಿಕೆಟ್ ಪಡೆದರು. ತುಸು ಜಿಗುಟುತನ ತೋರಿದ ಉಸ್ಮಾನ್ ಖ್ವಾಜಾ (13 ರನ್) ಅವರ ವಿಕೆಟ್ ಉಮೇಶ್ ಯಾದವ್ ಪಾಲಾಯಿತು. ಈ ಇಬ್ಬರೂ ಆರಂಭಿಕ ಬ್ಯಾಟರ್‌ಗಳ ಕ್ಯಾಚ್‌ಗಳನ್ನು ವಿಕೆಟ್‌ಕೀಪರ್ ಶ್ರೀಕರ್ ಭರತ್ ಪಡೆದರು.

ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ಸ್ಟೀವನ್ ಸ್ಮಿತ್ ಹಾಗೂ ಮಾರ್ನಸ್ ಲಾಬುಷೇನ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 62 ರನ್ ಸೇರಿಸಿದರು. ಜಡೇಜ ಸ್ಪಿನ್ ಎಸೆತವನ್ನು ಸ್ಮಿತ್ ಕ್ರೀಸ್‌ನಿಂದ ಮುನ್ನುಗ್ಗಿ ಬಂದು ಆಡಿ ಫೀಲ್ಡರ್ ಶಾರ್ದೂಲ್ ಠಾಕೂರ್‌ಗೆ ಕ್ಯಾಚಿತ್ತರು. ಜೊತೆಯಾಟ ಮುರಿದುಬಿತ್ತು.

ಅಜಿಂಕ್ಯ-ಶಾರ್ದೂಲ್ ಜೊತೆಯಾಟ: ಹೋದ ವರ್ಷದ ರಣಜಿ ಋತು ಹಾಗೂ ಈಚೆಗೆ ಐಪಿಎಲ್‌ನಲ್ಲಿ ಗಮನ ಸೆಳೆದಿದ್ದ ಅನುಭವಿ ಬ್ಯಾಟರ್ ಅಜಿಂಕ್ಯ ರಹಾನೆ ಟೆಸ್ಟ್ ತಂಡಕ್ಕೆ ತಮ್ಮ ಆಯ್ಕೆಯನ್ನೂ ಸಮರ್ಥಿಸಿಕೊಂಡರು.

ಪಂದ್ಯದ 2ನೇ ದಿನವಾದ ಗುರುವಾರ ಅಗ್ರಕ್ರಮಾಂಕದ ಬ್ಯಾಟರ್‌ಗಳು ಔಟಾದಾಗ ಕ್ರೀಸ್‌ಗೆ ಬಂದಿದ್ದ ಅಜಿಂಕ್ಯ ಅವರು ಜಡೇಜ ಜೊತೆಗೆ ಉಪಯುಕ್ತ ಜೊತೆಯಾಟವಾಡಿದ್ದರು. ಜಡೇಜ ಔಟಾದ ನಂತರ ಭರತ್ ಜೊತೆಗೆ ದಿನದಾಟದ ಕೊನೆಯವರೆಗೂ ಉತ್ತಮವಾಗಿ ಆಡಿದ್ದರು. 3ನೇ ದಿನವೂ ತಮ್ಮ ತಾಳ್ಮೆಯ ಆಟ ಮುಂದುವರಿಸಿದರು. ಆದರೆ ಭರತ್ ಬೇಗ ಔಟಾದರು.

ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಶಾರ್ದೂಲ್ ತಮಗೆ ಲಭಿಸಿದ ಎರಡು ಜೀವದಾನಗಳ ಲಾಭ ಪಡೆದರು.

ಭಾರತದ ಅಜಿಂಕ್ಯ ರಹಾನೆ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 469 (121.3 ಓವರ್‌ಗಳಲ್ಲಿ)

ಭಾರತ: 296 (69.4 ಓವರ್‌ಗಳಲ್ಲಿ)

ಅಜಿಂಕ್ಯ ಸಿ ಗ್ರೀನ್ ಬಿ ಕಮಿನ್ಸ್ 89 (129ಎ, 4X11, 6X1)
ಭರತ್ ಬಿ ಬೊಲಾಂಡ್ 5 (15ಎ)
ಠಾಕೂರ್ ಸಿ ಅಲೆಕ್ಸ್ ಬಿ ಗ್ರೀನ್ 51 (109ಎ, 4X6)
ಉಮೇಶ್ ಬಿ ಕಮಿನ್ಸ್ 5 (11ಎ, 4X1)
ಶಮಿ ಸಿ ಅಲೆಕ್ಸ್ ಬಿ ಸ್ಟಾರ್ಕ್ 13 (11ಎ, 4X2)
ಸಿರಾಜ್ ಔಟಾಗದೆ 0 (3ಎ)

ಇತರೆ: 29 (ಬೈ 10, ಲೆಗ್‌ಬೈ 10, ವೈಡ್ 1, ನೋಬಾಲ್ 8)

ವಿಕೆಟ್ ಪತನ: 6–152 (ಶ್ರೀಕರ್ ಭರತ್; 38.2), 7–261 (ಅಜಿಂಕ್ಯ ರಹಾನೆ; 61.6), 8–271 (ಉಮೇಶ್ ಯಾದವ್; 65.5), 9–294 (ಶಾರ್ದೂಲ್ ಠಾಕೂರ್; 68.3), 10–296 (ಶಮಿ; 69.4)

ಬೌಲಿಂಗ್: ಮಿಚೆಲ್ ಸ್ಟಾರ್ಕ್ 13.4–0–71–2, ಪ್ಯಾಟ್ ಕಮಿನ್ಸ್ 20–2–83–3, ಸ್ಕಾಟ್ ಬೊಲಾಂಡ್ 20–6–59–2, ಕ್ಯಾಮರಾನ್ ಗ್ರೀನ್ 12–1–44–2, ನೇಥನ್ ಲಯನ್ 4–0–19–1

ಎರಡನೇ ಇನಿಂಗ್ಸ್

ಆಸ್ಟ್ರೇಲಿಯಾ: 4ಕ್ಕೆ123 (44 ಓವರ್‌ಗಳಲ್ಲಿ)

ಉಸ್ಮಾನ್ ಸಿ ಭರತ್ ಬಿ ಉಮೇಶ್ 13 (39ಎ, 4X2)
ವಾರ್ನರ್ ಸಿ ಭರತ್ ಬಿ ಸಿರಾಜ್ 1 (8ಎ)
ಮಾರ್ನಸ್ ಬ್ಯಾಟಿಂಗ್ 41 (118ಎ, 4X4)
ಸ್ಮಿತ್ ಸಿ ಠಾಕೂರ್ ಬಿ ಜಡೇಜ 34 (47ಎ, 4X3)
ಟ್ರಾವಿಸ್ ಸಿ ಅಂಡ್ ಬಿ ಜಡೇಜಾ 18 (27ಎ, 6x2)
ಗ್ರೀನ್ ಬ್ಯಾಟಿಂಗ್ 7 (27ಎ, 4X1)

ಇತರೆ: 9 (ಬೈ 4, ಲೆಗ್‌ಬೈ 2, ವೈಡ್ 1, ನೋಬಾಲ್ 2)

ವಿಕೆಟ್ ಪತನ: 1–2 (ಡೇವಿಡ್ ವಾರ್ನರ್; 3.3), 2–24 (ಉಸ್ಮಾನ್ ಖ್ವಾಜಾ; 14.1), 3–86 (ಸ್ಟೀವನ್ ಸ್ಮಿತ್; 30.1), 4–111 (ಟ್ರಾವಿಸ್ ಹೆಡ್; 36.3)

ಬೌಲಿಂಗ್: ಮೊಹಮ್ಮದ್ ಶಮಿ 10–4–17–0, ಮೊಹಮ್ಮದ್ ಸಿರಾಜ್ 12–2–41–1, ಶಾರ್ದೂಲ್ ಠಾಕೂರ್ 6–1–13–0, ಉಮೇಶ್ ಯಾದವ್ 7–1–21–1, ರವೀಂದ್ರ ಜಡೇಜ 9–3–25–2

ಸುಮಾರು ಒಂದು ವರ್ಷದ ನಂತರ ಟೆಸ್ಟ್ ತಂಡದೊಳಗೆ ಸ್ಥಾನ ಪಡೆದಿರುವ ಅಜಿಂಕ್ಯ 26ನೇ ಅರ್ಧಶತಕ ದಾಖಲಿಸಿದರು. ಆದರೆ ಅವರ ಶತಕ ಗಳಿಸುವ ಆಸೆಗೆ ಪ್ಯಾಟ್ ಕಮಿನ್ಸ್ ಅಡ್ಡಿಯಾದರು. ಅಜಿಂಕ್ಯ ಅವರ ವಿಕೆಟ್ ಕಬಳಿಸಿದ ಪ್ಯಾಟ್ ಜೊತೆಯಾಟ ಮುರಿದರು. ಅಜಿಂಕ್ಯ ರಹಾನೆ ಟೆಸ್ಟ್ ಕ್ರಿಕೆಟ್‌ನಲ್ಲಿ 5000 ರನ್‌ಗಳ ಗಡಿ ದಾಟಿದರು.

ಇನ್ನೊಂದು ಬದಿಯಲ್ಲಿ ಶಾರ್ದೂಲ್ ಫೀಲ್ಡರ್‌ಗಳ ತಲೆ ಮೇಲಿನಿಂದ ಚೆಂಡನ್ನು ಬೌಂಡರಿಗೆರೆ ದಾಟಿಸುವಲ್ಲಿ ಯಶಸ್ವಿಯಾದರು. ಕಮಿನ್ಸ್ ಎಸೆತಗಳನ್ನು ಸ್ಟ್ರೇಟ್ ಡ್ರೈವ್ ಮಾಡುವಲ್ಲಿಯೂ ಯಶಸ್ವಿಯಾದರು. ಆದರೆ ಗ್ರೀನ್ ಎಸೆತದಲ್ಲಿ ಔಟಾದರು.

ಶಾರ್ದೂಲ್ ಠಾಕೂರ್–ಎಎಫ್‌ಪಿ ಚಿತ್ರ

ಫೈನಲ್‌ಗೆ ಜೊಕೊವಿಚ್

ಫ್ರೆಂಚ್ ಓಪನ್: ಜ್ವೆರೆವ್ ವಿರುದ್ಧ ಕ್ಯಾಸ್ಪರ್ ರೂಡ್‌ಗೆ ಜಯ

ಪ್ಯಾರಿಸ್ (ರಾಯಿಟರ್ಸ್/ಎಪಿ): ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲೊಸ್ ಅಲ್ಕರಾಜ್ ಅವರ ಸವಾಲನ್ನು ಮೀರಿನಿಂತ, ಸರ್ಬಿಯದ ನೊವಾಕ್ ಜೊಕೊವಿಚ್, ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟರು.

ಫಿಲಿಪ್ ಶಾಟ್ರಿಯೆರ್ ಕೋರ್ಟ್‌ನಲ್ಲಿ ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಜೊಕೊವಿಚ್ 6–3, 5–7, 6–1, 6–1 ರಲ್ಲಿ ಸ್ಪೇನ್‌ನ ಆಟಗಾರನನ್ನು ಮಣಿಸಿದರು.

ಈ ಮೂಲಕ ದಾಖಲೆಯ 23ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯತ್ತ ಮತ್ತೊಂದು ಹೆಜ್ಜೆ ಮುಂದಿಟ್ಟರು. 36 ವರ್ಷದ ಅವರು ಫ್ರೆಂಚ್ ಓಪನ್‌ನಲ್ಲಿ ಏಳನೇ ಬಾರಿ ಫೈನಲ್ ಪ್ರವೇಶಿಸಿದ ಸಾಧನೆ ಮಾಡಿದರು. ಮಾತ್ರವಲ್ಲ, 93 ವರ್ಷಗಳಲ್ಲಿ ಇಲ್ಲಿ ಪ್ರಶಸ್ತಿ ಸುತ್ತು ತಲುಪಿದ ಅತಿ ಹಿರಿಯ ಆಟಗಾರ ಎನಿಸಿಕೊಂಡರು.

3 ಗಂಟೆ 23 ನಿಮಿಷ ನಡೆದ ಹಣಾಹಣಿಯಲ್ಲಿ ಜೊಕೊವಿಚ್ ಅವರ ಅನುಭವದ ಆಟಕ್ಕೆ ಸಾಟಿಯಾಗಲು ಅಲ್ಕರಾಜ್ ವಿಫಲರಾದರು. ಮೊದಲ ಸೆಟ್‌ಅನ್ನು ಗೆದ್ದ ಸರ್ಬಿಯದ ಅಟಗಾರ ಉತ್ತಮ ಆರಂಭ ಪಡೆದರು. ಆದರೆ ಎರಡನೇ ಸೆಟ್ ತಮ್ಮದಾಗಿಸಿದ ಅಲ್ಕರಾಜ್ ತಿರುಗೇಟು ನೀಡಿದರು.

ಮೂರನೇ ಸೆಟ್ 1–1 ರಲ್ಲಿ ಸಮಬಲದಲ್ಲಿ ಇದ್ದಾಗ ಅಲ್ಕರಾಜ್ ಸ್ನಾಯು ಸೆಳೆತಕ್ಕೆ ಒಳಗಾದರು. ಚಿಕಿತ್ಸೆ ಪಡೆದು ಆಟ ಮುಂದುವರಿಸಿದರೂ, ಅವರು ಓಡಾಡಲು ಕಷ್ಟಪಟ್ಟರು. ಆಟದ ಮೇಲಿನ ಲಯ ಕಳೆದುಕೊಂಡರು. ಇದರ ಲಾಭ ತನ್ನದಾಗಿಸಿಕೊಂಡ ಜೊಕೊವಿಚ್, ಎದುರಾಳಿಗೆ ಕೇವಲ ಎರಡು ಗೇಮ್ ಬಿಟ್ಟುಕೊಟ್ಟು ಮೂರು ಹಾಗೂ ನಾಲ್ಕನೇ ಸೆಟ್ ಗೆದ್ದುಕೊಂಡು ಫೈನಲ್ ತಲುಪಿದರು.

ಜೊಕೊವಿಚ್- ರೂಡ್ ಮುಖಾಮುಖಿ: ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಜೊಕೊವಿಚ್ ನಾರ್ವೆಯ ಕ್ಯಾಸ್ಪರ್ ರೂಡ್ ವಿರುದ್ಧ ಪೈಪೋಟಿ ನಡೆಸಲಿದ್ದಾರೆ. ಶುಕ್ರವಾರ ನಡೆದ ಮತ್ತೊಂದು ಸೆಮಿಫೈನಲ್‌ನಲ್ಲಿ ಕ್ಯಾಸ್ಪರ್ ರೂಡ್ 6–3, 6–4, 6–0 ರಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರನ್ನು ಪರಾಭವಗೊಳಿಸಿದರು.

ಇಗಾ- ಮುಕೋವಾ ಸೆಣಸು: ಮೂರನೇ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಅಗ್ರ ಶ್ರೇಯಾಂಕದ ಆಟಗಾರ್ತಿ ಪೋಲೆಂಡ್‌ನ ಇಗಾ ಶ್ವಾಂಟೆಕ್ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಶನಿವಾರ ಜೆಕ್ ರಿಪಬ್ಲಿಕ್‌ನ ಕರೋಲಿನಾ ಮುಕೋವಾ ವಿರುದ್ಧ ಸೆಣಸಾಟ ನಡೆಸಲಿದ್ದಾರೆ.

2020 ಮತ್ತು 2022 ರಲ್ಲಿ ರೋಲಂಡ್ ಗ್ಯಾರೋಸ್‌ನಲ್ಲಿ ಚಾಂಪಿಯನ್ ಆಗಿದ್ದ ಇಗಾ, ನಾಲ್ಕು ವರ್ಷಗಳ ಅವಧಿಯಲ್ಲಿ ಇಲ್ಲಿ ಮೂರನೇ ಕಿರೀಟ ಮುಡಿಗೇರಿಸುವ ವಿಶ್ವಾಸದಲ್ಲಿದ್ದಾರೆ. ಅದರಲ್ಲಿ ಅವರು ಯಶಸ್ವಿಯಾದರೆ, ಇಲ್ಲಿ ಮೂರು ಪ್ರಶಸ್ತಿ ಗೆದ್ದಿರುವ ಸೆರೆನಾ ವಿಲಿಯಮ್ಸ್ ಮತ್ತು ಮೋನಿಕಾ ಸೆಲೆಸ್ ಅವರ ಸಾಲಿಗೆ ಸೇರಲಿದ್ದಾರೆ. ಗಾಯದ ಸಮಸ್ಯೆಯಿಂದ ವೃತ್ತಿಜೀವನದಲ್ಲಿ ಹಲವು ಸಲ ಹಿನ್ನಡೆ ಅನುಭವಿಸಿದ್ದ 26 ವರ್ಷದ ಮುಕೋವಾ ಅವರು ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಫೈನಲ್ ಪ್ರವೇಶಿಸಿ ಅಚ್ಚರಿ ಮೂಡಿಸಿದ್ದಾರೆ.

ನೊವಾಕ್ ಜೊಕೊವಿಚ್ ಗೆಲುವಿನ ಸಂಭ್ರಮ –ಎಎಫ್‌ಪಿ ಚಿತ್ರ

ಅಲ್ಕರಾಜ್ ಆಕರ್ಷಕ ರಿಟರ್ನ್

ಎರಡನೇ ಸೆಟ್‌ನಲ್ಲಿ ಅಲ್ಕರಾಜ್ ಅವರು ಅದ್ಭುತ ರೀತಿಯಲ್ಲಿ ಚೆಂಡನ್ನು ರಿಟರ್ನ್ ಮಾಡಿ, ಪ್ರೇಕ್ಷಕರ ಗಮನ ಸೆಳೆದರು. ಮೊದಲು ಜೊಕೊವಿಚ್ ಡ್ರಾಪ್ ಶಾಟ್ ಹಾಕಿದರು. ನೆಟ್ ಬಳಿ ಧಾವಿಸಿದ ಅಲ್ಕರಾಜ್ ಅದನ್ನು ಯಶಸ್ವಿಯಾಗಿ ಹಿಂದಿರುಗಿಸಿದರು. ಸರ್ಬಿಯಾದ ಆಟಗಾರ ಆ ಬಳಿಕ ಚೆಂಡನ್ನು ಬೇಸ್‌ಲೈನ್ ಬಳಿ ಕಳುಹಿಸಿದರು. ನೆಟ್ ಬಳಿಯಿದ್ದ ಅಲ್ಕರಾಜ್ ಕೋರ್ಟ್‌ನ ಹಿಂಭಾಗಕ್ಕೆ ಓಡಿ ಸೊಗಸಾದ ರೀತಿಯಲ್ಲಿ ರಿಟರ್ನ್ ಮಾಡಿದರು. ಆ ಹೊಡೆತಕ್ಕೆ ಜೊಕೊವಿಚ್ ಕೂಡಾ ಮೆಚ್ಚುಗೆ ವ್ಯಕ್ತಪಡಿಸಿದರು.

ಫುಟ್‌ಬಾಲ್: ಮಂಗೋಲಿಯಾ ವಿರುದ್ಧ ಜಯ

ಭಾರತ ತಂಡ ಶುಭಾರಂಭ

ಭುವನೇಶ್ವರ (ಪಿಟಿಐ): ಹೊಂದಾಣಿಕೆಯ ಆಟವಾಡಿದ ಭಾರತ ತಂಡದವರು ಇಂಟರ್‌ಕಾಂಟಿನೆಂಟಲ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಕಳಿಂಗಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಸುನಿಲ್ ಚೆಟ್ರಿ ಬಳಗ 2–0 ಗೋಲುಗಳಿಂದ ಮಂಗೋಲಿಯಾ ತಂಡವನ್ನು ಪರಾಭವಗೊಳಿಸಿತು.

ಸಹಲ್ ಅಬ್ದುಲ್ ಸಮದ್ ಅವರು ಎರಡನೇ ನಿಮಿಷದಲ್ಲಿ ಮೊದಲ ಗೋಲು ತಂದಿತ್ತರೆ, ಲಾಲ್‌ಲಿಯಾನ್‌ಜುಲ ಚಾಂಗ್ಟೆ 14ನೇ ನಿಮಿಷದಲ್ಲಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಫಿಫಾ ರ‍್ಯಾಂಕಿಂಗ್‌ನಲ್ಲಿ 101ನೇ ಸ್ಥಾನದಲ್ಲಿರುವ ಭಾರತ ತಂಡವು, 183ನೇ ಸ್ಥಾನದಲ್ಲಿರುವ ಎದುರಾಳಿಯ ವಿರುದ್ಧ ಆಕ್ರಮಣಕಾರಿ ಆಟವಾಡಿತು. ಮೊದಲ 15 ನಿಮಿಷಗಳಲ್ಲಿ ಎರಡು ಗೋಲು ಗಳಿಸಿ ಮಂಗೋಲಿಯಾ ಮೇಲೆ ಒತ್ತಡ ಹೇರಿತು.

ಎರಡನೇ ನಿಮಿಷದಲ್ಲಿ ಮಿಡ್ ಫೀಲ್ಡರ್ ಅನಿರುದ್ಧ್ ಥಾಪಾ ಅವರು ಗುರಿಯತ್ತ ಒದ್ದ ಚೆಂಡನ್ನು ಎದುರಾಳಿ ಗೋಲ್‌ಕೀಪರ್ ತಡೆದರಾದರೂ, ಅಲ್ಲೇ ಇದ್ದ ಸಹಲ್ ಗುರಿ ಸೇರಿಸುವಲ್ಲಿ ಯಶಸ್ವಿಯಾದರು.

ತಂಡವು ಎರಡನೇ ಗೋಲು ಗಳಿಸುವಲ್ಲೂ ಥಾಪಾ ನೆರವಾದರು. ಅವರು ಕಾರ್ನರ್ ಕಿಕ್‌ನಲ್ಲಿ ಒದ್ದ ಚೆಂಡನ್ನು ಸಂದೇಶ್ ಜಿಂಗಾನ್ ಹೆಡ್ ಮಾಡಿ ಗುರಿಯತ್ತ ಕಳುಹಿಸಲು ಪ್ರಯತ್ನಿಸಿದರು. ಮಂಗೋಲಿಯಾ ಡಿಫೆಂಡರ್‌ಗೆ ತಾಗಿ ರಿಬೌಂಡ್ ಆಗಿ ಬಂದ ಚೆಂಡನ್ನು ಚಾಂಗ್ಟೆ ಗುರಿ ತಲುಪಿಸಿದರು.

ಆ ಬಳಿಕ ಆತಿಥೇಯ ತಂಡ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಿದರೂ, ಹೆಚ್ಚಿನ ಗೋಲುಗಳು ಬರಲಿಲ್ಲ. ಸುನಿಲ್ ಚೆಟ್ರಿ ಅವರಿಗೆ ಗೋಲು ಗಳಿಸಲು ಸಾಧ್ಯವಾಗಲಿಲ್ಲ. 71ನೇ ನಿಮಿಷದಲ್ಲಿ ಅವರಿಗೆ ಬದಲಿ ಆಟಗಾರನಾಗಿ ರಹೀಂ ಅಲಿ ಕಣಕ್ಕಿಳಿದರು. ಭಾರತ ತನ್ನ ಮುಂದಿನ ಪಂದ್ಯದಲ್ಲಿ ಸೋಮವಾರ ವನುವಾಟು ತಂಡವನ್ನು ಎದುರಿಸಲಿದೆ.

ಲೆಬನಾನ್‌ಗೆ ಗೆಲುವು: ದಿನದ ಮೊದಲ ಪಂದ್ಯದಲ್ಲಿ ಲೆಬನಾನ್ ತಂಡ 3–1 ಗೋಲುಗಳಿಂದ ವನುವಾಟು ತಂಡವನ್ನು ಮಣಿಸಿತು.

ಮಂಗೋಲಿಯಾ ವಿರುದ್ಧ ಗೋಲು ಗಳಿಸಿದ ಭಾರತ ತಂಡದ ಆಟಗಾರರು ಸಂಭ್ರಮಿಸಿದರು –ಎಐಎಫ್‌ಎಫ್ ಟ್ವಿಟರ್ ಚಿತ್ರ

ಹಾಟ್‌ಸ್ಟಾರ್‌ನಲ್ಲಿ ಕ್ರಿಕೆಟ್ ವಿಶ್ವಕಪ್ ಪ್ರಸಾರ ಉಚಿತ

ನವದೆಹಲಿ (ರಾಯಿಟರ್ಸ್): ಜಿಯೊಸಿನಿಮಾವು ಐಪಿಎಲ್ ಪಂದ್ಯಗಳನ್ನು ಉಚಿತವಾಗಿ ನೇರಪ್ರಸಾರ ನೀಡುವ ಮೂಲಕ ಕೋಟ್ಯಂತರ ವೀಕ್ಷಕರನ್ನು ಪಡೆದ ಬೆನ್ನಲ್ಲೇ, ಅದೇ ತಂತ್ರಕ್ಕೆ ಡಿಸ್ನಿ ಹಾಟ್‌ಸ್ಟಾರ್ ಮುಂದಾಗಿದೆ. ಏಷ್ಯಾ ಕಪ್ ಮತ್ತು ಐಸಿಸಿ ವಿಶ್ವಕಪ್ ಟೂರ್ನಿಯ ಪ್ರಸಾರದ ಹಕ್ಕು ಪಡೆದಿರುವ ಡಿಸ್ನಿಯು ಮೊಬೈಲ್ ಸ್ಟ್ರೀಮಿಂಗ್‌ನಲ್ಲಿ ಉಚಿತವಾಗಿ ನೀಡುವುದಾಗಿ ಪ್ರಕಟಿಸಿದೆ.

ವಿಶ್ವದ ಅತ್ಯಂತ ಶ್ರೀಮಂತ ಟೂರ್ನಿಗಳಲ್ಲಿ ಒಂದಾಗಿರುವ ಐಪಿಎಲ್ ಪ್ರಸಾರದ ಹಕ್ಕನ್ನು ಡಿಸ್ನಿ ಈ ಹಿಂದೆ ಪಡೆದು, ವೀಕ್ಷಕರನ್ನು ಹಿಡಿದಿಟ್ಟುಕೊಂಡಿತ್ತು. ಆದರೆ, ಈ ಬಾರಿಯ ಐಪಿಎಲ್ ಟೂರ್ನಿಯ ಡಿಜಿಟಲ್ ಪ್ರಸಾರದ ಹಕ್ಕು ಖರೀದಿಸಿದ್ದ ಮುಕೇಶ್ ಅಂಬಾನಿ ಒಡೆತನದ ಜಿಯೊಸಿನಿಮಾವು ಉಚಿತವಾಗಿ ಪ್ರಸಾರ ಮಾಡಿ, ಕೋಟ್ಯಂತರ ಕ್ರಿಕೆಟ್ ಪ್ರಿಯರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿತ್ತು.

ಇದೀಗ ಜಿಯೊಸಿನಿಮಾಕ್ಕೆ ಸೆಡ್ಡು ಹೊಡೆಯಲು ಮುಂದಾಗಿರುವ ಡಿಸ್ನಿ, ಉಚಿತ ಸ್ಟ್ರೀಮಿಂಗ್ ಮೂಲಕ ಭಾರತದಲ್ಲಿ 54 ಕೋಟಿಗೂ ಅಧಿಕ ಸ್ಮಾರ್ಟ್‌ಫೋನ್ ಬಳಕೆದಾರರನ್ನು ತಲುಪುವ ಗುರಿಯನ್ನು ಹಾಕಿಕೊಂಡಿದೆ. ಆದರೆ ಟಿ.ವಿ ಮತ್ತು ವೆಬ್‌ಸೈಟ್‌ಗಳಲ್ಲಿ ಪಂದ್ಯಗಳನ್ನು ವೀಕ್ಷಿಸಲು ಹಿಂದಿನಂತೆಯೇ ಚಂದದಾರಿಕೆ ಮುಂದುವರಿಸಲಾಗಿದೆ.

ಶನಕಾ ನಾಯಕ; ಮ್ಯಾಥ್ಯೂಸ್‌ಗೆ ಕೊಕ್

ಕೊಲಂಬೊ (ಎಎಫ್‌ಪಿ): ಶ್ರೀಲಂಕಾ ತಂಡದ ಮಾಜಿ ನಾಯಕ ಏಂಜೆಲೊ ಮ್ಯಾಥ್ಯೂಸ್ ಜಿಂಬಾಬ್ವೆಯಲ್ಲಿ ನಡೆಯಲಿರುವ ಐಸಿಸಿ ವಿಶ್ವಕಪ್ ಅರ್ಹತಾ ಟೂರ್ನಿಗೆ ಶ್ರೀಲಂಕಾ ಕ್ರಿಕೆಟ್ ಮಂಡಳಿ ಪ್ರಕಟಿಸಿರುವ 15 ಆಟಗಾರರ ತಂಡದಲ್ಲಿ ಸ್ಥಾನ ಗಿಟ್ಟಿಸಿಲ್ಲ. ದಸುನ್ ಶನಕಾ ನಾಯಕತ್ವ ವಹಿಸಲಿದ್ದಾರೆ.

ಕಳೆದ ವಾರ ಅಫ್ಗಾನಿಸ್ತಾನ ವಿರುದ್ಧದ ನಡೆದ ಸರಣಿಯ ಮೊದಲ ಪಂದ್ಯದಲ್ಲಿ ಮ್ಯಾಥ್ಯೂಸ್ 21 ಎಸೆತಗಳಲ್ಲಿ ಕೇವಲ 12 ರನ್ ಗಳಿಸಿದ್ದರು. ಆ ಪಂದ್ಯದಲ್ಲಿ ಲಂಕಾ ತಂಡವು 6 ವಿಕೆಟ್‌ಗಳಿಂದ ಪರಾಭವಗೊಂಡಿತ್ತು. ನಂತರ ಎರಡು ಪಂದ್ಯಗಳಲ್ಲಿ ಮ್ಯಾಥ್ಯೂಸ್ ಆಡುವ ಹನ್ನೊಂದರ ಬಳಗದಲ್ಲಿ ಸ್ಥಾನ ಪಡೆದಿರಲಿಲ್ಲ. ಆ ಪಂದ್ಯದಲ್ಲಿ ಜಯಿಸಿತ್ತು.

ಅರ್ಹತಾ ಟೂರ್ನಿಯಲ್ಲಿ ಲಂಕಾ ತಂಡವು ಜೂನ್ 19ರಂದು ಯುನೈಟೆಡ್ ಅರಬ್ ಎಮಿರೇಟ್ಸ್ ತಂಡವನ್ನು ಎದುರಿಸಲಿದೆ. ನಂತರ ಒಮನ್, ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್ ತಂಡದ ವಿರುದ್ಧ ಸೆಣಸಾಡಲಿದೆ.

ಕ್ರಿಕೆಟ್: ನಮೀಬಿಯಾ ಮಣಿಸಿದ ಕರ್ನಾಟಕ

ವಿಂಡ್‌ಹೋಕ್, ನಮೀಬಿಯಾ: ಕರ್ನಾಟಕ ತಂಡದವರು ನಮೀಬಿಯಾ ವಿರುದ್ಧದ ನಾಲ್ಕನೇ ಏಕದಿನ ಪಂದ್ಯವನ್ನು ಐದು ವಿಕೆಟ್‌ಗಳಿಂದ ಗದ್ದು, ಸರಣಿಯಲ್ಲಿ 3–1 ರಲ್ಲಿ ಮುನ್ನಡೆ ಸಾಧಿಸಿದರು.

ಶುಕ್ರವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ನಮೀಬಿಯಾ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 253 ರನ್ ಗಳಿಸಿತು. ಕರ್ನಾಟಕ ತಂಡ 47.1 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು.

ಅಜೇಯ ಅರ್ಧಶತಕ ಗಳಿಸಿದ ನಾಯಕ ಆರ್.ಸಮರ್ಥ್ (56 ರನ್, 55ಎ.) ಮತ್ತು ಆಲ್‌ರೌಂಡ್ ಆಟವಾಡಿದ ನಿಕಿನ್ ಜೋಸ್ ಅವರು (56 ರನ್ ಹಾಗೂ 30ಕ್ಕೆ 2) ಕರ್ನಾಟಕ ತಂಡದ ಗೆಲುವಿಗೆ ಕಾರಣರಾದರು.

ನಮೀಬಿಯಾ ಪರ ಜಾನ್ ಫ್ರೈಲಿಂಕ್ (109) ಶತಕ ಗಳಿಸಿದ ಸೋಲಿನ ನಡುವೆಯೂ ಮಿಂಚಿದರು. 124 ಎಸೆತ ಗಳನ್ನು ಎದುರಿಸಿದ ಅವರು 8 ಬೌಂಡರಿ ಮತ್ತು 3 ಸಿಕ್ಸರ್ ಹೊಡೆದರು. ಸಾಧಾರಣ ಗುರಿ ಬೆನ್ನಟ್ಟಿದ ಕರ್ನಾಟಕ ತಂಡ ವಿಶಾಲ್ (2) ಅವರನ್ನು ಬೇಗನೇ ಕಳೆದುಕೊಂಡಿತು. ಚೇತನ್ ಮತ್ತು ನಿಕಿನ್ ಎರಡನೇ ವಿಕೆಟ್‌ಗೆ 72 ರನ್ ಸೇರಿಸಿ ಆಸರೆಯಾದರು.

ಸಂಕ್ಷಿಪ್ತ ಸ್ಕೋರ್: ನಮೀಬಿಯಾ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 253 (ನಿಕೊಲಸ್ ಡೇವಿನ್ 30, ಜಾನ್ ಫ್ರೈಲಿಂಕ್ 109, ಮಿಕಾವ್ ಡು ಪ್ರೀಜ್ 41, ನಿಕಿನ್ ಜೋಸ್ 30ಕ್ಕೆ 2, ವಿದ್ವತ್ ಕಾವೇರಪ್ಪ 24ಕ್ಕೆ 1, ಶುಭಾಂಗ್ ಹೆಗ್ಡೆ 41ಕ್ಕೆ 1, ವೈಶಾಖ್ ವಿಜಯಕುಮಾರ್ 46ಕ್ಕೆ 1)

ಕರ್ನಾಟಕ 47.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 256 (ಎಲ್.ಆರ್. ಚೇತನ್ 47, ನಿಕಿನ್ ಜೋಸ್ 56, ಕೆ.ಸಿದ್ಧಾರ್ಥ್ 26, ಕೃತಿಕ್ ಕೃಷ್ಣ 32, ಆರ್.ಸಮರ್ಥ್ ಔಟಾಗದೆ 56, ಶುಭಾಂಗ್ ಹೆಗ್ಡೆ ಔಟಾಗದೆ 30, ಬೆನ್ ಶಿಕೊಂಗೊ 52ಕ್ಕೆ 2)

ಫಲಿತಾಂಶ: ಕರ್ನಾಟಕಕ್ಕೆ 5 ವಿಕೆಟ್ ಗೆಲುವು

ಆರ್.ಸಮರ್ಥ್

ಬೆಂಗಳೂರು ರೇಸ್

ಈಸ್‌ನಾಟ್ ಶೀ ಬ್ಯೂಟಿಫುಲ್ ಗೆಲ್ಲುವ ನಿರೀಕ್ಷೆ

ನವಾಬ್ ಅರ್ಷದ್ ಅಲಿ ಖಾನ್ ಮೆಮೋರಿಯಲ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈಸ್‌ನಾಟ್ ಶೀ ಬ್ಯೂಟಿಫುಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸಿಲ್ವರ್ ಸ್ವಿಫ್ಟ್ 5, ಚಿರಾಗ್ 8, ಬೆಲ್ಲಿಸಿಮೊ 7
2ನೇ ರೇಸ್: ನೈಟ್ ಡಿಫೆನ್ಸರ್ 3, ಎಬೋಟ್ಸ್ 1, ತೆಹಾನಿ 7
3ನೇ ರೇಸ್: ಮ್ಯಾಕ್ರಾನ್ 3, ಸಿಯೋಲ್ 2, ಗೋಲ್ಡನ್ ಸ್ಕಾರ್ಲೆಟ್ 7
4ನೇ ರೇಸ್: ಕ್ರೌನ್ ಕನ್ಸರ್ಟ್ 4, ಟಫ್ ಕುಕಿ 10, ಎಟರ್ನಲ್ ಪ್ರಿನ್ಸೆಸ್ 1
5ನೇ ರೇಸ್: ಸ್ಟಾರ್ಮಿ ಓಷನ್ 3, ಸ್ಪ್ಲೆಂಡಿಡೊ 1, ಟಿಗಾನೆಲ್ಲೊ 2
6ನೇ ರೇಸ್: ಈಸ್‌ನಾಟ್ ಶೀ ಬ್ಯೂಟಿಫುಲ್ 3, ಫಾಸ್ಟ್ ರೈನ್ 2, ಪ್ರೈಡ್ಸ್ ಏಂಜೆಲ್ 9
7ನೇ ರೇಸ್: ಪಾವರೊಟ್ಟಿ 2, ಸ್ಟಾರ್ಸ್ ಎಬೌವ್ 4, ಏರ್ ಡಿಸ್ಪ್ಲೆ 6

ಉತ್ತಮ ಬೆಟ್: ಪಾವರೊಟ್ಟಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ಭಾರತ ಕ್ರಿಕೆಟ್ ತಂಡವನ್ನು ಪ್ರತಿನಿಧಿಸಿರುವ ಬೆಂಗಳೂರಿನ ವೇಗದ ಬೌಲರ್ ಪ್ರಸಿದ್ಧಕೃಷ್ಣ ಗುರುವಾರ ತಮ್ಮ ಬಹುಕಾಲದ ಗೆಳತಿ ರಚನಾ ಕೃಷ್ಣ ಅವರನ್ನು ವಿವಾಹವಾದರು. ರಚನಾ ಮಾಹಿತಿ ತಂತ್ರಜ್ಞಾನ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮದುವೆ ಸಮಾರಂಭದಲ್ಲಿ ಉಭಯ ಕುಟುಂಬಗಳ ಸದಸ್ಯರು, ಕರ್ನಾಟಕ ಕ್ರಿಕೆಟ್ ತಂಡದ ಆಟಗಾರರು ಇದ್ದರು –ರಾಜಸ್ಥಾನ ರಾಯಲ್ಸ್ ಟ್ವಿಟರ್ ಚಿತ್ರ

ಎಟಿಪಿ– 250 ಟೆನಿಸ್ ಟೂರ್ನಿಯ ಆತಿಥ್ಯದ ಹಕ್ಕು ಕಳೆದುಕೊಂಡ ಭಾರತ

ನವದೆಹಲಿ (ಪಿಟಿಐ): ಭಾರತವು ಕಳೆದ 27 ವರ್ಷಗಳಿಂದ ಆಯೋಜಿಸುತ್ತಾ ಬಂದಿದ್ದ ಏಕೈಕ ಎಟಿಪಿ– 250 ಟೆನಿಸ್ ಟೂರ್ನಿಯ ಆತಿಥ್ಯದ ಹಕ್ಕನ್ನು ಕಳೆದುಕೊಂಡಿದೆ.

ಎಟಿಪಿ ಟೂರ್ ಟೂರ್ನಿ ಆಯೋಜಿಸುವ ಅವಕಾಶ ಭಾರತಕ್ಕೆ 1996 ರಲ್ಲಿ ಲಭಿಸಿತ್ತು. ಕಳೆದ 27 ವರ್ಷಗಳಿಂದ ವಿವಿಧ ನಗರಗಳಲ್ಲಿ ಈ ಟೂರ್ನಿ ಆಯೋಜಿಸುತ್ತಾ ಬರಲಾಗಿದೆ. ಈ ವರ್ಷದ ಆರಂಭದಲ್ಲಿ ಪುಣೆಯಲ್ಲಿ 'ಟಾಟಾ ಮಹಾರಾಷ್ಟ್ರ ಓಪನ್' ಆಯೋಜನೆಯಾಗಿತ್ತು. ಆ ಟೂರ್ನಿಯೇ ಕೊನೆಯ ಟೂರ್ನಿ ಎನಿಸಿಕೊಂಡಿದೆ.

ಭಾರತವು ಈ ಟೂರ್ನಿಯ ಆತಿಥ್ಯದ ಹಕ್ಕನ್ನು 2018 ರಲ್ಲೇ ಕಳೆದುಕೊಳ್ಳಬೇಕಿತ್ತು. ಟೂರ್ನಿಗೆ ಸತತ 13 ವರ್ಷ ಆತಿಥ್ಯ ವಹಿಸಿದ್ದ ತಮಿಳುನಾಡು ಟೆನಿಸ್ ಸಂಸ್ಥೆಯು (ಟಿಎನ್‌ಟಿಎ) ಆಯೋಜನೆಯಿಂದ ಹಿಂದೆ ಸರಿದಿತ್ತು.

ಆದರೆ ಮಹಾರಾಷ್ಟ್ರ ರಾಜ್ಯ ಲಾನ್ ಟೆನಿಸ್ ಸಂಸ್ಥೆಯು (ಎಂಎಸ್‌ಎಲ್‌ಟಿಎ) ಟೂರ್ನಿಯ ಆಯೋಜನೆಗೆ ಮುಂದೆ ಬಂದಿತ್ತು. ಇದೀಗ ಐದು ವರ್ಷಗಳ ಕಾಲ ಟೂರ್ನಿಯನ್ನು ಆಯೋಜಿಸಿದ ಬಳಿಕ ಎಂಎಸ್‌ಎಲ್‌ಟಿಎ ಕೂಡಾ ಹಿಂದೆ ಸರಿದಿದೆ. ಬೇರೆ ಯಾವುದೇ ರಾಜ್ಯದ ಟೆನಿಸ್ ಸಂಸ್ಥೆಗಳು ಆಯೋಜನೆಗೆ ಉತ್ಸುಕತೆ ತೋರಿಲ್ಲ.

ಭಾರತದ ಕೈತಪ್ಪಿರುವ ಈ ಟೂರ್ನಿ ಮುಂದಿನ ವರ್ಷದಿಂದ ಹಾಂಗ್‌ಕಾಂಗ್‌ನಲ್ಲಿ ನಡೆಯುವ ಸಾಧ್ಯತೆಯಿದೆ ಎನ್ನಲಾಗಿದೆ.

ಮಹಾರಾಷ್ಟ್ರ ಟೆನಿಸ್ ಸಂಸ್ಥೆಯು ಐಎಂಜಿ ಹಾಗೂ ಆರ್‌ಐಎಸ್‌ಇ ವರ್ಲ್ಡ್‌ವೈಡ್ (ರಿಲಯನ್ಸ್ ಸಮೂಹದ ಅಂಗಸಂಸ್ಥೆ) ಸಹಭಾಗಿತ್ವದೊಂದಿಗೆ ಐದು ವರ್ಷ ಟೂರ್ನಿಯನ್ನು ಆಯೋಜಿಸಿದೆ.

'ಐಎಂಜಿ ಮತ್ತು ಆರ್‌ಐಎಸ್‌ಇ ಜತೆಗಿನ ಒಪ್ಪಂದ ಕೊನೆಗೊಂಡಿದೆ. ಈ ಟೂರ್ನಿಯನ್ನು ಐದು ವರ್ಷ ಯಶಸ್ವಿಯಾಗಿ ಆಯೋಜಿಸಲು ಎಂಎಸ್‌ಎಲ್‌ಟಿಎ ಎಲ್ಲ ಬದ್ಧತೆ ತೋರಿದೆ' ಎಂದು ಸಂಸ್ಥೆಯ ಕಾರ್ಯದರ್ಶಿ ಸುಂದರ್ ಅಯ್ಯರ್ ತಿಳಿಸಿದ್ದಾರೆ.

ಮಾಸ್ಟರ್ಸ್ ಅಥ್ಲೆಟಿಕ್ಸ್‌ಗೆ ಅಮ್ಮ–ಮಗ ಅರ್ಹತೆ

ಸೋಮವಾರಪೇಟೆ: ತಾಲ್ಲೂಕಿನ ತಾಳೂರು ಗ್ರಾಮದ ಕಮಲಮ್ಮ ಅವರು, ಮೈಸೂರು ವಿಶ್ವವಿದ್ಯಾಲಯದ ಅಥ್ಲೆಟಿಕ್ಸ್ ಕೋಚ್ ಆಗಿರುವ ತಮ್ಮ ಪುತ್ರ ಟಿ.ಎಸ್.ರವಿ ಅವರಿಂದಲೇ ತರಬೇತಿ ಪಡೆದು ಅಂತರರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್‌ಗೆ ಅರ್ಹತೆ ಗಳಿಸಿದ್ದಾರೆ.

ನವೆಂಬರ್‌ನಲ್ಲಿ ಜಪಾನಿನ ಟೋಕಿಯೋ ಹಾಗೂ ಫಿಲಿಪ್ಪಿನ್ಸ್‌ನಲ್ಲಿ ನಡೆಯುವ ಅಂತರರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ತಾಯಿಯೊಂದಿಗೆ ಪುತ್ರ ರವಿ ಅವರೂ ಈ ಕೂಟದಲ್ಲಿ ಸ್ಪರ್ಧಿಸುತ್ತಿದ್ದಾರೆ. 55 ವರ್ಷದ ಮಹಿಳೆಯರ ವಿಭಾಗದಲ್ಲಿ 800 ಮೀಟರ್ ಹಾಗೂ 1,500 ಮೀಟರ್ ಓಟದಲ್ಲಿ ಕಮಲಮ್ಮ ಪಾಲ್ಗೊಳ್ಳಲಿದ್ದು, ರವಿ ಅವರು 35 ವರ್ಷದ ಪುರುಷರ ವಿಭಾಗದಲ್ಲಿ ಲಾಂಗ್ ಜಂಪ್, ರಿಲೆಯಲ್ಲಿ ಸ್ಪರ್ಧಿಸುವರು.

ಪ್ರಜಾವಾಣಿ ಶನಿವಾರ • ಜೂನ್ 10, 2023

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

READY TO REGISTER | PRICE STARTS FROM ₹29.99 LAKHS*





The well-planned amenities are strategically located and spread across the community to ensure that no matter where you build your home.

SCAN FOR LOCATION

Project RERA No. : PRM/KA/RERA/1254/460/PR/040422/004814
Company RERA No. : PRM/KA/RERA/1251/310/AG/181115/001156

APPROVED CUDA APPROVED

www.futurearthgroup.com | 6366 999 666 | enquiry@futurearthindia.com

*Terms & Conditions Apply.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER
ಕ್ಲಾಸಿಫೈಡ್ಸ್

HOSPITAL SPACE
FOR RENT/ PARTNEREDGE
20,000 Sq.ft ready to move in building with semi furnished suitable for running a hospital business.
at HSR Layout, 27th Main, 1st Sector, Bengaluru- 560102
Contact: 96069 40041

REAL ESTATE SELLING

Sites

Anjanapura

SALE ANJANAPURA 1st Block 30x40 owner Good location 75 lakh also 20x30 6th Block 33 lakh. 9945373839, 9620041313

Arkavathi Layout

DOMLUR 40X60 west, 60 Feet Road, Arkavathi Layout, 2, 3 Block, 30x30, 20x30, 30x40. USR: 7019770736/ 8951614989.

Banashankari

BANASHANKARI 6TH STAGE- Surrounding BDA- AVAILABLE/ WANTED 20x30 30x60 40x60, 50x80 Sites BRINDAVAN ASSOCIATES- 9980863245

AVAILABLE BDA Sites,Banshankari6th,Stage, Anjanapura Visweswaraiah LayoutJPNagar8th,9th,Phase 20x30,30x40 40x60, 50x80,Contact Genuine Buyers: 9945778333

BANASHANKARI 6TH Stage,5th Block, 30x40,North Facing, 60feet Road Excellent Location Contact: 9663393533, 9945492464

"AVAILABLE" BANASHANBKARI 6th Stage,4thBlock, 20x30, North Facing Price 52Lacs Negotioble Contact RAJU: 9901315949 /9731814437

SALE BANASHANKARI 6TH STAGE 10TH BLOCK 30X40 NORTH FACING 40FEET ROAD 75 LAKH OWNER 9945373839, 9620041313

BANASHANKARI 6TH Stage,3rd Block,30x40,West Facing,Near Park,And 80Feet Road .Good Location Contact: 9900097239

Devanahalli

SITE FOR SALE, 30x40 A-Khata, on Oxford English School Road, Shanthinagar, Devanahalli, suitable for Residential/ Commercial, Contact: 9845368222/ 9008911544.

Intl Airport Road

BIAAPA APPROVED SITE SALE ATTACHED TELECOM LAYOUT PHASE1 500 METRES FROM STONE HILL INTERNATIONAL SCHOOL 7337616557.

Jayanagar

PROPERTY FOR Sale Jayanagar JP.Nagar Residential 40×60 45×90 60×90 Sites in Prime Locations. Contact: 9845075792

J P Nagar

SALE 40X60 WEST FACING BDA APPROVED JP-NAGAR 8th PHASE GOOD LOCATION RATE 8000/- NEGOTIABLE 9620041313, 9945373839

Kolar

PLOT MEASURING 90,812 and half sq. feet along with buildings situated at Bangarpet Industrial Area, Dasarahosahalli Village, Robertson Pet Hobli, Bangarpet Taluk, Kolar District for sale. Contact: 9902401486

Nelamangala

BMRDA/ NPA 30x40 South East Corner and 30X50 East Facing Sites, Near NH-4 Highway: 8310681025

Mallathalli

***AVAILABLE* BDA** APPROVED sites in Mallathahalli (ITI layout) betterment 'A' katha and FLAT. Call: 9353199141

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Kanakapura Road

KANAKA LAYOUT 30x40-E/F 1Km from Doddakalasandra Metro Station Jayanagar Housing Society 40x60-S/F Semi-Commercial- 9964627255/ 9880300791

BETWEEN KANAKAPURA Road & Mysore Road Near Nice Road 80x90 (7200 sft) Commercial OR Residential use: 9945928994

NARAYANANAGAR 1ST Block 30x40-W/F 30x60-S/F 60'Road All Sites walkable from Metro Station- 9964627255/ 9880300791

Kempegowda Layout

"KEMPEGOWDA LAYOUT 7th Block 30x40 North Near Ranganathaswamy Temple 1.5 km to Mysore Road. 9845268611"

"KEMPEGOWDA LAYOUT 6th Block H-Sector 50 feet Road 50x80 West facing Site Sale. 7019314962/ 9845500019"

KEMPEGOWDA LAYOUT BDA Sites for Sale Commercial 40x60, 100ft Road Near Mysore Road Metro: 7899570235

Magadi Road

SALE 30X40 EAST FACING. GROUP 'D' Employees' Society. Block-4, HEROHALLI, ANDRAHALLI MAIN ROAD, Bangalore 9873264644

MAGADI ROAD Sale 30x40, South, 25x50, East Facing, 40" Road BEL Layout, Bharathnagar Contct: 9845068429

Mysore

FOR SALE, About 85,000 sq. feet of site in the heart of Mysore City, on the main road. Contact: 9449853696. No Brokers.

Nagarabhavi

SITES FOR SALE COMMERCIAL AND RESIDENTIAL SITES- 0.5 k.m. from Ambedkar Institute of Technology. MALLATHAHALLI, NAAGARABHAVI, CLEAR TITLES, Rs. 8000/- onwards. AGENTS WELCOME. Contact: 9513999869

Rajarajeshwari Nagar

R.R.NAGARA BEML Layout 30X40 House Sale 1.60Cr. Javaregowdana Doddi 30x40 Site Sale 66L. 9148914809, 9740075563.

3020 SQFT East Facing Site for Sale at R.R.Nagar, IDEAL Homes 100ft Road from NHV School Main Gate. Call: 9019916776.

Vishweshwariah Layout

"VISHVESWARAIAH LAYOUT 1st Block 30x40 South facing Site sale. Good Location. Genuine Buyers Contact: 7019314962/ 9845500019"

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

BHARATHNAGAR ATTACH BBMP A Khatha 40x40 South East Corner Good Location Price 7500/- Negotiable: 9964971895

"VISHVESWARAIAH LAYOUT 3rd Block West facing 30x40 BDA 1st Allottee Site for sale, good location. 9901405391"

SALE 30X40 VISHVESWARAIAH LAYOUT 4TH BLOCK SOUTH FACING 75 LAKH NEGOTIABLE. CONTACT: 9945373839, 9620041313

40X60 BDA SITE SALE Vishveshwaraiah Layout 6th Block KLE College Opposite, 20X30 Sale EF Near Vidya School: 8310003509

SMV LAYOUT, 7th Block, Site No-63, 20x30, W/F, 58 Lakhs/- Good Location. Contact: 9844966208

House

Banashankari

ITTAMADU HOUSE SALE. Ground 2 BHK, 1st, 2nd Duplex, Car Parking, Site-South, Door- East. 9945724472.

BSK 3RD Stage 40x60 Semi-Commercial South (G+F) BDA Clear Titles 40feet Road Murali 9845232711

Hanumanthnagar

"NEAR VIDYAPEETA Circle, Katriguppe 30x43 old demolition House A-katha East facing, Full Cheque. 9845286505"

J P Nagar

J.P.NAGAR 5TH Phase near Nandini Hotel 40x60, Semi-Commercial/ Residential 3 BHK House -4,32,00,000/- 9980861200.

J.P.NAGAR 3RD Near Mini Forest 40x53, 3 BHK 4 unit New House, Lift -6,30,00,000/- -9980861200.

Kengeri

HOUSE FOR SALE 25x40,BDA West Facing, 25 Square, 1BHK & 4BHK,House Kengeri Satellite Town, Near Kengeri Metro Station, Rs.1.40CR. Nagalinga: 7019009272, 9743378744 Shivakumar: 9845875555

Koramangala

PRIME INDEPENDENT posh Bungalow at 6th block koramangala for sale call 7338118678

Nagarabhavi

BUILDING FOR sale 30×42 East 5BHK with Lift Annapurneswari Nagar Nagarbavi Near BDA complex Contact:90716 66699

MORE Classifieds IN MAIN ISSUE

Seshadripuram

EAST FACING Independent House G + 3 Floors for sale in Sheshadripuram, Near Pipe Line Road Contact: 9986492386/ 9535184028

Vidyaranyapura

HOUSE FOR Sale 40x60 Duplex House 3CR @ BEL layout 1st stage vidyaranyapura Contact:9902800702

Flat

Basavanagudi

3BHK FLAT 1790Sft 2nd Floor Basavanagudi Shankar Matt Road, Near Vanivilas Road Junction 2.25Cr: 9845411113

FOR SALE 2BHK Ground Floor Flat overlooking garden in Sovereign Park Society. Call Prime 8668223220.

Kumaraswamy Layout

3-BHK E/F-FLATS Sale 2250Sqft Fully Teak Wood Italian Marbles 2 CarParking 1.6Cr Kumaraswamy Layout 15F Bustand- 9611144096

Rajajinagar

PRESTIGE WEST WOODS, Ready to move-in Ultra Luxury 5 BHK Penthouse (3981 sft) available near Rajajinagar. Starting at Rs. 6.35 Cr. For details call: 6366561003

Uttarahalli

IMAGE GREENS Apartment 1st Floor. 1300 Sqft. 2 BHK SALE. Poornaprajna Layout. 13 Years old. Call:9945724472

Farm House/ Land/ Resorts

Multiple Locations

1/2 ACRE converted eKhata furnished 15 AC rooms
resto cafe 6-9L income nandi hills rd connecting
STRR 9.1Cr
Ph 7019346409

Industrial & Factory

Kolar

PLANT AND machinery situated at Dasarahosahalli Village, Robertson Pet Hobli, Bangarpet Taluk, Kolar District for sale. Contact: 9902401486

Commercial Land

Mysore

5 Acre Land For Sale
At Mysore-Bannur Road, 1 KM from ATME College, 2 KM near to Eagle Burg with 20 Sqrs., RCC House, Watchman shed, Vacant sheds, Godowns, Coconut Trees, Neem Trees, fencing with Borewell for SALE.

New Commercial Building For Rent
Near Lalitha Mahal Suitable for Banks, IT Companies, Super Market, Gym and others.
Area: Ground, First, Second & Cellar Each Floor-2000 Sqft.,
Address: No. 64, Vishal Arcade, Opposite Brigade Solitaire, Lalitha Mahal Nagar Alanahalli Post, Mysore-570028
Contact: 9448247766 | 9538946693

Agricultural Land

Ramanagar

AGRICULTURAL FARM Land Sale Near Ramanagar 3-Acres with Mango Trees Fenced, 48Lakhs Per.acre Mud Road Attached-7019881566

Commercial Building

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram, Bangalore. Call: 9663001940.

Commerical

BTM Layout

BTM LAYOUT 2nd Stage 60feet Road Prime Commercial 41x60 old House For Sale 9845069739 9380613718

ಸೈಟುಗಳು ಮಾರಾಟಕ್ಕಿವೆ
ನೆಲಮಂಗಲ ತುಮಕೂರು ರಸ್ತೆ, ಬಿ. ಬೇಗೂರು ಹತ್ತಿರ. NH-4.
20x30 Rs.4 ಲಕ್ಷಕ್ಕೆ Rs.3.6 ಲಕ್ಷಕ್ಕೆ
ಈಗ ಕೇವಲ 50% ಪಾವತಿಸಿ
ನೋಂದಣಿ ಮಾಡಿಕೊಳ್ಳಿ ಉಳಿಕೆ ಹಣವನ್ನು EMI ಮೂಲಕ ಪಾವತಿಸಿ.
ಸಂಪರ್ಕಿಸಿ: 8880660099

BUILDING FOR RENT
PUB / BAR
NEWLY Constructed, on Prime Location Guaranteed Business on
JIGANI-BANNERGHATTA MAIN ROAD
Attached 24 Rooms, Lift, Ground, First, Second & Third Floors. Building Very Good Frontage.
Contact : OWNER 9886198399

General

Multiple Locations

BUY, SELL, rent Residential, industrial and farm land, office space available for rent. Contact. 9380586105.

Agricultural Land Converted

Hoskote

HOSKOTE LAND For Sale 4 acres Shildlagatha Road Near Suguna Feeds Suitable For Warehouse/ Factory Call:9243438374 9740803686

REAL ESTATE BUYING

General

General

WE DO Agricultural Land Conversions, Change of Land Use,Phodi Durasti, Survey, Khata, Revenue Department work. Verna Developers, MG-Road, BLR. 9916310226/ 9620253180.

Sites

Anjanapura

WANTED BDA SITES ANY MEASUREMENT Anjanapura, Banashankari 6th Stage, JP Nagar 8th/9th Phase Contact: 9845298419

Banashankari

BDA SITES Wanted Anjanapura Arkavathy Banashankari 6th Stage, Vishweshwaraiah Kempegowda Any BDA Layout,Contact: 9845062822, 8660751654

WANTED BDASITES Banashankari 6th_Stage,Vishweswaraiah Layout, AnjanapuraJPNagar 8th_9thPhase_20x30,30x40 40x60_50x80 Call,Genuine Sellers:9845812635

Multiple Locations

ANJANAPURA- ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

Mysore

REQUIRE SITE in MYSORE. Require in Telecom layout MYSORE. Santhosh 9845699488

Vishweshwariah Layout

"WANTED BDA allotty sites 20x30, 30x40, 4060, 50x80 Vishveshwaraiah, Nagarabhavi, Banashankari 6th Stsge, Surrounding. 9945309883"

RENTAL PROPERTIES

Accommodation Available

Commercial

Building For Rent
Building available with a running Hospital measuring **10345** square feet at **Kalyan Nagar**, CMR Road available for Rent suitable for **Hospital, Old Age Home, PG, Service Apartments.**
Contact
9632770789 | 9900056799

DC CONVERTED 1 Acre Land FOR RENT, Bengaluru-Doddaballapur Highway, adjacent to Provident Welworth City, Proximity to Airport, Suitable for Commercial Purposes, Warehouse, Office, etc, Contact: 9845368222

BUILD TO SUIT FOR RENT 2 Acres WAREHOUSE CONVERTED Highway facing Land available Off Hoskote- Chintamani road near 'H'cross Close to TATA POWER/ MITSHIBISHI & KIADB Industrial area. Call: 8310098218

House

"BANASHANKARI 2ND STAGE 2BHK Ground floor 26000/- rent Posh location, ready possession for family. 9845286505"

INDIVIDUAL DUPLEX House FOR LEASE 30×40 at PADMANABHA NAGAR 17.00.000/= CONTACT:9902800702

BUILDERS ESSENTIAL

Water Proofing Materials

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

REALTY INVESTMENT EXPO

We Are The Path That Leads To Your New Home

An Extraordinary Property Expo In North Bengaluru

10th Saturday & 11th Sunday June 2023 | 11 AM To 7 PM
Hilton Hotel & Convention Centre, Manayata Tech Park, Nagawara, Hebbal

VISIT TODAY & TOMORROW

PROPERTIES STARTING FROM 25 LAKHS TO 5 CRORE | FREE ENTRY & PARKING | +91 98451 66756 +91 9986442255

25+ TOP BUILDERS | 100+ PROJECTS

manasum LUXURY SENIOR LIVING Senior Living Partner | magicbricks Property Sahi. Services Sabhi. Home Loans and Interior Partner | Digi Infiniti DIGITAL PARTNER | Exclusive Home Construction Partner buildAhome | Showcasing Exclusive Property From Mysore City

www.realtyinvestmentexpo.com

SOUNDARYA SCHOOL (STATE BOARD)

SOUNDARYA ON HATTRICK...

The Soundarya saga of securing the first place in the SSLC state board exams for the 3rd consecutive year...

625/625

SPOORTHY S

Spoorthy S brought laurels to the school by scoring 625/625 (after revaluation) and stood tall as one among the 5 first rank holders in the state.

The Management, Principal and Faculty members congratulates the Topper.

Soundarya Road, Hesarghatta Main Road, Nagasandra Post, Bangalore-560073
080-28391789 | +91-9686032618 | ss.info@soundaryainstitutions.in
www.soundaryaschool.com

a "plot" is a blank canvas for your memories.

KNS Aroha

PREMIUM PLOTS OFF MAGADI MAIN ROAD

READY TO REGISTER & CONSTRUCT

~~23~~ 21 LAKHS* ONWARDS

*Offer valid till 16th June, 2023

Follow Us
www.knsgroup.in

SCHEDULE A SITE VISIT TODAY!
8880 66 33 44

KNS Infrastructure Private Limited
No. 1125/12, 1st Floor, Service Road, Hampinagar, Vijayanagar 2nd Stage Bangalore - 560 104. email: enquiry@knsgroup.in / www.knsgroup.in
Don't forget to carry your Cheque Book Aadhaar Card & Pan Card with you on your visit.

Disclaimer: The images and impressions contained herein are artist's impression indicative of the actual design for information purpose only. This information and the contents herein mentioned are subject to change and is being updated by us in the light of enactment and commencement of the Real Estate (Regulation and Development) Act, 2016. The Company reserves the right to change by adding, deleting or altering the information/material including designs, plans, specifications, facilities, images, features, amenities such as clubhouse, parks etc without any prior notice. Any interested party should verify all the information including designs, plans, specifications, facilities, features etc. Independently with the Company prior to concluding any decision for buying in the project. For RERA registration information, visit: www.rera.karnataka.gov.in
*T & C Apply

ಜನತಾ ಶಿಕ್ಷಣ ಸಂಸ್ಥೆ (ರಿ)

ವಿವೇಕಾನಂದ ವಿದ್ಯಾ ಸಂಸ್ಥೆಗಳು

ಹೃತ್ಪೂರ್ವಕ ಅಭಿನಂದನೆಗಳು

ಮಾಗಡಿ ವಿಧಾನಸಭಾ ಕ್ಷೇತ್ರದ
ಶಾಸಕರಾಗಿ 5ನೇ ಬಾರಿ ಆಯ್ಕೆಯಾದ ಜನಪ್ರಿಯ ನಾಯಕರು
ಹಾಗೂ ಜನತಾ ಶಿಕ್ಷಣ ಸಂಸ್ಥೆಯ ಹಾಲಿ ಅಧ್ಯಕ್ಷರಾದ

ಸನ್ಮಾನ್ಯ ಶ್ರೀ. ಹೆಚ್.ಸಿ. ಬಾಲಕೃಷ್ಣರವರಿಗೆ

ಶುಭಕೋರುವವರು:
ಜನತಾ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಮತ್ತು
ಸಂಸ್ಥೆಯ ಸರ್ವ ಸದಸ್ಯರು,
ಪ್ರಾಂಶುಪಾಲರು, ಮುಖ್ಯೋಪಾಧ್ಯಾಯರು, ಬೋಧಕ ಹಾಗೂ ಬೋಧಕೇತರರು
ಮತ್ತು ವಿದ್ಯಾರ್ಥಿವೃಂದದವರು, ವಿವೇಕಾನಂದ ವಿದ್ಯಾ ಸಂಸ್ಥೆಗಳು

ಡಾ.ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು-560 055
Ph.: 080- 2337 1952

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಸೈಟು/ನಿವೇಶನ ಖರೀದಿಸಲು ಸುವರ್ಣಾವಕಾಶ
ಒಂದು ವರ್ಷ EMI* ಉಚಿತ ಕೊಡುಗೆಯೊಂದಿಗೆ
ನಿಮ್ಮ ಕನಸನ್ನು ನನಸಾಗಿಸಿಕೊಳ್ಳಿ



₹1499/- per sft

1 YEAR EMI FREE*

BBMP ವ್ಯಾಪ್ತಿಯಲ್ಲಿ ನಿವೇಶನ ಖರೀದಿಸಿ

ಕುಂಬಳಗೋಡು ಹತ್ತಿರ
ಮೈಸೂರು ರಸ್ತೆ

ನೋಂದಣಿಗೆ ರೆಡಿ ಇರುವ ನಿವೇಶನಗಳು,
ಮನೆ ಕಟ್ಟಲು ಸಿದ್ಧವಿರುವ ಸೈಟುಗಳು
ನಿವೇಶನ ಖರೀದಿಸಲು ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ

Conditions apply*

ಸೌಲಭ್ಯಗಳು : • ಪ್ರತಿ ಸೈಟಿಗೂ ಪ್ರತ್ಯೇಕ ನೀರು ಮತ್ತು ಸ್ಯಾನಿಟರಿ ಸಂಪರ್ಕ • ರಸ್ತೆ • ಬೀದಿ ದೀಪ • ಪಾರ್ಕ್ ಮತ್ತು ಮಕ್ಕಳ ಆಟದ ಮೈದಾನ

ವಿಶೇಷತೆಗಳು : • 1. 5 ಕಿಮೀ ಮೆಟ್ರೋ ನಿಲ್ದಾಣ • 1.5 ಕಿಮೀ ಎಕ್ಸ್‌ಪ್ರೆಸ್ ಹೆದ್ದಾರಿ • 3 ಕಿಮೀ ರೈಲು ನಿಲ್ದಾಣ • ಕೆಂಗೇರಿಯಿಂದ 5 ಕಿ.ಮೀ • BMTC ಬಸ್ಸುಗಳು ಲಭ್ಯವಿದೆ

Call for Site Visit: **93411 18999**

Available Dimensions
30x40 & ODD Sites

ನೆಲಮಂಗಲ ಮತ್ತು ಮಾಗಡಿ ರಸ್ತೆ ಸಮೀಪದಲ್ಲಿ
E-Khata ಹೊಂದಿರುವ ಸೈಟುಗಳು

ನಗರಕ್ಕೆ ಸಮೀಪವಿರುವ ನಿವೇಶನ ಖರೀದಿಸಿ ಕೂಡಲೇ ಮನೆ ಕಟ್ಟಿಕೊಳ್ಳಬಹುದು

ರಾಜ್ ರೆಸಿಡೆನ್ಸಿ
~~₹1799 sq.ft~~
Nelamangala
OFFER PRICE
₹1599 sq ft

ವಿನಾಯಕ ಎನ್‌ಕ್ಲೇವ್
~~₹1499 sq.ft~~
MAGADI ROAD TAVAREKERE
OFFER PRICE
₹1299 sq ft

DC Conversion

DC Converted Approved Sites at Nelamangala & Magadi Road

ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ
ಬ್ಯಾಂಕ್ ಲೋನ್ ಸೌಲಭ್ಯವಿದೆ

* Conditions apply

ವಿಶೇಷತೆಗಳು :
- ಮಾಗಡಿ ರಸ್ತೆ, ಮೈಸೂರು ರಸ್ತೆ, ತುಮಕೂರು ರಸ್ತೆಗೆ ಸಂಪರ್ಕವಿದೆ.
- ಜ್ಞಾನಗಂಗಾ ಇಂಟರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್
- ಜನಸೇವಾ ವಿದ್ಯಾಕೇಂದ್ರ ಪಿಯೂ ಕಾಲೇಜ್
- ಎಂಬೆಸ್ಸಿ ಪಬ್ಲಿಕ್ ಇಂಟರ್‌ನ್ಯಾಷನಲ್ ಸ್ಕೂಲ್
- ತುಮಕೂರು ರಸ್ತೆಯಿಂದ 2 ಕಿ.ಮೀ
- ನೆಲಮಂಗಲ ಟೌನ್ ಗೆ ಹತ್ತಿರ

ಸೈಟಿನ ಮೇಲೆ ಇನ್‌ವೆಸ್ಟ್ ಮಾಡಿ ಹೆಚ್ಚು ಲಾಭ ಗಳಿಸಿ.

ಸೌಲಭ್ಯಗಳು :
- ಮಕ್ಕಳ ಆಟದ ಮೈದಾನ
- ಅಗಲವಾದ ರಸ್ತೆಗಳು
- ಪ್ರತಿ ಸೈಟಿಗೂ ನೀರಿನ ಸಂಪರ್ಕ
- ಸುಸಜ್ಜಿತ ಡ್ರಾಕ್ಟೈಜ್ ಒಳಚರಂಡಿ ವ್ಯವಸ್ಥೆ
- ಬೀದಿ ದೀಪಗಳು
- ಎಲೆಕ್ಟ್ರಿಕ್ ಲೈನು ಮುಂತಾದ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಿರುತ್ತದೆ

ಉಚಿತ ನಿವೇಶನ ನೋಡಲು ಕರೆ ಮಾಡಿ : **900-833-9900**

ವಿವಿಧ ಅಳತೆಯ ನಿವೇಶನಗಳು :
20X30, 30X40, 30X50

AMENITIES

- Concrete Roads
- Underground Electricity
- Designer Street Lights
- Avenue Tree Lines
- Water Connection
- Underground Sewage
- Storm Water Drain

700 m from the New 10 Lane Bangalore-Mysore Expressway
1 km from Bidadi Bus Stand
1.5 km from Bidadi Railway Station,

+91 83107 40382

AROMA SANDOLO
FARMLAND
(Agricultural)
Near GAURIBIDANUR

Phase-1
Phase-2
Successfully completed

PHASE-3 Launching
Rs. 165/- sqft
(6 Guntas - 6534 sqft)

- Managed Farm Land
- Full-Fledged Nature's Clubhouse
- Natural Habitat Fruit Orchard
- Weekend Home



UPCOMING GUEST HOUSE

INVEST IN LAKHS GET RETURNS IN CRORE

REFRESH YOUR MEMORIES...

Seven Stones | Hopscotch | Hide and seek | Spinning Top | Roll Tyre | See Saw | Gilli Danda | Kancha | Kids Swing

•Traditional Village Style Food •Village Atmosphere •Traditional Village Games & Entertainments •Good Sandalwood Returns •Seasonal Fruits •Organic Vegetables •Medicinal Plants •Birds Farm •Animals Farm

Invest for your children's future Life

JN DEVELOPERS
JEEVANA NIDHI DEVELOPERS

office address :
2nd Floor, No 111, Sushilamma Layout,
Puttenahalli, Yelahanka, Bengaluru,
Bengaluru Urban, Karnataka - 560064

READY FOR REGISTRATION

CALL FOR MORE DETAILS
7795978469 - 8197971428 - 9739292375